# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

## 2010–11ರ ವರದಿ ಸಂಖ್ಯೆ–6

## ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಭೂಮಿಯ ಸ್ವಾಧೀನ ಮತ್ತು ಹಂಚಿಕೆಯ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

**ಕರ್ನಾಟಕ ಸರ್ಕಾರ**

# ವಿಷಯಸೂಚಿ


| | | ಪುಟ ಸಂಖ್ಯೆ |
|---|---|---|
| ಪ್ರಸ್ತಾವನೆ | | iii |
| ಕಾರ್ಯನಿರ್ವಹಣಾ ಸಾರಾಂಶ | | v |
| **ಅಧ್ಯಾಯ 1: ಪರಿಚಯ** | | 1 |
| 1.1 | ಕೈಗಾರಿಕೆಗಳಿಗೆ ಭೂಮಿಯ ಬೇಡಿಕೆಯ ವೃದ್ಧಿ | 1 |
| 1.2 | ಭೂಸ್ವಾಧೀನಕ್ಕಾಗಿ ಕಾನೂನು ಚೌಕಟ್ಟಿನ ಸ್ಥೂಲನೋಟ | 2 |
| 1.3 | ಯೋಜನೆಗಳ ಅನುಮೋದನೆಗಾಗಿ ಸಮಿತಿಗಳು | 3 |
| 1.4 | ಸಂಘಟನಾ ವ್ಯವಸ್ಥೆ | 3 |
| **ಅಧ್ಯಾಯ 2: ಲೆಕ್ಕಪರಿಶೋಧನಾ ಮಾರ್ಗ** | | 5 |
| 2.1 | ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ | 5 |
| 2.2 | ಲೆಕ್ಕಪರಿಶೋಧನಾ ಉದ್ದೇಶಗಳು | 5 |
| 2.3 | ಲೆಕ್ಕಪರಿಶೋಧನಾ ಮಾನದಂಡಗಳು | 6 |
| 2.4 | ಲೆಕ್ಕಪರಿಶೋಧನೆಯಲ್ಲಿ ಕಂಡಬಂದ ಅಂಶಗಳ ವರ್ಗೀಕರಣ | 6 |
| 2.5 | ಕೃತಜ್ಞತೆ | 6 |
| **ಅಧ್ಯಾಯ 3: ಭೂ ಸ್ವಾಧೀನ** | | 7 |
| 3.1 | ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸುವಲ್ಲಿ ಮಂಡಳಿಯು ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸಲು ವಿಫಲವಾಯಿತು | 7 |
| 3.2 | ಭೂ ಬಳಕೆಯ ಬದಲಾವಣೆಗೆ ಮಂಡಳಿಯು ಪರವಾನಗಿ ಪಡೆಯಲಿಲ್ಲ | 9 |
| 3.3 | ಸಮಗ್ರ ಉಕ್ಕು ಮತ್ತು ವಿದ್ಯುಚ್ಛಕ್ತಿ ಉತ್ಪಾದನಾ ಸ್ಥಾವರವೊಂದಕ್ಕಾಗಿ ಅಧಿಕ ಭೂಮಿಯ ಸ್ವಾಧೀನ | 12 |
| 3.4 | ಮಂಡಳಿಯು ಲಭ್ಯವಿದ್ದ ಸರ್ಕಾರಿ ಭೂಮಿಯನ್ನು ಸ್ವಾಧೀನದಿಂದ ಕೈಬಿಟ್ಟಿತು | 13 |
| 3.5 | ಮಂಡಳಿ ಮತ್ತು ಭಾರತ ಸರ್ಕಾರದಿಂದ ಒಂದೇ ಭೂಮಿಯ ಸಮಾನಾಂತರ ಸ್ವಾಧೀನ | 13 |
| 3.6 | ಸ್ವಾಧೀನಪಡಿಸಿಕೊಂಡ ಭೂಮಿಯ ಹಕ್ಕುಪತ್ರವನ್ನು ಮಂಡಳಿಯು ತನ್ನ ಪರವಾಗಿ ವರ್ಗಾಯಿಸಿಕೊಳ್ಳಲಿಲ್ಲ | 14 |
| 3.7 | ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವಿಕೆ | 14 |
| **ಅಧ್ಯಾಯ 4: ಪರಿಹಾರಧನದ ನಿರ್ಧಾರಣೆ** | | 22 |
| 4.1 | ಭೂ ಪರಿಹಾರಧನವನ್ನು ನಿಗದಿಪಡಿಸುವಲ್ಲಿ ವಿಳಂಬ | 22 |
| 4.2 | ಪಿಎಸಿ ನಿಗದಿಪಡಿಸಿದ ಕಡಿಮೆ ಪರಿಹಾರಧನವು ಒಂದು ಕಂಪನಿಯು ಕಡಿಮೆ ದರದಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸಹಾಯ ಮಾಡಿತು | 23 |
| 4.3 | ಪಿಎಸಿಯು ನಿಗದಿಪಡಿಸಿದ್ದ ಪರಿಹಾರಧನವನ್ನು ಮಂಡಳಿಯು ಅಸಮರ್ಥನೀಯವಾಗಿ ಹೆಚ್ಚಿಸಿತು | 24 |
| **ಅಧ್ಯಾಯ 5: ಪರಿಹಾರಧನದ ಪಾವತಿ** | | 26 |
| 5.1 | ಭೂಸ್ವಾಧೀನ ಅಧಿಸೂಚನೆಯಲ್ಲಿ ಮಂಡಳಿಯು ಸರ್ಕಾರದ ಸೂಚನೆಗಳನ್ನು ಪಾಲಿಸಲಿಲ್ಲ | 26 |

| | | ಪುಟ ಸಂಖ್ಯೆ |
|---|---|---|
| 5.2 | ಕ್ಲೈಮ್‌ಗಳ ಮತ್ತು ಪರಿಹಾರಧನ ಪಾವತಿಗಳಿಗೆ ಸಂಬಂಧಿಸಿದಂತೆ ತೆರಿಗೆಗಳನ್ನು ವಿಭಜಿಸದಿರುವುದು | 27 |
| 5.3 | ಎಸ್‌ಎಲ್‌ಎಓಗಳು ಪಾವತಿಸಿದ ಪರಿಹಾರಧನದ ಮೇಲೆ ಮಂಡಳಿಯು ಯಾವುದೇ ನಿಯಂತ್ರಣ ಹೊಂದಿರಲಿಲ್ಲ | 28 |
| 5.4 | ಅನುದಾನ ದೃಢೀಕರಣ ಪತ್ರಗಳ ನೀಡಿಕೆಯಲ್ಲಿ ವಂಚನೆ | 29 |
| 5.5 | ಪರಿಹಾರಧನ ಪಾವತಿಗೆ ಮುನ್ನ ಎಸ್‌ಎಲ್‌ಎಓಗಳು ಎಲ್ಲ ದಾಖಲೆಗಳನ್ನು ಪಡೆಯಲಿಲ್ಲ | 31 |
| 5.6 | ಪರಿಹಾರಧನ ಪಾವತಿಯಲ್ಲಿ ಅಕ್ರಮಗಳು | 33 |
| **ಅಧ್ಯಾಯ 6: ಭೂಮಿಯ ಹಂಚಿಕೆ** | | 55 |
| 6.1 | ಭೂಮಿಯ ಹಂಚಿಕೆಗೆ ಅರ್ಜಿಗಳನ್ನು ಆಹ್ವಾನಿಸುವಾಗ ಮಂಡಳಿಯು ಜಾಹಿರಾತನ್ನು ಸೀಮಿತಗೊಳಿಸಿತು | 55 |
| 6.2 | ಭೂ ಹಂಚಿಕೆ ಸಮಿತಿ ಮತ್ತು ಅಭಿವೃದ್ಧಿ ಅಧಿಕಾರಿಗಳು ಭೂಮಿಯನ್ನು ಉದ್ಯಮಿಗಳಿಗೆ ಅನಧಿಕೃತವಾಗಿ ಹಂಚಿಕೆ ಮಾಡಿದರು | 56 |
| 6.3 | ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡಲು ಮಂಡಳಿಯು ನಿಯಮಾವಳಿಗಳನ್ನು ರೂಪಿಸಿರಲಿಲ್ಲ | 56 |
| 6.4 | ಸಮಿತಿಗಳು ಅನುಮೋದಿಸಿದ ಯೋಜನೆಗಳಿಗೆ ಭೂ ಸ್ವಾಧೀನ/ಹಂಚಿಕೆಗಳನ್ನು ಮಂಡಳಿಯು ವಿಳಂಬ ಮಾಡಿತು | 56 |
| 6.5 | ಹಂಚಿಕೆಯ ದರವನ್ನು ಇಳಿಸಲು ಮಂಡಳಿಯು ಅನಗತ್ಯ ಅವಸರ ತೋರಿತು | 57 |
| 6.6 | ಹಂಚಿಕೆದಾರರೊಂದಿಗೆ ಮಾಡಿಕೊಂಡ ಒಪ್ಪಂದದಲ್ಲಿ ವಿಳಂಬದ ಸಂದಾಯಕ್ಕೆ ದಂಡನೆಯ ಉಪಬಂಧಗಳಿರಲಿಲ್ಲ | 58 |
| 6.7 | ಉದ್ಯಾನಕ್ಕಾಗಿ ಮೀಸಲಿಟ್ಟ ಭೂಮಿಯನ್ನು ಸರ್ಕಾರವು ಎರಡು ಕಂಪನಿಗಳಿಗೆ ಅಕ್ರಮವಾಗಿ ಹಂಚಿಕೆ ಮಾಡಿತು | 58 |
| 6.8 | ಬಾಕಿ ಹಣವನ್ನು ವಸೂಲು ಮಾಡದೆ ಹಂಚಿಕೆ ಮಾಡಿದ ಭೂಮಿಯ ಒಂದು ಭಾಗದ ಸ್ವಾಧೀನವನ್ನು ಮಂಡಳಿಯು ಹಸ್ತಾಂತರಿಸಿತು | 60 |
| 6.9 | ಮೂಲೆ ನಿವೇಶನಕ್ಕೆ ವಿಧಿಸಬೇಕಾದ ಹೆಚ್ಚುವರಿ ಬೆಲೆಯನ್ನು ಪೂರ್ವಾನ್ವಯವಾಗಿ ಕಡಿತಗೊಳಿಸಿ ಮಂಡಳಿಯು ಕಂಪನಿಯೊಂದಕ್ಕೆ ಅನಗತ್ಯ ಒಲವು ತೋರಿತು | 60 |
| 6.10 | ರಿಯಾಯಿತಿ ದರದಲ್ಲಿ ಮಾಡಿದ ಭೂ ಹಂಚಿಕೆಯಿಂದ ಉಂಟಾದ ನಷ್ಟವನ್ನು ಮಂಡಳಿಯು ವಸೂಲು ಮಾಡಲಿಲ್ಲ | 61 |
| **ಅಧ್ಯಾಯ 7: ನಿರ್ಣಯ ಮತ್ತು ಶಿಫಾರಸುಗಳು** | | 62 |
| 7.1 | ನಿರ್ಣಯ | 62 |
| 7.2 | ಶಿಫಾರಸುಗಳು | 62 |
| **ಅನುಬಂಧಗಳು** | | |
| | ಅನುಬಂಧ–1 | 65 |
| | ಅನುಬಂಧ–2 | 66 |
| | ಅನುಬಂಧ–3 | 68 |
| | ಅನುಬಂಧ–4 | 71 |
| | ಅನುಬಂಧ–5 | 72 |
| | ಅನುಬಂಧ–6 | 73 |

# ಪ್ರಸ್ತಾವನೆ

1. 31 ಮಾರ್ಚ್ 2011ರ ವರ್ಷಕ್ಕೆ ಅಂತ್ಯಗೊಳ್ಳುವ ಈ ವರದಿಯನ್ನು ಸಂವಿಧಾನದ 151ನೆಯ ಅನುಚ್ಛೇದದಡಿ ರಾಜ್ಯಪಾಲರಿಗೆ ಸಲ್ಲಿಸುವುದಕ್ಕಾಗಿ ಸಿದ್ಧಪಡಿಸಲಾಗಿದೆ.

2. ಈ ವರದಿಯು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ 'ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯಿಂದ ಭೂಮಿಯ ಸ್ವಾಧೀನ ಮತ್ತು ಹಂಚಿಕೆ' ಇದರ ಮೇಲಿನ ಲೆಕ್ಕಪರಿಶೋಧನಾ ಫಲಿತಾಂಶಗಳನ್ನು ಒಳಗೊಂಡಿದೆ.

3. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಕಾರ್ಯನಿರ್ವಹಣಾ ಸಾರಾಂಶ

## 1. ಹಿನ್ನೆಲೆ

ಕೈಗಾರಿಕೆಗಳ ಕ್ಷಿಪ್ರ ಮತ್ತು ಕ್ರಮಬದ್ಧ ಸ್ಥಾಪನೆ, ಬೆಳವಣಿಗೆ ಮತ್ತು ಅಭಿವೃದ್ಧಿಗೆ ನೆರವಾಗಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966ರ (ಕೆಐಎಡಿ ಅಧಿನಿಯಮ) ಅಡಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯನ್ನು (ಮಂಡಳಿ) ಸ್ಥಾಪಿಸಲಾಯಿತು. ಮಂಡಳಿಯು ಸರ್ಕಾರಿ ಮತ್ತು ಖಾಸಗಿ ಭೂಮಿಗಳೆರಡನ್ನೂ ಸ್ವಾಧೀನಪಡಿಸಿಕೊಂಡು ಕೈಗಾರಿಕಾ ಪ್ರದೇಶಗಳನ್ನಾಗಿ ಅಭಿವೃದ್ಧಿಪಡಿಸಿ ಅವುಗಳನ್ನು ಉದ್ಯಮಿಗಳಿಗೆ ಲಭ್ಯವಾಗುವಂತೆ ಮಾಡುತ್ತದೆ. ಮಂಡಳಿಯು ಏಕ ಘಟಕ ಸಂಕೀರ್ಣಗಳಿಗೆ ಮತ್ತು ವಿಶೇಷ ಆರ್ಥಿಕ ವಲಯಗಳಿಗೆ ಭೂ ಸ್ವಾಧೀನಪಡಿಸಿಕೊಳ್ಳುವ ಒಂದು ಏಜೆನ್ಸಿಯಾಗಿಯೂ ಸಹ ಕಾರ್ಯ ನಿರ್ವಹಿಸುತ್ತದೆ.

ಮಂಡಳಿಯಿಂದ ಭೂಸ್ವಾಧೀನ ಮತ್ತು ಹಂಚಿಕೆಯ ಬಗ್ಗೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಏಪ್ರಿಲ್ ಮತ್ತು ಜುಲೈ 2011ರ ನಡುವೆ ಮತ್ತು ಅಕ್ಟೋಬರ್ 2011ರಲ್ಲಿ ಕೈಗೊಳ್ಳಲಾಯಿತು ಮತ್ತು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯೊಂದಿಗೆ ಪ್ರವೇಶ ಮತ್ತು ನಿರ್ಗಮನ ಸಮ್ಮೇಳನಗಳು ನಡೆದವು. ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಅಂಶಗಳಿಗೆ ಮಂಡಳಿಯ ವಿವಿಧ ಅಧಿಕಾರಿಗಳ ಪ್ರತಿಕ್ರಿಯೆಗಳನ್ನು ಪರಿಗಣಿಸಿ ಈ ವರದಿಯಲ್ಲಿ ಸೇರಿಸಲಾಗಿದೆ. ಪ್ರಮುಖ ಸಾರಾಂಶಗಳನ್ನು ಕೆಳಗಿನ ಕಂಡಿಕೆಗಳಲ್ಲಿ ನೀಡಲ್ಪಟ್ಟಿದ್ದರೆ ವಿವರಗಳು ಪ್ರತ್ಯೇಕ ಅಧ್ಯಾಯಗಳಲ್ಲಿ ಲಭ್ಯವಿದೆ.

## 2. ಭೂ ಸ್ವಾಧೀನ

- ಮಂಡಳಿಯಿಂದ ಕೈಗಾರಿಕಾ ಪ್ರದೇಶಗಳ ಸ್ಥಾಪನೆಯು ಸರ್ಕಾರದ 2006–11 ಮತ್ತು 2009–14ರ ಕೈಗಾರಿಕಾ ನೀತಿಗೆ ಅನುಗುಣವಾಗಿರಲಿಲ್ಲ. ಕೈಗಾರಿಕಾ ಪ್ರದೇಶಗಳ ಸ್ಥಾಪನೆಗೆ ಪ್ರದೇಶಗಳ ಆಯ್ಕೆಯು ತಾತ್ಕಾಲಿಕವಾಗಿತ್ತು ಮತ್ತು ಸೂಕ್ತ ಪರಿಶ್ರಮದ ಕೊರತೆಯನ್ನು ತೋರಿಸಿತು. ಇದು ಕೈಗಾರಿಕಾ ಪ್ರದೇಶಗಳ ಸ್ಥಾಪನೆಯಲ್ಲಿ ಪ್ರಾದೇಶಿಕ ಅಸಮತೋಲನವನ್ನು ಉಂಟು ಮಾಡಿತು.

- ಮಂಡಳಿಯು ಎರಡು ಯೋಜನೆಗಳಲ್ಲಿ, ಪ್ರದೇಶಗಳ ಸಮಗ್ರ ಅಭಿವೃದ್ಧಿ ಯೋಜನೆಗಳಲ್ಲಿ ಸೂಚಿತವಾಗಿದ್ದ ಭೂ ಬಳಕೆಯ ಮಾದರಿಗಳನ್ನು ಪರಿಶೀಲಿಸದೆಯೇ, ಕೈಗಾರಿಕಾ ಪ್ರದೇಶಗಳಿಗಾಗಿ ಭೂಸ್ವಾಧೀನ ಪಡಿಸಿಕೊಂಡಿತು. ಕೈಗಾರಿಕೇತರ ಬಳಕೆಗಾಗಿ ಸೂಚಿತವಾಗಿದ್ದ ಭೂಮಿಯು ಕೈಗಾರಿಕಾ ಪ್ರದೇಶಗಳಿಗೆ ಅಧಿಸೂಚಿತವಾಗಿಲ್ಲ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಮಂಡಳಿಯಿಂದ ಯೋಜನಾ ಪ್ರಾಧಿಕಾರಗಳೊಂದಿಗೆ ಪೂರ್ವಭಾವಿ ಸಮಾಲೋಚನೆಯು ಇರಲಿಲ್ಲ.

- ಕೈಗಾರಿಕಾ ಪ್ರದೇಶಗಳ ಸ್ಥಾಪನೆ ಮತ್ತು ಏಕಘಟಕ ಸಂಕೀರ್ಣಗಳಿಗೆ ಹಂಚಿಕೆ ಇವೆರಡಕ್ಕೂ ಮಂಡಳಿಯು ಸರ್ಕಾರದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದರೂ ಹಾಗೆ ಸ್ವಾಧೀನಪಡಿಸಿಕೊಂಡ ಭೂಮಿಯ ಹಕ್ಕುಸ್ವಾಧೀನತೆಯು ಮಂಡಳಿಗೆ ವರ್ಗಾವಣೆಯಾಗಿರಲಿಲ್ಲ.

- ನವೆಂಬರ್ 2005ರಿಂದ ಏಪ್ರಿಲ್ 2011ರ ಅವಧಿಯಲ್ಲಿ ಸರ್ಕಾರವು 563 ಎಕರೆ 13 ಗುಂಟೆಗಳಷ್ಟು ಭೂಮಿಯನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿತ್ತು. ಲೆಕ್ಕಪರಿಶೋಧನೆಯಿಂದ ಪರೀಕ್ಷಿಸಲ್ಪಟ್ಟ ಕೆಲವು ಪ್ರಮುಖ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟ ಪ್ರಕರಣಗಳನ್ನು ಈ ವರದಿಯಲ್ಲಿ ಸೇರಿಸಲಾಗಿದೆ. ಈ ಪ್ರಕರಣಗಳಲ್ಲಿ ಮಂಡಳಿಯಿಂದ ಆಕ್ಷೇಪಣೆಗಳು ಮಾಡಲ್ಪಟ್ಟರೂ ಸರ್ಕಾರವು ಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿತು. ಈ ಪ್ರಕರಣಗಳು, ಕಾನೂನುಗಳ ಧಿಕ್ಕರಿಸುವಿಕೆ ಮತ್ತು ಸಾರ್ವಜನಿಕ ಹಿತಾಸಕ್ತಿಯ ಕಡೆಗಣಿಸುವಿಕೆ ಮತ್ತು ಖಾಸಗಿ ಹಿತಾಸಕ್ತಿಗಾಗಿ ಅವುಗಳ ವಶಪಡಿಸಿಕೊಳ್ಳುವಿಕೆ ಇವುಗಳಿಗೆ ಉದಾಹರಣೆಗಳಾಗಿವೆ.

**(ಅಧ್ಯಾಯ 3)**

## 3. ಪರಿಹಾರಧನದ ನಿರ್ಧಾರಣೆ

- ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ನಿಯಮವು, ಪರಿಹಾರಧನದ ಪಾವತಿಯು ಸೇರಿದಂತೆ ಸ್ವಾಧೀನ ನಡವಳಿಗಳನ್ನು ಅಂತಿಮಗೊಳಿಸಲು ಯಾವುದೇ ಕಾಲಮಿತಿಯನ್ನು ಸೂಚಿಸುವುದಿಲ್ಲ. ಜಿಲ್ಲೆಯ ಜಿಲ್ಲಾಧಿಕಾರಿಗಳು ಮುಖ್ಯಸ್ಥರಾಗಿರುವ ಮೌಲ್ಯ ಸಲಹಾ ಸಮಿತಿಯು, ಭೂಮಾಲೀಕರೊಡನೆ ಪರಸ್ಪರ ಒಪ್ಪಂದದ ಆಧಾರದ ಮೇಲೆ, ಪರಿಹಾರಧನವನ್ನು ನಿರ್ಧರಿಸಿತು. ಹಾಗೆ ನಿಶ್ಚಯವಾಗಿದ್ದ ಪರಿಹಾರಧನವು ಪ್ರಚಲಿತ ಮಾರುಕಟ್ಟೆ ದರಗಳ ಮೇಲೆ ಆಧಾರಿತವಾಗಿದ್ದರಿಂದ, ಪರಿಹಾರಧನದ ನಿಶ್ಚಯದಲ್ಲಿ ಯಾವುದೇ ವಿಳಂಬವು, ಭೂಮಾಲೀಕರು ಪ್ರಸ್ತುತ ಮಾರುಕಟ್ಟೆ ದರಗಳ ಮೇಲೆ ಆಧರಿಸಿ ಹೆಚ್ಚಿನ ಪರಿಹಾರಧನವನ್ನು ಒತ್ತಾಯಿಸುವ ಅಪಾಯದಿಂದ ಕೂಡಿತ್ತು. ಮೌಲ್ಯ ಸಲಹಾ ಸಮಿತಿಯು, 19 ಯೋಜನೆಗಳ ಪೈಕಿ 7ರಲ್ಲಿ, ಅಂತಿಮ ಅಧಿಸೂಚನೆಗಳ ದಿನಾಂಕದಿಂದ 11ರಿಂದ 57 ತಿಂಗಳುಗಳವರೆಗಿನ ಶ್ರೇಣಿಯ ಅವಧಿಗೆ ಪರಿಹಾರಧನವನ್ನು ನಿರ್ಧರಿಸಿರಲಿಲ್ಲ.

- ಅಕ್ಕಪಕ್ಕದ ಮೂರು ಕೈಗಾರಿಕಾ ಪ್ರದೇಶಗಳಿಗಾಗಿ ಭೂಸ್ವಾಧೀನಪಡಿಸಿಕೊಂಡ ಪ್ರಕರಣದಲ್ಲಿ, ಪ್ರಾಥಮಿಕ ಅಧಿಸೂಚನೆಯು ಆಗಸ್ಟ್ 2006 ಮತ್ತು ಜನವರಿ 2007ರ ನಡುವೆ ನೀಡಲ್ಪಟ್ಟಿತ್ತು. ಆದಾಗ್ಯೂ, ಅಂತಿಮ ಅಧಿಸೂಚನೆಗಳು ಮೇ 2007 ಮತ್ತು ಸೆಪ್ಟೆಂಬರ್ 2008ರ ನಡುವೆ ಬೇರೆ ಬೇರೆ ಸಮಯಗಳಲ್ಲಿ ವಿಳಂಬಿತವಾಗಿ ನೀಡಲ್ಪಟ್ಟವು. ಪರಿಣಾಮವಾಗಿ, ಮೌಲ್ಯ ಸಲಹಾ ಸಮಿತಿಯಿಂದ ಪರಿಹಾರಧನದ ನಿರ್ಧರಣವು ವಿಳಂಬವಾಯಿತು ಮತ್ತು ಪ್ರತಿ ಎಕರೆಗೆ ನಿಶ್ಚಯಿಸಲ್ಪಟ್ಟಿದ್ದ ಪರಿಹಾರಧನವು ನವೆಂಬರ್ 2007ರಲ್ಲಿ ರೂ.31 ಲಕ್ಷದಿಂದ ಮಾರ್ಚ್ 2008ರಲ್ಲಿ ರೂ.55 ಲಕ್ಷದಿಂದ ರೂ.57 ಲಕ್ಷದವರೆಗೆ ಹಾಗೂ ಸೆಪ್ಟೆಂಬರ್ 2008ರಲ್ಲಿ ರೂ.60 ಲಕ್ಷದಿಂದ ರೂ.70 ಲಕ್ಷದವರೆಗೆ ಏರುತ್ತಾ ಹೋಯಿತು.

(ಅಧ್ಯಾಯ 4)

## 4. ಪರಿಹಾರಧನದ ಪಾವತಿ

- ಮಂಡಳಿಯು ಭೂಮಿಯ ಅಧಿಸೂಚನೆಗಾಗಿನ ಸರ್ಕಾರದ ಸೂಚನೆಗಳನ್ನು ಪಾಲಿಸಲಿಲ್ಲ. ಸರ್ಕಾರದ ಭೂಮಿಯ ಸ್ವಾಧೀನಕ್ಕಾಗಿ ರೈಟ್ಸ್, ಗೇಣಿ ಮತ್ತು ಪಹಣಿ ಪ್ರಮಾಣಪತ್ರಗಳ ದಾಖಲೆಯಂತೆ ಮಾತ್ರವೇ ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆಗಳನ್ನು ತಯಾರಿಸಿದ್ದು, ಅನರ್ಹ ವ್ಯಕ್ತಿಗಳಿಗೆ ಪರಿಹಾರಧನ ಪಾವತಿಯಲ್ಲಿ ಪರಿಣಮಿಸಿತು ಏಕೆಂದರೆ, ರೈಟ್ಸ್, ಗೇಣಿ ಮತ್ತು ಪಹಣಿ ಪ್ರಮಾಣಪತ್ರಗಳ ದಾಖಲೆಗಳು ಹಲವು ಪ್ರಕಾರಗಳಲ್ಲಿ ದೋಷಪೂರಿತವಾಗಿದ್ದವು.

- ಹತ್ತೊಂಬತ್ತು ಯೋಜನೆಗಳ ಪೈಕಿ ಐದರಲ್ಲಿ ಪರಿಹಾರಧನದ ಪಾವತಿಗೆ ಮುಂಚಿತವಾಗಿ ಜಂಟಿ–ಮಾಪನವನ್ನು ಮಾಡಿರಲಿಲ್ಲ. ಒಂದು ಯೋಜನೆಗೆ ಸಂಬಂಧಿಸಿದಂತೆ ಅದು ಇದುವರೆವಿಗೂ ಆಗಿಲ್ಲ.

- ಬೇಡಿಕೆಯ ಸಂಸ್ಕರಣೆಗಾಗಿ ಪಡೆಯಬೇಕಿದ್ದ ದಾಖಲೆಗಳ ಬಗ್ಗೆ ಎಸ್‌ಎಲ್‌ಎಓ ತಾವೇ ತೀರ್ಮಾನಿಸಿದರು, ಬೇಡಿಕೆಯನ್ನು ಸಂಸ್ಕರಿಸಿದರು ಮತ್ತು ಪರಿಹಾರಧನವನ್ನು ಪಾವತಿಸಿದರು. ಪರಿಶೀಲನೆ ಮತ್ತು ಪಾವತಿಗೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯಗಳ ಹಂಚಿಕೆ ಇರಲಿಲ್ಲ. ಭೂಸ್ವಾಧೀನದ ಮೇಲೆ ಮಂಡಳಿಯು ವರ್ಷದಿಂದ ವರ್ಷಕ್ಕೆ ಹೆಚ್ಚಿನ ವೆಚ್ಚ ಮಾಡುತ್ತಿದ್ದರೂ, ಯಾವುದೇ ಎಸ್‌ಎಲ್‌ಎಓಗಳು ಆಗಸ್ಟ್ 2009ರವರೆಗೆ ಆಂತರಿಕ ಲೆಕ್ಕಪರಿಶೋಧನೆ ವಿಭಾಗದಿಂದ ಘಟನೋತ್ತರ ಲೆಕ್ಕಪರಿಶೋಧನೆಗೆ ಒಳಪಟ್ಟಿರಲಿಲ್ಲ.

- ಎಸ್‌ಎಲ್‌ಎಓರವರು ಪರಿಹಾರಧನದ ಪಾವತಿಗೆ ಮುಂಚೆ ಬೇಡಿಕೆಯೊಂದನ್ನು ಸಂಸ್ಕರಿಸಲು ಅಗತ್ಯವಿರುವ ಎಲ್ಲ ದಾಖಲೆಗಳನ್ನು ಪಡೆಯಲು ವಿಫಲರಾದರು. ಪರೀಕ್ಷಾ–ತನಿಖೆ ಮಾಡಲಾದ 340 ಪ್ರಕರಣಗಳ ಪೈಕಿ 60ರಲ್ಲಿ, ಎಸ್‌ಎಲ್‌ಎಓರವರು ಪರಿಹಾರಧನದ ಪಾವತಿಗೆ ಮುಂಚಿತವಾಗಿ ಅಗತ್ಯವಿರುವ ಎಲ್ಲ ದಾಖಲೆಗಳನ್ನು ಪಡೆಯಲಿಲ್ಲ. ಹಲವು ವ್ಯಕ್ತಿಗಳಿಗೆ ಸರ್ಕಾರಿ ಜಮೀನು ನೀಡಲ್ಪಟ್ಟ 60 ಪ್ರಕರಣಗಳ ಪೈಕಿ 44ರಲ್ಲಿ, ಬೇಡಿಕೆದಾರರಿಂದ ಮೂಲ ಹಂಚಿಕೆ ಪ್ರಮಾಣಪತ್ರಗಳನ್ನೂ ಎಸ್‌ಎಲ್‌ಎಓರವರು ಪಡೆಯಲಿಲ್ಲ.

- ಬಂಡಿಕೊಡಿಗೆಹಳ್ಳಿ ಗ್ರಾಮದ ಎರಡು ಸರ್ವೇ ಸಂಖ್ಯೆಗಳಲ್ಲಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರದ ವಿಶೇಷ ಜಿಲ್ಲಾಧಿಕಾರಿಗಳು, ದತ್ತಿ ನೀಡಲ್ಪಟ್ಟ ಭೂಮಿಗಿಂತ ಅಧಿಕವಾಗಿ ರೈಟ್ಸ್, ಗೇಣಿ ಮತ್ತು ಪಹಣಿ ಪ್ರಮಾಣಪತ್ರಗಳು ನೀಡಲ್ಪಟ್ಟಿವೆ ಮತ್ತು ವಿಷಯವು ತನಿಖೆಯಲ್ಲಿದೆ ಎಂದು ಎಸ್‌ಎಲ್‌ಎಓರವರಿಗೆ ತಿಳಿಸಿದ್ದರು (ಡಿಸೆಂಬರ್ 2007). ಎಸ್‌ಎಲ್‌ಎಓರವರು ಈ ವರದಿಯನ್ನು ನಿರ್ಲಕ್ಷಿಸಿದರು ಮತ್ತು ಈ ಎರಡು ಸರ್ವೆ ನಂಬರ್‌ಗಳಲ್ಲಿನ 235 ಎಕರೆ 3 ಗುಂಟೆ ಜಮೀನಿಗೆ ರೂ.76.07 ಕೋಟಿ ಪರಿಹಾರಧನವನ್ನು ವಿತರಿಸಿದರು (ಏಪ್ರಿಲ್ 2008ರಿಂದ ಮಾರ್ಚ್ 2010). ಇವುಗಳಲ್ಲಿನ ಒಂದು ಸರ್ವೆ ನಂಬರ್‌ನಲ್ಲಿ ಸ್ವಾಧೀನಕ್ಕೆ ಅಧಿಸೂಚಿತವಾಗಿದ್ದ ಭೂಮಿಯು ಕೇವಲ 41 ಎಕರೆಗಳಿದ್ದರೆ, ಎಸ್‌ಎಲ್‌ಎಓರವರು 87 ಎಕರೆ ಹಾಗೂ 5 ಗುಂಟೆಗಳಿಗೆ ಪರಿಹಾರಧನವನ್ನು ವಿತರಿಸಿ, ರೂ.17.68 ಕೋಟಿ ಅಧಿಕ ಪಾವತಿ ಮಾಡಿದರು. ಉಳಿದ ಸರ್ವೆ ನಂಬರ್‌ನಲ್ಲಿನ ಅಧಿಸೂಚಿತ ಪ್ರದೇಶದ ಹೊರಗಿದ್ದ 9 ಎಕರೆ 20 ಗುಂಟೆ ಜಮೀನನ್ನು ಸಹ ಎಸ್‌ಎಲ್‌ಎಓರವರು ವಶಪಡಿಸಿಕೊಂಡರು ಮತ್ತು ರೂ.3.09 ಕೋಟಿ ಪರಿಹಾರಧನವನ್ನು ಪಾವತಿಸಿದರು.

- ಈ ಎರಡು ಸರ್ವೆ ನಂಬರ್‌ಗಳಲ್ಲಿನ 235 ಎಕರೆ ಮತ್ತು 3 ಗುಂಟೆಗಳ ಪೈಕಿ, ರೂ.25.41 ಕೋಟಿ ಪರಿಹಾರಧನ ಪಾವತಿಯಾಗಿದ್ದ 76 ಎಕರೆ ಮತ್ತು 8 ಗುಂಟೆಗಳನ್ನು, ಬೆಂಗಳೂರು ನಗರದ ವಿಶೇಷ ಜಿಲ್ಲಾಧಿಕಾರಿಯವರ ತನಿಖೆಯ ಮುಕ್ತಾಯದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಜೊತೆಯಲ್ಲಿ, ಬೇರೆ ಎರಡು ಕೈಗಾರಿಕಾ ಪ್ರದೇಶಗಳಿಗಾಗಿ ವಶಪಡಿಸಿಕೊಳ್ಳಲಾಗಿದ್ದ 29 ಎಕರೆ ಮತ್ತು 17 ಗುಂಟೆ ಅಳತೆಯ ಜಮೀನು ಕೂಡ ಸರ್ಕಾರಕ್ಕೆ ಮುಟ್ಟುಗೋಲಾದವು. ಆದರೆ, ಎಸ್‌ಎಲ್‌ಓರವರು ಈ ಜಮೀನುಗಳಿಗೆ ಕೂಡ ರೂ.14.72 ಕೋಟಿ ಪರಿಹಾರಧನವನ್ನು ವಿತರಿಸಿದರು.

- ಮೂರು ಕೈಗಾರಿಕಾ ಪ್ರದೇಶಗಳಿಗಾಗಿ ಆಗಲೇ ವಶಪಡಿಸಿಕೊಳ್ಳಲಾಗಿದ್ದ 356 ಎಕರೆ ಮತ್ತು 15 ಗುಂಟೆ ಸರ್ಕಾರಿ ಜಮೀನಿನ ವಿಷಯದಲ್ಲಿ ಬೆಂಗಳೂರು ನಗರದ ವಿಶೇಷ ಜಿಲ್ಲಾಧಿಕಾರಿಯಿಂದ ಅಕ್ರಮಗಳ ಕುರಿತು ತನಿಖೆಯು ಪ್ರಗತಿಯಲ್ಲಿತ್ತು. ತನಿಖೆಯಲ್ಲಿರುವ ಈ ಜಮೀನುಗಳಿಗೆ ರೂ.190.30 ಕೋಟಿ ಪರಿಹಾರಧನವನ್ನು ಎಸ್‌ಎಲ್‌ಎಓರವರು ಆಗಲೇ ವಿತರಿಸಿದ್ದರು.

- ಜಮೀನಿನ ಹಕ್ಕುಸ್ವಾಮ್ಯವನ್ನು ಸ್ಥಿರಪಡಿಸಲು ಆವಶ್ಯಕ ದಾಖಲೆಗಳನ್ನು ಪಡೆಯುವ ಅಗತ್ಯವನ್ನು ನಿರ್ಲಕ್ಷಿಸಿದ ಎಸ್‌ಎಲ್‌ಎಓರವರು ಏಳು ಪ್ರಕರಣಗಳಲ್ಲಿ ಒಂದು ಕಂಪನಿಯಿಂದ ನೀಡಲ್ಪಟ್ಟ ಮೌಖಿಕ ಆಶ್ವಾಸನೆಯ ಆಧಾರದ ಮೇಲೆ ರೂ.7.49 ಕೋಟಿ ಪರಿಹಾರಧನವನ್ನು ವಿತರಿಸಿದರು.

- ಯಾವುದೇ ಜಮೀನಿನ ಮಾಲೀಕರಾಗಿರದ ಅಥವಾ ಜಮೀನಿನ ಹಕ್ಕುಸ್ವಾಮ್ಯವು ಅನುಮಾನಾಸ್ಪದವಾಗಿದ್ದಂತಹ ಒಂಬತ್ತು ವ್ಯಕ್ತಿಗಳಿಗೆ ರೂ.14.40 ಕೋಟಿ ಪರಿಹಾರಧನವನ್ನು ಎಸ್‌ಎಲ್‌ಎಓರವರು ವಿತರಿಸಿದರು. ಅಧಿಕಾರ ಪತ್ರವನ್ನು ಹೊಂದಿದ್ದ ವ್ಯಕ್ತಿಗಳಿಂದ ಸಂಶಯಾತ್ಮಕ ಭೂ ವ್ಯವಹಾರಗಳನ್ನು ನಿರ್ಲಕ್ಷಿಸಲಾಯಿತು ಮತ್ತು ಎರಡು ಪ್ರಕರಣಗಳಲ್ಲಿ ರೂ.1.74 ಕೋಟಿ ಪರಿಹಾರಧನವನ್ನು ವಿತರಿಸಲಾಯಿತು.

- ಎಸ್‌ಎಲ್‌ಎಓರವರು ಆರು ಪ್ರಕರಣಗಳಲ್ಲಿ ಒಟ್ಟು ರೂ.1.83 ಕೋಟಿ ಪರಿಹಾರಧನದ ಅಧಿಕ ಪಾವತಿ ಮಾಡಿದರು, 13 ಪ್ರಕರಣಗಳಲ್ಲಿ ರೂ.13.31 ಕೋಟಿ ಪರಿಹಾರಧನದ ಪಾವತಿಗೆ ಮುಂಚೆ ಹಲವು ಅಧಿನಿಯಮಗಳ ಉಲ್ಲಂಘನೆ ಮತ್ತು ಇತ್ಯರ್ಥವಾಗಿರದ ಮೊಕದ್ದಮೆಗಳನ್ನು ನಿರ್ಲಕ್ಷಿಸಿದರು ಮತ್ತು ಅಧಿಸೂಚನೆಯ ಘೋಷಣೆಯ ನಂತರ ಹಕ್ಕುಸ್ವಾಮ್ಯಗಳು ನಿಯಮಬಾಹಿರವಾಗಿ ವರ್ಗಾವಣೆಯಾಗಿದ್ದ ಜಮೀನುಗಳ ಎರಡು ಪ್ರಕರಣಗಳಿಗೆ ಸಂಬಂಧಿಸಿದಂತೆ ರೂ.5.72 ಕೋಟಿ ಪರಿಹಾರಧನವನ್ನು ಸಹಾ ವಿತರಿಸಿದರು.

- ಸ್ವಾಧೀನಕ್ಕಾಗಿ ಅಧಿಸೂಚಿತವಾಗದ ಅಥವಾ ಜಂಟಿಮಾಪನ ವರದಿಗಳಲ್ಲಿ ಸೇರಿರದಿದ್ದ 11 ಪ್ರಕರಣಗಳಲ್ಲಿ ಎಸ್‌ಎಲ್‌ಎಓರವರಿಂದ ಪಾವತಿಯಾದ ಪರಿಹಾರಧನವು ರೂ.17.31 ಕೋಟಿಯಾಗಿದ್ದರೆ ಸಂಬಂಧಿತ/ಸಮರ್ಥನೀಯ ದಾಖಲೆಗಳಿಲ್ಲದೆ ಪಾವತಿಯಾದ ಹೆಚ್ಚಿನ ಪರಿಹಾರಧನವು ಒಂಬತ್ತು ಪ್ರಕರಣಗಳಲ್ಲಿ ರೂ.3.15 ಕೋಟಿ ಮೊತ್ತದ್ದಾಗಿತ್ತು. ಎಸ್‌ಎಲ್‌ಎಓರವರು ಒಂದು ಪ್ರಕರಣದಲ್ಲಿ ಕೇವಲ ಒಂದು ವರ್ಷದ ರೈಟ್ಸ್, ಗೇಣಿ ಮತ್ತು ಪಹಣಿ ಪ್ರಮಾಣಪತ್ರಗಳ ಆಧಾರದ ಮೇಲೆ ರೂ.46.50 ಲಕ್ಷ ಪರಿಹಾರಧನವನ್ನು ಸಹ ವಿತರಿಸಿದರು ಮತ್ತು ಎರಡು ಪ್ರಕರಣಗಳಲ್ಲಿ ರೂ.2 ಕೋಟಿ ಪರಿಹಾರಧನವನ್ನು ಸ್ವೀಕರಿಸಿದ ವ್ಯಕ್ತಿಗಳ ಅರ್ಹತೆಯನ್ನು ಖಚಿತಪಡಿಸಿಕೊಳ್ಳಲಿಲ್ಲ.

- ಪರಿವರ್ತಿತ ಜಮೀನಿಗಾಗಿ ವಿತರಿಸಲಾದ ಪರಿಹಾರಧನದಿಂದ ರೂ.2.33 ಕೋಟಿ ಆದಾಯ ತೆರಿಗೆಯನ್ನು ಸಹ ಎಸ್‌ಎಲ್‌ಎಓರವರು ಕಟಾವಣೆ ಮಾಡಲಿಲ್ಲ.

- ಮಂಡಳಿಯು ಒಂದು ಕೈಗಾರಿಕಾ ಪ್ರದೇಶಕ್ಕಾಗಿ ವಶಪಡಿಸಿಕೊಳ್ಳಲಾಗಿದ್ದ ಸರ್ಕಾರಿ ಜಮೀನಿನ ಅನಧಿಕೃತ ಅನುಭವದಾರರನ್ನು ಹೊರಹಾಕಲು, ಉಚ್ಚ ನ್ಯಾಯಾಲಯವು ಯಥಾಸ್ಥಿತಿಯನ್ನು ಆದೇಶಿಸುವಾಗ ಜಮೀನಿನ ಹಕ್ಕುಸ್ವಾಮ್ಯಕ್ಕೆ ಅನುಭವದಾರರ ಹಕ್ಕುಕೋರಿಕೆಯನ್ನು ವಜಾ ಮಾಡಿದ್ದರೂ, ರೂ.26.70 ಕೋಟಿ ಪರಿಹಾರಧನವನ್ನು ಪಾವತಿಸಿತು. ಸರ್ಕಾರವು, ಉಚ್ಚ ನ್ಯಾಯಾಲಯದ ಆದೇಶಕ್ಕೆ ವಿರುದ್ಧವಾಗಿ ಅನಂತರ ಹೂಡಿದ್ದ ವಿಶೇಷ ರಜಾ ಅರ್ಜಿಯನ್ನು ಸಹ ವಾಪಸ್ಸು ತೆಗೆದುಕೊಳ್ಳಲು ಆದೇಶಿಸಿತು.

- ಸ್ವಾಧೀನಪಡಿಸಿಕೊಂಡ ಜಮೀನಿನ ಮೇಲಿನ ಮಾಲ್ಕಿಗಳು ಮತ್ತು ಕಟ್ಟಡಗಳಿಗಾಗಿ ಮಂಡಳಿಯು ರೂ.82.85 ಕೋಟಿ ಪರಿಹಾರಧನವನ್ನು 2006–11ರ ಅವಧಿಯಲ್ಲಿ ಪಾವತಿಸಿತು. ಆದರೆ, ಈ ಅವಧಿಯಲ್ಲಿ ಮಾಲ್ಕಿಗಳು ಮತ್ತು ಕಟ್ಟಡಗಳ ಮಾರಾಟದಿಂದ ಬಂದ ಆದಾಯವು ಕೇವಲ ರೂ.3.66 ಲಕ್ಷವಾಗಿತ್ತು. ಮಾಲ್ಕಿಗಳ ಮತ್ತು ಕಟ್ಟಡಗಳ ವಿಲೇವಾರಿಯ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ.

(ಅಧ್ಯಾಯ 5)

## 5. ಭೂಮಿಯ ಹಂಚಿಕೆ

- ಮಂಡಳಿಯಿಂದ ಅಂಗೀಕೃತವಾದ (ಡಿಸೆಂಬರ್ 2005) ಒಂದು ನಿರ್ಣಯವು ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಮುಖ್ಯಸ್ಥರಾಗಿರುವ ಭೂಹಂಚಿಕೆ ಸಮಿತಿಗೆ ಬೆಂಗಳೂರು ನಗರ ನಗರ ಜಿಲ್ಲೆಯಲ್ಲಿ ಒಂದು ಎಕರೆಗೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಎರಡು ಎಕರೆಗೆ ಮೀರದಂತೆ ಭೂ ಹಂಚಿಕೆಗೆ ಅನುಮತಿಸಿತು. ಆದರೆ, ಭೂಹಂಚಿಕೆ ಸಮಿತಿಯು ಈ ನಿರ್ಣಯವನ್ನು ಉಲ್ಲಂಘಿಸಿತು ಮತ್ತು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಜಮೀನುಗಳನ್ನು ಹಂಚಿತು. ವಲಯಾಭಿವೃದ್ಧಿ ಅಧಿಕಾರಿಗಳು ಸಹ ತಮ್ಮ ವ್ಯಾಪ್ತಿಯಲ್ಲಿನ ಕೈಗಾರಿಕಾ ಪ್ರದೇಶಗಳಲ್ಲಿ ಭೂಮಿಯನ್ನು ಹಂಚಿದರು ಮತ್ತು ಅಂತಹ ಹಂಚಿಕೆಗಳು ಭೂಹಂಚಿಕೆ ಸಮಿತಿಯಿಂದ ಸಾಮಾನ್ಯ ರೀತಿಯಲ್ಲಿ ಮತ್ತು ವಿಳಂಬಿತವಾಗಿ ಸ್ಥಿರೀಕರಣವಾದವು. 2010–11ರ ಅವಧಿಯೊಂದರಲ್ಲಿಯೇ ವಲಯಾಭಿವೃದ್ಧಿ ಅಧಿಕಾರಿಗಳು 101 ಎಕರೆಗಳನ್ನು ಹಂಚಿದರು.

- ಕೈಗಾರಿಕಾ ಪ್ರದೇಶಗಳಲ್ಲಿ ನಾಗರಿಕ ಸೌಲಭ್ಯದ ನಿವೇಶನಗಳ ಹಂಚಿಕೆಗೆ ಮಂಡಳಿಯು ಯಾವುದೇ ನೀತಿಯನ್ನು ರೂಪಿಸಲಿಲ್ಲ.

(ಅಧ್ಯಾಯ 6)

## 6. ನಿರ್ಣಯ

ಮಂಡಳಿಯ ಕಾರ್ಯವೈಖರಿಯು, ವಿಶೇಷವಾಗಿ ಕೈಗಾರಿಕಾ ಪ್ರದೇಶಗಳಿಗೆ ಸ್ಥಳಗಳ ಆಯ್ಕೆಯ ವಿಷಯದಲ್ಲಿ, ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವಲ್ಲಿ ಪರಿಣಾಮಕಾರಿಯಾಗಿರಲಿಲ್ಲ. ಕೈಗಾರಿಕೇತರ ಬಳಕೆಗಾಗಿ ಮೀಸಲಿಟ್ಟ ಭೂಮಿಯನ್ನು ಕೈಗಾರಿಕಾ ಪ್ರದೇಶಗಳಿಗೆ ಅಧಿಸೂಚನೆ ಮಾಡಲಾಗಿಲ್ಲ ಎಂಬುದನ್ನು ಖಚಿತಪಡಿಸಕೊಳ್ಳಲು ಮಂಡಳಿಯು ಯೋಜನಾ ಪ್ರಾಧಿಕಾರಗಳೊಂದಿಗೆ ಪೂರ್ವಭಾವಿ ಸಮಾಲೋಚನೆ ನಡೆಸಲಿಲ್ಲ. ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಸರ್ಕಾರವು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿರುವುದು ನಿಯಮಗಳಲ್ಲಿ ಗಂಭೀರ ಸಡಿಲತೆಗಳನ್ನು ಮತ್ತು ನ್ಯಾಯಾಲಯಗಳು ನೀಡಿರುವ ಪ್ರಮುಖ ತೀರ್ಪುಗಳನ್ನು ಉಪೇಕ್ಷಿಸಿರುವುದನ್ನು ಪ್ರತಿಬಿಂಬಿಸುತ್ತವೆ. ಈ ವರದಿಯಲ್ಲಿ ಅಡಕವಾಗಿರುವ ಪರಿಹಾರಧನ ಪಾವತಿಗಳಲ್ಲಿನ ಗಂಭೀರ ಅಕ್ರಮಗಳು, ಯಾವುದೇ ತುಲನೆ ಮತ್ತು ತನಿಖೆಗಳ ಅನುಪಸ್ಥಿತಿಯಲ್ಲಿ ಸಂಬಂಧಪಟ್ಟ ಎಸ್‌ಎಲ್‌ಎಓಗಳು ತಮ್ಮ ಕಾರ್ಯವೈಖರಿಯಲ್ಲಿ ಅಧಿನಿಯಮ ಮತ್ತು ನಿಯಮಗಳನ್ನು ನಿರಂತರ ಬುಡಮೇಲು ಮಾಡುವುದನ್ನು ತೋರ್ಪಡಿಸುತ್ತದೆ.

(ಅಧ್ಯಾಯ 7)

## 7.2 ಶಿಫಾರಸುಗಳು

- ರಾಜ್ಯದಲ್ಲಿ ಕೈಗಾರಿಕೆಗಳ ಕ್ರಮಬದ್ಧ ಸ್ಥಾಪನೆ, ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಖಚಿತಪಡಿಸಲು ಪ್ರಾದೇಶಿಕ ಯೋಜನಾ ಪ್ರಾಧಿಕಾರಗಳೊಂದಿಗೆ ಪೂರ್ವಭಾವಿ ಸಮಾಲೋಚನೆಯ ನಂತರ ಮಂಡಳಿಯು ಕೈಗಾರಿಕಾ ಪ್ರದೇಶಗಳ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಿಕೊಳ್ಳುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳುವ ಅವಶ್ಯಕತೆಯಿದೆ.

- ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಮಂಡಳಿಯು ಸಾರ್ವಜನಿಕ ಹಿತಾಸಕ್ತಿಯನ್ನು ಕಡೆಗಣಿಸಿ ಖಾಸಗಿ ಹಿತಾಸಕ್ತಿಗಾಗಿ ಅಧಿಸೂಚನೆಯಿಂದ ಕೈಬಿಡಬಾರದು ಎಂಬುದನ್ನು ಸರ್ಕಾರವು ಖಚಿತಪಡಿಸಕೊಳ್ಳುವ ಅವಶ್ಯಕತೆಯಿದೆ.

- ಸರ್ಕಾರವು, ಮೌಲ್ಯ ಸಲಹಾ ಸಮಿತಿಯು ಪಾಲಿಸಬೇಕಾದಂತಹ ನಿಖರ ಮಾದರಿ ಸೂತ್ರಗಳನ್ನು ರೂಪಿಸುವುದರ ಮೂಲಕ ಪರಸ್ಪರ ಒಪ್ಪಂದದ ಆಧಾರದ ಮೇಲೆ ಪರಿಹಾರಧನ ನಿರ್ಧರಿಸುವಂತಹ ಅವಶ್ಯಕತೆಯಿದೆ. ಇದು ಪರಸ್ಪರ ಒಪ್ಪಂದದ ಸೋಗಿನಲ್ಲಿ ಮೌಲ್ಯ ಸಲಹಾ ಸಮಿತಿಯಿಂದ ಅಸಹಜ ಪ್ರಮಾಣದಲ್ಲಿ ಪರಿಹಾರಧನದ ನಿರ್ಧಾರಣೆಯಾಗುವುದನ್ನು ತಡೆಯಲು ಆವಶ್ಯಕವಾಗಿದೆ.

- ವರದಿಯಲ್ಲಿ ಪ್ರಮುಖವಾಗಿ ತೋರಿಸಿರುವ ಅಕ್ರಮಗಳು ಕೇವಲ ಉದಾಹರಣೆಗಳಾಗಿವೆ ಮತ್ತು ಕರ್ತವ್ಯ ಚ್ಯುತಿ ಹಾಗೂ ಹೊಣೆಗಾರಿಕೆಯ ತೀವ್ರ ಕೊರತೆಯ ಸುಸ್ಪಷ್ಟ ಉದಾಹರಣೆಗಳಾಗಿ ಗೋಚರಿಸುತ್ತವೆ ವಾದ್ದರಿಂದ ತನಿಖೆ ಮಾಡಬೇಕಾದ ಅಗತ್ಯವಿದೆ. 2006-11ರ ಅವಧಿಯಲ್ಲಿ ಸ್ವಾಧೀನಪಡಿಸಿಕೊಳ್ಳಲಾದ ಎಲ್ಲ ಸರ್ಕಾರಿ ಜಮೀನಿಗೆ ಎಸ್ಎಲ್ಎಓರವರು ಪಾವತಿಸಿರುವ ಪರಿಹಾರಧನದ ಪ್ರಕರಣಗಳನ್ನು, ನಡೆದಿರುವ ಅಕ್ರಮಗಳ ತೀವ್ರತೆಯನ್ನು ನಿರ್ಧರಿಸಲು ಪರಿಶೀಲಿಸಬೇಕಾದ ಅಗತ್ಯವಿದೆ.

- ಭೂಸ್ವಾಧೀನವು ಸರ್ಕಾರದ ಸೂಚನೆಗಳಿಗೆ ಅನುಗುಣವಾಗಿವೆ ಮತ್ತು ನಿಗದಿತ ಕಾರ್ಯವಿಧಾನಗಳ ಸೂಕ್ತ ಅನುಸರಣೆಯ ನಂತರ ಮಂಡಳಿಯು ವಶಪಡಿಸಿಕೊಂಡ ಭೂಮಿಗೆ ಪರಿಹಾರಧನದ ಪಾವತಿ ಮಾಡಲಾಗಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಒಂದು ಪರಿಣಾಮಕಾರಿ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ರೂಪಿಸುವ ಅವಶ್ಯಕತೆಯಿದೆ.

- ಮಂಡಳಿಯಿಂದ ಅಭಿವೃದ್ಧಿಯಾದ ಕೈಗಾರಿಕಾ ಪ್ರದೇಶಗಳಲ್ಲಿ ನಾಗರೀಕ ಸೌಲಭ್ಯದ ನಿವೇಶನದ ಹಂಚಿಕೆಯಲ್ಲಿ ಪಾರದರ್ಶಕತೆಯಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ಅದು ಸೂಕ್ತ ಮಾದರಿ ಸೂತ್ರಗಳನ್ನು ರಚಿಸುವ ಅವಶ್ಯಕತೆಯಿದೆ.

(ಅಧ್ಯಾಯ 7)

# ಅಧ್ಯಾಯ–1
# ಪರಿಚಯ

## 1.1 ಕೈಗಾರಿಕೆಗಳಿಗೆ ಭೂಮಿಯ ಬೇಡಿಕೆಯ ವೃದ್ಧಿ

ಕೈಗಾರಿಕೆಗಳ ಕ್ಷಿಪ್ರ ಮತ್ತು ಕ್ರಮಬದ್ಧ ಸ್ಥಾಪನೆ, ಬೆಳವಣಿಗೆ ಮತ್ತು ಅಭಿವೃದ್ಧಿಗೆ ನೆರವಾಗಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966ರ (ಕೆಐಎಡಿ ಅಧಿನಿಯಮ) ಅಡಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯನ್ನು (ಮಂಡಳಿ) ಸ್ಥಾಪಿಸಲಾಯಿತು. ಈ ಉದ್ದೇಶದ ಸಾಧನೆಗಾಗಿ ಮಂಡಳಿಯು ಸರ್ಕಾರಿ ಮತ್ತು ಖಾಸಗಿ ಭೂಮಿಗಳನ್ನು ಸ್ವಾಧೀನಪಡಿಸಿಕೊಂಡು ಕೈಗಾರಿಕಾ ಪ್ರದೇಶಗಳಾಗಿ ಅಭಿವೃದ್ಧಿಪಡಿಸಿ ಅವುಗಳನ್ನು ಉದ್ಯಮಿಗಳಿಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಲಭ್ಯವಾಗುವಂತೆ ಮಾಡುತ್ತದೆ. ಸರ್ಕಾರವು ನೀಡಿದ ಪರವಾನಗಿಗಳ ಆಧಾರದ ಮೇಲೆ ಏಕ ಘಟಕ ಸಂಕೀರ್ಣಗಳಿಗಾಗಿ (ಎಸ್‌ಯುಸಿಗಳು) ಭೂ ಸ್ವಾಧೀನಪಡಿಸಿಕೊಳ್ಳುವ ಒಂದು ಏಜೆನ್ಸಿಯಾಗಿ ಮಂಡಳಿಯು ಕಾರ್ಯ ನಿರ್ವಹಿಸುತ್ತದೆ ಮತ್ತು ಏಕ ಘಟಕ ಸಂಕೀರ್ಣಗಳಿಗೆ ಅವುಗಳನ್ನು ಹಂಚುತ್ತದೆ.

ರಾಜ್ಯವು ಸಮೃದ್ಧ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿರುವುದರಿಂದ ದೇಶೀಯ ಮತ್ತು ಸಾಗರೋತ್ತರ ಹೂಡಿಕೆದಾರರಿಬ್ಬರಿಗೂ ಆದ್ಯತೆಯ ಬಂಡವಾಳ ತಾಣವಾಗಿದೆ. ತತ್ಪರಿಣಾಮವಾಗಿ ವರ್ಷಗಳು ಕಳೆದಂತೆ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಭೂಮಿಯ ಬೇಡಿಕೆಯೂ ಸಹ ತ್ವರಿತವಾಗಿ ಹೆಚ್ಚಾಗಿದೆ. 2006–11ರ ಕರ್ನಾಟಕ ಕೈಗಾರಿಕಾ ನೀತಿಯು ಪ್ರತಿ ವರ್ಷವೂ ಕನಿಷ್ಠ 5,000 ಎಕರೆಗಳ ಕೈಗಾರಿಕಾ ಮೂಲಸೌಕರ್ಯವನ್ನು ಸೃಷ್ಟಿಸಲು ನಿಬಂಧಿಸಿದೆ. ರಾಜ್ಯದಲ್ಲಿ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ಮಂಡಳಿಯು ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಸಂಚಿತವಾಗಿ ನೋಡಿದಾಗ ಈ ಗುರಿಯನ್ನು ಮಾರ್ಚ್ 2011ರ ಅಂತ್ಯಕ್ಕೆ ಮಂಡಳಿಯು ಸಾಧಿಸಿತು, ಆದರೆ **ರೇಖಾಚಿತ್ರ–1.1**ರಲ್ಲಿ ತೋರಿಸಿರುವಂತೆ 2006–07, 2008–09 ಮತ್ತು 2009–10ರಲ್ಲಿ ಅದು ಕೊರತೆಗಳನ್ನು ಅನುಭವಿಸಿತು.

**ರೇಖಾಚಿತ್ರ–1.1: 2006–11ರ ಅವಧಿಯಲ್ಲಿ ಭೂ ಸ್ವಾಧೀನದ ಗುರಿ ಮತ್ತು ಸಾಧನೆಗಳು**

(ಎಕರೆ ಮತ್ತು ಗುಂಟೆಗಳಲ್ಲಿ [1])




(ಆಧಾರ: ಮಂಡಳಿಯು ಒದಗಿಸಿದ ಮಾಹಿತಿ)

[1] 40 ಗುಂಟೆಗಳಿಗೆ ಒಂದು ಎಕರೆ

ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ಸ್ವಾಧೀನಪಡಿಸಿಕೊಂಡ ಈ ಭೂಮಿಗಳ ಜೊತೆಗೆ ಮಂಡಳಿಯು 2006–11ರ ಅವಧಿಯಲ್ಲಿ ಏಕ ಘಟಕ ಸಂಕೀರ್ಣಗಳಿಗಾಗಿ 25,489 ಎಕರೆ 19 ಗುಂಟೆಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತು ಮತ್ತು ಅದು **ರೇಖಾಚಿತ್ರ–1.2**ರಲ್ಲಿ ತೋರಿಸಿರುವಂತೆ, ಈ ಅವಧಿಯಲ್ಲಿ ಸ್ವಾಧೀನಪಡಿಸಿಕೊಂಡ ಒಟ್ಟು ಭೂಮಿಯ ಶೇಕಡಾ 55ರಷ್ಟಿತ್ತು.

**ರೇಖಾಚಿತ್ರ–1.2: 2006–11ರ ಅವಧಿಯಲ್ಲಿ ಏಕ ಘಟಕ ಸಂಕೀರ್ಣಗಳಿಗಾಗಿ ಸ್ವಾಧೀನಪಡಿಸಿಕೊಂಡ ಭೂಮಿ**

(ಎಕರೆ ಮತ್ತು ಗುಂಟೆಗಳಲ್ಲಿ)




(ಆಧಾರ: ಮಂಡಳಿಯು ಒದಗಿಸಿದ ಮಾಹಿತಿ)

## 1.2 ಭೂಸ್ವಾಧೀನಕ್ಕಾಗಿ ಕಾನೂನು ಚೌಕಟ್ಟಿನ ಸ್ಥೂಲನೋಟ

**ಕೋಷ್ಟಕ–1.1**ರಲ್ಲಿ ತೋರಿಸಿರುವಂತೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಅಧಿನಿಯಮದ 28, 29 ಮತ್ತು 30ನೇ ಪರಿಚ್ಛೇದಗಳ ವಿವಿಧ ಉಪನಿಯಮಗಳು ಮಂಡಳಿಯಿಂದ ಭೂ ಸ್ವಾಧೀನಕ್ಕಾಗಿ ಮತ್ತು ಪರಿಹಾರ ಪಾವತಿಗಾಗಿ ವಿವಿಧ ಘಟ್ಟಗಳ ಕಾನೂನು ಚೌಕಟ್ಟನ್ನು ಒದಗಿಸುತ್ತವೆ.

**ಕೋಷ್ಟಕ–1.1: ಭೂ ಸ್ವಾಧೀನಕ್ಕಾಗಿ ಮತ್ತು ಪರಿಹಾರದ ಪಾವತಿಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ ಉಪಬಂಧಗಳು**

| ಪರಿಚ್ಛೇದ | ಒದಗಿಸಿದ ಉಪಬಂಧಗಳು |
|---|---|
| **28 (1)** | ಅಭಿವೃದ್ಧಿಗಾಗಿ ಮಂಡಳಿಗೆ ಯಾವುದಾದರೂ ಭೂಮಿಯ ಅವಶ್ಯಕತೆಯಿದ್ದಲ್ಲಿ, ರಾಜ್ಯ ಸರ್ಕಾರವು ಒಂದು ಅಧಿಸೂಚನೆಯಿಂದ ಅಂತಹ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ತನ್ನ ಉದ್ದೇಶವನ್ನು ನೋಟೀಸ್ ಮೂಲಕ ನೀಡಬಹುದು (ಇನ್ನು ಮುಂದೆ ಇದನ್ನು ಪ್ರಾಥಮಿಕ ಅಧಿಸೂಚನೆ ಎಂದು ಉಲ್ಲೇಖಿಸಲಾಗುವುದು) |
| **28(2)** | ಅಧಿಸೂಚನೆಯನ್ನು ಹೊರಡಿಸಿದ ನಂತರ ರಾಜ್ಯ ಸರ್ಕಾರವು ಭೂಮಿಯ ಮಾಲೀಕರಿಗೆ/ ವಾರಸುದಾರರಿಗೆ ಭೂಮಿಯನ್ನು ಏಕೆ ಸ್ವಾಧೀನಪಡಿಸಿಕೊಳ್ಳಬಾರದೆಂದು 30 ದಿನಗಳೊಳಗೆ ಕಾರಣ ಕೇಳಿ ನೋಟೀಸ್‌ಗಳನ್ನು ಜಾರಿ ಮಾಡುತ್ತದೆ. |
| **28(3)** | ಕಾರಣವನ್ನು ಪರಿಗಣಿಸಿದ ನಂತರ ರಾಜ್ಯ ಸರ್ಕಾರವು ತನಗೆ ಸರಿ ಎಂದು ಕಂಡುಬಂದ ಆದೇಶಗಳನ್ನು ಹೊರಡಿಸಬಹುದು |
| **28(4)** | ಸ್ವಾಧೀನಕ್ಕಾಗಿ ಘೋಷಣೆಯನ್ನು ರಾಜ್ಯ ಸರ್ಕಾರವು ಒಂದು ಅಧಿಸೂಚನೆಯ ಮೂಲಕ ಜಾರಿ ಮಾಡಬಹುದು (ಇನ್ನು ಮುಂದೆ ಇದನ್ನು ಅಂತಿಮ ಅಧಿಸೂಚನೆ ಎಂದು ಉಲ್ಲೇಖಿಸಲಾಗುವುದು) |
| **28(5)** | ಅಧಿಸೂಚನೆಯನ್ನು ಪ್ರಕಟಿಸಿದ ನಂತರ ಎಲ್ಲ ಋಣಭಾರದಿಂದ ಮುಕ್ತವಾಗಿ ಭೂಮಿಯು ಸರ್ಕಾರದ ಬಳಿಯಿರುತ್ತದೆ. |

| ಪರಿಚ್ಛೇದ | ಒದಗಿಸಿದ ಉಪಬಂಧಗಳು |
|---|---|
| 28(6) | ರಾಜ್ಯ ಸರ್ಕಾರವು ಮಾಲೀಕರಿಗೆ/ವಾರಸುದಾರರಿಗೆ 30 ದಿನಗಳೊಳಗೆ ಭೂಮಿಯ ಒಡೆತನವನ್ನು ನೀಡುವಂತೆ ಹೇಳಬಹುದು |
| 28(7) | ಯಾವುದೇ ವ್ಯಕ್ತಿಯು ಆದೇಶದ ಪಾಲನೆ ಮಾಡದಿದ್ದರೆ ರಾಜ್ಯ ಸರ್ಕಾರವು ಅಗತ್ಯವಿರುವ ಶಕ್ತಿಯನ್ನು ಉಪಯೋಗಿಸಿ ಭೂಮಿಯ ಒಡೆತನವನ್ನು ತೆಗೆದುಕೊಳ್ಳಬಹುದು |
| 28(8) | ಭೂಮಿಯ ಒಡೆತನವನ್ನು ತೆಗೆದುಕೊಂಡ ನಂತರ ರಾಜ್ಯ ಸರ್ಕಾರವು ಭೂಮಿಯನ್ನು ಮಂಡಳಿಗೆ ಹಸ್ತಾಂತರಿಸಬಹುದು |
| 29(1) | ಭೂ ಸ್ವಾಧೀನಕ್ಕಾಗಿ ರಾಜ್ಯ ಸರ್ಕಾರವು ಪರಿಹಾರವನ್ನು ನೀಡಬೇಕು |
| 29(2) | ಒಪ್ಪಂದದ ಮೂಲಕ ಎಲ್ಲಿ ಪರಿಹಾರವನ್ನು ನಿಗದಿಪಡಿಸಲಾಗಿದೆಯೋ ಆ ಒಪ್ಪಂದದ ಪ್ರಕಾರ ಪರಿಹಾರವನ್ನು ಪಾವತಿಸಬೇಕು |
| 29(3)&(4) | ಎಲ್ಲಿ ಒಪ್ಪಂದವನ್ನು ಮಾಡಿಕೊಂಡಿಲ್ಲವೋ, ಸಂಬಂಧಪಟ್ಟ ವ್ಯಕ್ತಿಗಳ ಫಿರ್ಯಾದುಗಳನ್ನು ಆಲಿಸಿದ ನಂತರ ಪರಿಹಾರವನ್ನು ನಿಗದಿಪಡಿಸಲು ರಾಜ್ಯ ಸರ್ಕಾರವು ಅಂತಹ ಪ್ರಕರಣವನ್ನು ಜಿಲ್ಲಾಧಿಕಾರಿಗಳಿಗೆ ಉಲ್ಲೇಖಿಸುವುದು |
| 30 | ಪರಿಚ್ಛೇದ 29(3) ಮತ್ತು (4)ರ ಅಡಿಯಲ್ಲಿಯ ಪ್ರಕರಣಗಳಲ್ಲಿ ಜಿಲ್ಲಾಧಿಕಾರಿಗಳಿಂದ ವಿಚಾರಣೆ ಮತ್ತು ಪರಿಹಾರಧನ ನೀಡುವಿಕೆಗೆ ಸಂಬಂಧಿಸಿದಂತೆ ಭೂಸ್ವಾಧೀನ ಅಧಿನಿಯಮ 1894ರ ನಿಬಂಧನೆಗಳು ಅನ್ವಯಿಸುತ್ತವೆ. |

## 1.3 ಯೋಜನೆಗಳ ಅನುಮೋದನೆಗಾಗಿ ಸಮಿತಿಗಳು

ರಾಜ್ಯದಲ್ಲಿ ಸ್ಥಾಪಿಸುವ ಕೈಗಾರಿಕೆ ಅಥವಾ ಯೋಜನೆಗೆ ಸಂಬಂಧಪಟ್ಟಂತೆ ಯಾವುದೇ ವಾಣಿಜ್ಯೋದ್ಯಮಿಯಿಂದ ಸ್ವೀಕರಿಸಲ್ಪಟ್ಟ ಪ್ರಸ್ತಾವಗಳನ್ನು ಪರಿಶೀಲಿಸಲು ಮತ್ತು ಪರಿಗಣಿಸಲು, **ಕೋಷ್ಟಕ–1.2ರಲ್ಲಿ** ತೋರಿಸಿರುವಂತೆ ಕರ್ನಾಟಕ ಕೈಗಾರಿಕಾ (ಸೌಲಭ್ಯಗಳು) ಅಧಿನಿಯಮ, 2002 ಮತ್ತು ನಿಯಮಗಳು ವಿವಿಧ ಸಮಿತಿಗಳ ರಚನೆಗಾಗಿ ಅವಕಾಶವನ್ನು ಒದಗಿಸುತ್ತವೆ. ಈ ಸಮಿತಿಗಳ ಅನುಮೋದನೆಗೆ ಎಲ್ಲ ಇಲಾಖೆಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಬದ್ಧವಾಗಿರಬೇಕಾಗುತ್ತದೆ.

**ಕೋಷ್ಟಕ–1.2 ಯೋಜನಾ ಪ್ರಸ್ತಾವಗಳನ್ನು ಪರಿಗಣಿಸಲು ವಿವಿಧ ಸಮಿತಿಗಳು**

| ಸಮಿತಿಯ ಹೆಸರು | ಅಧ್ಯಕ್ಷರು | ಹೂಡಿಕಾ ಮಾನದಂಡ |
|---|---|---|
| **ರಾಜ್ಯ ಮಟ್ಟದ ಉನ್ನತ ಸಮಿತಿ (ಎಸ್‌ಹೆಚ್‌ಎಲ್‌ಸಿಸಿ)** | **ಮುಖ್ಯ ಮಂತ್ರಿಗಳು** | **ರೂ.50 ಕೋಟಿ ಅಥವಾ ಹೆಚ್ಚು** |
| **ರಾಜ್ಯ ಮಟ್ಟದ ಏಕ ಗವಾಕ್ಷ ಸಮಿತಿ (ಎಸ್‌ಎಲ್‌ಎಸ್‌ಡಬ್ಲ್ಯುಸಿಸಿ)** | **ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಮಂತ್ರಿಗಳು** | **ರೂ.3 ಕೋಟಿಗಿಂತ ಹೆಚ್ಚು ಮತ್ತು ರೂ.50 ಕೋಟಿಗಿಂತ ಕಡಿಮೆ** |
| **ಜಿಲ್ಲಾ ಮಟ್ಟದ ಏಕ ಗವಾಕ್ಷ ಸಮಿತಿ (ಡಿಎಲ್‌ಎಸ್‌ಡಬ್ಲ್ಯುಸಿಸಿ)** | **ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು** | **ರೂ.3 ಕೋಟಿಗಿಂತ ಕಡಿಮೆ** |

ಪ್ರಚಾರ ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ಯಮದಾರರಿಗೆ ಅಗತ್ಯವಿರುವ ಮಾರ್ಗದರ್ಶನ ಮತ್ತು ನೆರವು ನೀಡಲು ರಾಜ್ಯ ಮಟ್ಟದಲ್ಲಿ ಕರ್ನಾಟಕ ಉದ್ಯೋಗ ಮಿತ್ರ ಎಂಬ ಸಂಪರ್ಕ ಸೇತು ಸಂಸ್ಥೆಯನ್ನು ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ರಚಿಸಬೇಕೆಂದು ಕರ್ನಾಟಕ ಕೈಗಾರಿಕೆಗಳ (ಸೌಲಭ್ಯಗಳು) ಅಧಿನಿಯಮ, 2002 ಕೂಡ ಉಪಬಂಧಿಸುತ್ತದೆ.

## 1.4 ಸಂಘಟನಾ ವ್ಯವಸ್ಥೆ

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮಂಡಳಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ, ಮಂಡಳಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವ (ಸಿಇಒ) ಕಾರ್ಯನಿರ್ವಾಹಕ ಸದಸ್ಯರು ಹಾಗೂ ಇತರೆ 11 ಸದಸ್ಯರನ್ನೂ ಹೊಂದಿರುತ್ತದೆ. ಓರ್ವ ವಿಶೇಷ ಜಿಲ್ಲಾಧಿಕಾರಿಗಳು ಮತ್ತು ಆರು ವಿಶೇಷ ಭೂಸ್ವಾಧೀನಾಧಿಕಾರಿಗಳು (ಎಸ್‌ಎಲ್‌ಎಒಗಳು) (ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಮಂಗಳೂರು, ಗುಲ್ಬರ್ಗ, ಧಾರವಾಡ ಮತ್ತು ಮೈಸೂರು) ಭೂ ಸ್ವಾಧೀನ ವಿಷಯಕ್ಕೆ ಸಂಬಂಧಿಸಿದಂತೆ ಮಂಡಳಿಗೆ

ನೆರವಾಗುತ್ತಾರೆ ಮತ್ತು ಓರ್ವ ಮುಖ್ಯ ಅಭಿವೃದ್ಧಿ ಅಧಿಕಾರಿ ಮತ್ತು 10 ಅಭಿವೃದ್ಧಿ ಅಧಿಕಾರಿಗಳು ಭೂ ಅಭಿವೃದ್ಧಿ ವಿಷಯಗಳಲ್ಲಿ ಮಂಡಳಿಗೆ ನೆರವಾಗುತ್ತಾರೆ. ಮೂವರು ಕಾರ್ಯದರ್ಶಿಗಳು ಭೂಮಿಯ ಹಂಚಿಕೆ ಮತ್ತು ಆಡಳಿತಕ್ಕೆ ಸಂಬಂಧಿಸಿದ ವಿಷಯಗಳಿಗೆ ಜವಾಬ್ದಾರರಾಗಿದ್ದರೆ, ಹಣಕಾಸು ನಿಯಂತ್ರಕರು ಹಣಕಾಸು ಮತ್ತು ಲೆಕ್ಕಪತ್ರಗಳ ವಿಷಯದಲ್ಲಿ ಮಂಡಳಿಗೆ ನೆರವಾಗುತ್ತಾರೆ.



# ಅಧ್ಯಾಯ–2
# ಲೆಕ್ಕಪರಿಶೋಧನಾ ಮಾರ್ಗ

## 2.1 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳೊಡನೆ 25 ಏಪ್ರಿಲ್ 2011ರಂದು ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನವನ್ನು ವಿವರಿಸುವ ಒಂದು ಪ್ರವೇಶ ಸಭೆಯಿಂದ ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆಯನ್ನು ಆರಂಭಿಸಲಾಯಿತು. 18 ಜಿಲ್ಲೆಗಳಲ್ಲಿ 58 ಕೈಗಾರಿಕಾ ಪ್ರದೇಶಗಳಿಗೆ ಆರು ವಿಶೇಷ ಭೂ ಸ್ವಾಧೀನಾಧಿಕಾರಿಗಳ (ಎಸ್‌ಎಲ್‌ಎಓ) ಮೂಲಕ ಮಂಡಳಿಯು 26,624 ಎಕರೆ 20 ಗುಂಟೆಗಳ ಭೂಮಿಯನ್ನು ಸ್ವಾಧೀನಪಡಿಸಿಕೊಂಡ 2006–011ರ ಅವಧಿಯನ್ನು ವ್ಯಾಪಿಸುವ ಲೆಕ್ಕಪರಿಶೋಧನೆಯನ್ನು ಏಪ್ರಿಲ್‌ನಿಂದ ಜುಲೈ 2011ರವರೆಗೆ ಮತ್ತು ಅಕ್ಟೋಬರ್ 2011ರಲ್ಲಿ ನಡೆಸಲಾಯಿತು. ಲೆಕ್ಕಪರಿಶೋಧನಾ ಮಾದರಿಯು ಮಂಡಳಿ, ಆರರಲ್ಲಿ ಎರಡು[2] ಎಸ್‌ಎಲ್‌ಎಓಗಳು, 10ರಲ್ಲಿ ಎರಡು ದಾವಣಗೆರೆ ಮತ್ತು ತುಮಕೂರಿನಲ್ಲಿನ ವಲಯ ಕಛೇರಿಗಳು, ಕರ್ನಾಟಕ ಉದ್ಯೋಗ ಮಿತ್ರ, 58ರಲ್ಲಿ 19 ಕೈಗಾರಿಕಾ ಪ್ರದೇಶಗಳು, ಯಲಹಂಕ ಮತ್ತು ಹೊಸಕೋಟೆಯಲ್ಲಿನ ತಹಶೀಲ್ದಾರ್‌ಗಳು ಹಾಗೂ ಯಲಹಂಕದ ಉಪ–ನೋಂದಣಾಧಿಕಾರಿಗಳನ್ನು ವ್ಯಾಪಿಸಿತ್ತು. ಅಗತ್ಯವಿದ್ದಡೆ ಭೂಮಿಯ ಹಕ್ಕುಪತ್ರ ಮತ್ತು ವಿಸ್ತಾರಗಳನ್ನು ತಿಳಿದುಕೊಳ್ಳಲು ಕಂದಾಯ ಇಲಾಖೆಯ ಅಂತರ್ಜಾಲ ತಾಣದಲ್ಲಿನ (ಭೂಮಿ) ಸಾರ್ವಜನಿಕ ದಾಖಲೆಗಳನ್ನೂ ಸಹ ಲೆಕ್ಕಪರಿಶೋಧನೆಯು ವೀಕ್ಷಿಸಿತು. ಲೆಕ್ಕಪರಿಶೋಧನೆಯನ್ನು ಸರ್ಕಾರದ ಭೂಮಿಗೆ ನೀಡಿದ ಪರಿಹಾರಧನ ಪಾವತಿಗಳಿಗೆ ಮಿತಿಗೊಳಿಸಲಾಗಿತ್ತು. ರಾಜ್ಯ ಲೋಕಾಯುಕ್ತರು ಪರಿಶೀಲನೆಗಾಗಿ ಮೂಲ ದಾಖಲೆಗಳನ್ನು ವಶಪಡಿಸಿಕೊಂಡಿದ್ದರಿಂದ ಬೆಂಗಳೂರಿನ ಎಸ್‌ಎಲ್‌ಎಓ–2ರ ಸಂಬಂಧವಾಗಿ ಮೂರು[3] ಯೋಜನೆಗಳಿಗೆ ವಿತರಿಸಲ್ಪಟ್ಟ ಪರಿಹಾರದ ಲೆಕ್ಕಪರಿಶೋಧನೆಯನ್ನು ಪರಿಹಾರದ ಕಡತಗಳಲ್ಲಿರುವ ದಾಖಲೆಗಳ ಪ್ರತಿಗಳನ್ನು ಆಧರಿಸಿ ನಡೆಸಲಾಗಿತ್ತು. ಸದರಿ ಮೂರು ಪ್ರಾಯೋಜನೆಗಳ 538 ಪ್ರಕರಣಗಳಲ್ಲಿ ಎಸ್‌ಎಲ್‌ಎಓ–2ರವರು ವಿತರಿಸಿದ ರೂ.461.87 ಕೋಟಿ ಪರಿಹಾರಧನಕ್ಕೆ ಪ್ರತಿಯಾಗಿ ಯಾದೃಚ್ಛಿತವಾಗಿ ಆಯ್ದ 131 ಪ್ರಕರಣಗಳಲ್ಲಿನ ರೂ.140.54 ಕೋಟಿಗಳ ಪಾವತಿಗಳನ್ನು ಲೆಕ್ಕಪರಿಶೋಧನೆಯು ಪರಿಗಣಿಸಿತು. ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಅಂಶಗಳನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳೊಡನೆ 23 ಫೆಬ್ರವರಿ 2012ರಂದು ನಿರ್ಗಮನ ಸಭೆಯಲ್ಲಿ ಚರ್ಚಿಸಲಾಯಿತು.

ಲೆಕ್ಕಪರಿಶೋಧನೆಯು ತಿಳಿಸಿದ ಅಭಿಪ್ರಾಯಗಳಿಗೆ ಮಂಡಳಿಯ ವಿವಿಧ ಅಧಿಕಾರಿಗಳು ಸಲ್ಲಿಸಿದ ಉತ್ತರಗಳನ್ನು ವರದಿಯಲ್ಲಿ ಪರಿಗಣಿಸಲಾಗಿದೆ.

## 2.2 ಲೆಕ್ಕಪರಿಶೋಧನಾ ಉದ್ದೇಶಗಳು

ಲೆಕ್ಕಪರಿಶೋಧನೆಯ ಉದ್ದೇಶಗಳು ಈ ಕೆಳಗಿನವುಗಳನ್ನು ತಿಳಿದುಕೊಳ್ಳುವುದಾಗಿತ್ತು.

- ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ಭೂ ಸ್ವಾಧೀನವು ಕಾನೂನು ಚೌಕಟ್ಟಿನೊಳಗಿದ್ದಿತೆ ಮತ್ತು ದಕ್ಷತೆಯಿಂದ ಮತ್ತು ಪರಿಣಾಮಕಾರಿಯಾಗಿಯಾಗಿತ್ತೇ;
- ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರ ನೀಡುವಾಗ ಮೋಸದ ಪಾವತಿಗಳನ್ನು ತಡೆಯಲು ಸಮರ್ಪಕ ವಿಧಾನಗಳನ್ನು ಅನುಸರಿಸಲಾಗಿತ್ತೇ; ಮತ್ತು
- ಉದ್ಯಮಿಗಳಿಗೆ ಭೂಮಿಯ ಹಂಚಿಕೆಯನ್ನು ನ್ಯಾಯೋಚಿತ, ಪಾರದರ್ಶಕ ಮತ್ತು ಸಮರ್ಥವಾಗಿ ಮಾಡಲಾಗಿತ್ತೇ.

[2] ಬೆಂಗಳೂರಿನ ಎಸ್‌ಎಲ್‌ಎಓ–1 ಮತ್ತು ಎಸ್‌ಎಲ್‌ಎಓ–2

[3] ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್, ಏರೋಸ್ಪೇಸ್ ಕಾಂಪೋನೆಂಟ್ಸ್ ಮತ್ತು ಐಟಿ ಪಾರ್ಕ್

## 2.3 ಲೆಕ್ಕಪರಿಶೋಧನಾ ಮಾನದಂಡಗಳು

ಈ ಕೆಳಗಿನವುಗಳು ಲೆಕ್ಕಪರಿಶೋಧನಾ ಮಾನದಂಡಗಳಾಗಿದ್ದವು:

- ಭೂಸ್ವಾದೀನ ಅಧಿನಿಯಮ, 1894;
- ಕರ್ನಾಟಕ ಪಟ್ಟಣ ಮತ್ತು ಗ್ರಾಮೀಣ ಯೋಜನೆ ಅಧಿನಿಯಮ, 1961;
- ಆದಾಯ ತೆರಿಗೆ ಅಧಿನಿಯಮ, 1961;
- ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961;
- ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966;
- ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ನಿಯಂತ್ರಣಗಳು, 1969;
- ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಮತ್ತು ನಿಯಮಗಳು 1966;
- ಕರ್ನಾಟಕ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳು (ಭೂ ವರ್ಗಾವಣೆ ನಿಷೇಧ) ಅಧಿನಿಯಮ, 1978;
- ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧಗಳು) ಅಧಿನಿಯಮ, 1991;
- ಕರ್ನಾಟಕ ಕೈಗಾರಿಕೆಗಳ (ಅನುಕೂಲಗಳು) ಅಧಿನಿಯಮ, 2002; ಮತ್ತು
- ಕರ್ನಾಟಕ ಕೈಗಾರಿಕಾ ನೀತಿ 2006–11 ಮತ್ತು 2009–14

## 2.4 ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳ ವರ್ಗೀಕರಣ

ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಲು ಕೆಳಗಿನ ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

- ಅಧ್ಯಾಯ–3 ಭೂ ಸ್ವಾಧೀನಕ್ಕೆ ಸಂಬಂಧಿಸಿದ ವಿಷಯಗಳನ್ನು ಒಳಗೊಂಡಿದೆ
- ಆಧ್ಯಾಯ–4 ಪರಿಹಾರವನ್ನು ನಿಗದಿಪಡಿಸುವ ವಿಷಯಗಳನ್ನು ಒಳಗೊಂಡಿದೆ
- ಅಧ್ಯಾಯ–5 ಪರಿಹಾರಧನದ ಪಾವತಿಯಲ್ಲಿನ ಅಕ್ರಮಗಳನ್ನೊಳಗೊಂಡಿದೆ
- ಅಧ್ಯಾಯ–6 ಭೂ ಹಂಚಿಕೆಯಲ್ಲಿನ ಅಕ್ರಮಗಳನ್ನೊಳಗೊಂಡಿದೆ
- ಅಧ್ಯಾಯ–7 ನಿರ್ಣಯ ಮತ್ತು ಶಿಫಾರಸುಗಳನ್ನೊಳಗೊಂಡಿದೆ

## 2.5 ಕೃತಜ್ಞತೆ

ಲೆಕ್ಕಪರಿಶೋಧನೆಯನ್ನು ನಡೆಸುವಾಗ ರಾಜ್ಯ ಸರ್ಕಾರ/ಮಂಡಳಿ ಮತ್ತು ಇತರೆ ಲೆಕ್ಕಪರಿಶೋಧಿಸಿದ ಸಂಸ್ಥೆಗಳು ನೀಡಿದ ಸಹಕಾರವನ್ನು ನಾವು ಹೃತ್ಪೂರ್ವಕ ಕೃತಜ್ಞತೆಯಿಂದ ಸ್ಮರಿಸುತ್ತೇವೆ.

# ಅಧ್ಯಾಯ–3
# ಭೂ ಸ್ವಾಧೀನ

ಕೈಗಾರಿಕಾ ಪ್ರದೇಶಗಳಿಗೆ ಸ್ವಾಧೀನಪಡಿಸಿಕೊಂಡ ಭೂಮಿಯ ವಿವರಗಳು ಮತ್ತು 2006–11ರ ಅವಧಿಯಲ್ಲಿ ಪಾವತಿ ಮಾಡಿದ ಪರಿಹಾರವು ಕೆಳಗಿನ **ಕೋಷ್ಟಕ–3.1**ರಲ್ಲಿ ತೋರಿಸಿದಂತಿದೆ.

**ಕೋಷ್ಟಕ–3.1 : ಸ್ವಾಧೀನ ಪಡಿಸಿಕೊಂಡ ಭೂಮಿ ಮತ್ತು ಪಾವತಿ ಮಾಡಿದ ಪರಿಹಾರ**

| ವರ್ಷ | ಸ್ವಾಧೀನಪಡಿಸಿಕೊಂಡ ಭೂಮಿ (ಎಕರೆ–ಗುಂಟೆಗಳಲ್ಲಿ) | ಪಾವತಿ ಮಾಡಿದ ಪರಿಹಾರ (ಕೋಟಿ ರೂಪಾಯಿಗಳಲ್ಲಿ) |
|---|---|---|
| 2006–07 | 4,431–01 | 1171.70 |
| 2007–08 | 5,803–31 | 478.34 |
| 2008–09 | 3,752–01 | 1,997.23 |
| 2009–10 | 1,548–39 | 862.27 |
| 2010–11 | 11,088–28 | 2178.01 |
| ಒಟ್ಟು | 26,624–20 | 6,687.55 |

(ಆಧಾರ: ಮಂಡಳಿಯು ಒದಗಿಸಿದ ಮಾಹಿತಿ)

## 3.1 ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸುವಲ್ಲಿ ಮಂಡಳಿಯು ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸಲು ವಿಫಲವಾಯಿತು

ಕರ್ನಾಟಕ ಕೈಗಾರಿಕಾ ನೀತಿ 2006–11 ಮತ್ತು 2009–14 ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡಲು ಮತ್ತು ರಾಜ್ಯದ ಒಟ್ಟಾರೆ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವುದನ್ನು ಗುರಿಯಾಗಿಸಿದೆ. ಭೂ ಸ್ವಾಧೀನ ಪ್ರಕ್ರಿಯೆಯನ್ನು ಒಟ್ಟುಗೂಡಿಸಲು ಅಭಿವೃದ್ಧಿ, ಕೈಗಾರಿಕಾ ಪ್ರದೇಶಗಳ/ವಸಾಹತುಗಳ ಸುಧಾರಿತ ನಿರ್ವಹಣೆ, ಗುಣಮಟ್ಟದ ಮೂಲಸೌಕರ್ಯಗಳ ಸೃಷ್ಟಿ, ಮುಂತಾದವುಗಳು ದೃಢವಾದ ಕೈಗಾರಿಕಾ ಬೆಳವಣಿಗೆಗೆ ಪರಿಸರವನ್ನು ಸಶಕ್ತಗೊಳಿಸಲು ಕೈಗಾರಿಕಾ ನೀತಿಗಳಲ್ಲಿ ಊಹಿಸಿದ್ದ ಕೆಲವು ಕಾರ್ಯತಂತ್ರಗಳಾಗಿದ್ದವು. ರಾಜ್ಯದ ತಾಲ್ಲೂಕುಗಳನ್ನು ಅವುಗಳ ಹಿಂದುಳಿಯುವಿಕೆಯನ್ನು ಆಧರಿಸಿ ಉತ್ತೇಜನ ಮತ್ತು ರಿಯಾಯಿತಿಗಳನ್ನು ನೀಡುವ ಉದ್ದೇಶಕ್ಕಾಗಿ ನಾಲ್ಕು ವಲಯಗಳನ್ನಾಗಿ ವರ್ಗೀಕರಿಸಲಾಗಿದೆ ಮತ್ತು ರಾಜ್ಯದ ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕಾ ಹೂಡಿಕೆಯ ಹಂಚಿಕೆಗೆ ಆದ್ಯತೆಯನ್ನು ನೀಡಲಾಗಿದ್ದು ಇದರಿಂದ ಆರ್ಥಿಕ ಅಭಿವೃದ್ಧಿಯ ಲಾಭ ಮತ್ತು ಉದ್ಯೋಗ ಅವಕಾಶಗಳು ರಾಜ್ಯದೆಲ್ಲೆಡೆ ಸಮಾಜದ ಎಲ್ಲ ವರ್ಗಗಳಲ್ಲೂ ಸರಿಸಮನಾಗಿ ಮತ್ತು ಸಂಭವನೀಯ ಗರಿಷ್ಠ ಪ್ರಮಾಣದಲ್ಲಿ ಹಂಚಿಕೆಯಾಗುವುದು.

ಮಂಡಳಿಯು ಅಭಿವೃದ್ಧಿಪಡಿಸಿದ, ವಿಶೇಷವಾಗಿ 2006–11ರ ಅವಧಿಯಲ್ಲಿ, ಕೈಗಾರಿಕಾ ಪ್ರದೇಶಗಳ ಪರಿಶೀಲನೆಯು ಕೈಗಾರಿಕಾ ಬೆಳವಣಿಗೆಯನ್ನು ಉತ್ತೇಜಿಸಲು ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸುವಲ್ಲಿ ಪ್ರಾದೇಶಿಕ ಅಸಮತೋಲನವು ಮುಂದುವರೆದಿರುವುದನ್ನು ತೋರಿಸಿತು ಮತ್ತು **ಕೋಷ್ಟಕ–3.2**ರಲ್ಲಿ ತೋರಿಸಿರುವಂತೆ 2006–11ರ ಅವಧಿಯಲ್ಲಿ ಮಂಡಳಿಯು ಸ್ವಾಧೀನಪಡಿಸಿಕೊಂಡ ಕೈಗಾರಿಕಾ ಪ್ರದೇಶದಲ್ಲಿ ಉತ್ತರ ಕರ್ನಾಟಕವು ಕೇವಲ ಶೇಕಡಾ 9ರಷ್ಟು ಪಾಲನ್ನು ಮಾತ್ರ ಹೊಂದಿತ್ತು.

**ಕೋಷ್ಟಕ–3.2 : ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕಗಳಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿ**

| ವಿವರಗಳು | ಸ್ವಾಧೀನಪಡಿಸಿಕೊಂಡ ಭೂಮಿಯ ವಿಸ್ತಾರ (ಎಕರೆ–ಗುಂಟೆಗಳಲ್ಲಿ) | ಒಟ್ಟು ವಿಸ್ತಾರಕ್ಕೆ ದಾಮಾಷಾ |
|---|---|---|
| | ಮಂಡಳಿಯು ಪ್ರಾರಂಭವಾದಾಗಿನಿಂದ | |
| ಉತ್ತರ ಕರ್ನಾಟಕ | 11,324–00 | 28 |
| ದಕ್ಷಿಣ ಕರ್ನಾಟಕ | 29,802–00 | 72 |
| ಒಟ್ಟು | 41,126–00 | 100 |
| | 2006–07ರಿಂದ 2010–11 | |
| ಉತ್ತರ ಕರ್ನಾಟಕ | 2,378–11 | 9 |
| ದಕ್ಷಿಣ ಕರ್ನಾಟಕ | 24,246–09 | 91 |
| ಒಟ್ಟು | 26,624–20 | 100 |

(ಆಧಾರ: ಮಂಡಳಿಯ ವಿಶೇಷ ಜಿಲ್ಲಾಧಿಕಾರಿಗಳು ಒದಗಿಸಿದ ಮಾಹಿತಿ)

2006–11ರಲ್ಲಿ ಸ್ವಾಧೀನಪಡಿಸಿಕೊಂಡ 26,624 ಎಕರೆ 20 ಗುಂಟೆಗಳ ಭೂಮಿಯ ಪೈಕಿ 7,620 ಎಕರೆ 8 ಗುಂಟೆಗಳನ್ನು (ಶೇಕಡಾ 29) ಬೆಂಗಳೂರು–ನಗರ, ಬೆಂಗಳೂರು–ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿನ ಹಲವಾರು ಕೈಗಾರಿಕಾಭಿವೃದ್ಧಿ ಹೊಂದಿದ ತಾಲ್ಲೂಕುಗಳಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಮಂಡಳಿಯು 11 ಜಿಲ್ಲೆಗಳ ಹಿಂದುಳಿದ 32 ತಾಲ್ಲೂಕುಗಳು, ಹೆಚ್ಚು ಹಿಂದುಳಿದ 10 ತಾಲ್ಲೂಕುಗಳಲ್ಲಿ ಮತ್ತು ಅತ್ಯಂತ ಹಿಂದುಳಿದ 16 ತಾಲ್ಲೂಕುಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು 2006–11ರ ಅವಧಿಯಲ್ಲಿ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಿಲ್ಲ. ಚಾಮರಾಜನಗರ ಜಿಲ್ಲೆಯ ನಾಲ್ಕು ಜಿಲ್ಲೆಗಳನ್ನು ಹಿಂದುಳಿದ, ಹೆಚ್ಚು ಹಿಂದುಳಿದ ಅಥವಾ ಅತ್ಯಂತ ಹಿಂದುಳಿದ ಜಿಲ್ಲೆಗಳನ್ನು ವರ್ಗೀಕರಿಸಲಾಗಿದ್ದರೂ ಸಹ ಮಾರ್ಚ್ 2011ರಲ್ಲಿದ್ದಂತೆ ಈ ಜಿಲ್ಲೆಯಲ್ಲಿ ಯಾವುದೇ ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸಿಲ್ಲ. 30 ಕೈಗಾರಿಕಾ ಹಿಂದುಳಿದ ತಾಲ್ಲೂಕುಗಳಿರುವ ಆರು[4] ಜಿಲ್ಲೆಗಳಲ್ಲಿ ಪ್ರತಿಯೊಂದರಲ್ಲೂ 19ರಿಂದ 155 ಎಕರೆ ಭೂಮಿಯಲ್ಲಿ ವ್ಯಾಪಿಸಿರುವ ಕೇವಲ ಒಂದೇ ಒಂದು ಕೈಗಾರಿಕಾ ಪ್ರದೇಶವಿದ್ದಿತು. 1985–2000ರಷ್ಟು ಹಿಂದೆಯೇ ಈ ಆರು ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಿದ್ದ ಮಂಡಳಿಯು ಆ ನಂತರ ಈ ಜಿಲ್ಲೆಗಳಲ್ಲಿ ಯಾವುದೇ ಚಟುವಟಿಕೆಗಳನ್ನು ಕೈಗೊಳ್ಳಲಿಲ್ಲ.

ಕೈಗಾರಿಕಾ ನೀತಿಯಲ್ಲಿ ನಿಗದಿಪಡಿಸಿದ್ದಂತೆ ಗುರಿಗಳನ್ನು ಸಾಧಿಸುವೆಡೆಗೆ ಸಂಸ್ಥೆಯನ್ನು ಮುನ್ನಡೆಸಲು ಅಗತ್ಯವಿದ್ದ ಕಾರ್ಯಗಳನ್ನು ಕೈಗೊಳ್ಳಲು ಮಂಡಳಿಯು ಯಾವುದೇ ಆಯಕಟ್ಟಿನ ಯೋಜನೆಗಳನ್ನು ತಯಾರಿಸದಿರುವುದೇ ಕೈಗಾರಿಕಾ ಪ್ರದೇಶಗಳ ಸ್ಥಾಪನೆಯಲ್ಲಿ ಮುಂದುವರೆದ ಈ ಪ್ರಾದೇಶಿಕ ಅಸಮತೋಲನಕ್ಕೆ ಕಾರಣವೆಂದು ಲೆಕ್ಕಪರಿಶೋಧನೆಯು ಗಮನಿಸಿತು. ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ಸ್ಥಳವನ್ನು ಗುರುತಿಸುವಾಗ ಮಂಡಳಿಯು ಕೈಗಾರಿಕಾ ನೀತಿಯಲ್ಲಿ ಗುರುತಿಸಲಾದ ಹಿಂದುಳಿದ ಪ್ರದೇಶಗಳನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಮಂಡಳಿಯು ಕೈಗಾರಿಕಾ ಪ್ರದೇಶಕ್ಕೆ ಸ್ಥಳವನ್ನು ಗುರುತಿಸುವ ಮೊದಲು ಯಾವುದೇ ಕಾರ್ಯಸಾಧ್ಯತಾ ಅಧ್ಯಯನ ಅಥವಾ ಬೇಡಿಕೆ ಸಮೀಕ್ಷೆಯನ್ನು ನಡೆಸಲಿಲ್ಲ. ಸ್ವಾಧೀನಪಡಿಸಿಕೊಳ್ಳಲು ಭೂಮಿಯ ವ್ಯಾಪ್ತಿಯನ್ನು ತಾತ್ಪೂರ್ತಿಕವಾಗಿ ಪ್ರಸ್ತಾವಿಸಲಾಗಿತ್ತೇ ವಿನ: ಅದು ಭೂಮಿಯ ಬಳಕೆಯ ವಿಧಾನ, ಪ್ರಸ್ತಾವಿತ ಕೈಗಾರಿಕೆಯನ್ನು ಸ್ಥಾಪಿಸಲು ಅಗತ್ಯವಿರುವ ಹೂಡುವಳಿಗಳ ಲಭ್ಯತೆ, ಸಂಪರ್ಕ, ನಿವೇಶನಗಳಿಗೆ ಬೇಡಿಕೆ ಮುಂತಾದ ವಿಷಯಗಳ ಮೇಲೆ ಆಧಾರಿತವಾಗಿರಲಿಲ್ಲ. ಕೈಗಾರಿಕಾ ಪ್ರದೇಶದ ಸ್ಥಳವನ್ನು ಕೇವಲ ಚುನಾಯಿತ ಪ್ರತಿನಿಧಿಗಳ ಮತ್ತು ಸ್ಥಳೀಯರಿಂದ ಸ್ವೀಕರಿಸಿದ ಅಹವಾಲುಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ನಿರ್ಣಯಗಳ ಮೇಲೆ ಆಯ್ಕೆ ಮಾಡಲಾಯಿತು. ಹೀಗೆ ನಿರ್ಧರಿಸಿದ ಸ್ಥಳಗಳ ಆಧಾರದ ಮೇಲೆ ಎಸ್‌ಎಲ್‌ಎಓಗಳು ಭೂ ಸ್ವಾಧೀನಕ್ಕಾಗಿ ಪ್ರಸ್ತಾವಗಳನ್ನು ಸಲ್ಲಿಸಿದರು ಮತ್ತು ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆಗಳನ್ನು ಜಾರಿ ಮಾಡಲು ಅದನ್ನು ಮಂಡಳಿಯು ಸರ್ಕಾರಕ್ಕೆ ಕಳುಹಿಸಿತು. ಈ ರೀತಿ ಕೈಗಾರಿಕಾ ಪ್ರದೇಶಗಳ ಸ್ಥಾಪನೆಗೆ ಮಾಡಿದ ಭೂಮಿಯ ಆಯ್ಕೆಯು ಕಾರ್ಯತತ್ಪರತೆಯ ನ್ಯೂನತೆಯಿಂದ ಕೂಡಿತ್ತು.

ಕೆಳಗಿನ **ಕೋಷ್ಟಕ–3.3ರಲ್ಲಿ** ತೋರಿಸಿರುವಂತೆ ಎಸ್‌ಎಲ್‌ಎಓ–1 ಮತ್ತು ಎಸ್‌ಎಲ್‌ಎಓ–2 ರವರ ಭೂಸ್ವಾಧೀನ ದಾಖಲೆಗಳ ಪರಿಶೀಲನೆಯು ನಾಲ್ಕು ಕೈಗಾರಿಕಾ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಭೂಮಿಯ ಸ್ಥಳ ಮತ್ತು ವಿಸ್ತಾರವನ್ನು ಚುನಾಯಿತ ಪ್ರತಿನಿಧಿಗಳು ಅಥವಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಅಥವಾ ಸ್ಥಳೀಯ ಜನರು ಪ್ರಸ್ತಾವಿಸಿದ್ದರೆಂದು ತೋರಿಸಿತು.

**ಕೋಷ್ಟಕ–3.3 : ಕೈಗಾರಿಕಾ ಪ್ರದೇಶಗಳ ತಾತ್ಪೂರ್ತಿಕ ಆಯ್ಕೆ**

| ಕೈಗಾರಿಕಾ ಪ್ರದೇಶದ ಹೆಸರು | ಸ್ವಾಧೀನಪಡಿಸಿಕೊಂಡ ಭೂಮಿಯ ವಿಸ್ತಾರ (ಎಕರೆ ಮತ್ತು ಗುಂಟೆಗಳಲ್ಲಿ) | ಅಂತಿಮ ಅಧಿಸೂಚನೆಯ ದಿನಾಂಕ |
|---|---|---|
| **ಗೌರಿಬಿದನೂರು** | **239–38** | **1 ಮಾರ್ಚ್ 2007** |
| **ಮಾಲೂರು** | **452–04** | **08 ಮಾರ್ಚ್ 2007** |
| **ಹನಗವಾಡಿ** | **50–00** | **18 ಮೇ 2007** |
| **ವಸಂತ ನರಸಾಪುರ** | **2051–24** | **20 ಆಗಸ್ಟ್ 2010** |
| **ಕೋಲಾರ ನರಸಾಪುರ** | **685–33** | **25 ಆಗಸ್ಟ್ 2007** |

(ಆಧಾರ: ಸರ್ಕಾರದಿಂದ ಜಾರಿ ಮಾಡಿದ ಗೆಜೆಟ್ ಅಧಿಸೂಚನೆಗಳು)

[4] ಚಿತ್ರದುರ್ಗ, ಗದಗ, ಕೊಪ್ಪಳ, ಮಡಿಕೇರಿ, ಉತ್ತರಕನ್ನಡ ಮತ್ತು ಯಾದಗಿರ್

ಆರು[5] ಕೈಗಾರಿಕಾ ಪ್ರದೇಶಗಳಿಗಿನ ಭೂ ಸ್ವಾಧೀನದ ಪ್ರಸ್ತಾವಗಳನ್ನು ಅನುಮೋದನೆಗಾಗಿ ಮಂಡಳಿಯ ಮುಂದಿಡುವ ಮೊದಲೇ ಅನುಮೋದನೆಗಾಗಿ ಮತ್ತು ಪ್ರಾಥಮಿಕ ಅಧಿಸೂಚನೆಯ ಪ್ರಕಟಣೆಗಾಗಿ ಸರ್ಕಾರಕ್ಕೆ ಕಳುಹಿಸಲಾಗಿತ್ತು.

ಹೀಗಾಗಿ ಮಂಡಳಿಯ ಕಾರ್ಯನಿರ್ವಹಣಾ ಶೈಲಿಯು, ವಿಶೇಷವಾಗಿ ರಾಜ್ಯದಲ್ಲಿ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸುವಲ್ಲಿ, ಕೈಗಾರಿಕಾ ನೀತಿಯಲ್ಲಿ ನಿಗದಿಪಡಿಸಿರುವಂತೆ ಪ್ರಾದೇಶಿಕ ಅಸಮತೋಲನವನ್ನು ತೆಗೆದುಹಾಕುವ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿರಲಿಲ್ಲ ಮತ್ತು ಕೈಗಾರಿಕಾಭಿವೃದ್ಧಿಯನ್ನು ಆಯ್ಕೆಯ ಆಧಾರದ ಮೇಲೆ ಪ್ರೋತ್ಸಾಹಿಸುವ ಅಪಾಯವನ್ನು ಒಳಗೊಂಡಿತ್ತು.

## 3.2 ಭೂ ಬಳಕೆಯ ಬದಲಾವಣೆಗೆ ಮಂಡಳಿಯು ಪರವಾನಗಿ ಪಡೆಯಲಿಲ್ಲ

ಪಟ್ಟಣಗಳು ಅತ್ಯಂತ ಸೂಕ್ತ ಮತ್ತು ಆರೋಗ್ಯಕರ ಅಭಿವೃದ್ಧಿಯನ್ನು ಹೊಂದುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಪಟ್ಟಣಗಳನ್ನು ವಸತಿ, ವಾಣಿಜ್ಯ, ಕೈಗಾರಿಕಾ, ಉದ್ಯಾನವನಗಳು ಮತ್ತು ತೆರೆದ ಸ್ಥಳಗಳು, ಕೃಷಿ, ಸಾರ್ವಜನಿಕ ಸೇವೆಗಳು, ಮುಂತಾದ ಹಲವಾರು ವಲಯಗಳನ್ನಾಗಿ ಭಾಗ ಮಾಡಲಾಗುತ್ತದೆ. ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಅಧಿನಿಯಮ, 1961ರ ಪರಿಚ್ಛೇದ 4ಎ ಮತ್ತು 4ಸಿ (ಕೆಟಿಸಿಪಿ) ರಾಜ್ಯದಲ್ಲಿಯ ಯಾವುದೇ ಪ್ರದೇಶವನ್ನು ಅಧಿಸೂಚನೆಯ ಮೂಲಕ ಸ್ಥಳೀಯ ಯೋಜನಾ ಪ್ರದೇಶ ಎಂದು ಘೋಷಿಸಲು ಅಧಿಕಾರ ನೀಡುತ್ತದೆ ಮತ್ತು ಅಧಿಸೂಚನೆಯ ಮೂಲಕ ಸ್ಥಳೀಯ ಯೋಜನಾ ಪ್ರದೇಶದ ಅಧಿಕಾರವನ್ನು ಹೊಂದಿರುವ ಒಂದು ಯೋಜನಾ ಪ್ರಾಧಿಕಾರವನ್ನು ಸ್ಥಾಪಿಸುತ್ತದೆ. ಜೂನ್ 2011ರಲ್ಲಿದ್ದಂತೆ ರಾಜ್ಯವು 110 ಯೋಜನಾ ಪ್ರಾಧಿಕಾರಗಳನ್ನು ಹೊಂದಿತ್ತು. ಕೆಟಿಸಿಪಿ ಅಧಿನಿಯಮ 1961ರ ಪರಿಚ್ಛೇದ 14ರ ಪ್ರಕಾರ ಯೋಜನಾ ಪ್ರಾಧಿಕಾರದಿಂದ ತಯಾರಿಸಲ್ಪಟ್ಟ ಪ್ರದೇಶದ ಪ್ರತಿಯೊಂದು ಅಭಿವೃದ್ಧಿಯು ಈ ಅಧಿನಿಯಮದ ಉಪಬಂಧಗಳಿಗೆ ಅನುಗುಣವಾಗಿರಬೇಕು ಮತ್ತು ಭೂ ಬಳಕೆಯ ಅಥವಾ ಅಭಿವೃದ್ಧಿಯ ಯಾವುದೇ ಬದಲಾವಣೆಯನ್ನು ಯೋಜನಾ ಪ್ರಾಧಿಕಾರದ ಅನುಮತಿಯಿಲ್ಲದೇ ಮಾಡಬಾರದು.

ಸರ್ಕಾರವು ನೀಡಿದ (ಮೇ 1991) ಮಾರ್ಗದರ್ಶಿ ಸೂತ್ರಗಳ ಪ್ರಕಾರ ಕೈಗಾರಿಕೇತರ ಬಳಕೆಗಾಗಿ ಮೀಸಲಿಟ್ಟ ಭೂಮಿಯನ್ನು ಸ್ವಾಧೀನಕ್ಕಾಗಿ ಅಧಿಸೂಚಿಸದಿರುವುದನ್ನು ಖಚಿತಪಡಿಸಿಕೊಳ್ಳಲು ಮಂಡಳಿಯು ಸಂಬಂಧಪಟ್ಟ ಯೋಜನಾ ಪ್ರಾಧಿಕಾರದ ಜೊತೆ ಸಮಾಲೋಚಿಸಿದ ನಂತರವೇ ಸ್ವಾಧೀನ ಕ್ರಮಗಳನ್ನು ಪ್ರಾರಂಭಿಸಬೇಕು. ಮಂಡಳಿಯು ಸಮಗ್ರ ಅಭಿವೃದ್ಧಿ ಯೋಜನೆಗಳನ್ನು (ಸಿಡಿಪಿ) ಅನುಸರಿಸುತ್ತಿಲ್ಲವೆಂದು ಯೋಜನಾ ಪ್ರಾಧಿಕಾರಗಳಿಂದ ಸ್ವೀಕರಿಸಿದ ದೂರುಗಳ ಆಧಾರದ ಮೇಲೆ ಭೂ ಸ್ವಾಧೀನಕ್ಕೆ ಮೊದಲು ಯೋಜನಾ ಪ್ರಾಧಿಕಾರದಿಂದ ತಪ್ಪದೇ ಒಪ್ಪಿಗೆ ಪಡೆಯಬೇಕು ಎಂಬ ತನ್ನ ಹಿಂದಿನ ಮಾರ್ಗದರ್ಶಿ ಸೂತ್ರಗಳನ್ನು ಸರ್ಕಾರವು ಪುನರುಚ್ಚರಿಸಿತು (ಜೂನ್ 2003).

ಕೆಐಎಡಿ ಅಧಿನಿಯಮದ 3ನೇ ಪರಿಚ್ಛೇದವು ರಾಜ್ಯದಲ್ಲಿನ ಯಾವುದೇ ಪ್ರದೇಶವನ್ನು ಒಂದು ಅಧಿಸೂಚನೆಯ ಮೂಲಕ ಕೈಗಾರಿಕಾ ಪ್ರದೇಶವನ್ನಾಗಿ ಘೋಷಿಸಲು ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. ಪರೀಕ್ಷಾ-ತನಿಖೆ ನಡೆಸಿದ ಪ್ರಕರಣಗಳಲ್ಲಿ ಒಂದು ಪ್ರದೇಶವನ್ನು ಕೈಗಾರಿಕಾ ಪ್ರದೇಶವನ್ನಾಗಿ ಘೋಷಿಸಲು ಮತ್ತು ಸ್ವಾಧೀನಕ್ಕಾಗಿ ಪ್ರಾಥಮಿಕ ಅಧಿಸೂಚನೆಯ ಕರಡುಗಳನ್ನು ಮಂಡಳಿಯಿಂದ ಸರ್ಕಾರವು ಒಟ್ಟಿಗೆ ಸ್ವೀಕರಿಸಿದ್ದನ್ನು ಗಮನಿಸಲಾಯಿತು. ಮಂಡಳಿಯಿಂದ ಪ್ರಸ್ತಾವಿಸಲ್ಪಟ್ಟ ಭೂಮಿಯನ್ನು 'ಕೈಗಾರಿಕಾ ಪ್ರದೇಶ' ವೆಂದು ಘೋಷಿಸುವಾಗ ಮಂಡಳಿಯು ತನ್ನ ಮೇ 1991ರ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುತ್ತಿದೆಯೇ ಎಂಬುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಲಿಲ್ಲ. ಇದು, ಸಿಡಿಪಿ ಅನ್ವಯ ಭೂಮಿಯ ಬಳಕೆಯ ವಿಧಾನವನ್ನು ಪರಿಶೀಲಿಸದೆಯೇ ಮಂಡಳಿಯಿಂದ ಭೂ ಸ್ವಾಧೀನಗಳನ್ನು ಅನುಕೂಲಗೊಳಿಸಿತು. ಕೈಗಾರಿಕಾ ಪ್ರದೇಶಗಳ ವಿನ್ಯಾಸಕ್ಕೆ ಕೂಡ ಯೋಜನಾ ಪ್ರಾಧಿಕಾರದಿಂದ ಮಂಡಳಿಯು ಮಂಜೂರಾತಿಯನ್ನು ಪಡೆದುಕೊಳ್ಳಲಿಲ್ಲ. ಅದರ ಬದಲಾಗಿ ಮಂಡಳಿಯು, ಕೆಟಿಸಿಪಿ ಅಧಿನಿಯಮ, 1961ರ ಅಡಿಯಲ್ಲಿ ಅದನ್ನು ಯೋಜನಾ ಪ್ರಾಧಿಕಾರವೆಂದು ಅಧಿಕರಿಸಿಲ್ಲವಾದರೂ, ತನಗೇ ತಾನೆ ಈ ವಿನ್ಯಾಸಗಳನ್ನು ಮಂಜೂರು ಮಾಡಿಕೊಂಡಿತು. ಹೀಗೆ

[5] ಕೆಳಕೋಟೆ, ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್, ಏರೋಸ್ಪೇಸ್ ಕಾಂಪೋನೆಂಟ್ಸ್, 2ನೇ ಘಟ್ಟದ ಪಕ್ಕದ ಎಲೆಕ್ಟ್ರಾನಿಕ್ ಸಿಟಿ, ಎಲೆಕ್ಟ್ರಾನಿಕ್ ಸಿಟಿ 5ನೇ ಘಟ್ಟ, ಮಾಲೂರು

ಮಂಡಳಿಯು ಭೂ ಸ್ವಾಧೀನಕ್ಕೆ ಮೊದಲು ಕೆಟಿಸಿಪಿ ಅಧಿನಿಯಮ, 1961ರ ಉಪಬಂಧಗಳನ್ನು ಉಲ್ಲಂಘಿಸಿತು ಮತ್ತು ಇದು, ಈ ಕೆಳಗೆ ಚರ್ಚಿಸಿರುವಂತೆ, ಮಂಡಳಿಯು ನಿರ್ಬಂಧಿತ ಮತ್ತು ವಿಶೇಷ ಕೃಷಿ ವಲಯಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಪರಿಣಮಿಸಿತು.

### 3.2.1 ಮಂಡಳಿಯು ನಿರ್ಬಂಧಿತ ವಲಯವೊಂದರಲ್ಲಿ ಭೂ ಸ್ವಾಧೀನಪಡಿಸಿಕೊಂಡು ಅಭಿವೃದ್ಧಿ ಪಡಿಸಿ ಕೈಗಾರಿಕೆಗಳಿಗೆ ನಿವೇಶನಗಳನ್ನು ಹಂಚಿತು

ಅರ್ಕಾವತಿ ಮತ್ತು ಕುಮುದ್ವತಿ ನದಿಗಳ ಸಂಗಮದಲ್ಲಿ ನಿರ್ಮಿಸಿರುವ ತಿಪ್ಪಗೊಂಡನಹಳ್ಳಿ ಜಲಾಶಯವು ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಿಗೆ ಕುಡಿಯುವ ನೀರಿನ ಒಂದು ಪ್ರಮುಖ ಆಕರವಾಗಿದೆ. ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು (ಬಿಎಮ್ಆರ್‌ಡಿಎ) ನಡೆಸಿದ ಒಂದು ಅಧ್ಯಯನವು ಅನಿಯೋಜಿತ ಅಭಿವೃದ್ಧಿ ಮತ್ತು ಕೈಗಾರೀಕರಣದಿಂದ ತಿಪ್ಪಗೊಂಡನಹಳ್ಳಿ ಜಲಾಶಯದ ಜಲಾನಯನ ಪ್ರದೇಶದಲ್ಲಿನ ಒಳಚರಂಡಿ ವ್ಯವಸ್ಥೆಯ ವಿಧಾನದಲ್ಲಿನ ಬದಲಾವಣೆಯು ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ನೀರಿನ ಒಳಹರಿವು ಕಡಿಮೆಯಾಗುವಲ್ಲಿ ಪರಿಣಮಿಸಿತು ಮತ್ತು ನೀರಿನ ಗುಣಮಟ್ಟ ಕೂಡ ಕ್ಷೀಣಿಸುತ್ತಿದೆ ಎಂದು ತೋರಿಸಿತು. ತಿಪ್ಪಗೊಂಡನಹಳ್ಳಿ ಜಲಾಶಯದ ಜಲಾನಯನ ಪ್ರದೇಶವನ್ನು ರಕ್ಷಿಸಲು ಸರ್ಕಾರವು ಜಲಾನಯನ ಪ್ರದೇಶವನ್ನು ನಾಲ್ಕು ವಲಯಗಳನ್ನಾಗಿ ವರ್ಗೀಕರಿಸಿ (ಜನವರಿ 2004) ವಲಯ-2 ಮತ್ತು 3ರಲ್ಲಿ ಯಾವುದೇ ಹೊಸ ಕೈಗಾರಿಕೆಗೆ, ಕೈಗಾರಿಕಾ ಕಾರ್ಯಾಚರಣೆಗೆ, ಕೈಗಾರಿಕಾ ಪ್ರಕ್ರಿಯೆಗೆ ಅಥವಾ ವಿಸ್ತರಣೆ/ಸೇರಿಸುವಿಕೆಗೆ ಒಪ್ಪಿಗೆ ನೀಡಬಾರದೆಂದು ಮತ್ತು ವಲಯ-4ರಲ್ಲಿ ಹಸಿರು ವರ್ಗದಲ್ಲಿ ಸೇರಿಸಿರುವ ಹೊಸ ಕೈಗಾರಿಕೆಗಳಿಗೆ ಮಾತ್ರ ಅನುಮತಿ ನೀಡಬೇಕೆಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ನಿರ್ದೇಶನ ನೀಡಿತು.

ನೆಲಮಂಗಲ ಯೋಜನಾ ಪ್ರಾಧಿಕಾರದೊಂದಿಗೆ ಮೊದಲೇ ಸಮಾಲೋಚಿಸದೇ ಮತ್ತು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸ್ಥಾಪನೆಗಾಗಿ ಒಪ್ಪಿಗೆ (ಸಿಎಫ್ಇ) ಪಡೆಯದೇ ಹಾಗೂ ರಾಜ್ಯ ಮಟ್ಟದ ಮಾಲಿನ್ಯ ಪರಿಣಾಮ ನಿರ್ಧಾರಣಾ ಪ್ರಾಧಿಕಾರದಿಂದ ಪರಿಸರ ತೀರುವಳಿ ಪಡೆಯದೇ ಮಂಡಳಿಯು ತಿಪ್ಪಗೊಂಡನಹಳ್ಳಿಯ ಜಲಾನಯನ ಪ್ರದೇಶದಲ್ಲಿ ಮಾರ್ಚ್ 2007ರಲ್ಲಿ 794 ಎಕರೆ 23 ಗುಂಟೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತು ಮತ್ತು ರೂ.97.52 ಕೋಟಿ ವೆಚ್ಚದಲ್ಲಿ ಒಂದು ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸಿತು. ಮಂಡಳಿಯು 439 ಕೈಗಾರಿಕೆಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಿತು (ಮಾರ್ಚ್ 2008ರಿಂದ ಜನವರಿ 2011) ಮತ್ತು ಅದರಲ್ಲಿ 28 ಎಕರೆ 26 ಗುಂಟೆಗಳನ್ನು ಒಳಗೊಂಡ 34 ನಿವೇಶನಗಳು ವಲಯ-3ರಲ್ಲಿ ಮತ್ತು 75 ಎಕರೆ 14 ಗುಂಟೆಗಳನ್ನೊಳಗೊಂಡ ಬೇರೆ 42 ನಿವೇಶನಗಳು ವಲಯ-4ರಲ್ಲಿದ್ದವು. ಆದರೆ, ವಲಯ-4ರಲ್ಲಿದ್ದ 42 ನಿವೇಶನಗಳು ಕೆಂಪು[6] ಮತ್ತು ಕಿತ್ತಳೆ ವರ್ಗದಲ್ಲಿರುವ ಕೈಗಾರಿಕೆಗಳಿಗೆ ಹಂಚಿಕೆಯಾಗಿದ್ದವು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 76 ನಿವೇಶನಗಳ ಹಂಚಿಕೆಯನ್ನು ರದ್ದುಪಡಿಸುವಂತೆ ಹಾಗೂ ಸ್ಥಾಪನೆಗಾಗಿ ಒಪ್ಪಿಗೆ ಮತ್ತು ಪರಿಸರ ತೀರುವಳಿಯನ್ನು ಪಡೆಯುವವರೆಗೆ ಆ ಕೈಗಾರಿಕಾ ಪ್ರದೇಶಗಳಲ್ಲಿ ಯಾವುದೇ ಅಭಿವೃದ್ಧಿಗಳನ್ನು ನಡೆಸಬಾರದೆಂದೂ ಸಹ ಮಂಡಳಿಗೆ ನಿರ್ದೇಶಿಸಿತು (ಜೂನ್ 2011). ಕೈಗಾರಿಕಾ ಪ್ರದೇಶವನ್ನು ಮಂಡಳಿಯು ಸೆಪ್ಟಂಬರ್ 2007ರಲ್ಲಿ ನೀಡಿದ ಅನುಮೋದನೆಯ ಆಧಾರದ ಮೇಲೆ ಅಭಿವೃದ್ಧಿಪಡಿಸಲಾಗಿತ್ತೆಂದು ಸಿಡಿಓ ತಿಳಿಸಿದರು (ಆಗಸ್ಟ್ 2011). ಆದಾಗ್ಯೂ ಯೋಜನಾ ಪ್ರಾಧಿಕಾರದೊಂದಿಗೆ ಸಮಾಲೋಚಿಸದೇ ಅಭಿವೃದ್ಧಿ ಕಾಮಗಾರಿಗಳನ್ನು ಏಕೆ ಕೈಗೊಂಡರು ಎಂಬುದರ ಬಗ್ಗೆ ಉತರವು ಮೌನವಾಗಿದೆ.

ಯೋಜನಾ ಪ್ರಾಧಿಕಾರದೊಂದಿಗೆ ಮುಂಚೆಯೇ ಸಮಾಲೋಚನೆ ನಡೆಸುವಲ್ಲಿನ ಮತ್ತು ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದ ನಿಷೇಧಿತ ವಲಯಗಳಲ್ಲಿ ಸ್ವಾಧೀನಕ್ಕೆ ಹಾಗೂ ಅಭಿವೃದ್ಧಿಗೆ ಮುನ್ನ ವಲಯ ನಿಬಂಧನೆಗಳನ್ನು ಖಚಿತಪಡಿಸಿಕೊಳ್ಳುವಲ್ಲಿನ ವಿಫಲತೆಯು ಮಂಡಳಿಯು ರೂ.8.68 ಕೋಟಿಯನ್ನು ವಲಯ-3ರಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಮತ್ತು ಅಭಿವೃದ್ಧಿಪಡಿಸುವಲ್ಲಿ ನಷ್ಟವಾಗಿಸಿತು. ಇದರಂತೆಯೇ ವಲಯ-4ರಲ್ಲಿ ಮಾಡಿದ ರೂ.22.82 ಕೋಟಿಗಳ ಬಂಡವಾಳವೂ ಸಹ ವಲಯ-4ರ ನಿವೇಶನಗಳನ್ನು ಅತಿ ಕಡಿಮೆ ಮಲಿನಗೊಳಿಸುವ ಕೈಗಾರಿಕೆಗಳಿಗೆ ನೀಡಬಹುದಾಗಿದ್ದರಿಂದ ವಿವೇಚನಾಯುಕ್ತವಾಗಿರಲಿಲ್ಲ

[6] ಕೆಂಪು-ಅತೀವ ಮಾಲಿನ್ಯ, ಕಿತ್ತಳೆ-ಸಾಧಾರಣ ಮಾಲಿನ್ಯ, ಹಾಗೂ ಹಸಿರು-ಕನಿಷ್ಠ ಮಾಲಿನ್ಯ

### 3.2.2 ಯೋಜನಾ ಪ್ರಾಧಿಕಾರದ ಅನುಮತಿಯಿಲ್ಲದೇ ಮಂಡಳಿಯು ವಿಶೇಷ ಕೃಷಿ ವಲಯದಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತು

ಸರಕು ಮತ್ತು ಸೇವೆಗಳ ರಫ್ತು, ಹೆಚ್ಚುವರಿ ಆರ್ಥಿಕ ಚಟುವಟಿಕೆಗಳ ಸೃಷ್ಟಿ ಮತ್ತು ದೇಶೀಯ ಮತ್ತು ವಿದೇಶಿ ಹೂಡಿಕೆದಾರರಿಂದ ಹೂಡಿಕೆಯನ್ನು ಉತ್ತೇಜಿಸುವ ಮುಖ್ಯ ಉದ್ದೇಶದೊಂದಿಗೆ ವಿಶೇಷ ಆರ್ಥಿಕ ವಲಯಗಳ ಸ್ಥಾಪನೆ, ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಒದಗಿಸಲು ಭಾರತ ಸರ್ಕಾರವು ವಿಶೇಷ ಆರ್ಥಿಕ ವಲಯಗಳ (ಎಸ್‌ಇಝಡ್) ಅಧಿನಿಯಮವನ್ನು ಜಾರಿಗೊಳಿಸಿತು (ಜೂನ್ 2005).

ನವೆಂಬರ್ 2006ರಲ್ಲಿ ತೆಗೆದುಕೊಂಡ ಒಂದು ನಿರ್ಧಾರದ (ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ) ಕಾರ್ಯಗತಗೊಳಿಸುವಿಕೆಗಾಗಿ ವಿಮಾನ ನಿಲ್ದಾಣ ಘಟಕಗಳ ಉತ್ಪಾದನಾ ಕೈಗಾರಿಕೆಗಳಿಗಾಗಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ (ಬಿಐಎ) ಬಳಿ ಒಂದು ಎಸ್‌ಇಝಡ್ ವಲಯವನ್ನು ಅಭಿವೃದ್ಧಿಪಡಿಸಲು 1,000 ಎಕರೆ ಭೂಮಿಯನ್ನು ಗುರುತಿಸಲು ಮಂಡಳಿಯು ಡಿಸೆಂಬರ್ 2006ರಲ್ಲಿ ವಾಣಿಜ್ಯ ಮತ್ತು ಕೈಗಾರಿಕೆಗಳ ಆಯುಕ್ತರವರಿಗೆ ಪ್ರಸ್ತಾವಗಳನ್ನು ಕಳುಹಿಸಿತು. ಆದರೆ ಎಸ್‌ಇಝಡ್ ಪ್ರದೇಶವನ್ನು 500 ಎಕರೆಗಳಿಗೆ ಸೀಮಿತಗೊಳಿಸಿ ಪ್ರಸ್ತಾವವನ್ನು ಪರಿಷ್ಕರಿಸಿ ಪುನ: ಸಲ್ಲಿಸುವಂತೆ ಮಂಡಳಿಗೆ ನಿರ್ದೇಶಿಸಲಾಯಿತು (5 ಜನವರಿ 2007). ಪರಿಷ್ಕೃತ ಪ್ರಸ್ತಾವವನ್ನು ಎಸ್‌ಇಝಡ್‌ಗಾಗಿ ತತ್ವಶ: ಅನುಮೋದನೆಯನ್ನು ನೀಡುವಂತೆ ಕೋರಿ ಭಾರತ ಸರ್ಕಾರಕ್ಕೆ (ವಾಣಿಜ್ಯ ಮತ್ತು ಕೈಗಾರಿಕೆಗಳ ಮಂತ್ರಾಲಯ) ರಾಜ್ಯ ಸರ್ಕಾರವು ಕಳುಹಿಸಿತು (10 ಜನವರಿ 2007).

ಈ ಪೂರ್ವದಲ್ಲಿಯೇ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರಾಧಿಕಾರದ (ಬಿಐಎಎಪಿಎ) "ಮಧ್ಯಂತರ ಮಾಸ್ಟರ್ ಪ್ಲಾನ್ 2021"ನ್ನು ಸರ್ಕಾರವು ಅನುಮೋದಿಸಿತ್ತು (ಸೆಪ್ಟಂಬರ್ 2004). ಮಂಡಳಿಯ ಪ್ರಸ್ತಾವಗಳ ಆಧಾರದ ಮೇಲೆ ಸರ್ಕಾರವು, 5 ಜನವರಿ 2007ರಂದು ಎಸ್‌ಇಝಡ್ ಸ್ಥಾಪನೆಗೆ ಪ್ರದೇಶವನ್ನು 500 ಎಕರೆಗಳಿಗೆ ಇಳಿಸಿದ್ದರೂ ಸಹ, 1069 ಎಕರೆ 9 ಗುಂಟೆಗಳ ಭೂಮಿಯ ಸ್ವಾಧೀನಕ್ಕೆ ಅಧಿಸೂಚಿಸಿತು[7] (9 ಜನವರಿ 2007). ಅಧಿಸೂಚನೆಯನ್ನು ಜಾರಿಗೊಳಿಸುವ ಮುನ್ನ ಮಂಡಳಿಯು ಬಿಐಎಎಪಿಎ ಸಲಹೆ ಕೂಡ ಪಡೆಯಲಿಲ್ಲ. ಅಧಿಸೂಚಿಸಿದ ಭೂಮಿಯಲ್ಲಿ 830 ಎಕರೆ 39 ಗುಂಟೆಗಳನ್ನು ಬಿಐಎಎಪಿಎ ಮಾಸ್ಟರ್ ಪ್ಲಾನ್‌ನಲ್ಲಿ ವಿಶೇಷ ಕೃಷಿ ವಲಯ ಎಂದು ಗುರುತಿಸಿದ್ದರಿಂದ ಮಂಡಳಿಯು ಸರ್ಕಾರದೊಡನೆ ಮತ್ತು ಪಟ್ಟಣ ಯೋಜನಾ ಇಲಾಖೆ, ಬಿಐಎಎಪಿಎ, ಬಿಎಮ್‌ಆರ್‌ಡಿಎ ಮತ್ತು ಭಾರತ ವಿಮಾನ ನಿಲ್ದಾಣ ಪ್ರಾಧಿಕಾರ ಮುಂತಾದ ಇತರೆ ಪ್ರಾಧಿಕಾರಗಳೊಡನೆ ಭೂ ಬಳಕೆಯ ಬದಲಾವಣೆಯನ್ನು ಪಡೆಯಲು ಚರ್ಚಿಸಬೇಕಾಯಿತು. ನಗರ ಯೋಜನಾ ಇಲಾಖೆಯು ಸರ್ಕಾರವು, ಮಂಡಳಿಯು ಅಧಿಸೂಚಿಸಿದ ಭೂಮಿಗಳಿಗೆ ರೂ.350 ಕೋಟಿಗಳ ಪರಿಹಾರಧವನ್ನು ಈಗಾಗಲೇ ವಿತರಿಸಿದ್ದರಿಂದ ಆರ್ಥಿಕವಾಗಿ ಮಂಡಳಿಯನ್ನು ಮೇಲೆತ್ತಲು ಭೂ ಬಳಕೆಯ ಬದಲಾವಣೆಯನ್ನು ಜನವರಿ 2009ರಲ್ಲಿ ಅನುಮೋದಿಸಿತು.

ಈ ಮಧ್ಯೆ 500 ಎಕರೆಗಳ ಏರೋಸ್ಪೇಸ್ ಎಸ್‌ಇಜಡ್ ಗಾಗಿ ಸರ್ಕಾರವು ಸಲ್ಲಿಸಿದ್ದ ಯೋಜನಾ ಪ್ರಸ್ತಾವವು ಭಾರತ ಸರ್ಕಾರದಿಂದ ಜುಲೈ 2007ರಲ್ಲಿ, ಗುರುತಿಸಿದ ಭೂ ಒಡೆತನ/ಗುತ್ತಿಗೆ ಹಕ್ಕಿನ ಪುರಾವೆಯನ್ನು ವರ್ಷದೊಳಗೆ ಸಲ್ಲಿಸುವ ಷರತ್ತಿನೊಂದಿಗೆ, ತತ್ವಶ: ಅನುಮೋದಿತವಾಯಿತು. ಆದರೆ, ಭೂ ಬಳಕೆಯ ಬದಲಾವಣೆಗೆ ಜನವರಿ 2009ರಲ್ಲಿ ಮಾತ್ರ ಅನುಮತಿ ದೊರೆತಿದ್ದರಿಂದ, ಮಂಡಳಿಯು ಈ ಷರತ್ತನ್ನು ಪಾಲಿಸಲು ಅಶಕ್ತವಾಯಿತು. ಪರಿಣಾಮವಾಗಿ ಭಾರತ ಸರ್ಕಾರವು ಜುಲೈ 2007ರಲ್ಲಿ ನೀಡಿದ್ದ ತತ್ವಶ: ಅನುಮತಿಯು ಗತಿಸಿಹೋಯಿತು. ಭೂ ಒಡೆತನದ ಪುರಾವೆಗಳನ್ನು ಹೊಂದಿದ್ದ ಮೂರು ಗ್ರಾಮಗಳಲ್ಲಿ (ಭತ್ರಮಾರೇನಹಳ್ಳಿ, ಕವದದಾಸನಹಳ್ಳಿ ಮತ್ತು ದುಮ್ಮನಹಳ್ಳಿ) 252 ಎಕರೆಗಳ ಕಡಿತಗೊಳಿಸಿದ ಪ್ರದೇಶದಲ್ಲಿ ಎಸ್‌ಇಜಡ್‌ನ್ನು ಸ್ಥಾಪಿಸಲು ಭಾರತ ಸರ್ಕಾರದ ಅನುಮತಿಯನ್ನು ಕೋರಿ ಮಂಡಳಿಯು ಇನ್ನೊಂದು ಪ್ರಸ್ತಾವವನ್ನು (ಸೆಪ್ಟಂಬರ್ 2010) ಸಲ್ಲಿಸಿತು ಮತ್ತು ಭಾರತ ಸರ್ಕಾರವು ಅದನ್ನು ಫೆಬ್ರವರಿ 2011ರಲ್ಲಿ ಅನುಮೋದಿಸಿತು.

ಸರ್ಕಾರವು ಜನವರಿ 2007ರಲ್ಲಿ ಭಾರತ ಸರ್ಕಾರಕ್ಕೆ ಕಳುಹಿಸಿದ್ದ ಪ್ರಸ್ತಾವವು ಎಸ್‌ಇಜಡ್ ಪ್ರದೇಶವನ್ನು ಕೇವಲ 500 ಎಕರೆ ಪ್ರದೇಶದಲ್ಲಿ ಸ್ಥಾಪಿಸಲು ನಿಗದಿಪಡಿಸಿದ್ದರೆ ಅಂತಿಮ ಅಧಿಸೂಚನೆಯ ಪ್ರಕಾರ 976 ಎಕರೆ 35¾ ಗುಂಟೆಗಳನ್ನು ಸ್ವಾಧೀನಪಡಿಸಿಕೊಳ್ಳಲಾಯಿತು (ಮೇ 2007 ಮತ್ತು ಮಾರ್ಚ್ 2010). ಭೂಮಿಯ ಲಭ್ಯತೆ ಮತ್ತು ಅದಕ್ಕಿರುವ ಬೇಡಿಕೆಯ ಆಧಾರದ ಮೇರೆಗೆ ಒಂದು ನಿರ್ದಿಷ್ಟ

---

7 ಪ್ರಾಥಮಿಕ ಅಧಿಸೂಚನೆಯ ಮೂಲಕ

ಯೋಜನೆಗೆ ಬೇಕಾದ ಭೂಮಿಯ ವಿಸ್ತಾರದ ಬಗ್ಗೆ ನಿರ್ಧರಿಸಲು ಮಂಡಳಿಗೆ ಅಧಿಕಾರವಿದೆ ಎಂದು ಸಿಇಓ ತಿಳಿಸಿದರು (ಜುಲೈ 2011). ಹೆಚ್ಚುವರಿ ಭೂಮಿಯನ್ನು ಏರೋಸ್ಪೇಸ್ ಘಟಕಗಳ ಕೈಗಾರಿಕಾ ಪ್ರದೇಶವನ್ನಾಗಿ ಅಭಿವೃದ್ಧಿಪಡಿಸಲು ಉಪಯೋಗಿಸಲಾಗುವುದೆಂದೂ ಸಹ ತಿಳಿಸಲಾಯಿತು. ಸ್ವಾಧೀನದ ಪೂರ್ಣ ಪ್ರಕ್ರಿಯೆಯು ತಪ್ಪಾಗಿದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಸ್ವಾಧೀನಕ್ಕಾಗಿ ಅಂತಿಮ ಅಧಿಸೂಚನೆಯನ್ನು ಭಾರತ ಸರ್ಕಾರಕ್ಕೆ ಪ್ರಕ್ಷೇಪಿಸಿದ್ದಕ್ಕಿಂತ ಹೆಚ್ಚಿಗೆ ಮಾಡಿದ್ದು, ಸರ್ಕಾರದ ಮಾರ್ಗದರ್ಶಿ ಸೂತ್ರಗಳನ್ನು ಉಲ್ಲಂಘಿಸಿ ಭೂ ಸ್ವಾಧೀನಕ್ಕೆ ಮುನ್ನ ಯೋಜನಾ ಪ್ರಾಧಿಕಾರದ ಜೊತೆ ಸಮಾಲೋಚಿಸಲಿಲ್ಲ ಮತ್ತು ಭೂ ಬಳಕೆಯ ಬದಲಾವಣೆಗೆ ಅನುಮತಿ ದೊರೆಯುವ ಮುನ್ನವೇ ಪರಿಹಾರವನ್ನು ಪಾವತಿ ಮಾಡಲಾಗಿತ್ತು. ಈ ಲೋಪದೋಷಗಳು, ಒಳಗೊಂಡಿರುವ ಬೃಹತ್ ಆರ್ಥಿಕ ಪರಿಣಾಮಗಳ ದೃಷ್ಟಿಯಿಂದ, ಬಿಐಎಎಪಿಎ ಮಾಸ್ಟರ್ ಯೋಜನೆಯಲ್ಲಿ ಹೆಚ್ಚಿನ ಬದಲಾವಣೆಯನ್ನು ಮಾಡುವುದಕ್ಕೆ ಸರ್ಕಾರವನ್ನು ಒತ್ತಾಯಿಸಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದರಿಂದ ಮಂಡಳಿಗೆ ವಾಣಿಜ್ಯೋದ್ಯಮಿಗಳ ಬೇಡಿಕೆಗನುಗುಣವಾಗಿ ಅಭಿವೃದ್ಧಿಪಡಿಸಿ ಹಂಚಿಕೆ ಮಾಡದೇ ಬೇರೆ ವಿಧಿಯಿರಲಿಲ್ಲ. ಅಕ್ಟೋಬರ್ 2011ರಲ್ಲಿದ್ದಂತೆ ಕೇವಲ 178 ಎಕರೆಗಳನ್ನು (ಶೇಕಡಾ 18) ಏರೋಸ್ಪೇಸ್ ಘಟಕಗಳ ಕೈಗಾರಿಕಾ ಪ್ರದೇಶದ 19 ಘಟಕಗಳಿಗೆ ಮತ್ತು 34 ಎಕರೆಗಳನ್ನು (ಶೇಕಡಾ 3) ಏರೋಸ್ಪೇಸ್ ಎಸ್ಇಜಡ್‌ನ ನಾಲ್ಕು ಘಟಕಗಳಿಗೆ ಹಂಚಲಾಗಿದ್ದನ್ನು ಸಹ ಗಮನಿಸಲಾಯಿತು. ಹೀಗಾಗಿ ಬೇಡಿಕೆಯನ್ನು ಪರಿಗಣಿಸಿ ಯೋಜನೆಯನ್ನು ಅಭಿವೃದ್ಧಿಪಡಿಸಲಾಯಿತು ಎಂಬ ಸಿಇಓರವರ ವಾದವು ತಪ್ಪಾಗಿತ್ತು.

## 3.3 ಸಮಗ್ರ ಉಕ್ಕು ಮತ್ತು ವಿದ್ಯುಚ್ಛಕ್ತಿ ಉತ್ಪಾದನಾ ಸ್ಥಾವರವೊಂದಕ್ಕಾಗಿ ಅಧಿಕ ಭೂಮಿಯ ಸ್ವಾಧೀನ

4,000 ಎಕರೆಗೂ ಹೆಚ್ಚಿನ ಭೂಮಿಯಲ್ಲಿ ಒಂದು ಕಂಪನಿಯ ಇಂಟಗ್ರೇಟೆಡ್ ಸ್ಟೀಲ್ ಮತ್ತು ಪವರ್ ಜನರೇಷನ್ ಪ್ಲಾಂಟ್‌ನ ಸ್ಥಾಪನೆಯನ್ನು ಎಸ್‌ಯುಸಿಯಂತೆ ಎಸ್‌ಹೆಚ್‌ಎಲ್‌ಸಿಸಿ ಅನುಮೋದಿಸಿತು (ಜನವರಿ 2010) ಇದಕ್ಕೆ ಪ್ರತಿಯಾಗಿ ಮಂಡಳಿಯು ಮೇ 2010ರಲ್ಲಿ (ಬಳ್ಳಾರಿ ಜಿಲ್ಲೆಯ ಕುಡುತಿನಿ ಗ್ರಾಮದಲ್ಲಿ 4,156 ಎಕರೆಗಳು ಮತ್ತು ಹರಗಿನದೋಣಿ ಗ್ರಾಮದಲ್ಲಿ 709 ಎಕರೆ) 4,865 ಎಕರೆಗಳನ್ನು ಸ್ವಾಧೀನಪಡಿಸಿಕೊಂಡಿತು. ಮಂಡಳಿಗೆ ಸಲ್ಲಿಸಿದ್ದ ಅರ್ಜಿಯಲ್ಲಿ ಕಾರ್ಮಿಕ ವಸಾಹತನ್ನು ಸ್ಥಾಪಿಸಲು ಕಂಪನಿಯು ಹೆಚ್ಚುವರಿ 500 ಎಕರೆಗಳನ್ನು ಕೋರಿತ್ತು ಎಂದು ಗಮನಿಸಲಾಯಿತು. ಆದರೆ ಮಂಡಳಿಯು ಹೆಚ್ಚುವರಿ ಭೂಮಿಗಾಗಿ ಎಸ್‌ಹೆಚ್‌ಎಲ್‌ಸಿಸಿಯ ಅನುಮತಿಯನ್ನು ಕೋರಲು ಇಲ್ಲ ಮತ್ತು ಕಂಪನಿಯೊಂದಿಗೆ ಅಗತ್ಯವಿದ್ದ ಭೂಮಿಯ ವಿಸ್ತಾರವನ್ನು ನಿಗದಿಪಡಿಸಿ ಯಾವುದೇ ಒಪ್ಪಂದವನ್ನು ಮಾಡಿಕೊಂಡಿರಲಿಲ್ಲ.

ಸ್ವಾಧೀನಪಡಿಸಿಕೊಂಡ 4,865 ಎಕರೆ ಭೂಮಿಯಲ್ಲಿ ಹರಗಿನದೋಣಿ ಗ್ರಾಮದಲ್ಲಿನ 709 ಎಕರೆಗಳನ್ನು ತಮ್ಮ ಯೋಜನೆಗೆ ಅಗತ್ಯವಿಲ್ಲ ಎನ್ನುವ ಕಾರಣ ನೀಡಿ ಕಂಪನಿಯು ತನ್ನ ಒಡೆತನಕ್ಕೆ ಪಡೆಯಲು ನಿರಾಕರಿಸಿತು (ಜನವರಿ 2011). ತತ್ಪರಿಣಾಮವಾಗಿ ಮಂಡಳಿಯು 500 ಎಕರೆ ಪ್ರದೇಶದಲ್ಲಿ ಪೂರಕ ಉಕ್ಕು ಸ್ಥಾವರವೊಂದನ್ನು ಮತ್ತು ಉಳಿದ ಪ್ರದೇಶದಲ್ಲಿ ಒಂದು ಟೌನ್‌ಶಿಪ್‌ನ್ನು ಅಭಿವೃದ್ಧಿಪಡಿಸಲು ನಿರ್ಧರಿಸಿತು (ಫೆಬ್ರವರಿ 2011). ಹೀಗಾಗಿ, ಕಂಪನಿಯು ಕೋರಿದ್ದ ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಎಸ್‌ಹೆಚ್‌ಎಲ್‌ಸಿಸಿಯ ಅನುಮೋದನೆ ಪಡೆಯುವಲ್ಲಿನ ಮಂಡಳಿಯ ವಿಫಲತೆ ಮತ್ತು ಕಂಪನಿಯನ್ನು ಹೆಚ್ಚುವರಿ ಭೂಮಿಯನ್ನು ತೆಗೆದುಕೊಳ್ಳುವಂತೆ ಒತ್ತಾಯ ಮಾಡಲು ಯಾವುದೇ ಕಾನೂನು ಚೌಕಟ್ಟಿನ ಅನುಪಸ್ಥಿತಿಯು ಹೆಚ್ಚುವರಿ 865 ಎಕರೆ ಭೂಮಿಯ ಸ್ವಾಧೀನತೆಯಲ್ಲಿ ಪರಿಣಮಿಸಿತಲ್ಲದೇ ಮಂಡಳಿಯ ವೆಚ್ಚದಲ್ಲಿ ಹೆಚ್ಚುವರಿ ಭೂಮಿಯನ್ನು ಅಭಿವೃದ್ಧಿ ಪಡಿಸುವಂತಾಯಿತು.

ಎಲ್ಲೆಲ್ಲಿ ಅವಶ್ಯಕತೆಯಿದೆಯೆಂದು ಮಂಡಳಿಯು ಪರಿಗಣಿಸಿದೆಯೋ ಅಲ್ಲಿ ಯೋಜನಾ ಪ್ರವರ್ತಕರೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ ಎಂದು ವಿಶೇಷ ಜಿಲ್ಲಾಧಿಕಾರಿಗಳು ತಿಳಿಸಿದರು (ಸೆಪ್ಟಂಬರ್ 2011). ಇದೊಂದು ಬಹುದೊಡ್ಡ ಯೋಜನೆಯಾದ್ದರಿಂದ ಈ ಪ್ರಕರಣದಲ್ಲಿ ಒಪ್ಪಂದವನ್ನು ಮಾಡಿಕೊಳ್ಳಲಿಲ್ಲ. ಈ ಪ್ರಕ್ರಿಯೆಯಲ್ಲಿ ಮಾರ್ಗಾಂತರವಿದ್ದರೂ, ಅದನ್ನು ಹೂಡಿಕೆಯನ್ನು ಆಕರ್ಷಿಸುವ ದೃಷ್ಟಿಯಿಂದ ಮಾಡಲಾಯಿತು. ಇತರ ಕಂಪನಿಗಳ ವಿನಂತಿಯಂತೆ ಕಂಪನಿಯು 709 ಎಕರೆಗಳನ್ನು ಬಿಟ್ಟುಕೊಟ್ಟಿದೆ ಎಂದೂ ಕೂಡ ಹೇಳಲಾಯಿತು ಮತ್ತು ಅಂತಿಮ ನಿರ್ಧಾರವು ಮಂಡಳಿಯಲ್ಲಿ ಬಾಕಿ ಇದೆ. ಭೂಮಿಯ ಹಂಚಿಕೆಯಲ್ಲಿ ಮಂಡಳಿಯು ಒಂದೇ ರೀತಿಯ ಕಾರ್ಯವಿಧಾನವನ್ನು ಅನುಸರಿಸಬೇಕು ಮತ್ತು ತನ್ನ ವಿವೇಚನೆಯಿಂದ ಕೆಲವು ಕಡೆ ಮಾತ್ರ ಅದನ್ನು ಸಡಿಲಿಸುವ

ಸ್ವಾತಂತ್ರವನ್ನು ಅದಕ್ಕೆ ನೀಡಿಲ್ಲವಾದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಮುಂದುವರೆದು, ತಮ್ಮ ಯೋಜನೆಗೆ ಅದರ ಅವಶ್ಯಕತೆಯಿಲ್ಲ ಎಂದು 709 ಎಕರೆಗಳನ್ನು ಕಂಪನಿಯು ತನ್ನ ವಶಕ್ಕೆ ತೆಗೆದುಕೊಳ್ಳಲು ತಿರಸ್ಕರಿಸಿತೆಂದು ದಾಖಲೆಗಳು ತೋರಿಸಿದವು. ಕಂಪನಿಯು ಇತರರ ಸಲುವಾಗಿ ತನ್ನ ವಿವೇಚನೆಯಿಂದ ಭೂಮಿಯನ್ನು ಬಿಟ್ಟುಕೊಡುವ ಸ್ವಾತಂತ್ರ ಹೊಂದಿರಲಿಲ್ಲ.

ಜೂನ್ 2011ರಲ್ಲಿ ಮಂಡಳಿಯು ಮುಂದಿಟ್ಟ ರೂ.491.97 ಕೋಟಿ ಬೇಡಿಕೆಗೆ ಪ್ರತಿಯಾಗಿ ಕಂಪನಿಯು ಅಂತಿಮ ಅಧಿಸೂಚನೆಯನ್ನು (ಮೇ 2010) ಜಾರಿ ಮಾಡುವ ಮುನ್ನ ಎಸ್‌ಯುಸಿಗಳಿಗೆ ಅನ್ವಯವಾಗುವ ಹಂಚಿಕೆಯ ಷರತ್ತುಗಳು ಭೂಮಿಯ ತಾತ್ಕಾಲಿಕ ಬೆಲೆಯನ್ನು ಮಂಡಳಿಯಲ್ಲಿ ಪೂರ್ಣವಾಗಿ ಠೇವಣಿ ಇಡಬೇಕು ಎಂದು ನಿಗದಿಪಡಿಸಿದ್ದರೂ ಸಹ ಭೂಮಿಯ ಬೆಲೆಯಾಗಿ ಕೇವಲ ರೂ.267.61 ಕೋಟಿಯನ್ನು ಮಾತ್ರ ಠೇವಣಿ ಮಾಡಿತು. ಮಂಡಳಿಯು, ಕಂಪನಿಗೆ ಹಂಚಿಕೆಯಾದ 4,000 ಎಕರೆಗಳಿಗೆ ಕಡ್ಡಾಯವಾದ ಕೊಳಗೇರಿ ಸುಧಾರಣಾ ಉಪಕರವಾದ ರೂ.4 ಕೋಟಿಯನ್ನೂ ಸಹ ಸಂಗ್ರಹಿಸಲಿಲ್ಲ.

## 3.4 ಮಂಡಳಿಯು ಲಭ್ಯವಿದ್ದ ಸರ್ಕಾರಿ ಭೂಮಿಯನ್ನು ಸ್ವಾಧೀನದಿಂದ ಕೈಬಿಟ್ಟಿತು

ಸಿಂಗಹಳ್ಳಿ ಗ್ರಾಮದಲ್ಲಿನ ಸರ್ಕಾರಿ ಭೂಮಿಯನ್ನು ಸರ್ಕಾರವು ಸ್ವಾಧೀನಕ್ಕಾಗಿ ಪ್ರಾರಂಭದಲ್ಲಿ 113 ಎಕರೆ 33 ಗುಂಟೆಗಳನ್ನು (42 ಎಕರೆ 36 ಗುಂಟೆಗಳ ಸರ್ಕಾರೀ ಭೂಮಿಯನ್ನೂ ಒಳಗೊಂಡು) ಅಧಿಸೂಚಿಸಿದ್ದರೂ (ಜನವರಿ 2007) ಅಂತಿಮ ಅಧಿಸೂಚನೆಯಲ್ಲಿ 3 ಸರ್ವೆನಂಬರ್‌ಗಳಲ್ಲಿ ಸರ್ಕಾರದ ಸಂಪೂರ್ಣ ಭೂಮಿಯನ್ನು ಮೂರು ಸರ್ವೆ ನಂಬರ್‌ಗಳಲ್ಲಿನ ಸರ್ಕಾರಿ ಭೂಮಿಯನ್ನು ಅವುಗಳು ಕೆರೆದಂಡೆ ಪ್ರದೇಶದಲ್ಲಿವೆ ಎಂಬ ಕಾರಣದಿಂದ ಅಂತಿಮ ಅಧಿಸೂಚನೆಯಿಂದ ಅವುಗಳನ್ನು ಕೈಬಿಡಲಾಯಿತು (ಮೇ 2007). ಆದರೆ ಅಂತಿಮ ಅಧಿಸೂಚನೆಯಿಂದ ಕೈಬಿಟ್ಟ ಸರ್ವೆ ನಂಬರ್‌ಗಳಲ್ಲಿ ಯಾವುದೇ ಕೆರೆದಂಡೆ ಇಲ್ಲದಿರುವುದನ್ನು ಗ್ರಾಮದ ನಕ್ಷೆಯಿಂದ ಲೆಕ್ಕಪರಿಶೋಧನೆಯು ಗಮನಿಸಿತು. ಲೆಕ್ಕಪರಿಶೋಧನೆಯ ಅಂಶವನ್ನು ಯಲಹಂಕ ತಹಶೀಲ್ದಾರರು ಸಹ ದೃಢಪಡಿಸಿದರು (ಜೂನ್ 2011). ಮಂಡಳಿಯು ಮೊದಲು ಅಧಿಸೂಚಿಸಿದ್ದ 113 ಎಕರೆ 33 ಗುಂಟೆಗಳ ಬದಲಾಗಿ ಅಂತಿಮವಾಗಿ 45 ಎಕರೆ ಮತ್ತು 28 ಗುಂಟೆಗಳಷ್ಟನ್ನು ಮಾತ್ರ ಖಾಸಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತು. ಹೀಗೆ ಸ್ವಾಧೀನಪಡಿಸಿಕೊಂಡ ಕಡಿಮೆ ವಿಸ್ತಾರದ ಭೂಮಿಯು ಸ್ಪಷ್ಟವಾಗಿ ಮಂಡಳಿಯ ಬೇಡಿಕೆಯನ್ನು ಪೂರೈಸಿತ್ತು ಏಕೆಂದರೆ ಮಂಡಳಿಯು ನಂತರ ಆ ಮೂರು ಸರ್ವೆನಂಬರ್‌ಗಳಲ್ಲಿ ಯಾವುದೇ ಹೆಚ್ಚುವರಿ ಭೂಮಿಯನ್ನು ಅಧಿಸೂಚಿಸಲಿಲ್ಲ. ಗ್ರಾಮದ ಆ ಮೂರು ಸರ್ವೆನಂಬರ್‌ಗಳಲ್ಲಿ ಲಭ್ಯವಿದ್ದ ಸರ್ಕಾರೀ ಭೂಮಿಯನ್ನು ಕೈಬಿಡದಿದ್ದ ಪಕ್ಷದಲ್ಲಿ ಅದು ಮಂಡಳಿಯ ಅವಶ್ಯಕತೆಯನ್ನು ಬಹುಮಟ್ಟಿಗೆ ಪೂರೈಸುತ್ತಿದ್ದರಿಂದ ಖಾಸಗಿ ಭೂಮಿಯ ಸ್ವಾಧೀನದ ಅವಶ್ಯಕತೆಯಿರುತ್ತಿರಲಿಲ್ಲ. ಅಭಿವೃದ್ಧಿಗೊಳಿಸಬೇಕಾದ ಕೈಗಾರಿಕಾ ಪ್ರದೇಶದ ಸಾಂದ್ರತೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರಿ ಭೂಮಿಯನ್ನು ಕೈಬಿಡಲಾಯಿತೆಂದು ಎಸ್‌ಎಲ್‌ಎಓ–2 ತಿಳಿಸಿದರು (ಜುಲೈ 2010). ಕೈಐಎಡಿ ಅಧಿನಿಯಮದ ಪರಿಚ್ಛೇದ 28(2)ರಡಿ ಎಸ್‌ಎಲ್‌ಎಓ–2ರವರು ಜಾರಿ ಮಾಡಿದ ಆದೇಶವು ಸರ್ಕಾರೀ ಭೂಮಿಯನ್ನು ಕೈಬಿಡಲು ಕೆರೆದಂಡೆಯ ಅಸ್ತಿತ್ವವನ್ನು ಕಾರಣವಾಗಿ ಉಲ್ಲೇಖಿಸಿದ್ದರಿಂದ ಉತ್ತರವು ಒಪ್ಪಲರ್ಹವಲ್ಲ. ಏಪ್ರಿಲ್ 2011ರಲ್ಲಿದ್ದಂತೆ ಮಂಡಳಿಯು 26 ಎಕರೆ 35 ಗುಂಟೆಗಳ ಖಾಸಗಿ ಭೂಮಿಗೆ ರೂ.15.32 ಕೋಟಿಗಳಷ್ಟು ಪರಿಹಾರಧನವನ್ನು ವಿತರಿಸಿತ್ತು.

## 3.5 ಮಂಡಳಿ ಮತ್ತು ಭಾರತ ಸರ್ಕಾರದಿಂದ ಒಂದೇ ಭೂಮಿಯ ಸಮಾನಾಂತರ ಸ್ವಾಧೀನ

ಏರೋಸ್ಪೇಸ್ ಕಾಂಪೊನೆಂಟ್ಸ್ ಕೈಗಾರಿಕಾ ಪ್ರದೇಶಕ್ಕಾಗಿ ಸರ್ಕಾರವು ಐದು[8] ಗ್ರಾಮಗಳಲ್ಲಿ 710 ಎಕರೆ ಭೂಮಿಯ ಸ್ವಾಧೀನಕ್ಕೆ ಕ್ರಮವಾಗಿ ಜನವರಿ 2007 ಮತ್ತು ಮೇ 2007ರಲ್ಲಿ ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆಯನ್ನು ಹೊರಡಿಸಿತು. ಭಾರತ ಸರ್ಕಾರದ ಪೆಟ್ರೋಲಿಯಮ್ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯವು (ಮಂತ್ರಾಲಯ) ಸಹ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ವಾಯುಯಾನ ಟರ್ಬೈನ್ ಇಂಧನವನ್ನು

[8] ಭಟ್ರಮಾರೇನಹಳ್ಳಿ, ದುಮ್ಮನಹಳ್ಳಿ, ಜೊನ್ನಹಳ್ಳಿ, ಕವಡದಾಸನಹಳ್ಳಿ ಹಾಗೂ ಉಣಸೂರ್

ಸಾಗಿಸಲು ಪೈಪ್‌ಲೈನನ್ನು ಅಳವಡಿಸಲು ಈ ಗ್ರಾಮಗಳಲ್ಲಿ 36,544 ಚದರ ಮೀಟರ್‌ಗಳ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಕ್ರಮವಾಗಿ ಮಾರ್ಚ್ 2007 ಹಾಗೂ ಆಗಸ್ಟ್ 2007ರಲ್ಲಿ ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆಯನ್ನು ಹೊರಡಿಸಿತು. ಐಓಸಿಯು ಸ್ವಾಧೀನಪಡಿಸಿಕೊಂಡ 31,519 ಚದರ ಮೀಟರ್ ಭೂಮಿಯು ಮಂಡಳಿಯು ಸ್ವಾಧೀನಪಡಿಸಿಕೊಂಡ ಮೇಲೆ ವ್ಯಾಪಿಸಿದ ಭೂಮಿಯಾಗಿದ್ದಿತು ಮತ್ತು ಮಂಡಳಿಯಿಂದ ಹಾಗೂ ಐಓಸಿಯಿಂದ ಅದೇ ಭೂಮಿಗೆ ಪರಿಹಾರಧನವನ್ನು ವಿತರಿಸಲಾಗಿತ್ತು ಎಂದು ಲೆಕ್ಕಪರಿಶೋಧನೆಯು ಗಮನಿಸಿತು.

ಅಕ್ಟೋಬರ್ 2011ರಲ್ಲಿದ್ದಂತೆ ಐಓಸಿಯು 25,910 ಚದರ ಮೀಟರ್‌ಗೆ ಡಿಸೆಂಬರ್ 2007ರಿಂದ ಅಕ್ಟೋಬರ್ 2008ರವರೆಗೆ ರೂ.19.90 ಲಕ್ಷ ಪರಿಹಾರವನ್ನು ವಿತರಿಸಿದ್ದರೆ, ಎಸ್‌ಎಲ್‌ಎಓ–2ರವರು 31,519 ಚದರ ಮೀಟರ್‌ಗೆ ಜೂನ್ 2008ರಿಂದ ಡಿಸೆಂಬರ್ 2008ರವರೆಗೆ ರೂ.4.36 ಕೋಟಿ ಪರಿಹಾರವನ್ನು ವಿತರಿಸಿದ್ದರು. ಮಾರ್ಚ್ 2009ರಲ್ಲಿ ಕೈಗೊಳ್ಳಲಾಗಿದ್ದ ತಪಾಸಣೆಯೊಂದರಲ್ಲಿ ಮಂಡಳಿಯ ಅಭಿವೃದ್ಧಿ ಅಧಿಕಾರಿಗಳು ಸ್ವಾಧೀನಪಡಿಸಿಕೊಂಡಿದ್ದ ಭೂಮಿಯಲ್ಲಿ ಐಓಸಿಯು ಈಗಾಗಲೇ ಪೈಪ್‌ಲೈನನ್ನು ಅಳವಡಿಸಿದ್ದನ್ನು ಗಮನಿಸಿದರು. ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿದ್ದ ಪೈಪ್‌ಲೈನನ್ನು ಹೊರತೆಗೆಯುವಂತೆ ಐಓಸಿಗೆ ಪತ್ರವೊಂದನ್ನು ಮಾರ್ಚ್ 2009ರಲ್ಲಿ ಬರೆಯುವುದನ್ನು ಹೊರತುಪಡಿಸಿ ಮಂಡಳಿಯು ಸದರಿ ವಿಷಯದಲ್ಲಿ ಬೇರೆ ಯಾವುದೇ ಕ್ರಮವನ್ನು ಕೈಗೊಂಡಿರಲಿಲ್ಲ. ತತ್ಪರಿಣಾಮವಾಗಿ ಒಂದೇ ಭೂಮಿಯು ಐಓಸಿ ಮತ್ತು ಮಂಡಳಿ ಇಬ್ಬರ ಸ್ವಾಧೀನದಲ್ಲಿ ಉಳಿದಿದ್ದು ಭೂ ಮಾಲೀಕರು ಒಂದೇ ಭೂಮಿಗೆ ಐಓಸಿ ಮತ್ತು ಮಂಡಳಿಯಿಂದಲೂ ಪರಿಹಾರಧನವನ್ನು ಸ್ವೀಕರಿಸಿದ್ದರು.

## 3.6 ಸ್ವಾಧೀನಪಡಿಸಿಕೊಂಡ ಭೂಮಿಯ ಹಕ್ಕುಪತ್ರವನ್ನು ಮಂಡಳಿಯು ತನ್ನ ಪರವಾಗಿ ವರ್ಗಾಯಿಸಿಕೊಳ್ಳಲಿಲ್ಲ

1996–97ರಿಂದ 2010–11ರ ಅವಧಿಯಲ್ಲಿ ಕೈಗಾರಿಕಾ ಪ್ರದೇಶಗಳನ್ನು (12,347 ಎಕರೆ 4 ಗುಂಟೆಗಳು) ಮತ್ತು ಎಸ್‌ಯುಸಿಗಳನ್ನು (1,315 ಎಕರೆ 2 ಗುಂಟೆಗಳು) ಸ್ಥಾಪಿಸಲು ಮಂಡಳಿಯು 21 ಜಿಲ್ಲೆಗಳಲ್ಲಿ 13,662 ಎಕರೆ 6 ಗುಂಟೆಗಳಷ್ಟು ಸರ್ಕಾರಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತು. ಸ್ವಾಧೀನದ ನಂತರ ಸದರಿ ಭೂಮಿಗಳ ಒಡೆತನವನ್ನು ಮಂಡಳಿಯು ತನ್ನ ಪರವಾಗಿ ವರ್ಗಾಯಿಸಿಕೊಳ್ಳಬೇಕಿತ್ತು. ಆದರೆ, ಅಭಿವೃದ್ಧಿಯ ಮತ್ತು ಹಂಚಿಕೆಯ ನಂತರವೂ ಈ ಭೂಮಿಗಳ ಒಡೆತನವು ಕಂದಾಯ ದಾಖಲೆಗಳ ಪ್ರಕಾರ ಸರ್ಕಾರದ ಬಳಿಯೇ ಇದ್ದಿತು. ಸ್ವಾಧೀನಪಡಿಸಕೊಂಡ ಭೂಮಿಗಳ ಒಡೆತನವನ್ನು ಮಂಡಳಿಯ ಪರವಾಗಿ ವರ್ಗಾಯಿಸಲು ಸಂಬಂಧಪಟ್ಟ ತಹಶೀಲ್ದಾರ್‌ರಿಗೆ ಆದೇಶಿಸಬೇಕೆಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಮನವಿ ಮಾಡಲಾಗಿದೆಯೆಂದು (ಜುಲೈ 2011) ವಿಶೇಷ ಜಿಲ್ಲಾಧಿಕಾರಿಗಳು ತಿಳಿಸಿದರು (ಆಗಸ್ಟ್ 2011). ಸರ್ಕಾರಿ ಭೂಮಿಗಳ ಹಕ್ಕುಪತ್ರವು ಮಂಡಳಿಯ ಪರವಾಗಿ ವರ್ಗಾವಣೆಯಾಗದಿರುವುದು ಸರ್ಕಾರವು ಈ ಭೂಮಿಗಳನ್ನು ಬೇರೆ ವ್ಯಕ್ತಿಗಳಿಗೆ ಅಥವಾ ಪ್ರಾಧಿಕಾರಗಳಿಗೆ ವಿತರಿಸುವ ಅಪಾಯದಿಂದ ಕೂಡಿತ್ತು.

## 3.7 ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವಿಕೆ

ಕೆಐಎಡಿ ಅಧಿನಿಯಮ, 1966ರ ಪ್ರಕಾರ ಪರಿಚ್ಛೇದ 28(4)ರ ಅಡಿಯಲ್ಲಿ ಅಂತಿಮ ಅಧಿಸೂಚನೆಯ ಘೋಷಣೆಯ ಬಳಿಕ ಭೂಮಿಯು ಎಲ್ಲ ಋಣಭಾರಗಳಿಂದ ಮುಕ್ತವಾಗಿ ಸಂಪೂರ್ಣವಾಗಿ ರಾಜ್ಯ ಸರ್ಕಾರದ ವಶದಲ್ಲಿರುತ್ತದೆ. ಆ ನಂತರ ಪರಿಚ್ಛೇದ 28(8)ರ ಅಡಿಯಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತದೆ. ಭೂ ಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಂಡು ಭೂಸ್ವಾಧೀನದ ನಂತರ ಪರಿಹಾರವನ್ನು ಪಾವತಿಸಬೇಕು. ಆದರೆ, ಅಧಿನಿಯಮದ ಪರಿಚ್ಛೇದ (4) ರಾಜ್ಯ ಸರ್ಕಾರಕ್ಕೆ ಅಧಿಸೂಚನೆಯ ಮೂಲಕ ಯಾವುದೇ ಸಮಯದಲ್ಲಿ ಯಾವುದೇ ಕೈಗಾರಿಕಾ ಪ್ರದೇಶದಿಂದ ಯಾವುದೇ ಪ್ರದೇಶವನ್ನು ಹೊರಗಿಡುವ ಅನುಮತಿ ನೀಡುತ್ತದೆ. ಕರ್ನಾಟಕ ಉಚ್ಚ ನ್ಯಾಯಾಲಯವು ಕರ್ನಾಟಕ ಸರ್ಕಾರ V/s ಥಾಮಸ್ ಪೆಟ್ರೋ ಪ್ರಕರಣದಲ್ಲಿ (ILR 2005 Kar 4199; 2005(3) KCCR 2190) ನೀಡಿದ ತೀರ್ಪಿನ ಪ್ರಕಾರ ರಾಜ್ಯ ಸರ್ಕಾರವು ಕರ್ನಾಟಕ ಜನರಲ್ ಕ್ಲಾಸಸ್ ಅಧಿನಿಯಮ, 1899ರ ಪರಿಚ್ಛೇದ 21ರಡಿಯಲ್ಲಿ, ಕೆಐಎಡಿ ಅಧಿನಿಯಮದ ಪರಿಚ್ಛೇದ 28(4)ರಡಿಯಲ್ಲಿ ಜಾರಿ ಮಾಡಿದ ಅಧಿಸೂಚನೆಯನ್ನು, ರದ್ದುಪಡಿಸಲು ಸಕ್ಷಮವಾಗಿದೆ ಮತ್ತು ಈ ಅಧಿಕಾರವನ್ನು

ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಮುನ್ನ ಚಲಾಯಿಸಬೇಕು. ರಾಜ್ಯ ಸರ್ಕಾರವು ಕೆಐಡಿಎ ಅಧಿನಿಯಮದ ಪರಿಚ್ಛೇದ 4ರಡಿಯಲ್ಲಿ ಅಧಿಸೂಚನೆ ಜಾರಿ ಮಾಡುವ ಮೂಲಕ ಆ ಪ್ರದೇಶವನ್ನು ಕೈಗಾರಿಕಾ ಪ್ರದೇಶದಿಂದ ಕೈಬಿಡಬಹುದು. ಹೀಗೆ, ತೀರ್ಪಿನ ಪ್ರಕಾರ, ಭೂಮಿಯನ್ನು ವಶಪಡಿಸಿಕೊಂಡಿರದಿದ್ದರೆ ಮಾತ್ರ ಪರಿಚ್ಛೇಧ 28(4)ರ ಅಡಿಯಲ್ಲಿ ನೀಡಿದ ಅಧಿಸೂಚನೆಯನ್ನು ರದ್ದುಗೊಳಿಸುವ ಸ್ವಾತಂತ್ರವು ರಾಜ್ಯ ಸರ್ಕಾರಕ್ಕಿದೆ.

ಭೂ ಸ್ವಾಧೀನ ಅಧಿನಿಯಮ, 1894ರಡಿಯಲ್ಲಿ ಸರ್ಕಾರವು ತನ್ನ ವಶಕ್ಕೆ ಭೂಮಿಯನ್ನು ತೆಗೆದುಕೊಂಡಿರದಿದ್ದರೆ ಮಾತ್ರ ಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಲು ಸ್ವಾತಂತ್ರವಿದೆ. ಕೆಳಗಿನ ಬಾಕ್ಸ್ ಶ್ರೀಮತಿ ರಾಧಮ್ಮ ಮತ್ತು ಇತರರಿಗೆ ಪ್ರತಿಯಾಗಿ ಶ್ರೀಮತಿ ಲಕ್ಷ್ಮಮ್ಮ.ಕೆ.ಮೂರ್ತಿ, 1995(4) ಇವರ ಪ್ರಕರಣದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಉದ್ಧೃತ ವಾಕ್ಯಗಳನ್ನು ಒಳಗೊಂಡಿದೆ.

**ಬಾಕ್ಸ್–1**

**ಭೂಸ್ವಾಧೀನ ಕಾನೂನುಗಳಿಗೆ ಸಂಬಂಧಪಟ್ಟ ವ್ಯವಸ್ಥೆಯಲ್ಲಿ ಮರಳಿ ವಹಿಸಿಕೊಡುವ ಕ್ರಮವು ಇದುವರೆಗೂ ಕೇಳಿಬಂದಿಲ್ಲ. ಸಾರ್ವಜನಿಕ ಉದ್ದೇಶಕ್ಕಾಗಿ ಕಾನೂನಿನ ಪ್ರಕಾರ ವೈಯಕ್ತಿಕ ಹಿತಾಸಕ್ತಿಗಿಂತ ಸಾರ್ವಜನಿಕ ಹಿತಾಸಕ್ತಿಯು ಪ್ರಮುಖವಾಗಿರುವುದರಿಂದ ನಾಗರೀಕರು ಅಂತಹ ಸ್ಥಿರಾಸ್ತಿಯನ್ನು ಸೂಕ್ತವಾದ ಪರಿಹಾರವನ್ನು ಪಡೆದು ಸರ್ಕಾರದ ವಶಕ್ಕೆ ಒಪ್ಪಿಸುವುದು ಕಡ್ಡಾಯವಾಗಿದೆ ಹಾಗೂ ಸಾರ್ವಜನಿಕ ಬಳಕೆಗೆ ಹೆಚ್ಚಿನ ಬೇಡಿಕೆಯ ಕಾರಣ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಬಹಳ ಗಂಭೀರ ವಿಷಯವಾಗಿದೆ. ಅಂತಹ ಪ್ರಕ್ರಿಯೆಯು ಪೂರ್ಣಗೊಂಡ ನಂತರ ಆಸ್ತಿಯ ಎಲ್ಲ ಹಕ್ಕುಗಳೂ ನಿಷ್ಕ್ರಿಯಗೊಳ್ಳುವವು ಮತ್ತು ಆಸ್ತಿಯು ಅದರ ಎಲ್ಲ ಹೊಂದಿಕೆಗಳೊಂದಿಗೆ ಸಂಪೂರ್ಣವಾಗಿ ವಶಪಡಿಸಿಕೊಂಡ ಪ್ರಾಧಿಕಾರದ್ದಾಗಿರುತ್ತದೆ. ಸರ್ಕಾರಿ ಪ್ರಾಧಿಕಾರಗಳು, ಎಲ್ಲ ರೀತಿಯ ವೈಯಕ್ತಿಕ ಮತ್ತು ಇತರೆ ವಿಷಯಗಳಿಂದ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡಿ ಭೂ ಸ್ವಾಧೀನ ಅಧಿನಿಯಮದ ಉಪಬಂಧಗಳಲ್ಲಿ ಕಂಡು ಕೇಳರಿಯದ ರೀತಿಯಲ್ಲಿ ಪ್ರಕ್ರಿಯೆಗಳನ್ನು ವ್ಯತಿರಿಕ್ತಗೊಳಿಸುತ್ತಿರುವುದು ವಿಸ್ಮಯಕರವಾಗಿದೆ. ಬೊಕ್ಕಸಕ್ಕೆ ಆದ ನಷ್ಟವಲ್ಲದೇ, ಮುಂಚಿನ ಸ್ವಾಧೀನವು ಸಾರ್ವಜನಿಕ ಹಿತಾಸಕ್ತಿಯಿಂದ ಮಾಡಿರುವುದು ಎಂದು ಭಾವಿಸಿರುವುದರಿಂದ ಈ ಪ್ರಕ್ರಿಯೆಯನ್ನು ವ್ಯತಿರಿಕ್ತಗೊಳಿಸಿರುವುದು ಅದನ್ನು ಆದೇಶಿಸಿರುವ ರಾಜಕೀಯ ಪ್ರಾಧಿಕಾರವು ವೈಯಕ್ತಿಕ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವುದಕ್ಕಾಗಿ ಸಾರ್ವಜನಿಕ ಹಿತಾಸಕ್ತಿಯನ್ನು ಸೋಲಿಸುವುದನ್ನು ಎತ್ತಿ ಹಿಡಿಯುತ್ತದೆ ....**

ಸರ್ಕಾರವು ಕೆಐಎಡಿ ಅಧಿನಿಯಮದ ಪರಿಚ್ಛೇದ 4ರಡಿಯಲ್ಲಿ ಭೂಸ್ವಾಧೀನವನ್ನು ಕೈಬಿಡುತ್ತಿರುವುದನ್ನು ಗಮನಿಸಲಾಯಿತು. ನವೆಂಬರ್ 2005 ಏಪ್ರಿಲ್ 2011ರ ಅವಧಿಯಲ್ಲಿ ರಾಜ್ಯ ಸರ್ಕಾರವು 563 ಎಕರೆ 16 ಗುಂಟೆಗಳಷ್ಟು ಭೂಮಿಯನ್ನು ಸ್ವಾಧೀನದಿಂದ ಕೈಬಿಟ್ಟಿತು **(ಅನುಬಂಧ–1ರಲ್ಲಿ ತೋರಿಸಿರುವಂತೆ)**. ಅಂತಿಮ ಅಧಿಸೂಚನೆಯು ಜಾರಿಯಾದ ನಂತರ ಸ್ವಾಧೀನವನ್ನು ಕೈಬಿಡಲು ಮಂಡಳಿಯು ತಾನೇ ತಾನಾಗಿ ಸಾಮಾನ್ಯವಾಗಿ ಶಿಫಾರಸು ಮಾಡುವುದಿಲ್ಲ ಎಂದು ವಿಶೇಷ ಜಿಲ್ಲಾಧಿಕಾರಿಗಳು ತಿಳಿಸಿದರು (ಡಿಸೆಂಬರ್ 2011). ಸರ್ಕಾರವು ಅಂತಹ ವಿನಂತಿಗಳನ್ನು ಸಾರ್ವಜನಿಕ, ರಾಜಕೀಯ ಮತ್ತು ಕಾನೂನು ವ್ಯವಸ್ಥೆ ಕ್ರಮಗಳನ್ನು ಪರಿಗಣಿಸಿ ಸ್ವೀಕರಿಸಿತು ಮತ್ತು ಪರೀಕ್ಷಿಸಿತು. ಇನ್ನು ಕೆಲವು ಪ್ರಕರಣಗಳಲ್ಲಿ ಭೂ ಮಾಲೀಕರ ಕೋರಿಕೆ ಮೇರೆಗೆ ಮತ್ತು ಅವರು ಅಭಿವೃದ್ಧಿ ವೆಚ್ಚಗಳನ್ನು ಮಂಡಳಿಗೆ ಪಾವತಿ ಮಾಡುವ ಷರತ್ತಿನ ಮೇಲೆ ಕೈಗಾರಿಕಾ ಪ್ರದೇಶದಿಂದ ಭೂಸ್ವಾಧೀನವನ್ನು ಕೈಬಿಡಲಾಯಿತು ಎಂದೂ ಕೂಡ ತಿಳಿಸಿದರು. ಪರೀಕ್ಷಾ–ತನಿಖೆ ನಡೆಸಿದ ಪ್ರಕರಣಗಳಲ್ಲಿ ನ್ಯಾಯಾಲಯಗಳ ಹಲವಾರು ತೀರ್ಪುಗಳನ್ನು ಉಪೇಕ್ಷಿಸಿ ಸರ್ಕಾರವು ಭೂ ಸ್ವಾಧೀನವನ್ನು ಕೈಬಿಟ್ಟಿರುವುದನ್ನು ಗಮನಿಸಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ ಮತ್ತು ಇದು ಖಾಸಗಿ ಹಿತಾಸಕ್ತಿಗಾಗಿ ಸಾರ್ವಜನಿಕ ಹಿತಾಸಕ್ತಿಯನ್ನು ಕಡೆಗಣಿಸುವಲ್ಲಿ ಪರಿಣಮಿಸಿತು. ಪರೀಕ್ಷಾ–ತನಿಖೆಯಲ್ಲಿ ಗಮನಿಸಿದ ಭೂಸ್ವಾಧೀನದಿಂದ ಕೈಬಿಟ್ಟ ಕೆಲವು ಪ್ರಮುಖ ಪ್ರಕರಣಗಳನ್ನು ಕೆಳಗೆ ಚರ್ಚಿಸಲಾಗಿದೆ.

### 3.7.1 ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವ ಅನೇಕ ಪ್ರಕರಣಗಳು ಕೈಗಾರಿಕಾ ಪ್ರದೇಶವೊಂದರ ಸ್ಥಾಪನೆಯನ್ನು ಬಾಧಿಸಿತು

ಎಲೆಕ್ಟ್ರಾನಿಕ್ ಸಿಟಿ ಕೈಗಾರಿಕಾ ಪ್ರದೇಶ–ನಾಲ್ಕನೇ ಘಟ್ಟದ ಸ್ಥಾಪನೆಯನ್ನು ಅನುವುಗೊಳಿಸಲು ಆನೇಕಲ್ ತಾಲ್ಲೂಕಿನ ವೀರಸಂದ್ರ ಮತ್ತು ಹೆಬ್ಬಗೋಡಿ ಗ್ರಾಮಗಳ ಅನೇಕ ಸರ್ವೆನಂಬರ್‌ಗಳಲ್ಲಿ 224 ಎಕರೆ 33

ಗುಂಟೆ ಭೂಮಿಯನ್ನು ಸರ್ಕಾರವು ಕೈಗಾರಿಕಾ ಪ್ರದೇಶಗಳೆಂದು ಘೋಷಿಸಿತು (ಆಗಸ್ಟ್ 2003). ಆದರೆ, 44 ತಿಂಗಳುಗಳ ನಂತರ ಮೇ 2007ರಲ್ಲಿ ಕೇವಲ 138 ಎಕರೆ 8 ಗುಂಟೆಗಳಿಗೆ ಮಾತ್ರ ಸರ್ಕಾರವು ಅಂತಿಮ ಅಧಿಸೂಚನೆಯನ್ನು ಹೊರಡಿಸಿತು. ಪ್ರಾಥಮಿಕ ಅಧಿಸೂಚನೆ ಮತ್ತು ಅಂತಿಮ ಅಧಿಸೂಚನೆಯ ನಡುವೆ ಅತಿಯಾದ ವಿಳಂಬವಿದ್ದಿತು ಮತ್ತು ಸ್ವಾಧೀನಪಡಿಸಿಕೊಂಡಿದ್ದ ಭೂಮಿಯನ್ನು ಆಗಲೇ ಅಭಿವೃದ್ಧಿಪಡಿಸಲಾಗಿತ್ತು ಎನ್ನುವ ಹಿನ್ನೆಲೆಯ ಮೇಲೆ ಸರ್ಕಾರವು 89 ಎಕರೆ 25 ಗುಂಟೆಗಳಷ್ಟು ಮತ್ತಷ್ಟು ಭೂಮಿಯನ್ನು ಭೂಸ್ವಾಧೀನದಿಂದ ಕೈಬಿಟ್ಟಿತು (ಆಗಸ್ಟ್ 2007). ಹೀಗೆ, ಪ್ರಾರಂಭದಲ್ಲಿ ಪ್ರಸ್ತಾವಿಸಲಾದ 224 ಎಕರೆ 33 ಗುಂಟೆಗಳಿಗೆ ಪ್ರತಿಯಾಗಿ ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸಲು ಕೇವಲ 48 ಎಕರೆ 23 ಗುಂಟೆಗಳಷ್ಟು ಅತ್ಯಲ್ಪ ಭೂಮಿಯು ಲಭ್ಯವಿದ್ದಿತು. ಈ ಮಧ್ಯೆ ವೀರಸಂದ್ರ ಗ್ರಾಮದಲ್ಲಿನ 21 ಎಕರೆ 28½ ಗುಂಟೆಗಳ ನಾಲ್ಕು ಭೂ ಮಾಲೀಕರಿಗೆ ರೂ.15.25 ಕೋಟಿಗಳ ಪರಿಹಾರವನ್ನೂ ಮಂಡಳಿಯು ಪಾವತಿಸಿತು (ಅಕ್ಟೋಬರ್ 2007 ಮತ್ತು ಫೆಬ್ರವರಿ 2008). ಆದರೆ ಇತರೆ ಭೂ ಮಾಲೀಕರು ಸರ್ಕಾರದ ತಾರತಮ್ಯ ಧೋರಣೆಯನ್ನು ಪ್ರಶ್ನಿಸಿ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ[9] ಸಲ್ಲಿಸಿದರು ಮತ್ತು ಸ್ವಾಧೀನ ಪ್ರಕ್ರಿಯೆಯನ್ನು ರದ್ದುಗೊಳಿಸುವಂತೆ ಕೋರಿದರು. ಸ್ವಾಧೀನ ಪ್ರಕ್ರಿಯೆಯನ್ನು ರದ್ದು ಮಾಡುವಾಗ (ಡಿಸೆಂಬರ್ 201) ಉಚ್ಚ ನ್ಯಾಯಾಲಯವು ಪ್ರಾರಂಭದಲ್ಲಿ 224 ಎಕರೆ 33 ಗುಂಟೆ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ನಂತರ ಸರ್ಕಾರವು ಹಣವಂತರಿಗೆ, ಶಕ್ತಿಶಾಲಿಗಳಿಗೆ, ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮತ್ತು ಕೆಲವು ವ್ಯಕ್ತಿಗಳು/ಕೈಗಾರಿಕೋದ್ಯಮಿಗಳಿಗೆ ಅನುಕೂಲ ಮಾಡಲು ಹೇಗೆ ನಿಯತಕಾಲಿಕವಾಗಿ ಒಂದರ ನಂತರ ಇನ್ನೊಂದು ಭೂಮಿಯನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿತು ಎಂಬುದನ್ನು ಗಂಭೀರವಾಗಿ ಟೀಕಿಸಿತು. ಏಕಪೀಠ ನ್ಯಾಯಾಧೀಶರ ಆದೇಶದ ವಿರುದ್ಧ ಮಂಡಳಿಯು ಮೇಲ್ಮನವಿ ಸಲ್ಲಿಸಿದೆ (ಡಿಸೆಂಬರ್ 2011) ಮತ್ತು ಆದೇಶವನ್ನು ತಡೆಹಿಡಿಯಲಾಗಿದೆ ಎಂದು ವಿಶೇಷ ಜಿಲ್ಲಾಧಿಕಾರಿಗಳು ತಿಳಿಸಿದರು. ಅಂತಿಮವಾಗಿ ಅಧಿಸೂಚಿಸಿದ 48 ಎಕರೆ 23 ಗುಂಟೆಗಳಿಗೆ ಪ್ರತಿಯಾಗಿ 32 ಎಕರೆ 25 ಗುಂಟೆಗಳನ್ನು ಈಗಾಗಲೇ ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಹಂಚಿಕೆ ಮಾಡಲ್ಪಟ್ಟವರು ಮೇಲ್ಮನವಿಯ ಇತ್ಯರ್ಥವಾಗುವವರೆಗೆ ಭೂಮಿಯನ್ನು ಹೊಂದಿರುತ್ತಾರೆ ಎಂದೂ ಸಹ ತಿಳಿಸಲಾಯಿತು. ಮಂಡಳಿಯು ಸಲ್ಲಿಸಿದ ಮೇಲ್ಮನವಿಯ ಪರಿಣಾಮವನ್ನು ನಿರೀಕ್ಷಿಸಲಾಗಿದೆ.

### 3.7.2 ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ನ ಮಧ್ಯದಲ್ಲಿ ಸರ್ಕಾರವು 20 ಎಕರೆ ಭೂಮಿಯನ್ನು ಸರ್ಕಾರವು ಸ್ವಾಧೀನದಿಂದ ಕೈಬಿಟ್ಟಿತು

ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕನ್ನು ಸ್ಥಾಪಿಸಲು ಬೆಂಗಳೂರು ಉತ್ತರ ತಾಲ್ಲೂಕಿನ ಮೂರು ಗ್ರಾಮಗಳಲ್ಲಿ 869 ಎಕರೆ 9 ಗುಂಟೆ ಭೂಮಿಯ ಸ್ವಾಧೀನಕ್ಕೆ ಸರ್ಕಾರವು ಅಂತಿಮ ಅಧಿಸೂಚನೆಯನ್ನು ಹೊರಡಿಸಿತು (ಏಪ್ರಿಲ್ 2008). ಇದು ಹೂವಿನಾಯಕನಹಳ್ಳಿ ಗ್ರಾಮದ 124, 125 ಮತ್ತು 126ನೇ ಸರ್ವೇ ನಂಬರ್‌ಗಳಲ್ಲೀ 20 ಎಕರೆಗಳನ್ನು ಒಳಗೊಂಡಿತ್ತು. ಅಧಿಸೂಚಿಸಿದ ಭೂಮಿಯನ್ನು ಬೆಂಗಳೂರು ನಗರ ಜಿಲ್ಲೆಯ ವಿಶೇಷ ಭೂಸ್ವಾಧೀನಾಧಿಕಾರಿಗಳು (ಎಸ್‌ಎಲ್‌ಎಓ) ಸ್ವಾಧೀನಪಡಿಸಿಕೊಂಡರು ಮತ್ತು ಜುಲೈ 2008ರಲ್ಲಿ ಮಂಡಳಿಗೆ ಹಸ್ತಾಂತರಿಸಿದರು. ಈ ಮಧ್ಯೆ ಈ ಸರ್ವೆ ನಂಬರ್‌ಗಳ ಭೂ ಮಾಲೀಕರು ಆ ಪ್ರದೇಶದಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ತಾವು ಯೋಜಿಸಿದ್ದು ಆದಕಾರಣ ತಮ್ಮ ಭೂಮಿಯನ್ನು ಸ್ವಾಧೀನದಿಂದ ಕೈಬಿಡಬೇಕೆಂದು ಮುಖ್ಯ ಮಂತ್ರಿಯವರನ್ನು ಕೋರಿದರು (ಜೂನ್ 2008). ಮಾಲೀಕರಿಗೆ ಮತ್ತೆ ನೋಟೀಸ್‌ಗಳನ್ನು ಕಳುಹಿಸಲು, ಅವರ ಆಕ್ಷೇಪಣೆಗಳನ್ನು ಆಹ್ವಾನಿಸಲು ಮತ್ತು ನಡವಳಿಗಳನ್ನು ಕಳುಹಿಸಲು ಸರ್ಕಾರವು ಮಂಡಳಿಗೆ ನಿರ್ದೇಶಿಸಿತು (ಆಗಸ್ಟ್ 2008). ಎಸ್‌ಎಲ್‌ಎಓರವರು ಮಾಲೀಕರಿಂದ ಆಕ್ಷೇಪಣೆಗಳನ್ನು ಆಲಿಸಿದರು ಮತ್ತು ಸ್ವಾಧೀನದಿಂದ ಈ ಮೂರು ಸರ್ವೆ ನಂಬರ್‌ಗಳನ್ನು ಕೈಬಿಡುವಂತೆ ಮಂಡಳಿಯ ವಿಶೇಷ ಜಿಲ್ಲಾಧಿಕಾರಿಯವರಿಗೆ ಶಿಫಾರಸು ಮಾಡಿದರು (ಸೆಪ್ಟಂಬರ್ 2008). ಆದರೆ, ವಿಶೇಷ ಜಿಲ್ಲಾಧಿಕಾರಿಗಳು ಸಿಇಓರವರಿಗೆ ಸಲ್ಲಿಸಿದ (ಅಕ್ಟೋಬರ್ 2008) ಟಿಪ್ಪಣಿಯಲ್ಲಿ ಎರಡನೆಯ ಬಾರಿ ಆಕ್ಷೇಪಣೆಗಳನ್ನು ಆಹ್ವಾನಿಸಲು ಕೆಐಎಡಿ ಅಧಿನಿಯಮದಲ್ಲಿ ಅವಕಾಶವಿಲ್ಲವೆಂದು ವರದಿ ಮಾಡಿದರು ಮತ್ತು ಅಧಿನಿಯಮ ಉಪಬಂಧಗಳನ್ನು ಉಲ್ಲಂಘಿಸಿದ್ದಕ್ಕಾಗಿ ಎಸ್‌ಎಲ್‌ಎಓರವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಶಿಫಾರಸು ಮಾಡಿದರು. ಸರ್ಕಾರಕ್ಕೆ ಕಳುಹಿಸಿದ ವರದಿಯಲ್ಲಿ ಸಿಇಓರವರು ವಿಶೇಷ ಜಿಲ್ಲಾಧಿಕಾರಿಯವರ ಅಭಿಪ್ರಾಯವನ್ನು ಒತ್ತಿ

[9] ಕರ್ನಾಟಕ ರಾಜ್ಯ ಹಾಗೂ ಅರ್ಜಿದಾರರ ನಡುವೆ ರಿಟ್ ಅರ್ಜಿ ಸಂಖ್ಯೆ 2007ರ 14723, 2007ರ 15813, 2007ರ 16509 ಮತ್ತು 2008ರ 5382

ಹೇಳಿದರು (ಅಕ್ಟೋಬರ್ 2008) ಮತ್ತು ಭೂಮಿಯನ್ನು ವಶಪಡಿಸಿಕೊಂಡಿರುವುದರಿಂದ ಸ್ವಾಧೀನದಿಂದ ಕೈಬಿಡಬಾರದು ಎಂದೂ ಸಹ ತಿಳಿಸಿದರು.

ಆದರೆ, ಮಾಲೀಕರಿಂದ ಅಭಿವೃದ್ಧಿ ವೆಚ್ಚಗಳನ್ನು ಸಂಗ್ರಹಿಸಲು ಮತ್ತು ಪರಿಚ್ಛೇದ 4ರಡಿಯಲ್ಲಿ 20 ಎಕರೆಗಳನ್ನು ಸ್ವಾಧೀನದಿಂದ ಕೈಬಿಡುವ ಕರಡು ಅಧಿಸೂಚನೆಯನ್ನು ಕಳುಹಿಸಲು ಸರ್ಕಾರವು ಸಿಇಓರವರಿಗೆ ನಿರ್ದೇಶಿಸಿತು (ಡಿಸೆಂಬರ್ 2008). ಮಾಲೀಕರು ಅಭಿವೃದ್ಧಿ ವೆಚ್ಚಗಳನ್ನು ವಜಾ ಮಾಡುವಂತೆ ಸರ್ಕಾರವನ್ನು ಕೋರಿದಾಗ (ಜುಲೈ 2009) ಇದೇ ತರಹದ ಪ್ರಕರಣಗಳಲ್ಲಿ ತೆಗೆದುಕೊಂಡ ಕ್ರಮದ ಬಗ್ಗೆ ಒಂದು ವರದಿಯನ್ನು ನೀಡುವಂತೆ ಸರ್ಕಾರವು ಸಿಇಓರವನ್ನು ಕೋರಿತು (ಜುಲೈ 2009). ಸ್ವಾಧೀನದಿಂದ ಕೈಬಿಡುವುದು ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ವಿರುದ್ಧವಾಗುವುದಲ್ಲದೇ ಸ್ವಾಧೀನದಿಂದ ಕೈಬಿಡಲು ಕೇಳಲಾಗಿದ್ದ ಭೂಮಿಯು ಕೈಗಾರಿಕಾ ಪ್ರದೇಶದ ಮಧ್ಯಭಾಗದಲ್ಲಿರುವುದರಿಂದ ಅದು ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ನ ಸಾಂದ್ರತೆಯನ್ನು ಬಾಧಿಸುವುದೆಂದೂ ಸಹ ಸಿಇಓರವರು ತಮ್ಮ ಮೊದಲ ನಿಲುವನ್ನು ಒತ್ತಿ ಹೇಳಿ ವರದಿ ಮಾಡಿದರು (ಆಗಸ್ಟ್ 2009). ಒಂದು ವೇಳೆ ಅವರುಗಳು ಸ್ಥಾಪಿಸಲು ಉದ್ದೇಶಿಸಿರುವ ಯೋಜನೆಗಳು ಎಸ್‌ಹೆಚ್‌ಎಲ್‌ಸಿಸಿ ಯಿಂದ ಅನುಮೋದಿತವಾದರೆ ಕೇವಲ ಅಭಿವೃದ್ಧಿ ವೆಚ್ಚಗಳನ್ನು (ಒಂದು ಎಕರೆಗೆ ರೂ.30 ಲಕ್ಷದಂತೆ ರೂ.6 ಕೋಟಿ) ಸಂಗ್ರಹಿಸಿ ಅದೇ ಭೂಮಿಯನ್ನು ಅವರಿಗೆ ಹಂಚಬಹುದೆಂದೂ ಸಹ ವರದಿ ಮಾಡಲಾಗಿತ್ತು. ಆದರೆ ಸರ್ಕಾರದ ನಿರ್ದೇಶನದಂತೆ ಮಂಡಳಿಯು ಪರಿಚ್ಛೇದ 4ರಡಿಯಲ್ಲಿ ಕರಡು ಅಧಿಸೂಚನೆಯನ್ನು ಸಲ್ಲಿಸಿತು (ಜನವರಿ 2010) ಮತ್ತು ಆ ಭೂಮಿಯಲ್ಲಿ ಮಾಲೀಕರು ಕೆಲವು ಕೈಗಾರಿಕೆಗಳನ್ನು ಸ್ಥಾಪಿಸಲು ಯೋಜಿಸಿದ್ದಾರೆ ಎಂದು ಸರ್ಕಾರವು ಅಂತಿಮವಾಗಿ 20 ಎಕರೆಗಳನ್ನು ಸ್ವಾಧೀನದಿಂದ ಕೈಬಿಟ್ಟಿತು (ಫೆಬ್ರವರಿ 2010). ಹೀಗೆ ಸರ್ಕಾರವು ಮಂಡಳಿಯ ವರದಿಯನ್ನು ಕಡೆಗಾಣಿಸಿ ಮಾಲೀಕರ ಪರವಾಗಿ ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ನ ಮಧ್ಯದಲ್ಲಿ 20 ಎಕರೆಗಳ ಭೂಮಿಯನ್ನು ಸ್ವಾಧೀನದಿಂದ ಕೈಬಿಟ್ಟಿತು.

### 3.7.3 ಸರ್ಕಾರವು ಕೈಗಾರಿಕೆಗಳಿಗೆ ಹಂಚಿದ್ದ ನಿವೇಶನಗಳನ್ನು ಸ್ವಾಧೀನದಿಂದ ಕೈಬಿಟ್ಟಿತು

ಮಂಡಳಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ನಾಲ್ಕು ಗ್ರಾಮಗಳಲ್ಲಿ 794 ಎಕರೆ 23 ಗುಂಟೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು (ಫೆಬ್ರವರಿ 2007) ಸೋಂಪುರ ಕೈಗಾರಿಕಾ ಪ್ರದೇಶ, ಘಟ್ಟ-1ನ್ನು ಸ್ಥಾಪಿಸಿತು ಮತ್ತು ಹಲವಾರು ಕೈಗಾರಿಕೆಗಳಿಗೆ ನಿವೇಶನಗಳನ್ನು ಹಂಚಿತು.

ಆದರೆ, ಈ ಕೈಗಾರಿಕಾ ಪ್ರದೇಶದಲ್ಲಿ (ಮಾಕನಕುಪ್ಪೆ ಗ್ರಾಮದ ಸರ್ವೆ ನಂಬರ್ 13/2 ಮತ್ತು 13/3) 4 ಎಕರೆ 6 ಗುಂಟೆಗಳನ್ನು, ಈ ಸರ್ವೆ ನಂಬರ್‌ಗಳಲ್ಲಿ ಫೆಬ್ರವರಿ 2009ರಿಂದ ಸೆಪ್ಟಂಬರ್ 2010ರ ಅವಧಿಯಲ್ಲಿ ಮಂಡಳಿಯು ಏಳು ಕೈಗಾರಿಕೆಗಳಿಗೆ ನಿವೇಶನಗಳನ್ನು ಹಂಚಿದ್ದರೂ ಸಹ, ಸರ್ಕಾರವು ತನಗೆ ತಾನೇ ಸ್ವಾಧೀನದಿಂದ ಕೈಬಿಟ್ಟಿತು (ಜುಲೈ 2010). ಕೈಬಿಡುವ ಭೂಮಿಯು ಕೈಗಾರಿಕಾ ಪ್ರದೇಶದ ಮಧ್ಯಭಾಗದಲ್ಲಿರುವುದರಿಂದ ಭೂಮಿಯ ಕೈಬಿಡುವಿಕೆಯು ಕೈಗಾರಿಕಾ ಪ್ರದೇಶದ ಸಾಂದ್ರತೆ ಮತ್ತು ಸಾಮೀಪ್ಯವನ್ನು ಬಾಧಿಸುವುದೆಂದು ವರದಿ ಮಾಡುತ್ತಾ ಸಿಇಓರವರು ಸ್ವಾಧೀನವನ್ನು ಕೈಬಿಡುವ ಆದೇಶವನ್ನು ರದ್ದು ಮಾಡುವಂತೆ ಸರ್ಕಾರವನ್ನು ಕೋರಿದರು (ಡಿಸೆಂಬರ್ 2010). ಸರ್ಕಾರವು ಸ್ವಾಧೀನವನ್ನು ಕೈಬಿಡುವ ಆದೇಶವನ್ನು ರದ್ದು ಮಾಡದಿದ್ದುದರಿಂದ ಮಂಡಳಿಯು ಏಳು ಕೈಗಾರಿಕೆಗಳಿಗೆ ಅದೇ ಕೈಗಾರಿಕಾ ಪ್ರದೇಶದಲ್ಲಿ ಬೇರೆ ಜಾಗದಲ್ಲಿ ಬದಲೀ ನಿವೇಶನಗಳನ್ನು ನೀಡಬೇಕಾಯಿತು. ಮಂಡಳಿಯು ರೂ.73.44 ಲಕ್ಷ ಮೊತ್ತದ ಅಭಿವೃದ್ಧಿ ವೆಚ್ಚಗಳನ್ನೂ ಸಹ ಭೂ ಮಾಲೀಕರಿಂದ ಅದೇ ದರದಲ್ಲಿ ವಸೂಲು ಮಾಡಲಿಲ್ಲ. ಸರ್ಕಾರವು ತನಗೇ ತಾನೇ ಜುಲೈ 2010ರಲ್ಲಿ ಭೂಸ್ವಾಧೀನವನ್ನು ಕೈಬಿಟ್ಟಿತು ಎಂದು ವಿಶೇಷ ಜಿಲ್ಲಾಧಿಕಾರಿಗಳು ತಿಳಿಸಿದರು (ಆಗಸ್ಟ್ 2011).

### 3.7.4 ಭೂ ಸ್ವಾಧೀನದಿಂದ ಕೈಬಿಡುವಿಕೆಯು ಸಾಂದ್ರತೆಯನ್ನು ಬಾಧಿಸಿತು ಮತ್ತು ಕೈಗಾರಿಕಾ ಪ್ರದೇಶದ ಸ್ಥಾಪನೆಯಾಗದಿರುವಲ್ಲಿ ಪರಿಣಮಿಸಿತು

ಮೈಸೂರು ತಾಲ್ಲೂಕಿನ ಇಲವಾಲ ಮತ್ತು ಮೈದನಹಳ್ಳಿ ಗ್ರಾಮಗಳಲ್ಲಿ ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸಲು 310 ಎಕರೆ 18 ಗುಂಟೆಗಳ ಸ್ವಾಧೀನಕ್ಕೆ ಸರ್ಕಾರವು ಅಂತಿಮ ಅಧಿಸೂಚನೆಯನ್ನು ಹೊರಡಿಸಿತು (ಅಕ್ಟೋಬರ್ 2006). ಈ ಭೂಮಿಯು ಕರ್ನಾಟಕ ಟೆಲಿಕಾಮ್ ಎಂಪ್ಲಾಯೀಸ್

ಹೌಸಿಂಗ್ ಸೊಸೈಟಿಗೆ (ಸೊಸೈಟಿ) ಸೇರಿದ್ದ 89 ಎಕರೆ 15 ಗುಂಟೆಗಳನ್ನು ಮತ್ತು ಓರ್ವ ಖಾಸಗಿಯವರಿಗೆ ಸೇರಿದ್ದ 43 ಎಕರೆ 27 ಗುಂಟೆಗಳನ್ನು ಒಳಗೊಂಡಿತ್ತು.

ಸೊಸೈಟಿಯ ಮನವಿಯ ಆಧಾರದ ಮೇಲೆ ಸರ್ಕಾರವು ಅವರ ಭೂಮಿಯನ್ನು, ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಿ ಕೈಗಾರಿಕಾ ಪ್ರದೇಶದೊಂದಿಗೆ ಸಮೀಕರಿಸಬೇಕೆಂಬ ಷರತ್ತಿನೊಂದಿಗೆ, ಸ್ವಾಧೀನದಿಂದ ಕೈಬಿಡಲು ಒಪ್ಪಿಕೊಂಡಿತು (ಮೇ 2007). ಅದೂ ಅಲ್ಲದೆ ಕೈಗಾರಿಕಾ ಪ್ರದೇಶದ ಯೋಜನೆಯನ್ನು ಪೂರ್ಣಗೊಳಿಸಲು ಅನುವಾಗುವಂತೆ ಸೊಸೈಟಿಯು ಬಡಾವಣೆಯ ಯೋಜನೆಯನ್ನು ಸಲ್ಲಿಸಬೇಕಿತ್ತು. ಆದರೆ ಜನವರಿ 2008ರಲ್ಲಿದ್ದಂತೆಯೂ ಸೊಸೈಟಿಯು ಬಡಾವಣೆಯ ಯೋಜನಾ ನಕ್ಷೆಯನ್ನು ಸಲ್ಲಿಸಲು ವಿಫಲವಾಯಿತು. ಈ ಮಧ್ಯೆ, 43 ಎಕರೆ 27 ಗುಂಟೆಗಳ ಮಾಲೀಕರಾದ ಖಾಸಗಿಯವರು ಉಚ್ಚ ನ್ಯಾಯಾಲಯದಿಂದ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವಂತೆ ಮಂಡಳಿಯನ್ನು ನಿರ್ದೇಶಿಸುವ ತಡೆಯಾಜ್ಞೆಯನ್ನು ತಂದರು. ಸೊಸೈಟಿ ಮತ್ತು ಖಾಸಗಿಯವರ ಮನವಿಯ ಮೇರೆಗೆ ಸರ್ಕಾರವು ಅವರುಗಳಿಗೆ ಸೇರಿದ್ದ 133 ಎಕರೆ 2 ಗುಂಟೆಗಳನ್ನು ಜುಲೈ 2009ರಲ್ಲಿ ಸ್ವಾಧೀನದಿಂದ ಕೈಬಿಟ್ಟಿತು. ತದನಂತರ ಖಾಸಗಿಯವರು ಅಕ್ಟೋಬರ್ 2009ರಲ್ಲಿ ಮೇಲ್ಮನವಿಯನ್ನು ಹಿಂಪಡೆದರು.

ತದನಂತರ ಸರ್ಕಾರವು 177 ಎಕರೆ 16 ಗುಂಟೆಗಳ ಉಳಿದ ಭೂಮಿಯನ್ನು ಸಹ, ಅದು ಒಂದು ಸಾಂದ್ರಿತ ಪ್ರದೇಶವಾಗದಿದ್ದರಿಂದ, ಸ್ವಾಧೀನದಿಂದ ಕೈಬಿಡಲು ನಿರ್ಧರಿಸಿತು (ಜುಲೈ 2010) ಮತ್ತು ಅದಕ್ಕಾಗಿ ಒಂದು ಪ್ರಸ್ತಾವನೆಯನ್ನು ಸಲ್ಲಿಸಲು ಮಂಡಳಿಗೆ ಸೂಚಿಸಿತು. ಮಂಡಳಿಯ ಪ್ರಸ್ತಾವನೆಯ ಮೇರೆಗೆ ಸರ್ಕಾರವು 177 ಎಕರೆ 16 ಗುಂಟೆಗಳನ್ನು ನವೆಂಬರ್ 2010ರಲ್ಲಿ ಸ್ವಾಧೀನದಿಂದ ಕೈಬಿಟ್ಟಿತು.

ಎಸ್‌ಎಲ್‌ಎಸ್‌ಡಬ್ಲ್ಯುಸಿಸಿ ಆ ಕೈಗಾರಿಕಾ ಪ್ರದೇಶದಲ್ಲಿ 22 ಕೈಗಾರಿಕೆಗಳಿಗೆ ಅವಶ್ಯಕವಿರುವ 178 ಎಕರೆ 20 ಗುಂಟೆಗಳ ಯೋಜನಾ ಪ್ರಸ್ತಾವಗಳನ್ನು ಅನುಮೋದಿಸಿತ್ತು ಎಂದು ಗಮನಿಸಲಾಯಿತು. ಸ್ವಾಧೀನದಿಂದ ಕೈಬಿಟ್ಟ ಪರಿಣಾಮವಾಗಿ ಕೈಗಾರಿಕಾ ಪ್ರದೇಶದ ಸ್ಥಾಪನೆಯು ಕಾರ್ಯಸಾಧ್ಯ ವಾಗಲಿಲ್ಲವಾಗಿ ಪ್ರಸ್ತಾವಿಕ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ಯಮಿಗಳ ಆಸಕ್ತಿಯು ಕುಂಠಿತವಾಯಿತು. ಅದೂ ಅಲ್ಲದೆ ಸ್ವಾಧೀನದಿಂದ ಕೈಬಿಡುವ ಸರ್ಕಾರದ ನಿರ್ಧಾರವನ್ನು, ಅದು ಪ್ರದೇಶದ ಸಾಂದ್ರತೆಯಲ್ಲಿ ಪರಿಣಾಮ ಬೀರುತ್ತದೆ ಎಂಬ ಅಂಶವನ್ನು ಪರಿಗಣಿಸದೇ, ಸಾಕಷ್ಟು ಕಾರ್ಯತತ್ಪರತೆ ಇರಲಿಲ್ಲ ಮತ್ತು ಎಸ್‌ಎಲ್‌ಎಸ್‌ಡಬ್ಲ್ಯುಸಿಸಿ ನೀಡಿದ್ದ ಅನುಮತಿಯನ್ನೂ ಸಹ ಕಡೆಗಣಿಸಿತು.

### 3.7.5 ಸರ್ಕಾರವು ಅಂತಿಮ ಅಧಿಸೂಚನೆಯ ಮೊದಲೇ ಅಸಮರ್ಥನೀಯವಾಗಿ ಭೂಮಿಯನ್ನು ಸ್ವಾಧೀನದಿಂದ ಕೈಬಿಟ್ಟಿತು

ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕನ್ನು ಸ್ಥಾಪಿಸಲು ಸರ್ಕಾರವು ಹೊರಡಿಸಿದ 869 ಎಕರೆ 9 ಗುಂಟೆಗಳನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಾಥಮಿಕ ಅಧಿಸೂಚನೆಯು (ಡಿಸೆಂಬರ್ 2006) ಹೂವಿನಾಯಕನಹಳ್ಳಿ ಗ್ರಾಮದ ಸರ್ವೆ ನಂಬರ್ 120 (8 ಎಕರೆ) ಮತ್ತು 121ರಲ್ಲಿ (7 ಎಕರೆ 6 ಗುಂಟೆ) 15 ಎಕರೆ 6 ಗುಂಟೆಗಳನ್ನು ಹಾಗೂ ಸರ್ವೆನಂಬರ್ 128ರಲ್ಲಿ 3 ಎಕರೆಗಳನ್ನು ಒಳಗೊಂಡಿತ್ತು.

ಸರ್ವೆ ನಂಬರ್ 120 ಮತ್ತು 121ರಲ್ಲಿರುವ ಭೂಮಿಯನ್ನು ತಾನು ಖರೀದಿಸಿರುವುದಾಗಿಯೂ ಮತ್ತು ರೈಲ್ವೇ ಮಂತ್ರಾಲಯದ ಅನುಮತಿಯೊಂದಿಗೆ ಕೆಲವು ಘಟಕಗಳ ತಯಾರಿಸಲು ಕೈಗಾರಿಕೆಯನ್ನು ಸ್ಥಾಪಿಸುವ ಯೋಜನೆಯೊಂದಿಗೆ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಬದಲಿಸಿರುವುದಾಗಿ ತಿಳಿಸುತ್ತಾ ಆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದಿರಲು ಒಂದು ಕಂಪನಿಯು ಮುಖ್ಯ ಮಂತ್ರಿಯವರಿಗೆ ಮನವಿ ಮಾಡಿತು (ಅಕ್ಟೋಬರ್ 2005). ಆದರೆ ಈ ಭೂಮಿಯನ್ನು ಡಿಸೆಂಬರ್ 2006ರಲ್ಲಿ ಹೊರಡಿಸಿದ ಪ್ರಾಥಮಿಕ ಅಧಿಸೂಚನೆಯಲ್ಲಿ ಸೇರಿಸಲಾಗಿತ್ತು. ಕಂಪನಿಯ ಸಲ್ಲಿಸಿದ ಆಕ್ಷೇಪಣೆಯನ್ನು ಎಸ್‌ಎಲ್‌ಏಓರವರು ಕೆಳಗಿನ ಕಾರಣಗಳಿಂದ ತಿರಸ್ಕರಿಸಿದರು (ನವೆಂಬರ್ 2007); (1) ಸರ್ವೆ ನಂಬರ್ 120ರಲ್ಲಿ 4 ಎಕರೆಗಳನ್ನು ವಸತಿ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದ್ದರೂ ಸಹ ಯಾವುದೇ ಅಭಿವೃದ್ಧಿಯಾಗಿರುವುದಿಲ್ಲ, ಮತ್ತು (2) ಈ ಭೂಮಿಯು ಪ್ರಸ್ತಾವಿಕ ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ನ ಮಧ್ಯಭಾಗದಲ್ಲಿದ್ದಿತು. ಸರ್ಕಾರದ ನಿರ್ದೇಶನಗಳ ಪ್ರಕಾರ (ಜನವರಿ 2008)

ಎಸ್‌ಎಲ್‌ಎಓ ಮಾರ್ಚ್ 2008ರಲ್ಲಿ ಸ್ಥಳದ ಪರಿಶೀಲನೆ ನಡೆಸಿ ಈ ಭೂಮಿಯಲ್ಲಿ ಯಾವುದೇ ಅಭಿವೃದ್ಧಿಯಾಗಿರುವುದಿಲ್ಲ ಎಂಬುದನ್ನು ಖಚಿತಪಡಿಸಿದರು. ಸ್ವಾಧೀನದಿಂದ ಕೈಬಿಡಲು ನಿರ್ಧರಿಸಿರುವುದರಿಂದ ಇವುಗಳನ್ನು ಅಂತಿಮ ಅಧಿಸೂಚನೆಯಲ್ಲಿ ಸೇರಿಸದಿರಲು ಸರ್ಕಾರವು ಸಿಇಓರವನ್ನು ನಿರ್ದೇಶಿಸಿತು (ಏಪ್ರಿಲ್ 2008). ಎಸ್‌ಎಲ್‌ಎಓರವರ ವರದಿಯನ್ನು ಕಡೆಗಾಣಿಸಿ ಈ ಮೂರು ಸರ್ವೆನಂಬರ್‌ಗಳ 18 ಎಕರೆ 6 ಗುಂಟೆಗಳನ್ನು ಸರ್ಕಾರವು ಅಂತಿಮವಾಗಿ ಸ್ವಾಧೀನದಿಂದ ಕೈಬಿಟ್ಟಿತು (ಏಪ್ರಿಲ್ 2008).

ಸರ್ವೆನಂಬರ್ 120 ಮತ್ತು 121ರಲ್ಲಿರುವ ಭೂಮಿಯ ಆರ್‌ಟಿಸಿಗಳು ಇಬ್ಬರು ವ್ಯಕ್ತಿಗಳಿಗೆ ಸೇರಿದ್ದವು ಮತ್ತು ಎರಡು ಸರ್ವೆನಂಬರ್‌ಗಳಲ್ಲಿನ ಭೂಮಿಯನ್ನು ಸ್ವಾಧೀನದಿಂದ ಕೈಬಿಡುವಂತೆ ಮನವಿ ಮಾಡಿದ್ದ ಕಂಪನಿಯ ಹೆಸರಲ್ಲಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸರ್ವೆನಂಬರ್ 120ರಲ್ಲಿ 8 ಎಕರೆಗಳಿಗೆ ಪ್ರತಿಯಾಗಿ ಕೇವಲ 4 ಎಕರೆಗಳನ್ನು ಮಾತ್ರ ವಸತಿಗೋಸ್ಕರ ಬದಲಾವಣೆ ಮಾಡಲಾಗಿತ್ತು. ಮಂಡಳಿಯು ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ಗಾಗಿ ಬೇರೊಂದು ಗ್ರಾಮದಲ್ಲಿ 59 ಎಕರೆ 14 ಗುಂಟೆಗಳ ಪರಿವರ್ತಿತ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವುದನ್ನು ಮತ್ತು ಪರಿವರ್ತನೆಗಾಗಿ ಎಕರೆಗೆ ರೂ.2 ಲಕ್ಷ ಹೆಚ್ಚುವರಿ ಪರಿಹಾರವನ್ನೂ ಸಹ ಪಾವತಿಸಿರುವುದನ್ನು ಸಹ ಗಮನಿಸಲಾಯಿತು. ಹೀಗೆ, ಪ್ರಸ್ತಾವಿತ ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ನ ಮಧ್ಯಭಾಗಲ್ಲಿದ್ದರೂ ಸಹ ಸರ್ವೆನಂಬರ್ 120ರಲ್ಲಿನ ಒಂದು ಭಾಗವನ್ನು ಈಗಾಗಲೇ ಪರಿವರ್ತಿಸಲಾಗಿದೆ ಎನ್ನುವುದು ಸರ್ವೆನಂಬರ್ 120 ಮತ್ತು 121ರಲ್ಲಿನ ಇಡೀ ಭೂಮಿಯನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು ಸರ್ಕಾರಕ್ಕೆ ನ್ಯಾಯಸಮ್ಮತ ಕಾರಣವಾಗಿರಲಿಲ್ಲ.

ಸರ್ವೆ ನಂಬರ್ 128ರ 3ಎಕರೆ ಭೂಮಿಗೆ ಸಂಭಂದಪಟ್ಟಂತೆ, ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವ ಯಾವುದೇ ಕೋರಿಕೆಗಳೂ ದಾಖಲೆಗಳಲ್ಲಿ ಲಭ್ಯವಿರಲಿಲ್ಲವಾದ್ದರಿಂದ ಮತ್ತು ಮಂಡಳಿಯು ಈ ಸಂಬಂಧವಾಗಿ ಯಾವುದೇ ಪ್ರಸ್ತಾವಗಳನ್ನು ಕಳುಹಿಸಿರದಿದ್ದರಿಂದ, ಭೂಮಿಗಳನ್ನು ಸರ್ಕಾರವು ತನಗೇ ತಾನೇ ನಾಲ್ವರು ವ್ಯಕ್ತಿಗಳ ಪರವಾಗಿ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿತು. ಭೂ ಮಾಲೀಕರು ಮುಖ್ಯಮಂತ್ರಿಯವರಿಗೆ ಮಾಡಿದ ಕೋರಿಕೆಯ ಆಧಾರದ ಮೇರೆಗೆ ಸರ್ಕಾರವು ತನ್ನ ವಿವೇಚನೆಯಿಂದ ಭೂಮಿಗಳನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿತು ಎಂದು ವಿಶೇಷ ಜಿಲ್ಲಾಧಿಕಾರಿಯವರು ತಿಳಿಸಿದರು (ಡಿಸೆಂಬರ್ 2011).

ಹೀಗೆ ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ಗೆ ಭೂ ಸ್ವಾಧೀನವನ್ನು ಕೈಬಿಟ್ಟದ್ದು, ಯಾವುದೇ ಅರ್ಹತೆಯ ಆಧಾರದ ಮೇಲಿರಲಿಲ್ಲ

### 3.7.6 ಸರ್ಕಾರದ ಭೂ ಸ್ವಾಧೀನದಿಂದ ಕೈಬಿಡುವ ಸರಣಿಯು, ಸ್ವಾಧೀನ ಉದ್ದೇಶವನ್ನು ವಿಫಲಗೊಳಿಸಿತು

ಬೆಂಗಳೂರಿನಲ್ಲಿ ಒಂದು ಹೊಸ ಸಾಫ್ಟ್‌ವೇರ್ ಅಭಿವೃದ್ಧಿ ಸೌಲಭ್ಯವನ್ನು ಸ್ಥಾಪಿಸುವ ಇನ್‌ಫೋಸಿಸ್ ಟೆಕ್ನಾಲಜೀಸ್ ಲಿಮಿಟೆಡ್‌ನ (ಇನ್‌ಫೋಸಿಸ್) ಯೋಜನಾ ಪ್ರಸ್ತಾವವನ್ನು ಎಸ್‌ಹೆಚ್‌ಎಲ್‌ಸಿಸಿ ಅನುಮೋದಿಸಿತು (ಜನವರಿ 2001) ಮತ್ತು ಬೆಂಗಳೂರಿನ ಸರ್ಜಾಪುರ ರಸ್ತೆಯ ಪಕ್ಕದಲ್ಲಿ 100 ಎಕರೆ ಭೂಮಿಯನ್ನು ಮೂರು ತಿಂಗಳೊಳಗೆ ಸ್ವಾಧೀನಪಡಿಸಿಕೊಂಡು ಏಪ್ರಿಲ್ 2001ರೊಳಗೆ ಹಸ್ತಾಂತರಿಸ ಬೇಕೆಂದು ಮಂಡಳಿಗೆ ನಿರ್ದೇಶಿಸಿತು. ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೆಳ್ಳಂದೂರು, ಬೆಳ್ಳಂದೂರು ಅಮಾನಿಕೆರೆ, ದೇವರಬೀಸನಹಳ್ಳಿ ಮತ್ತು ಕರಿಯಮ್ಮನ ಅಗ್ರಹಾರ ಗ್ರಾಮಗಳಲ್ಲಿ 126 ಎಕರೆ 6 ಗುಂಟೆಗಳ ಸ್ವಾಧೀನಕ್ಕಾಗಿ ಸರ್ಕಾರವು ಪ್ರಾಥಮಿಕ ಅಧಿಸೂಚನೆ ಹೊರಡಿಸಿತು (ಡಿಸೆಂಬರ್ 2001).

ಭೂ ಸ್ವಾಧೀನಕ್ಕೆ ಮತ್ತು ಹಸ್ತಾಂತರಿಸುವುದಕ್ಕೆ ಎಸ್‌ಹೆಚ್‌ಎಲ್‌ಸಿಸಿ ನಿಗದಿಪಡಿಸಿದ್ದ ಸಮಯವನ್ನು ಸರ್ಕಾರವಾಗಲೀ ಅಥವಾ ಮಂಡಳಿಯಾಗಲೀ ಪಾಲಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸರ್ಕಾರವು ಅಂತಿಮ ಅಧಿಸೂಚನೆಯಿಂದ ಉಳಿದ ಭೂಮಿಯ ಸ್ವಾಧೀನವನ್ನು ಕೈಬಿಟ್ಟಿದ್ದರಿಂದ (ಫೆಬ್ರವರಿ ಮತ್ತು ಮೇ 2004) ಮಂಡಳಿಯು ಕೇವಲ 76 ಎಕರೆ 31 ಗುಂಟೆಗಳನ್ನು ಮಾತ್ರ ಸ್ವಾಧೀನಪಡಿಸಿಕೊಂಡಿತು. ಸ್ವಾಧೀನದಿಂದ ಕೈಬಿಟ್ಟ ನಂತರ ಸ್ವಾಧೀನದಿಂದ ಕೈಬಿಟ್ಟಿದ್ದರಿಂದ ಮತ್ತು ನೀರಾವರಿ ಕಾಲುವೆಗಳು, ಪಾರ್ಕ್‌ಗಳು, ಮುಂತಾದವುಗಳಿರುವುದರಿಂದ ಅಧಿಸೂಚಿಸಿದ ಭೂಮಿಯು ತುಂಡು-ತುಂಡಾಗಿದ್ದು ಒಂದು ಪ್ರತ್ಯೇಕ ಕ್ಯಾಂಪಸ್‌ನ ಅಭಿವೃದ್ಧಿಗೆ ಸೂಕ್ತವಾಗಿಲ್ಲವೆಂದು

ಇನ್‌ಫೋಸಿಸ್‌ಗೆ ತಿಳಿದುಬಂದಿತು. ಠೇವಣಿಯಾದ ರೂ.10.00 ಕೋಟಿಯನ್ನು ಇನ್‌ಫೋಸಿಸ್‌ನ ಬೇಡಿಕೆಯಂತೆ ಹಿಂತಿರುಗಿಸಲು (ಆಗಸ್ಟ್ 2004) ಮತ್ತು ಭೂಮಿಯನ್ನು ಒಂದು ಕೈಗಾರಿಕಾ ಪ್ರದೇಶವನ್ನಾಗಿ ಅಭಿವೃದ್ಧಿ ಪಡಿಸಲು ಮಂಡಳಿಯು ನಿರ್ಧರಿಸಿತು.

76 ಎಕರೆ 31 ಗುಂಟೆಗಳಿಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಿದ ನಂತರ ಹಲವಾರು ಭೂ ಮಾಲೀಕರು ಉಚ್ಚ ನ್ಯಾಯಾಲದಲ್ಲಿ ಮೇಲ್ಮನವಿಯನ್ನು ಸಲ್ಲಿಸಿ 41 ಎಕರೆ 7 ಗುಂಟೆಗಳ ಸ್ವಾಧೀನಕ್ಕೆ ತಡೆಯಾಜ್ಞೆಯನ್ನು ಪಡೆದರು. ಕೇವಲ 34 ಎಕರೆ 20 ಗುಂಟೆಗಳ ಭೂಮಿಯನ್ನು ಮಾತ್ರ ವಶಕ್ಕೆ ತೆಗೆದುಕೊಂಡು ಅದನ್ನು ನವೆಂಬರ್ 2004ರಲ್ಲಿ ಮಂಡಳಿಗೆ ವರ್ಗಾಯಿಸಲು ಮಾತ್ರ ಎಸ್‌ಎಲ್‌ಎಓ ರವರಿಗೆ ಸಾಧ್ಯವಾಯಿತು. ಆಗಸ್ಟ್ 2004ರ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಿದಂತೆ, ಒಂದು ಅಚ್ಚುಕಟ್ಟಾದ ಕೈಗಾರಿಕಾ ಪ್ರದೇಶದ ಅಭಿವೃದ್ಧಿಗೆ ಅನುವಾಗಲು ಸ್ವಾಧೀನದಿಂದ ಕೈಬಿಟ್ಟ ಆದೇಶವನ್ನು (ಫೆಬ್ರವರಿ ಮತ್ತು ಮೇ 2004) ರದ್ದು ಮಾಡುವಂತೆ ಸಿಇಓರವರು ಸರ್ಕಾರವನ್ನು ಕೋರಿದರು (ಅಕ್ಟೋಬರ್ 2004). ಮೊದಲಿನ ಸ್ವಾಧೀನದಿಂದ ಕೈಬಿಟ್ಟ ಆದೇಶವನ್ನು ರದ್ದುಪಡಿಸುವ ಬದಲು ಸರ್ಕಾರವು ಮೂರು ಸಂದರ್ಭಗಳಲ್ಲಿ (ಜೂನ್ 2006ರಲ್ಲಿ 15 ಎಕರೆ 30 ಗುಂಟೆ, ಸೆಪ್ಟಂಬರ್ 2007ರಲ್ಲಿ 2 ಎಕರೆ 19 ಗುಂಟೆ ಮತ್ತು ಮೇ 2008ರಲ್ಲಿ 41 ಎಕರೆ 30 ಗುಂಟೆ) 59 ಎಕರೆ 39 ಗುಂಟೆಗಳ ಮತ್ತಷ್ಟು ಭೂಮಿಯನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿತು. ಹೀಗೆ ಸ್ವಾಧೀನದಿಂದ ಕೈಬಿಟ್ಟ 59 ಎಕರೆ 39 ಗುಂಟೆಗಳಲ್ಲಿ ಮಂಡಳಿಯು ನವೆಂವರ್ 2004ರಲ್ಲಿ 34 ಎಕರೆ 20 ಗುಂಟೆಯನ್ನು ಆಗಲೇ ತನ್ನ ವಶಕ್ಕೆ ತೆಗೆದುಕೊಂಡಿತ್ತು. ಮಂಡಳಿಯ ಬಳಿ ಉಳಿದ 16 ಎಕರೆ 32 ಗುಂಟೆಗಳಲ್ಲಿ 12 ಎಕರೆ 20 ಗುಂಟೆಗಳನ್ನು, ಯಾರ ಯೋಜನಾ ಪ್ರಸ್ತಾವಗಳನ್ನು ಎಸ್‌ಎಲ್‌ಡಬ್ಲ್ಯುಸಿಸಿ ಅನುಮೋದಿಸಿತ್ತೋ ಆ ಭೂ ಮಾಲೀಕರಿಗೆ, ಹಂಚಲಾಯಿತು (ಅಕ್ಟೋಬರ್ 2005ರಿಂದ ಸೆಪ್ಟಂಬರ್ 2007ರವರೆಗೆ).

ಮಂಡಳಿಯು ವಶಪಡಿಸಿಕೊಂಡ 34 ಎಕರೆ 20 ಗುಂಟೆಗಳನ್ನು ಹಲವಾರು ಕಂಪನಿಗಳಿಗೆ, ಆ ಕಂಪನಿಗಳು ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳುವ ಮುನ್ನ ಭೂ ಮಾಲೀಕರಿಂದ ಒಪ್ಪಿಗೆ ಪಡೆಯಬೇಕು ಎನ್ನುವ ಷರತ್ತಿನ ಮೇಲೆ, ಹಂಚಿಕೆ ಮಾಡಲಾಗಿದೆ ಎಂದು ವಿಶೇಷ ಜಿಲ್ಲಾಧಿಕಾರಿಯವರು ತಿಳಿಸಿದರು (ಡಿಸೆಂಬರ್ 2011). ಕೇವಲ ಐದು ಕಂಪನಿಗಳು 12 ಎಕರೆ 20 ಗುಂಟೆಗಳಿಗೆ ಒಪ್ಪಿಗೆಯನ್ನು ಪಡೆಯಲು ಸಾಧ್ಯವಾಯಿತು ಮತ್ತು ಉಳಿದ ಭೂಮಿಯನ್ನು ಭೂ ಸ್ವಾಧೀನದಿಂದ ಕೈಬಿಡಲಾಯಿತು. ರೈತರಿಂದ ತೀವ್ರವಾದ ಪ್ರತಿಭಟನೆಗಳ ಕಾರಣದಿಂದ ಮತ್ತು ಭೂಮಿಗೆ ಅನುಮೋದಿತವಾದ ಪರಿಹಾರಧನವನ್ನು ಒಪ್ಪದಿದ್ದರಿಂದ ಈ ಮೇಲಿನ ಪರಿಸ್ಥಿತಿಯ ಉದ್ಭವಿಸಿತು ಎಂದೂ ಸಹ ತಿಳಿಸಲಾಯಿತು.

ಫೆಬ್ರವರಿ ಮತ್ತು ಮೇ 2004ರ ಸ್ವಾಧೀನದಿಂದ ಕೈಬಿಟ್ಟ ಅಧಿಸೂಚನೆಗಳು ಉಳಿದ ಭೂಮಿಯನ್ನು ಚದುರಿದಂತೆ ಮಾಡಿದವು ಮತ್ತು ಉಳಿದ ಭೂ ಮಾಲೀಕರಿಗೆ ಹೆಚ್ಚಿನ ಪರಿಹಾರಧನವನ್ನು ಒತ್ತಾಯಿಸಲು ಆಸ್ಪದ ನೀಡಿದವು ಎಂದು ಸಿಇಓರವರ ವರದಿಯು (ಅಕ್ಟೋಬರ್ 2004) ಸರ್ಕಾರಕ್ಕೆ ಒತ್ತಿ ಹೇಳಿದ ಕಾರಣ ಉತ್ತರವು ಒಪ್ಪಲರ್ಹವಲ್ಲ. ಹೀಗೆ ಸರ್ಕಾರದಿಂದ ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವ ಸರಣಿಯು ಯಾವ ಉದ್ದೇಶಕ್ಕಾಗಿ ಭೂ ಸ್ವಾಧೀನದ ಅಧಿಸೂಚನೆಯನ್ನು ಹೊರಡಿಸಲಾಗಿತ್ತೋ ಅದನ್ನೇ ಸೋಲಿಸಿದವು.

### 3.7.7 ಭೂಮಿಯನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವಲ್ಲಿ ಸರ್ಕಾರವು ಅನವಶ್ಯಕ ಅವಸರವನ್ನು ತೋರಿತು

ಡಾಬಸ್‌ಪೇಟ್ ಕೈಗಾರಿಕಾ ಪ್ರದೇಶ, ಘಟ್ಟ–4ನ್ನು ಸ್ಥಾಪಿಸಲು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಏಳು ಗ್ರಾಮಗಳಲ್ಲಿ 1,093 ಎಕರೆ 10 ಗುಂಟೆಗಳ ಭೂಮಿಯ ಸ್ವಾಧೀನಕ್ಕೆ ಸರ್ಕಾರವು ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿತು (ನವೆಂಬರ್ 2008). ಇದಕ್ಕೆ ಪ್ರತಿಯಾಗಿ ಸರ್ಕಾರವು ಚಂದನಹೊಸಹಳ್ಳಿ ಗ್ರಾಮದ ಸರ್ವೆನಂಬರ್ 22/2 ಮತ್ತು 22/3ರಲ್ಲಿನ 5 ಎಕರೆ 1 ಗುಂಟೆ ಭೂಮಿ ಸೇರಿದಂತೆ 891 ಎಕರೆ 10½ ಗುಂಟೆಗಳನ್ನು ಅಂತಿಮವಾಗಿ ಸ್ವಾಧೀನಪಡಿಸಿಕೊಂಡಿತು.

ಈ ಭೂಮಿಯ ಮಾಲೀಕರು, ತಮ್ಮ ಭೂಮಿಯ ಪಕ್ಕದಲ್ಲಿನ ಭೂಮಿಗಳನ್ನು ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾಗಿದೆ ಮತ್ತು ತಮ್ಮ ಜೀವನಾಧಾರವು ಕೃಷಿ ಆದಾಯದ ಮೇಲೆ ಅವಲಂಬಿತವಾಗಿದೆ ಎನ್ನುವ ಕಾರಣ ನೀಡಿ ಭೂಮಿಯನ್ನು ಸ್ವಾಧೀನದಿಂದ ಕೈಬಿಡುವಂತೆ ಬೃಹತ್

ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರಿಗೆ ಮನವಿ ಸಲ್ಲಿಸಿದರು (ಅಕ್ಟೋಬರ್ 2010). ಸರ್ಕಾರವು ಮಂಡಳಿಯಿಂದ ಒಂದು ವರದಿಯನ್ನು ಕೇಳಿದರೂ (ನವೆಂಬರ್ 2010) ಸಹ, ಮಂಡಳಿಯ ಪ್ರತಿಕ್ರಿಯೆಗೆ ಕಾಯದೇ ಅದು ಈ ಸರ್ವೆನಂಬರ್‌ಗಳಲ್ಲಿ 5 ಎಕರೆ 1 ಗುಂಟೆ ಭೂಮಿಯನ್ನು ತನಗೆ ತಾನೇ ಸ್ವಾಧೀನದಿಂದ ಕೈಬಿಟ್ಟಿತು (ಏಪ್ರಿಲ್ 2011). ಮಂತ್ರಿಗಳಿಗೆ ಮಾಲೀಕರು ನೀಡಿದ ವರದಿಯ ಆಧಾರದ ಮೇಲೆ ಭೂಸ್ವಾಧೀನದಿಂದ ಕೈಬಿಡಲು ಸರ್ಕಾರದ ಮಟ್ಟದಲ್ಲಿ ನಿರ್ಣಯ ತೆಗೆದುಕೊಳ್ಳಲಾಯಿತು ಎಂದು ವಿಶೇಷ ಜಿಲ್ಲಾಧಿಕಾರಿಯವರು ತಿಳಿಸಿದರು (ಡಿಸೆಂಬರ್ 2011).

### 3.7.8 ತಪ್ಪಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಕಾರಣ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವುದು ಅವಶ್ಯಕವಾಯಿತು

ಒಂದು ಅಗ್ರೋ-ಟೆಕ್ ಪಾರ್ಕ್‌ನ ಸ್ಥಾಪನೆಗಾಗಿ ಬೆಳಗಾಮ್ ಜಿಲ್ಲೆಯ ಹಲಗ ಮತ್ತು ಶಿಂಡಹೋಲಿ ಗ್ರಾಮಗಳಲ್ಲಿ 104 ಎಕರೆ 5 ಗುಂಟೆಗಳ ಭೂಮಿಯನ್ನು ಮಂಡಳಿಯು ಸ್ವಾಧೀನಪಡಿಸಿಕೊಂಡಿತು (ಮೇ 2002). ದರ ನಿಗದಿ ಸಮಿತಿಯು (ಪ್ರೈಸ್ ಅಡ್ವೈಸರೀ ಕಮಿಟಿ) ನಿಗದಿಪಡಿಸಿದ್ದ ಎಕರೆಗೆ ರೂ.5.34 ಲಕ್ಷ ಪರಿಹಾರಧನವನ್ನು ಅನುಮೋದಿಸಲು ಮಂಡಳಿಯು ನಿರಾಕರಿಸಿತು (ಮಾರ್ಚ್ 2004) ಮತ್ತು ಇದನ್ನು ಮತ್ತೆ ಪರಿಶೀಲಿಸುವಂತೆ ಸಿಇಓರವರನ್ನು ನಿರ್ದೇಶಿಸಿತು. ಸ್ವಾಧೀನಪಡಿಸಿಕೊಂಡ ಭೂಮಿಯ ಪರಿಶೀಲನೆ ನಡೆಸಿದ ಸಿಇಓರವರು ಕೆಳಕಂಡಂತೆ ಗಮನಿಸಿದರು (ಸೆಪ್ಟಂಬರ್ 2004):

- ಈಗ ಸ್ವಾಧೀನಪಡಿಸಿಕೊಂಡಿದ್ದ ಭೂಮಿಯು ಹಿಂದಿನ ಸಿಇಓರವರು ಆಗಸ್ಟ್ 2001ರಲ್ಲಿ ಸ್ವಾಧೀನಕ್ಕೆ ಗುರುತಿಸಿದ್ದ ಭೂಮಿಗಿಂತ ಬೇರೆಯಾಗಿದ್ದಿತು;
- ಭೂಮಿಗಳಿಗೆ ಯಾವುದೇ ರಸ್ತೆಗಳಿರಲಿಲ್ಲ ಮತ್ತು ಅಸ್ತಿತ್ವದಲ್ಲಿದ ರಸ್ತೆಗಳು ತುಂಬಾ ದೂರದಲ್ಲಿದ್ದವು, ಇದರಿಂದ ಸೂಕ್ತ ರಸ್ತೆಗಳ ನಿರ್ಮಾಣಕ್ಕೆ ಬೃಹತ್ ಬಂಡವಾಳದ ಅವಶ್ಯಕತೆಯಿದ್ದಿತು;
- ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸಲು ಈ ಭೂಮಿಗಳು ಯಾವುದೇ ರೀತಿಯಿಂದಲೂ ಸೂಕ್ತವಾಗಿರಲಿಲ್ಲ; ಮತ್ತು
- ಈ ಸ್ಥಳದಲ್ಲಿ ಕಲ್ಲುಗಣಿಗಾರಿಕೆ ಜಾರಿಯಲ್ಲಿದ್ದಿತು.

ಮಂಡಳಿಯ ಅಧಿಕಾರಿಗಳು ಭೂ ಮಾಲೀಕರೊಂದಿಗೆ ಒಳಸಂಚು ಮಾಡಿ ಸೂಕ್ತವಲ್ಲದ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದರು ಮತ್ತು ಆ ಭೂಮಿಯು ಎಕರೆಗೆ ಕೇವಲ ರೂ.10,000ದಿಂದ ರೂ.20,000 ವರೆಗೆ ಮಾತ್ರ ಬೆಲೆ ಬಾಳುತ್ತಿತ್ತು ಎಂದು ಸಿಇಓ ವರದಿ ಮಾಡಿದರು (ಸೆಪ್ಟಂಬರ್ 2004). ಆದ್ದರಿಂದ ಮಂಡಳಿಯು ಮೇ 2002ರಲ್ಲಿ ಸ್ವಾಧೀನಪಡಿಸಿಕೊಂಡಿದ್ದ 104 ಎಕರೆ 5 ಗುಂಟೆಗಳ ಒಟ್ಟು ಭೂಮಿಯನ್ನು ಸ್ವಾಧೀನದಿಂದ ಕೈಬಿಡಲು ನಿರ್ಧರಿಸಿತು (ನವೆಂಬರ್ 2004).

ಭೂ ಮಾಲೀಕರು ದರ ನಿಗದಿ ಸಮಿತಿಯು ನಿಗದಿಪಡಿಸಿದ್ದ ದರದಲ್ಲಿ ಪರಿಹಾರಧನವನ್ನು ಒತ್ತಾಯಿಸಿ ಉಚ್ಚ ನ್ಯಾಯಾಲಯದ ಮೊರೆ ಹೊಕ್ಕರು. ಉಚ್ಚ ನ್ಯಾಯಾಲಯವು ಮನವಿದಾರರಿಗೆ ಕಾನೂನು ಪ್ರಕ್ರಿಯೆಯ ವೆಚ್ಚವನ್ನು (ರೂ.45,000) ಪಾವತಿ ಮಾಡುವಂತೆ ಮಂಡಳಿಗೆ ನಿರ್ದೇಶಿಸುವುದಲ್ಲದೇ (ಜೂನ್ 2008) ಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಲ್ಲಿನ ತಪ್ಪು ಮತ್ತು ಒಪ್ಪುಗಳಿಂದ ಅವರುಗಳಿಗಾದ ನಷ್ಟಕ್ಕೆ ಪರಿಹಾರಧವನ್ನೂ ಸಹ ಪಾವತಿಸಬೇಕೆಂದು ಆದೇಶಿಸಿತು. ಮನವಿದಾರರು ಮಾಡಿರುವ ನಷ್ಟದ ಬೇಡಿಕೆಯ ಬಗ್ಗೆ ಅಧಿಕಾರವ್ಯಾಪ್ತಿಯಡಿಯ ಜಿಲ್ಲಾಧಿಕಾರಿಯವರ ಮೂಲಕ ಒಂದು ವಿಚಾರಣೆ ಕೂಡ ನಡೆಸಬೇಕೆಂದೂ ಸಹ ಸರ್ಕಾರಕ್ಕೆ ನಿರ್ದೇಶನವನ್ನು ನೀಡಲಾಯಿತು. ಆ ನಂತರ, ಅಕ್ಟೋಬರ್ 2008ರಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಸರ್ಕಾರವು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿತು. ನಷ್ಟಗಳ ಬೇಡಿಕೆಗಾಗಿನ ವಿಚಾರಣೆಯ ಸಂಬಂಧವಾಗಿ ಈ ವಿಷಯವು ಬೆಳಗಾಮ್ ಜಿಲ್ಲಾಧಿಕಾರಿಯವರಲ್ಲಿ ಇತ್ಯರ್ಥವಾಗದೇ ಉಳಿದಿದೆ ಎಂದು ವಿಶೇಷ ಜಿಲ್ಲಾಧಿಕಾರಿಯವರು ತಿಳಿಸಿದರು (ನವೆಂಬರ್ 2011).

ಹೀಗೆ, ಮಂಡಳಿಯು ಅಗ್ರೋ-ಟೆಕ್ ಪಾರ್ಕ್ ಸ್ಥಾಪನೆಗಾಗಿ ಅನುದ್ದೇಶಿತ ಮತ್ತು ಸೂಕ್ತವಲ್ಲದ ಭೂಮಿಯನ್ನು ಸ್ವಾಧಿನಪಡಿಸಿಕೊಳ್ಳುವಲ್ಲಿ ಕೊನೆಗೊಂಡಿತು ಮತ್ತು ಮಂಡಳಿಯ ಅಧಿಕಾರಿಗಳು ಮಾಡಿದ ತಪ್ಪನ್ನು ಸರಿಪಡಿಸಲು ಸರ್ಕಾರವು ಸ್ವಾಧೀನದಿಂದ ಭೂಮಿಯನ್ನು ಕೈಬಿಡಬೇಕಾಯಿತು.

# ಅಧ್ಯಾಯ 4
# ಪರಿಹಾರಧನದ ನಿರ್ಧಾರಣೆ

ಮಂಡಳಿಯು ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರಧನವನ್ನು ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದ ದರ ನಿಗದಿ ಸಮಿತಿಯು (ಪ್ರೈಸ್ ಅಡ್ವೈಸರಿ ಕಮಿಟಿ–ಪಿಎಸಿ) ನಿರ್ಧರಿಸುತ್ತದೆ. ಭೂ ಸ್ವಾಧೀನಕ್ಕಾಗಿ ಅಂತಿಮ ಅಧಿಸೂನೆಯನ್ನು ಜಾರಿ ಮಾಡಿದ ನಂತರ ಜಿಲ್ಲಾಧಿಕಾರಿಗಳು ಪಿಎಸಿ ಸಭೆಗಳನ್ನು ಕರೆಯುತ್ತಾರೆ. ಮುದ್ರಾಂಕ ಮತ್ತು ನೋಂದಣಿ ಇಲಾಖೆಯು ನಿಗದಿಪಡಿಸಿದ ಮತ್ತು ಸಂಬಂಧಿತ ಉಪನೋಂದಣಾಧಿಕಾರಿಗಳಿಂದ ಪಡೆದುಕೊಂಡ ಹಿಂದಿನ ಮೂರು ವರ್ಷಗಳ ಮಾರಾಟದ ವಿವರಗಳನ್ನು ಪಡೆದ ನಂತರ ಮಾರ್ಗದರ್ಶಿ ಮೌಲ್ಯವನ್ನು ಪಿಎಸಿ ಪರಿಗಣಿಸುತ್ತದೆಯಾದರೂ ಮಾಲೀಕರಿಗೆ ಪಾವತಿ ಮಾಡುವ ಪರಿಹಾರಧನವನ್ನು ಪರಸ್ಪರ ಒಪ್ಪಂದದ ಆಧಾರದ ಮೇಲೆ ಅಂತಿಮವಾಗಿ ಪಿಎಸಿ ನಿರ್ಧರಿಸುತ್ತದೆ. ಹಾಗೆ ನಿರ್ಧಾರ ಮಾಡಿದ ಪರಿಹಾರಧನವನ್ನು ಮಾರ್ಪಾಡು ಮಾಡಿ ಅಥವಾ ಮಾಡದೆಯೇ ಮಂಡಳಿಯು ಅನುಮೋದಿಸುತ್ತದೆ. ಹಾಗೆ ನಿರ್ಧಾರ ಮಾಡಿದ ಪರಿಹಾರಧನವನ್ನು ಒಪ್ಪದ ಭೂ ಮಾಲೀಕರು ಭೂ ಸ್ವಾಧೀನ ಅಧಿನಿಯಮ 1894ರ ಪರಿಚ್ಛೇದ 18ರ ಅಡಿಯಲ್ಲಿ ನ್ಯಾಯಾಲಯಕ್ಕೆ ದೂರು ಸಲ್ಲಿಸಬಹುದು.

## 4.1 ಭೂ ಪರಿಹಾರಧನವನ್ನು ನಿಗದಿಪಡಿಸುವಲ್ಲಿ ವಿಳಂಬ

ಕೆಐಎಡಿ ಅಧಿನಿಯಮದಡಿಯಲ್ಲಿ ಸ್ವಾಧೀನಕ್ಕಾಗಿ ಪ್ರಕಟವಾದ ಅಂತಿಮ ಅಧಿಸೂಚನೆಯ ನಂತರ ಭೂಮಿಯು ಸರ್ಕಾರದ ಸ್ವಾಧೀನದಲ್ಲಿರುತ್ತದೆ. ಆಸ್ತಿಯನ್ನು ಸ್ವಾಧೀನಪಡಿಸಿಕೊಂಡ ನಂತರ ಭೂ ಮಾಲೀಕರಿಗೆ ಪರಿಹಾರಧನವನ್ನು ಪಾವತಿಸಬೇಕು. ಆದರೆ ಕೆಐಎಡಿ ಅಧಿನಿಯಮವು ಪರಿಹಾರಧನದ ಪಾವತಿಯನ್ನೊಳಗೊಂಡಂತೆ ಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಯಾವುದೇ ಸಮಯವನ್ನು ನಿಗದಿಪಡಿಸಿಲ್ಲ. ಪರಸ್ಪರ ಒಪ್ಪಂದದ ಮೇರೆಗೆ ಪಿಎಸಿಯು ನಿಗದಿಪಡಿಸಿದ ಪರಿಹಾರಧನವು ಸಾಮಾನ್ಯವಾಗಿ ಪ್ರಸಕ್ತ ಮಾರುಕಟ್ಟೆ ದರವನ್ನು ಪರಿಗಣಿಸುವುದರಿಂದ ಪಿಎಸಿಯಿಂದ ಪರಿಹಾರಧನವನ್ನು ನಿಗದಿಪಡಿಸುವಲ್ಲಿನ ಯಾವುದೇ ವಿಳಂಬವು ಪ್ರಸಕ್ತ ಮಾರುಕಟ್ಟೆ ಬೆಲೆಗಳ (ಕಂಡಿಕೆ 4.2ರಲ್ಲಿ ಚರ್ಚಿಸಿರುವಂತೆ) ಆಧಾರದ ಮೇಲೆ ಮಾಲೀಕರು ಹೆಚ್ಚಿನ ಪರಿಹಾರಧನವನ್ನು ಒತ್ತಾಯಿಸುವ ಅಪಾಯವನ್ನು ಒಳಗೊಂಡಿರುತ್ತದೆ. 19 ರಲ್ಲಿ 7 ಯೋಜನೆಗಳಲ್ಲಿ ಪಿಎಸಿಯು, **ಕೋಷ್ಟಕ–4.1ರಲ್ಲಿ** ತೋರಿಸಿರುವಂತೆ, ಅಂತಿಮ ಅಧಿಸೂಚನೆಯ ಪ್ರಕಟಣೆಯ ದಿನದಿಂದ 11ರಿಂದ 57 ತಿಂಗಳುಗಳ ನಂತರವೂ ಪರಿಹಾರಧನವನ್ನು ನಿಗದಿಪಡಿಸದಿರುವುದನ್ನು ಗಮನಿಸಲಾಯಿತು.

**ಕೋಷ್ಟಕ–4.1 : ಪಿಎಸಿಯಿಂದ ಪರಿಹಾರಧನವನ್ನು ನಿಗದಿಪಡಿಸುವಲ್ಲಿ ವಿಳಂಬ**

| ಕೈಗಾರಿಕಾ ಪ್ರದೇಶದ ಹೆಸರು | ಸ್ವಾಧೀನಪಡಿಸಿಕೊಂಡ ಭೂಮಿಯ ವಿಸ್ತಾರ (ಎಕರೆ–ಗುಂಟೆ) | ಪ್ರಾಥಮಿಕ ಅಧಿಸೂಚನೆಯ ದಿನಾಂಕ | ಅಂತಿಮ ಅಧಿಸೂಚನೆಯ ದಿನಾಂಕ | ಡಿಸೆಂಬರ್ 2011ರಲ್ಲಿದ್ದಂತೆ ವಿಳಂಬ (ತಿಂಗಳುಗಳಲ್ಲಿ) |
|---|---|---|---|---|
| ಅಪೆರಲ್ ಪಾರ್ಕ್ 3ನೇ ಹಂತ | 753–09 | 10.05.07 | 13.12.07 | 48 |
| ಕೆಳಕೋಟೆ | 72–31 | 11.12.09 | 14.06.10 | 18 |
| ಡಾಬಸ್‌ಪೇಟೆ 3ನೇ ಹಂತ | 478–11 | 02.08.06 | 21.09.10 | 15 |
| ಡಾಬಸ್‌ಪೇಟೆ 4ನೇ ಹಂತ | 891–10 | 08.12.08 | 27.05.10 | 19 |
| ಹಾರೋಹಳ್ಳಿ 3ನೇ ಹಂತ | 1,612–08 | 25.10.06 | 01.04.07 | 57 |
| ವಸಂತ ನರಸಾಪುರ 2ನೇ ಘಟ್ಟ, ತುಮಕೂರು | 1,492–16 | 04.12.09 | 23.07.10 | 17 |
| ಗೌರಿಬಿದನೂರು | 453–14 | 29.03.10 | 12.01.11 | 11 |

(ಆಧಾರ: ಸರ್ಕಾರವು ಹೊರಡಿಸಿದ ಗೆಜೆಟ್ ಅಧಿಸೂಚನೆಯ ಆಧಾರದ ಮೇಲೆ ಲೆಕ್ಕಪರಿಶೋಧನೆಯು ಸಂಕಲಿಸಿದ್ದು)

ಅಪೆರಲ್ ಪಾರ್ಕ್ 3ನೇ ಹಂತ ಮತ್ತು ಹಾರೋಹಳ್ಳಿ 3ನೇ ಹಂತದ ಸಂಬಂಧವಾಗಿ ಪರಿಹಾರಧನ ನಿಗದಿಪಡಿಸಲು ಪಿಎಸಿ ಸಭೆಗಳನ್ನು ಕರೆಯಲು 48ರಿಂದ 57 ತಿಂಗಳುಗಳ ವಿಳಂಬವಿದ್ದಿತು. ಈ ವಿಳಂಬಗಳು ನಿಗದಿಪಡಿಸುವ ಪರಿಹಾರಧನ ಮೊತ್ತದ ಮೇಲೆ ಪ್ರತಿಕೂಲವಾಗಿ ಪ್ರಭಾವ ಬೀರುತ್ತವೆ. ಸ್ವಾಧೀನ ಪ್ರಕ್ರಿಯೆಯ ಪ್ರತಿಯೊಂದು ಘಟ್ಟಕ್ಕೂ ಸಮಯವನ್ನು ನಿಗದಿಪಡಿಸುವ ಮಾರ್ಗದರ್ಶಿ ಸೂತ್ರಗಳ ಅನುಪಸ್ಥಿತಿಯು ಹೊಣೆಗಾರಿಕೆಯನ್ನು ಕಡಿಮೆಗೊಳಿಸುತ್ತದೆ ಮತ್ತು ಕೈಗಾರಿಕಾ ಪ್ರದೇಶದಲ್ಲಿ

ತಮ್ಮನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಉದ್ಯಮಿಗಳಿಗೆ ಹೆಚ್ಚುವರಿ ಹಣಕಾಸು ಹೊರೆ ಬೀಳುವುದನ್ನು ಲೆಕ್ಕಿಸದೇ ಮಂಡಳಿಯು ಪಿಎಸಿಯು ನಿಗದಿಪಡಿಸಿದ ದರದಲ್ಲಿ ಭೂಮಿಗಳನ್ನು ಸ್ವಾಧೀನಪಡಿಸಿಕೊಂಡಿತು. ಹೀಗೆ ಸಮಂಜಸವಾದ ಮತ್ತು ಕೈಗೆಟುಕುವ ಬೆಲೆಗಳಲ್ಲಿ ಮೂಲ ಸೌಲಭ್ಯಗಳನ್ನು ಒದಗಿಸಿ ಕೈಗಾರಿಕಾ ಪ್ರಗತಿಯನ್ನು ಉತ್ತೇಜಿಸುವುದರ ಜವಾಬ್ದಾರಿಯಿಂದ ಮಂಡಳಿಯು ದೂರ ಉಳಿಯಿತು.

## 4.2 ಪಿಎಸಿ ನಿಗದಿಪಡಿಸಿದ ಕಡಿಮೆ ಪರಿಹಾರಧನವು ಒಂದು ಕಂಪನಿಯು ಕಡಿಮೆ ದರದಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸಹಾಯ ಮಾಡಿತು

ಮಂಡಳಿಯು ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಹೋಬಳಿಯಲ್ಲಿ ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್ ಮತ್ತು ಏರೋಸ್ಪೇಸ್ ಕಾಂಪೋನೆಂಟ್ಸ್ & ಇನಫರ್ಮೇಶನ್ ಪಾರ್ಕ್‌ಗಳನ್ನು ಏಕಕಾಲದಲ್ಲಿ ಸ್ಥಾಪಿಸಲು ಪ್ರಾರಂಭಿಸಿತು ಮತ್ತು ಈ ಯೋಜನೆಗಳು ಅಕ್ಕಪಕ್ಕದಲ್ಲಿದ್ದವು. ಈ ಯೋಜನೆಗಳಿಗೆ ಬೇಕಿದ್ದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರವು ಆಗಸ್ಟ್ 2006 ಮತ್ತು ಜನವರಿ 2007ರ ನಡುವೆ ಪ್ರಾಥಮಿಕ ಅಧಿಸೂಚನೆಗಳನ್ನು ಹೊರಡಿಸಿತು. ಆದರೆ ಈ ಯೋಜನೆಗಳಿಗೆ ಅಂತಿಮ ಅಧಿಸೂಚನೆಯನ್ನು ಏಕಕಾಲದಲ್ಲಿ ಹೊರಡಿಸಲಿಲ್ಲ ಮತ್ತು **ಕೋಷ್ಟಕ–4.3ರಲ್ಲಿ** ತೋರಿಸಿದಂತೆ ವಿಳಂಬಗಳಿದ್ದವು:

**ಕೋಷ್ಟಕ–4.3: ಅಂತಿಮ ಅಧಿಸೂಚನೆಗಳನ್ನು ಹೊರಡಿಸುವಲ್ಲಿ ವಿಳಂಬ**

| | ಐಟಿ ಪಾರ್ಕ್ | ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್ (1ನೇ ಹಂತ) | ಏರೋಸ್ಪೇಸ್ ಕಾಂಪೋನೆಂಟ್ಸ್ | ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್ (2ನೇ ಹಂತ) |
|---|---|---|---|---|
| ಅಗತ್ಯವಿದ್ದ ಭೂಮಿಯ ವಿಸ್ತಾರ | 1028 ಎಕರೆ 19½ ಗುಂಟೆ | 450 ಎಕರೆ 5 ಗುಂಟೆ | 918 ಎಕರೆ 16 ಗುಂಟೆ | 869 ಎಕರೆ 9 ಗುಂಟೆ |
| ಪ್ರಾಥಮಿಕ ಅಧಿಸೂಚನೆಯ ದಿನಾಂಕ | 07.08.2006 | 03 .11.2006 | 09.01.2007 | 16.12.2006 |
| ಅಂತಿಮ ಅಧಿಸೂಚನೆಯ ದಿನಾಂಕ | 25.09.2008 | 07.05.2007 | 15.05.2007 | 09 .04.2008 |
| ಪಿಎಸಿ ಸಭೆ ಸೇರಿದ ದಿನಾಂಕ | 24.12.2008 | 21.11.2007 | 25.03.2008 | 25.09.2008 |
| ಒಂದು ಎಕರೆಗೆ ನೀಡಿದ ಪರಿಹಾರಧನ (ಲಕ್ಷ ರೂ.ಗಳಲ್ಲಿ) | 62 | 31 (ವಿಮಾನ ನಿಲ್ದಾಣದ ರಸ್ತೆಗೆ ಹೊಂದಿಕೊಂಡ ಭೂಮಿಗಳಿಗೆ ಮಾತ್ರ 40) | ಗ್ರಾಮಾಂತರ ಗ್ರಾಮಗಳಿಗೆ 55<br>ನಗರ ಗ್ರಾಮಗಳಿಗೆ 57 | ಎರಡು ಗ್ರಾಮಗಳಿಗೆ 60 ಮತ್ತು ಒಂದು ಗ್ರಾಮಕ್ಕೆ 70 |

(ಆಧಾರ: ಸರ್ಕಾರವು ಹೊರಡಿಸಿದ ಗೆಜೆಟ್ ಅಧಿಸೂಚನೆ ಮತ್ತು ಮಂಡಳಿಯು ನೀಡಿದ ಮಾಹಿತಿ)

ವಿಳಂಬಗಳ ಕಾರಣದಿಂದ ಪಿಎಸಿಯ ಸಭೆಗಳೂ ಕೂಡ ವಿಳಂಬವಾದವು. ವಿಳಂಬವು ಪರಸ್ಪರ ಒಪ್ಪಂದದ ಆಧಾರದ ಮೇಲೆ ನಿಗದಿಪಡಿಸಿದ ಪರಿಹಾರಧನ ಮೇಲೂ ಅನುಕ್ರಮವಾಗಿ ಹೆಚ್ಚಾಗುವಂತೆ ಪರಿಣಾಮ ಬೀರಿತ್ತು. ಈ ಮೂರು ಯೋಜನೆಗಳು ಪರಸ್ಪರ ಹೊಂದಿಕೊಂಡಿದ್ದರೂ ಸಹ, ಯೋಜನೆಗೆ ಭೂಮಿ ಕಳೆದುಕೊಂಡ ರೈತರು ಪಕ್ಕದ ಇನ್ನೊಂದು ಯೋಜನೆಗೆ ನಿಗದಿಪಡಿಸಿದ ಪರಿಹಾರಧನಕ್ಕಿಂತ ಹೆಚ್ಚಿನ ಪರಿಹಾರಧನಕ್ಕೆ ಒತ್ತಾಯಿಸಿದರು. ಮೊದಲು ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ಗೆ (ಹಂತ–1) ನಿಗದಿಪಡಿಸಿದ ಪರಿಹಾರಧನವು ರೂ.31 ಲಕ್ಷವಾಗಿತ್ತು, ನಂತರ ಏರೋಸ್ಪೇಸ್ ಕಾಂಪೋನೆಂಟ್ಸ್‌ಗೆ ರೂ.55 ಲಕ್ಷದಿಂದ ರೂ.57 ಲಕ್ಷಗಳಾಗಿದ್ದಿತು, ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ಗೆ (ಹಂತ–2) ರೂ.60 ಲಕ್ಷದಿಂದ ರೂ.70 ಲಕ್ಷಗಳಾಗಿದ್ದಿತು ಮತ್ತು ಐಟಿ ಪಾರ್ಕ್‌ಗೆ ರೂ.62 ಲಕ್ಷಗಳಾಗಿದ್ದಿತು. ಹೀಗೆ, ಈ ಯೋಜನೆಗಳಿಗೆ ಪ್ರಾಥಮಿಕ ಅಧಿಸೂಚನೆಯನ್ನು ಒಂದೇ ಅವಧಿಯಲ್ಲಿ ಹೊರಡಿಸಿದ್ದರೂ ಮತ್ತು ಯೋಜನೆಗಳು ಪರಸ್ಪರ ಹೊಂದಿಕೊಂಡಿದ್ದರೂ ಸಹ ಅಂತಿಮ ಅಧಿಸೂಚನೆಯನ್ನು ಹೊರಡಿಸುವಲ್ಲಿನ ವಿಳಂಬವು ಪಿಎಸಿ ಸಭೆಗಳನ್ನು ಕರೆಯುವುದನ್ನು ವಿಳಂಬಿಸಿತು ಮತ್ತು ವಿವಿಧ ಯೋಜನೆಗಳಿಗೆ ವಿವಿಧ ಪರಿಹಾರಧನವನ್ನು ನಿಗದಿಪಡಿಸುವುದನ್ನು ಅನುಕೂಲಿಸಿತು.

ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ನ್ನು ಸ್ಥಾಪಿಸಲು ಬೆಂಗಳೂರು ಉತ್ತರ ತಾಲ್ಲೂಕಿನ ಬಂಡಿಕೊಡಿಗೇಹಳ್ಳಿ ಸೇರಿದಂತೆ ನಾಲ್ಕು ಗ್ರಾಮಗಳಲ್ಲಿ 1,442 ಎಕರೆ 7 ಗುಂಟೆಗಳ ಸ್ವಾಧೀನಕ್ಕೆ ಮಂಡಳಿಯು ಸರ್ಕಾರಕ್ಕೆ ಪ್ರಸ್ತಾವಗಳನ್ನು ಕಳುಹಿಸಿತು (ನವೆಂಬರ್ 2005). ಅಧಿಸೂಚನೆಯನ್ನು ಹೊರಡಿಸಲು ಒಂದು ವರ್ಷ ತೆಗೆದುಕೊಂಡರೂ, ಒಂದು ಗ್ರಾಮದಲ್ಲಿ (ಬಂಡಿಕೊಡಿಗೇಹಳ್ಳಿ) ಕೇವಲ

450 ಎಕರೆ 5 ಗುಂಟೆಗಳಿಗಾಗಿ ಸರ್ಕಾರವು ನವೆಂಬರ್ 2006ರಲ್ಲಿ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿತು. ಇದರ ನಂತರ ಮೇ 2007ರಲ್ಲಿ ಅಂತಿಮ ಅಧಿಸೂಚನೆಯಾಗಿ ಡಿಸೆಂಬರ್ 2007ರಲ್ಲಿ ಪಿಎಸಿ ಸಭೆ ಕರೆದು ಒಂದು ಎಕರೆಗೆ ರೂ.31 ಲಕ್ಷ ಪರಿಹಾರಧನವನ್ನು (ವಿಮಾನನಿಲ್ದಾಣಕ್ಕೆ ಹೊಂದಿಕೊಂಡ ಭೂಮಿಗೆ ಎಕರೆಗೆ ರೂ.40 ಲಕ್ಷ) ನಿಗದಿಪಡಿಸಿತು. ಉಳಿದ ಮೂರು ಗ್ರಾಮಗಳಿಗೆ ಪ್ರಾಥಮಿಕ ಅಧಿಸೂಚನೆಯನ್ನು ಡಿಸೆಂಬರ್ 2006ರಲ್ಲಿ ಹೊರಡಿಸಲಾಗಿದ್ದರೂ ಸಹ ಅಂತಿಮ ಅಧಿಸೂಚನೆಯನ್ನು 16 ತಿಂಗಳುಗಳ ವಿಳಂಬದ ನಂತರ ಏಪ್ರಿಲ್ 2008ರಲ್ಲಿ ಹೊರಡಿಸಲಾಯಿತು. ಪಿಎಸಿಯು ಬಾಗಲೂರು ಗ್ರಾಮಕ್ಕೆ ಎಕರೆಗೆ ರೂ.70 ಲಕ್ಷಗಳ ಮತ್ತು ಹೂವಿನಾಯಕನಹಳ್ಳಿ ಹಾಗೂ ಮಹದೇವಕೊಡಿಗೇಹಳ್ಳಿ ಗ್ರಾಮಗಳಿಗೆ ರೂ.60 ಲಕ್ಷಗಳ ಹೆಚ್ಚಿನ ಪರಿಹಾರಧನವನ್ನು ನಿಗದಿಪಡಿಸಿತು. ಸಿಬ್ಬಂದಿಯ ಕೊರತೆ ಮತ್ತು ತಾಂತ್ರಿಕ ಅಭಿಪ್ರಾಯದ ಕಾರಣಗಳಿಂದ ಪ್ರಕ್ರಿಯೆಯು ವಿಳಂಬವಾಯಿತು ಎಂದು ಎಸ್‌ಎಲ್‌ಎಓ-2 (ಸೆಪ್ಟಂಬರ್ 2011) ತಿಳಿಸಿದರು. ತಮ್ಮ ಭೂಮಿಗಳಿಗೆ ಮಾರುಕಟ್ಟೆ ದರಗಳನ್ನು ಒತ್ತಾಯಿಸಿ ರೈತರು ಮಾಡಿದ ಪ್ರಬಲವಾದ ಪ್ರತಿಭಟನೆಯ ದೃಷ್ಟಿಯಿಂದ ಹೆಚ್ಚಿನ ಪರಿಹಾರಧನ ನೀಡುವುದು ಅನಿವಾರ್ಯವಾಯಿತು ಎಂದು ಸಹ ತಿಳಿಸಲಾಯಿತು. ರೈತರು ಬೇಡಿಕೆಯ ಕಾರಣ ಪಕ್ಕದ ಗ್ರಾಮಗಳ ಭೂಮಿಗೆ ಒಂಬತ್ತು ತಿಂಗಳೊಳಗೆ ಅಂತಹ ಹೆಚ್ಚಿನ ಪರಿಹಾರಧನವನ್ನು ನೀಡುವ ಕ್ರಮವು ಸಮರ್ಥನೀಯವಲ್ಲವಾದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

ಬಂಡಿಕೊಡಿಗೇಹಳ್ಳಿ ಗ್ರಾಮದ 325 ಎಕರೆ ಪ್ರದೇಶದಲ್ಲಿ ಎಸ್‌ಇಜ಼ಡ್ ಅನ್ನು ಸ್ಥಾಪಿಸುವ ಇಟಾಸ್ಕಾ ಸಾಫ್ಟ್‌ವೇರ್ ಡೆವೆಲಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್‌ನ ಯೋಜನಾ ಪ್ರಸ್ತಾವವನ್ನು ಎಸ್‌ಹೆಚ್‌ಎಲ್‌ಸಿಸಿ ಅನುಮೋದಿಸಿದ್ದನ್ನು (ಆಗಸ್ಟ್ 2006) ಲೆಕ್ಕಪರಿಶೋಧನೆಯು ಗಮನಿಸಿತು. ಯೋಜನಾ ಪ್ರಸ್ತಾವವನ್ನು ಸಲ್ಲಿಸುವಾಗ ಕಂಪನಿಯು ಎಸ್‌ಇಜ಼ಡ್ ಅನ್ನು ಸ್ಥಾಪಿಸಲು ಬಂಡಿಕೊಡಿಗೇಹಳ್ಳಿ ಗ್ರಾಮದ ಸರ್ವೆನಂಬರ್‌ಗಳನ್ನೂ ಸಹ ಗುರುತಿಸಿತ್ತು. 450 ಎಕರೆ 5 ಗುಂಟೆಗಳ ಸ್ವಾಧೀನಕ್ಕೆ ಹೊರಡಿಸಿದ ಪ್ರಾಥಮಿಕ ಅಧಿಸೂಚನೆಯು ಕಂಪನಿಯು ಗುರುತಿಸಿದ ಎಲ್ಲ ಸರ್ವೆನಂಬರ್‌ಗಳನ್ನೂ ಒಳಗೊಂಡಿತ್ತು. ಯಾವುದೇ ಸಮರ್ಥನೆಯಿಲ್ಲದೆ ಸ್ವಾಧೀನಕ್ಕಾಗಿನ ಅಧಿಸೂಚನೆಯನ್ನು ಎರಡು ಭಾಗಗಳನ್ನಾಗಿ ಮಾಡುವ ಮತ್ತು ಬಂಡಿಕೊಡಿಗೇಹಳ್ಳಿ ಗ್ರಾಮದಲ್ಲಿ ಮಾತ್ರ ಮೊದಲು ಸ್ವಾಧೀನಕ್ಕಾಗಿ ಅಧಿಸೂಚನೆ ಹೊರಡಿಸಿದ ಸರ್ಕಾರದ ಕ್ರಮವು ಕಂಪನಿಗೆ ಸ್ವಾಧೀನ ಮತ್ತು ಹಂಚಿಕೆಯನ್ನು ತ್ವರಿತವಾಗಿ ಮಾಡುವುದನ್ನು ಅನುಕೂಲಿಸಲು ಆಗಿತ್ತೆಂದು ಸ್ಪಷ್ಟವಾಗುತ್ತದೆ. ಈ ಪ್ರಕ್ರಿಯೆಯು ಎಕರೆಗೆ ರೂ.31 ಲಕ್ಷದ ಕಡಿಮೆ ದರದಲ್ಲಿ ಕಂಪನಿಯು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅನುಕೂಲಿಸಿತಲ್ಲದೇ ಉಳಿದ ಮೂರು ಗ್ರಾಮಗಳಲ್ಲಿನ ಭೂಮಿಗೆ ಹೆಚ್ಚಿನ ಪರಿಹಾರಧನವನ್ನು ನೀಡುವುದಕ್ಕೆ ಹಿನ್ನೆಲೆಯನ್ನು ಸೃಷ್ಟಿಸಿತು. ಬಂಡಿಕೊಡಿಗೇಹಳ್ಳಿ ಗ್ರಾಮಕ್ಕೆ ನಿಗದಿಪಡಿಸಿದ ಕಡಿಮೆ ಮೊತ್ತದ ಪರಿಹಾರಧನವು ಮುಖ್ಯವಾಗಿ ಕಂಪನಿಗೆ ಲಾಭವಾಯಿತಾದರೆ, ಇತರೆ ಮೂರು ಗ್ರಾಮಗಳಿನ ಹೆಚ್ಚಿನ ಪರಿಹಾರಧನದ ದರವು ಬೇರೆ ಉದ್ಯಮಿಗಳಿಗೆ ಹಂಚಿಕೆಯಾದ ಕೈಗಾರಿಕಾ ನಿವೇಶನಗಳ ಬೆಲೆಯನ್ನು ಏರಿಸಿತು. ಸ್ವಾಧೀನಪಡಿಸಿಕೊಂಡ ಭೂಮಿಯ ವೆಚ್ಚವನ್ನು ಉದ್ಯಮಿಗಳಿಗೆ ವರ್ಗಾಯಿಸಲಾಯಿತೆಂದೂ ಮತ್ತು ಮಂಡಳಿಯು ಈ ಪ್ರಕ್ರಿಯೆಯಲ್ಲಿ ಯಾವುದೇ ನಷ್ಟವನ್ನು ಅನುಭವಿಸಲಿಲ್ಲ ಎಂದು ಎಸ್‌ಎಲ್‌ಎಓ-2 ತಿಳಿಸಿದರು. ರಾಜ್ಯ ಸರ್ಕಾರವು ಘೋಷಿಸಿರುವ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ ಉದ್ಯಮಿಗಳಿಗೆ ನೀಡಬೇಕಿರುವುದು ಮಂಡಳಿಯ ಕಾರ್ಯವಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ ಮತ್ತು ಭೂಮಿಯ ಬೆಲೆಯನ್ನು ಅಧಿಕಗೊಳಿಸಿದ್ದು ಉದ್ಯಮಿಗಳಿಗೆ ಭೂ ಹಂಚಿಕೆಯಲ್ಲಿ ಅಸಮರ್ಥನೀಯ ಬೆಲೆ ಏರಿಕೆಯಾಯಿತು. ಹೀಗೆ, ಮಂಡಳಿಯು ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸುವಲ್ಲಿ ಅತ್ಯಂತ ಮಿತವ್ಯಯವನ್ನು ಖಚಿತಪಡಿಸಿಕೊಳ್ಳಲು ಹೊಣೆಗಾರನಾಗಿತ್ತು.

## 4.3 ಪಿಎಸಿಯು ನಿಗದಿಪಡಿಸಿದ ಪರಿಹಾರಧನವನ್ನು ಮಂಡಳಿಯು ಅಸಮರ್ಥನೀಯವಾಗಿ ಹೆಚ್ಚಿಸಿತು

ಒಂದು ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸಲು ಧಾರವಾಡ ಜಿಲ್ಲೆಯ ಗಮನಗಟ್ಟಿ ಮತ್ತು ತರಿಹಾಳ್ ಗ್ರಾಮಗಳಲ್ಲಿ 510 ಎಕರೆ 3 ಗುಂಟೆಗಳನ್ನು (226 ಎಕರೆ 38 ಗುಂಟೆ ಖಾಸಗಿ ಭೂಮಿ ಮತ್ತು 283 ಎಕರೆ 5 ಗುಂಟೆ ಸರ್ಕಾರಿ ಭೂಮಿ) ಸ್ವಾಧೀನಪಡಿಸಿಕೊಳ್ಳಲು ಸರ್ಕಾರವು ಅಂತಿಮ ಅಧಿಸೂಚನೆಯನ್ನು ಹೊರಡಿಸಿತು (ಅಕ್ಟೋಬರ್ 2007). ಪಿಎಸಿಯು ಪ್ರತಿ ಎಕರೆಗೆ ರೂ.9 ಲಕ್ಷ ಪರಿಹಾರಧನವನ್ನು ನಿಗದಿಪಡಿಸಿತು (ನವೆಂಬರ್ 2007) ಮತ್ತು ಮಂಡಳಿಯು ಫೆಬ್ರವರಿ 2008ರಲ್ಲಿ ಅದನ್ನು ಅನುಮೋದಿಸಿತು. 2006-07ರಲ್ಲಿ ಗೃಹ ಮಂಡಳಿಯು ಸುತ್ತಮುತ್ತಲಿನ ಪ್ರದೇಶದಲ್ಲಿ

ಸ್ವಾಧೀನಪಡಿಸಿಕೊಂಡ ಭೂಮಿಗಳಿಗೆ ಪಾವತಿ ಮಾಡಿದ್ದ ಎಕರೆಗೆ ರೂ.6.90 ಲಕ್ಷವನ್ನು ಪರಿಗಣಿಸಿ ಪರಿಹಾರಧನವನ್ನು ನಿಗದಿಪಡಿಸಲಾಗಿತ್ತು. ಆದರೆ, ಹುಬ್ಬಳ್ಳಿ ವಿಮಾನನಿಲ್ದಾಣದ ಸುತ್ತಮುತ್ತಲಿನ ಭೂಮಿಗೆ ಜಿಲ್ಲಾಧಿಕಾರಿಯವರು ಎಕರೆಗೆ ರೂ.13.36 ಲಕ್ಷವನ್ನು ಶಿಫಾರಸು ಮಾಡಿದ್ದಾರೆ ಎಂಬ ಹಿನ್ನೆಲೆಯ ಮೇಲೆ ಮಂಡಳಿಯು ಪರಿಹಾರಧನವನ್ನು ರೂ.9 ಲಕ್ಷದಿಂದ ರೂ.13.36 ಲಕ್ಷಗಳಿಗೆ ಏರಿಸಿತು (ಮಾರ್ಚ್ 2008).

ಕೈಗಾರಿಕಾ ಅಭಿವೃದ್ಧಿಗೆ ಆಗಸ್ಟ್ 2006ರಲ್ಲಿ ಅಧಿಸೂಚನೆ ನೀಡಿದ್ದರೆ, ವಿಮಾನ ನಿಲ್ದಾಣಕ್ಕೆ ಏಪ್ರಿಲ್ 2007ರಲ್ಲಿ ಅಧಿಸೂಚನೆ ನೀಡಿದ್ದನ್ನು ಗಮನಿಸಲಾಯಿತು. ಹಾಗಾಗಿ, ಪರಿಹಾರಧನವು ಎರಡು ಭೂಮಿಗಳಿಗೆ ಒಂದೇ ಆಗಿರುವುದಿಲ್ಲ. ಪಿಎಸಿ ಕೈಗಾರಿಕಾ ಪ್ರದೇಶಕ್ಕೆ ಮೊದಲು ನೀಡಿದ ಹಾಗೂ ತದನಂತರ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಸ್ವಾಧೀನಪಡಿಸಕೊಂಡ ಭೂಮಿಗೆ ಶಿಫಾರಸು ಮಾಡಿದ ದರಗಳನ್ನು ಮಂಡಳಿಯು ನ್ಯಾಯಸಮ್ಮತವಿಲ್ಲದೇ ಹೋಲಿಸಿತು. ಹೆಚ್ಚಿಸಿದ ಪರಿಹಾರಧನವು 226 ಎಕರೆ 38 ಗುಂಟೆಗಳ ಖಾಸಗಿ ಭೂಮಿಗೆ ರೂ.9.90 ಕೋಟಿ ಅಧಿಕ ವೆಚ್ಚದಲ್ಲಿ ಪರಿಣಮಿಸಿತು.

# ಅಧ್ಯಾಯ–5
# ಪರಿಹಾರಧನದ ಪಾವತಿ

## 5.1 ಭೂ ಸ್ವಾಧೀನ ಅಧಿಸೂಚನೆಯಲ್ಲಿ ಮಂಡಳಿಯು ಸರ್ಕಾರದ ಸೂಚನೆಗಳನ್ನು ಪಾಲಿಸಿಲ್ಲಿಲ್ಲ

ಮಾರ್ಚ್ 2007ರ ಸರ್ಕಾರದ ಸುತ್ತೋಲೆಯ ಸೂಚನೆಗಳ ಪ್ರಕಾರ ಭೂ ಸ್ವಾಧೀನದ ಉದ್ದೇಶಕ್ಕಾಗಿ ಹೊರಡಿಸುವ ಪ್ರಾಥಮಿಕ ಅಧಿಸೂಚನೆಯನ್ನು ಸರ್ಕಾರಕ್ಕೆ ಸಲ್ಲಿಸುವ ಮುನ್ನ ವಿಶೇಷ ಭೂಸ್ವಾಧೀನ ಅಧಿಕಾರಿಗಳು ಪ್ರತಿ ಭೂಮಿಯ ಸರ್ವೆ ನಂಬರಿನ ಜಮೀನಿನ ಅಳತೆ ಹಾಗೂ ವಾರಸುದಾರರ ಬಗ್ಗೆ ಮಾಹಿತಿಯನ್ನು ಪರಿಶೀಲಿಸಬೇಕು. ಅಲ್ಲದೆ, ಶಾಲೆ, ದೇಗುಲಗಳು, ಸ್ಮಶಾನ, ಮೈದಾನಗಳು, ವಸತಿ ಮನೆಗಳು, ತೋಟಗಳು, ಫಲವತ್ತಾದ ಮತ್ತು ಗದ್ದೆ ಜಮೀನು ಮುಂತಾದುವುಗಳನ್ನು ಭೂ ಸ್ವಾಧೀನ ವ್ಯಾಪ್ತಿಯಿಂದ ಹೊರಗಿಡಬೇಕಾದುದರಿಂದ ಇವುಗಳ ಬಗ್ಗೆ ಪೂರ್ಣ ಮಾಹಿತಿಯನ್ನು ಸಂಗ್ರಹಿಸಿರಬೇಕು. ಮುಂದುವರೆದು, ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಸರ್ಕಾರಿ ಹಾಗೂ ಖಾಸಗಿ ಜಮೀನುಗಳು ಒಳಪಟ್ಟಿರುತ್ತವೆ. ಸರ್ಕಾರವು ತನ್ನ ಭೂಮಿಯನ್ನು ಹಲವಾರು ವ್ಯಕ್ತಿಗಳಿಗೆ ಮುಂಚಿತವಾಗಿಯೇ ಅನುದಾನವಾಗಿ ಕೊಟ್ಟಿರುವುದರಿಂದ ಆ ಜಮೀನುಗಳನ್ನು ಅನುದಾನ ಪಡೆದವರ ಬಗ್ಗೆ ಪೂರ್ಣ ಮಾಹಿತಿ ಹಾಗೂ ಅನುದಾನ ನೀಡಿದ ಜಮೀನಿನ ಪ್ರಮಾಣ ಇತ್ಯಾದಿ ಮಾಹಿತಿಗಳು ಲಭ್ಯವಿರುವ ಭೂ ಅನುದಾನ ವಹಿ ಹಾಗೂ ಪಹಣಿಗಳನ್ನು ಭೂ ಸ್ವಾಧಿನ ಅಧಿಕಾರಿಗಳು ಪರಿಶೀಲಿಸಿ ಮಾಹಿತಿಯನ್ನು ಸಂಗ್ರಹಿಸಬೇಕು. ತದನಂತರ, ಭೂ ಸ್ವಾಧೀನ ಅಧಿಕಾರಿಗಳು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಸ್ವಾಧೀನಕ್ಕೆ ಉದ್ದೇಶಿಸಿರುವ ಅಯಾ ಸರ್ವೆ ನಂಬರಿನ ಪ್ರಮಾಣವನ್ನು ಜಂಟಿಯಾಗಿ ಅಳತೆ ಮಾಡಬೇಕು. ಈ ಜಂಟಿ ಮಾಪನಾ ಕ್ರಿಯೆಯಿಂದ ಸ್ವಾಧೀನಕ್ಕೆ ಬೇಕಾದ ಭೂಮಿಯ ವ್ಯಾಪ್ತಿ ಅಂತಿಮವಾಗಿ ನಿರ್ಧಾರವಾಗುವುದಲ್ಲದೆ ಆಯಾ ಸರ್ವೆ ನಂಬರಿನಲ್ಲಿ ಸ್ವಾಧೀನಕ್ಕೆ ಲಭ್ಯವಿರುವ ಭೂಮಿಯ ಪ್ರಮಾಣ ಹಾಗೂ ಅಲ್ಲಿರುವಂಥ ಕಟ್ಟಡಗಳ ಹಾಗೂ ಮಾಲ್ಕಿಗಳ[10] ಬಗ್ಗೆ ಮಾಹಿತಿ ದೊರಕುವುದಲ್ಲದೇ ಮಾಹಿತಿಯಲ್ಲಿ ಒಂದು ವೇಳೆ ಕಂದಾಯ ಇಲಾಖೆ ಮತ್ತು ಜಂಟಿ ಮಾಪನಾ ವರದಿಯಲ್ಲಿ ವ್ಯತ್ಯಾಸಗಳು ಕಂಡುಬಂದಲ್ಲಿ ವ್ಯತ್ಯಾಸಗಳ ಪರಿಹಾರ ಕಾರ್ಯದಲ್ಲಿ ಕೂಡ ಸಹಾಯವಾಗುತ್ತದೆ. ಅಂತಿಮವಾಗಿ ಪರಿಹಾರದ ಮೊತ್ತವನ್ನು ಪಾವತಿ ಮಾಡುವ ಘಟ್ಟದಲ್ಲಿ ಈ ಜಂಟಿ ಮಾಪನಾ ಪ್ರಕ್ರಿಯೆಯು ಭೂ ಸ್ವಾಧೀನ ಪ್ರಮಾಣ ಹಾಗೂ ನೀಡಬೇಕಾಗಿರುವ ಮೊತ್ತ ಇವುಗಳ ಮಾರ್ಗದರ್ಶಕವಾಗಿರುತ್ತದೆ.

ಆದಾಗ್ಯೂ, ಮಂಡಳಿಯು ಹೊರಡಿಸಿರುವ ಪ್ರಾಥಮಿಕ ಹಾಗೂ ಅಂತಿಮ ಅಧಿಸೂಚನೆಗಳು ಹಲವಾರು ನ್ಯೂನತೆಗಳಿಂದ ಕೂಡಿರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಯಿತು. ಮಾಹಿತಿ ತಂತ್ರಜ್ಞಾನ ಪಾರ್ಕ್, ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್ ಮತ್ತು ಎರೋಸ್ಪೇಸ್ ಕೈಗಾರಿಕಾ ಪ್ರದೇಶ ಇವುಗಳಿಗಾಗಿ ಹೊರಡಿಸಿದ ಅಧಿಸೂಚನೆಗಳಲ್ಲಿ ಕೇವಲ ಅನುದಾನ ಪಡೆದವರ ಹೆಸರುಗಳನ್ನು ಮಾತ್ರ ಸೂಚಿಸಿದ್ದು ಅನುದಾನ ಕೊಟ್ಟ ಭೂಮಿಯ ಪ್ರಮಾಣವನ್ನು ಸೂಚಿಸಿರುವುದಿಲ್ಲ. ಈ ವಿಷಯದಲ್ಲಿ ಎಸ್‌ಎಲ್‌ಎಓರವರು ತಹಶೀಲ್ದಾರ್‌ರ ಕಛೇರಿಯ ಭೂ ಅನುದಾನ ವಹಿಯನ್ನು ಪರಿಶೀಲಿಸಿರುವುದಿಲ್ಲ. ಅನುದಾನ ಪಡೆದವರ ಬಗ್ಗೆ ವಿವರಗಳನ್ನು ದೋಷಪೂರಿತ ಗಣಕೀಕೃತ ಪಹಣಿಗಳಿಂದ ಸಂಗ್ರಹಿಸಲಾಗಿದೆ.

ಮಾರ್ಚ್ 2007ರ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ವರದಿಯಲ್ಲಿ 1992ರಲ್ಲಿ ಭೂದಾಖಲೆಯ ಗಣಕೀಕರಣ ವ್ಯವಸ್ಥೆಯಲ್ಲಿ ನಡೆದಿರುವ ದತ್ತಾಂಶ ಕೀಲಿಕರಣದಲ್ಲಿ ದೋಷಪೂರಿತ ದಾಖಲೆಯ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಹಲವು ಪ್ರಕರಣಗಳಲ್ಲಿ ದೋಷಗಳಿರುವುದನ್ನು ಲೆಕ್ಕ ತಪಾಸಣೆಯಲ್ಲಿ ಈ ಕೆಳಕಂಡಂತೆ ಸೂಚಿಸಲಾಗಿತ್ತು.

- ಸರ್ಕಾರದ ವತಿಯಿಂದ ದತ್ತಿ ನೀಡಲಾಗದೆ ಇರುವ ವ್ಯಕ್ತಿಗಳ ಪರವಾಗಿ ಪಹಣಿಗಳನ್ನು ನೀಡಲಾಗಿತ್ತು.

[10] ಮರಗಳು, ತೋಟಗಾರಿಕೆ ಬೆಳೆ, ನೆಡುತೋಪು ಇತ್ಯಾದಿಗಳು

- ಪಹಣಿಯಲ್ಲಿ ನಮೂದಿಸಿರುವ ಸರ್ಕಾರಿ ಜಮೀನಿನ ಪ್ರಮಾಣವು ಇಲಾಖೆಯ ಪ್ರಾಥಮಿಕ ಮೋಜಣಿ ವರದಿಯಲ್ಲಿ ನಮೂದಿಸಿರುವ ಪ್ರಮಾಣದೊಂದಿಗೆ ತಾಳೆ ಆಗುತ್ತಿರಲಿಲ್ಲ.
- ಪಹಣಿಯಲ್ಲಿರುವ ಹಲವಾರು ಕಾಲಂಗಳಲ್ಲಿ ನಮೂದಿಸಿರುವ ಮಾಹಿತಿಯಲ್ಲಿಯೇ ಪರಸ್ಪರ ವ್ಯತ್ಯಾಸಗಳು ಕಂಡು ಬಂದಿದ್ದು ದೋಷಗಳನ್ನು ಸರಿಪಡಿಸಿರುವುದಿಲ್ಲ; ಹಾಗೂ
- ಎಷ್ಟು ಪ್ರಮಾಣದಲ್ಲಿ ಸರ್ಕಾರಿ ಭೂಮಿಯನ್ನು ಅನುದಾನವಾಗಿ ನೀಡುವ ಮೂಲಕ ವರ್ಗಾಯಿಸಲಾಗಿತ್ತೋ ಅಷ್ಟು ಪ್ರಮಾಣದ ಭೂಮಿಯನ್ನು ಆಗಿಂದಾಗ್ಯೆ ಪಹಣಿಯಲ್ಲಿ ಕಡಿಮೆ ಮಾಡದಿರುವುದರಿಂದ ಪಹಣಿಯಲ್ಲಿ ಸರಕಾರೀ ಭೂಮಿಯ ಲಭ್ಯತೆಯನ್ನು ನಿಜವಾಗಿ ಲಭ್ಯವಿರುವ ಪ್ರಮಾಣಕ್ಕಿಂತ ಹೆಚ್ಚಾಗಿ ನಮೂದಿಸಲಾಗಿದೆ.

2005-11ರ ಅವಧಿಯಲ್ಲಿ ಮುಖ್ಯವಾಗಿ ಮಾರ್ಚ್ 2007ರ ಸರ್ಕಾರಿ ಸೂಚನೆಗಳನ್ನು ಪಾಲಿಸದಿರುವುದರಿಂದ ಮಂಡಳಿಯು 9,762 ಎಕರೆ 28 ಗುಂಟೆಗಳನ್ನು ಅಂತಿಮ ಸ್ವಾಧೀನದಿಂದ ಕೈಬಿಟ್ಟಿತು. ಹೀಗೆ, ಕಂದಾಯ ಇಲಾಖೆಯ ಇತರ ಪ್ರಾಥಮಿಕ ದಾಖಲೆಗಳನ್ನು ಪರಿಶೀಲಿಸದೇ ಕೇವಲ ಸರಕಾರೀ ಭೂಮಿಯ ಪಹಣಿಯಲ್ಲಿ ನಮೂದಿಸಿರುವ ಮಾಹಿತಿಗಳನ್ನಾಧರಿಸಿ ತಯಾರಿಸಿದ ಪ್ರಾಥಮಿಕ ಹಾಗೂ ಅಂತಿಮ ಭೂ ಸ್ವಾಧೀನ ಅಧಿಸೂಚನೆಗಳಲ್ಲಿ ಹಲವು ಅನರ್ಹ ವ್ಯಕ್ತಿಗಳ ಹೆಸರುಗಳು ಸೇರ್ಪಡೆಗೊಂಡಿವೆ. ಬಿ.ಕೆ.ಪಾಳ್ಯ, ಸಿಂಗನಹಳ್ಳಿ ಹಾಗೂ ಅರೆಬಿನ್ನಮಂಗಲದಲ್ಲಿನ ಭೂಮಿಯ ವ್ಯಾಪ್ತಿಯ ಮೂಲ ಸರ್ವೆ ದಾಖಲೆಗಳೊಂದಿಗೆ ಪಹಣಿ ಪತ್ರದಲ್ಲಿ ತಾಳೆಯಾಗುತ್ತಿಲ್ಲವೆಂದು ವಿಶೇಷ ಜಿಲ್ಲಾಧಿಕಾರಿಯವರು ತಿಳಿಸಿದರು (ಡಿಸೆಂಬರ್ 2011). ಮುಂದುವರೆದು, ತಾಲ್ಲೂಕು ಕಛೇರಿಗಳಲ್ಲಿರುವ ಕೆಲವು ಪಹಣಿ ಪತ್ರಗಳು ನಕಲಿ ಅನುದಾನ ಆದೇಶಗಳಿಂದ ಸೃಷ್ಟಿಯಾಗಿದ್ದು ಅನುಮಾನಾಸ್ಪದವಾಗಿದೆ. ಮಂಡಳಿ ಮತ್ತು ಕರ್ನಾಟಕ ಪಬ್ಲಿಕ್ ಲ್ಯಾಂಡ್ ಕಾರ್ಪೊರೇಶನ್ ಈ ಸಮಸ್ಯೆಯನ್ನು ಗುರುತಿಸಿ ಜಂಟಿ ಮಾಪನ ದೃಢೀಕರಣ ಪತ್ರಗಳೊಂದಿಗೆ ಪ್ರಾಥಮಿಕ ಸರ್ವೆ ದಾಖಲೆಗಳ, ಅನುದಾನ ವಹಿಗಳ ಹಾಗೂ ಕಂದಾಯ ಸರ್ವೆ ನಕ್ಷೆಗಳನ್ನು ಪರಿಶೀಲಿಸಿ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಂಡಿರುತ್ತಾರೆ.

19 ಯೋಜನೆಗಳ ಪೈಕಿ ಐದು[11] ಯೋಜನೆಗಳಲ್ಲಿ ಜಂಟಿ ಭೂಮಾಪನಾ ಕಾರ್ಯವನ್ನು ಪರಿಹಾರಧನ ಪಾವತಿಸುವುದಕ್ಕೆ ಮುಂಚೆ ಮಾಡದಿರುವುದನ್ನು ಪರಿಶೀಲನೆಯು ತಿಳಿಯಪಡಿಸಿತು. ಇದನ್ನು ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ಗೆ ಈವರೆಗೆ ನಡೆಸಿರಲಿಲ್ಲ (ಅಕ್ಟೋಬರ್ 2011). ಅನರ್ಹ ವ್ಯಕ್ತಿಗಳನ್ನು ಅಧಿಸೂಚನೆಗಳಲ್ಲಿ ಸೇರಿಸಿದ್ದರಿಂದ ಹಾಗೂ ಪರಿಹಾರ ಪಾವತಿಗೆ ಮುನ್ನ ಅಗತ್ಯವಾಗಿ ಮಾಡಿಬೇಕಿದ್ದ ಜಂಟಿ ಭೂಮಾಪನಾ ಕಾರ್ಯವನ್ನು ಮಾಡದೇ ಇರುವುದರಿಂದ ಹಲವಾರು ಪರಿಹಾರ ಪಾವತಿಯಲ್ಲಿ ವಂಚನೆಗಳು ನಡೆದಿದ್ದು ಕೈಗಾರಿಕಾ ಪ್ರದೇಶಕ್ಕೆ ಅಗತ್ಯವಿಲ್ಲದ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವಲ್ಲಿ ಮುಂದೆ ಚರ್ಚಿಸಿದಂತೆ ತಿಳಿಸಲಾಗಿದೆ.

## 5.2 ಕ್ಲೈಮ್‌ಗಳ ಮತ್ತು ಪರಿಹಾರಧನ ಪಾವತಿಗಳಿಗೆ ಸಂಬಂಧಿಸಿದಂತೆ ತೆರಿಗೆಗಳನ್ನು ವಿಭಜಿಸದಿರುವುದು

ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸಲು ಮಂಡಳಿಯಿಂದ ಸ್ವಾಧೀನ ಪಡಿಸಿಕೊಂಡ ಭೂಮಿಯಲ್ಲಿ ಸರ್ಕಾರಿ ಹಾಗೂ ಹಿಡುವಳಿದಾರರ[12] ಜಮೀನುಗಳೆರಡೂ ಇದ್ದವು. ಸರ್ಕಾರಿ ಜಮೀನಿನ ಬಾಬತ್ತಿನಲ್ಲಿ ಹಲವಾರು ವ್ಯಕ್ತಿಗಳಿಗೆ ಸರ್ಕಾರದ ಅನುದಾನ ಮಾಡಿದ ಭಾಗವೂ ಸೇರಿಕೊಂಡಿತ್ತು. ಭೂ ವ್ಯವಹಾರಗಳು ಕಂದಾಯ ಇಲಾಖೆಯ ಸಂಕೀರ್ಣ ದಾಖಲೆಗಳನ್ನೊಳಗೊಂಡಿದ್ದು ಭೂಮಿಯ ಹಕ್ಕನ್ನು ನೀಡಲು ಕಂದಾಯ ಹಾಗೂ ಇತರ ದಾಖಲೆಗಳು ಸಾಕಷ್ಟು ಮಹತ್ವವುಳ್ಳವುದಾಗಿರುತ್ತವೆ. ಸ್ವಾಧೀನಪಡಿಸಿಕೊಂಡ ಭೂಮಿಯ ವಾರಸುದಾರರು ಪರಿಹಾರವನ್ನು ಪಡೆಯಲು **(ಅನುಬಂಧ-2)** ಎಸ್‌ಎಲ್‌ಎಓರವರು ಅರ್ಜಿ ನಮೂನೆಯಲ್ಲಿ ಸೂಚಿಸಿರುವಂತೆ ದಾಖಲೆಗಳನ್ನು ಸಲ್ಲಿಸಬೇಕಿತ್ತು. ಭೂ ಸ್ವಾಧೀನಾಧಿಕಾರಿಗಳು ರಚಿಸಿದ ನಮೂನೆಗಳು ಬೇರೆ ಬೇರೆ ರೀತಿಯದಾಗಿದ್ದು ಸಮಾನತೆ ಇರಲಿಲ್ಲ. ನಮೂನೆಗಳಲ್ಲಿ ಪಟ್ಟಿ ಮಾಡಿದ ದಾಖಲೆಗಳ ಬಗ್ಗೆ ಕಾನೂನು ತಜ್ಞರ ಅಭಿಪ್ರಾಯಗಳು ಎಸ್‌ಎಲ್‌ಎಓ ವತಿಯಿಂದ ತೆಗೆದುಕೊಂಡಿರುವುದಿಲ್ಲ. ಮಂಡಳಿಯ ಅನುಮೋದನೆಯನ್ನೂ ಸಹ ತೆಗೆದುಕೊಂಡಿರುವುದಿಲ್ಲ.

[11] ಏರೋಸ್ಪೇಸ್ ಕಾಂಪೋನೆಂಟ್ಸ್, ಹಾಡ್‌ವೇರ್ ಟೆಕ್ನಾಲಜಿ ಪಾಕ್, ಐಟಿ ಪಾರ್ಕ್, ಕೋಲಾರ-ನರಸಾಪುರ, ವಸಂತ-ನರಸಾಪುರ-2ನೇ ಹಂತ

[12] ಖಾಸಗಿ ಭೂಮಿ

ಪರಿಹಾರಧನ ಪಾವತಿಗೆ ಬೇಡಿಕೆ ಸಲ್ಲಿಸಿದ ಅರ್ಜಿದಾರರಿಂದ ಪಡೆದ ದಾಖಲೆಗಳನ್ನು ಪರಿಗಣಿಸಿ ಯಾವುದೇ ಕಾನೂನು ರೀತ್ಯ ಪರಿಶೋಧನೆಗೆ ಒಳಪಡಿಸದೆಯೇ ಪರಿಹಾರದ ಮೊತ್ತವನ್ನು ಪಾವತಿಸಲಾಯಿತು. ಭೂ ಸ್ವಾಧೀನಾಧಿಕಾರಿಗಳು ತಾವೇ ದಾಖಲೆಗಳನ್ನು ಪರಿಶೀಲಿಸಿ ತಾವೇ ದಾಖಲೆಗಳನ್ನು ಮಾಡಿರುವುದು ಮಂಡಳಿಯ ಪರಿಹಾರ ಪಾವತಿಯಲ್ಲಿ ಹಲವಾರು ಅಕ್ರಮಗಳು ಉಂಟಾಗಿ ಪರಿಶೀಲನೆ ಹಾಗೂ ಪಾವತಿಗಳ ಬಗ್ಗೆ ಕರ್ತವ್ಯಗಳ ಬೇರ್ಪಡಿಸುವಿಕೆಯಿಲ್ಲದಿರುವುದು ಹಾಲಿ ವ್ಯವಸ್ಥೆಗಳು ದುರ್ಬಲಗೊಂಡವು. ವರದಿಯಲ್ಲಿ ಮುಂದೆ ಚರ್ಚಿಸಿರುವಂತೆ ಹಲವಾರು ರೀತಿಯ ಪರಿಹಾರ ಪಾವತಿಯ ವಂಚನೆಗಳಿಗೆ ಎಡೆ ಮಾಡಿಕೊಟ್ಟಿತು.

## 5.3 ಎಸ್‌ಎಲ್‌ಎಓಗಳು ಪಾವತಿಸಿದ ಪರಿಹಾರಧನದ ಮೇಲೆ ಮಂಡಳಿಯು ಯಾವುದೇ ನಿಯಂತ್ರಣ ಹೊಂದಿರಲಿಲ್ಲ

ಪರಿಹಾರಧನ ಪಾವತಿಗಾಗಿಯೇ ಪ್ರತ್ಯೇಕವಾಗಿ ಮಂಡಳಿಯು ಬೆಂಗಳೂರಿನ ಕಾರ್ಪೊರೇಶನ್ ಬ್ಯಾಂಕಿನಲ್ಲಿ ಒಂದು ಫ್ಲೇಕ್ಸಿ ಖಾತೆಯನ್ನು ನಿರ್ವಹಿಸುತ್ತಿದೆ. ಎಲ್ಲಾ ಭೂ ಸ್ವಾಧೀನಾಧಿಕಾರಿಗಳು ಈ ಖಾತೆಯಿಂದ ಚೆಕ್‌ಗಳನ್ನು ವಿತರಿಸುವ ಅಧಿಕಾರವನ್ನು ಪಡೆದಿದ್ದರು. ಭೂ ಸ್ವಾಧೀನ ಪರಿಹಾರದ ಮೊತ್ತವನ್ನು ನಿಗದಿಪಡಿಸಿದ ನಂತರ ಭೂ ಸ್ವಾಧೀನಾಧಿಕಾರಿಗಳು ಸ್ವಾಧೀನ ಪಡಿಸಿಕೊಂಡ ಭೂಮಿಯ ಅಂತಿಮ ಅಧಿಸೂಚನೆಯಂತೆ ಪ್ರಮಾಣಕ್ಕನುಸಾರವಾಗಿ ಪರಿಹಾರ ಹಣದ ಅಗತ್ಯತೆ ಬಗ್ಗೆ ಮಂಡಳಿಯ ವಿಶೇಷ ಜಿಲ್ಲಾಧಿಕಾರಿಗಳ ಮುಂದೆ ಪ್ರಸ್ತಾವವನ್ನು ಮಂಡಿಸುತ್ತಿದ್ದರು. ಈ ಪ್ರಸ್ತಾವದಲ್ಲಿ ಏಕ ಘಟಕ ಸಂಕೀರ್ಣಗಳಿಗಾಗಿ ಸ್ವಾಧೀನಪಡಿಸಿಕೊಂಡ ಭೂಮಿಗಳಿಗೆ ಪಾವತಿಸಬೇಕಾದ ಪರಿಹಾರದ ಮೊತ್ತವೂ ಕೂಡ ಸೇರಿಕೊಂಡಿತ್ತು. ವಿಶೇಷ ಜಿಲ್ಲಾಧಿಕಾರಿಗಳ ಆದೇಶದಂತೆ ಹಣಕಾಸು ನಿಯಂತ್ರಕರು ಹಣವನ್ನು ಮಂಡಳಿಯ ಮುಖ್ಯ ಬ್ಯಾಂಕ್ ಖಾತೆಯಿಂದ ಪರಿಹಾರ ಪಾವತಿಗೆ ಮೀಸಲಾಗಿರುವ ಬ್ಯಾಂಕ್ ಖಾತೆಗೆ ಹಣವನ್ನು ಕೆಲವೊಮ್ಮೆ ಪೂರ್ತಿಯಾಗಿಯೂ ಅಥವಾ ಭಾಗಶ: ವರ್ಗಾಯಿಸಲಾಯಿತು. ವಿನಿಯೋಗಿಸಿದ ಹಣ ಖರ್ಚು ಮಾಡಿದ ನಂತರ ಭೂ ಸ್ವಾಧೀನಾಧಿಕಾರಿಗಳು ಪರಿಹಾರಧನವನ್ನು ಎಷ್ಟು ಭೂ ವ್ಯಾಪ್ತಿಗೆ ಪಾವತಿಸಲಾಯಿತು, ಕೋರಿಕೆ ಸಲ್ಲಿಸಿದ ಹೆಚ್ಚುವರಿ ಮೊತ್ತವನ್ನು ಇದೇ ರೀತಿ ಮೀಸಲಿಟ್ಟ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಯಿತು. ಹೀಗೆ ಹೆಚ್ಚುವರಿ ಹಣದ ಬೇಡಿಕೆ ಸಲ್ಲಿಸುವಾಗ ಭೂ ಸ್ವಾಧೀನಾಧಿಕಾರಿಗಳು ಪರಿಹಾರ ಮೊತ್ತದ ಪಾವತಿ ಎಷ್ಟು ಪ್ರಮಾಣದ ಭೂಮಿಯ ಸ್ವಾಧೀನಕ್ಕೆ ಪರಿಹಾರ ಪಾವತಿ ಬಾಕಿ ಇದೆ. ಎಂಬುದರ ಬಗ್ಗೆ ಯಾವುದೇ ವಿವರಗಳನ್ನು ನೀಡಿರುವುದಿಲ್ಲ ಹಾಗೆಯೇ ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಹಣಕಾಸು ನಿಯಂತ್ರಕರು ಕೂಡ ಯಾವುದೇ ಲೆಕ್ಕ ಪರಿಶೀಲನೆ ಮಾಡದೇ ಹಣವನ್ನು ವಾಡಿಕೆಯಂತೆ ಬಿಡುಗಡೆ ಮಾಡುತ್ತಿದ್ದರು. ಭೂ ಸ್ವಾಧೀನಾಧಿಕಾರಿಗಳು ಆಯಾ ಯೋಜನೆಯ ಸಂಬಂಧ ಹಾಗೂ ಏಕ ಘಟಕ ಸಂಕೀರ್ಣಗಳ ಸಂಬಂಧ ಯಾವುದೇ ನಿಯಂತ್ರಣವಹಿಗಳನ್ನು ತೆರೆದಿಲ್ಲದಿರುವುದು ಲೆಕ್ಕ ತಪಾಸಣೆಯಲ್ಲಿ ಕಂಡುಬಂದಿರುತ್ತದೆ. ತಪಾಸಣೆಗೆ ಆಯ್ಕೆ ಮಾಡಿದ ಪ್ರತಿಯೊಂದು ಪರೀಕ್ಷಾ–ತನಿಖೆ ನಡೆಸಿದ ಭೂ ಸ್ವಾಧೀನಾಧಿಕಾರಿಗಳು ಕೇವಲ ಒಂದೇ ಒಂದು ಪರಿಹಾರ ಪಾವತಿ ವಹಿಯನ್ನು ತೆರೆದಿದ್ದು ಅದರಲ್ಲಿ ಅರ್ಜಿದಾರರಿಗೆ ನೀಡಿದ ಹಣ, ಭೂಮಿಯ ಸರ್ವೆನಂಬರ್ ಮಾಹಿತಿ ಹಾಗೂ ಅದರ ಪ್ರಮಾಣ ಮತ್ತು ಅರ್ಜಿದಾರರ ಭಾವಚಿತ್ರದ ಮೇಲೆ ಹಣ ಸ್ವೀಕೃತಿಯ ರುಜು ಇವುಗಳನ್ನು ಪಡೆದಿರುತ್ತಾರೆ. ನಿಗದಿತ ಸಮಯಾಂತ್ಯದಲ್ಲಿ ಆಯಾ ಯೋಜನೆಗೆ ಸಂಬಂಧಿಸಿದಂತೆ ಎಷ್ಟು ಪರಿಹಾರ ಮೊತ್ತ ಪಾವತಿಯಾಗಿದೆ ಎಂದು ಈ ವಹಿಯಲ್ಲಿ ನಮೂದಿಸಿರಲಿಲ್ಲ ಮತ್ತು ವಹಿಗಳನ್ನು ಪೂರ್ಣಗೊಳಿಸಿರಲಿಲ್ಲ. ಪ್ರಾರಂಭದಿಂದಲೂ ಕ್ರೋಢೀಕೃತ ವಹಿಯನ್ನು ನಿರ್ವಹಿಸಲಾಗಿದೆ ಹಾಗೂ ಯೋಜನಾವಾರು ಪರಿಹಾರಧನ ವಹಿಗಳನ್ನು ಇನ್ನು ಮುಂದೆ ನಿರ್ವಹಿಸಲಾಗುವುದು ಎಂದು ಎಸ್‌ಎಲ್‌ಎಓ–1 ತಿಳಿಸಿದರು (ಆಗಸ್ಟ್ 2011). ಇದರಿಂದ ಪರಿಹಾರ ಮೊತ್ತ ಪಾವತಿಯ ಪ್ರಗತಿ ಮತ್ತು ಗ್ರಾಮವಾರು ಭೂ ಸ್ವಾಧೀನದ ಪ್ರಮಾಣ ಹಾಗೂ ವಿವರಗಳ ಬಗ್ಗೆ ನಿಗಾ ಇಡಲು ಬೇಕಾದ ಸಾಧನಗಳು ಸ್ವಾಧೀನಾಧಿಕಾರಿಗಳಲ್ಲಿ ಇರಲಿಲ್ಲ. ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಹಣಕಾಸು ನಿಯಂತ್ರಕರು ಕೂಡ ಭೂ ಸ್ವಾಧೀನಾಧಿಕಾರಿಗಳು ಭೂ ಸ್ವಾಧೀನ ಕ್ರಿಯೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಪಾವತಿಸಬೇಕಾದ ಪರಿಹಾರಧನ ಇವೆರಡರ ಬಗ್ಗೆ ಸೂಕ್ಷ್ಮ ನಿಗಾ ಇಡುವುದರಲ್ಲಿ ವಿಫಲರಾಗಿದ್ದಾರೆ.

ಆಂತರಿಕ ಲೆಕ್ಕ ತಪಾಸಣಾ ವಿಭಾಗವು ಒಬ್ಬ ಸಹಾಯಕ ಕಾರ್ಯದರ್ಶಿ, ಸೂಪರಿಂಟೆಂಡೆಂಟ್, ಇಬ್ಬರು ಸಹಾಯಕರು ಹಾಗೂ ಮೂವರು ಕಿರಿಯ ಸಹಾಯಕರಿಂದ ಕೂಡಿ ಹಣಕಾಸು ನಿಯಂತ್ರಕರನ್ನು

ಒಳಗೊಂಡಿದೆ. ಮಂಡಳಿಯು ಭಾರಿ ಪ್ರಮಾಣ ಮೊತ್ತವನ್ನು ಭೂ ಸ್ವಾಧೀನಕ್ಕೆ ವರ್ಷಾನುವರ್ಷ ವೆಚ್ಚ ಮಾಡುತ್ತಿದ್ದರೂ ಪರಿಹಾರ ಪಾವತಿಯ ಲೆಕ್ಕ ಪತ್ರಗಳನ್ನು ಮಂಡಳಿಯ ಆಂತರಿಕ ಲೆಕ್ಕ ತಪಾಸಣಾ ವಿಭಾಗದಿಂದ ತಪಾಸಣೆ ಮಾಡಿಸಿರುವುದಿಲ್ಲ. ಆಗಸ್ಟ್ 2009ರವರೆಗೆ ಯಾವುದೇ ಭೂ ಸ್ವಾಧೀನಾಧಿಕಾರಿಗಳ ಲೆಕ್ಕ ಪತ್ರಗಳೂ ತಪಾಸಣೆಯಾಗಿರುವುದಿಲ್ಲ. ನಂತರದಲ್ಲಿ ಮಂಡಳಿಯು ಬೆಂಗಳೂರಿನ ಇಬ್ಬರು ಭೂ ಸ್ವಾಧೀನಾಧಿಕಾರಿಗಳು ಮಾಡಿದ ಪರಿಹಾರ ಮೊತ್ತದ ಪಾವತಿಯ ವ್ಯವಹಾರಗಳ ಬಗ್ಗೆ ಪೂರ್ವ ಲೆಕ್ಕ ತಪಾಸಣೆ ಮಾಡಲು ಆಂತರಿಕ ಲೆಕ್ಕ ತಪಾಸಣಾ ವಿಭಾಗಕ್ಕೆ ಸೆಪ್ಟಂಬರ್ 2009ರಲ್ಲಿ ಸೂಚಿಸಿತ್ತು ಎಂದು ಹಣಕಾಸು ನಿಯಂತ್ರಕರು ತಿಳಿಸಿದ್ದಾರೆ.

ತಡೆ ಮತ್ತು ನಿಯಂತ್ರಣಗಳ ಕೊರತೆಯಿಂದಾಗಿ ಅಧಿಸೂಚನೆಗಳಲ್ಲಿ ಮುಂದೆ ಚರ್ಚಿಸಿರುವಂತೆ ನಿಗದಿಯಾದ ಭೂಸ್ವಾಧೀನ ಪ್ರಮಾಣಕ್ಕಿಂತಲೂ ಹೆಚ್ಚುವರಿ ಭೂಮಿಯ ಪ್ರಮಾಣಕ್ಕೆ ಪರಿಹಾರಧನ ಪಾವತಿಸಲಾಯಿತು.

## 5.4 ಅನುದಾನ ದೃಢೀಕರಣ ಪತ್ರಗಳ ನೀಡಿಕೆಯಲ್ಲಿ ವಂಚನೆ

**ತಹಸೀಲ್ದಾರ್‌ರವರು ನೀಡಿದ ಮೂಲ ಅನುದಾನಪತ್ರವು ಸರ್ಕಾರವು ಭೂಮಿಯನ್ನು ಅನುದಾನ ಮಾಡಿರುವುದಕ್ಕೆ ಪ್ರಮುಖವಾದ ದಾಖಲೆಯಾಗಿದೆ. ಮೂಲ ಅನುದಾನ ಪತ್ರಗಳನ್ನು ಸಲ್ಲಿಸಿದ್ದಾಗಲೂ ಸಹ ಅದರ ಸತ್ಯಾಸತ್ಯತೆಯನ್ನು ಪರಿಶೀಲಿಸಿದ ನಂತರವೇ ಪರಿಹಾರಧನವನ್ನು ವಿತರಿಸಬೇಕು. ಅರ್ಜಿದಾರರು ಕಾಲ್ಪನಿಕ ಅನುದಾನ ಪತ್ರಗಳನ್ನು ಸಲ್ಲಿಸುವ ಅಪಾಯವನ್ನು ತಡೆಗಟ್ಟಲು ಇದು ಅವಶ್ಯಕವಾಗಿದೆ. 150 ಎಕರೆ 38 ಗುಂಟೆಗಳ ಸರ್ಕಾರಿ ಭೂಮಿಯ ಅನುದಾನವನ್ನೊಳಗೊಂಡ ಕಾಲ್ಪನಿಕ ಅನುದಾನಪತ್ರಗಳ ಪ್ರಕರಣವೊಂದನ್ನು ಲೆಕ್ಕಪರಿಶೋಧನೆಯು ಗಮನಿಸಿತು.**

**(1) ಕರ್ನಾಟಕ ಭೂಕಂದಾಯ ಅಧಿನಿಯಮ 1964ರ (ಕೆಎಲ್‌ಆರ್) ಪರಿಚ್ಛೇದ 94ಬಿ ಹಾಗೂ ಜೊತೆಗೆ ಪರಿಚ್ಛೇದ 108ಸಿಸಿ ಅನ್ವಯ ಯಾವ ವ್ಯಕ್ತಿಯು ಏಪ್ರಿಲ್ 1990ಕ್ಕೆ ಮುಂಚೆ ಭೂಮಿಯನ್ನು ವಶದಲ್ಲಿಟ್ಟುಕೊಂಡಿದ್ದು ಆ ಸಂಬಂಧ ಅರ್ಜಿಯನ್ನು ನಮೂನೆ- 50ರಲ್ಲಿ 1990ರ ತಿದ್ದುಪಡಿಕಾಯಿದೆ ಆರಂಭಗೊಂಡ ಆರು ತಿಂಗಳುಗಳ ಒಳಗಡೆ ಸಲ್ಲಿಸಿರುತ್ತಾನೋ ಅಂತಹ ವ್ಯಕ್ತಿಗೆ ಭೂಮಿಯನ್ನು ಸರ್ಕಾರವು ಅನುದಾನ ನೀಡಬಹುದು. ಈ ಸಂಬಂಧ ಆಯಾ ತಹಸೀಲ್ದಾರ್‌ರವರು ಭೂ ಅನುದಾನಕ್ಕೆ ಸಲ್ಲಿಸಿದ ಅರ್ಜಿಗಳನ್ನು ಸ್ವೀಕರಿಸಿ ಒಂದು ವಹಿಯಲ್ಲಿ ದಾಖಲಿಸಬೇಕು. ನಂತರ, ರೆವಿನ್ಯೂ ಇನ್‌ಸ್ಪೆಕ್ಟರ್ ಮತ್ತು ಸರ್ವೆಯರ್‌ಗಳ ವರದಿಗಳನ್ನು ಆಧರಿಸಿ ಪರಿಚ್ಛೇದ 94ಎ ರೀತ್ಯ ನಿಯೋಜಿತವಾದ ಹಾಗೂ ತಹಸೀಲ್ದಾರ್‌ರವರು ಕಾರ್ಯದರ್ಶಿಯಾಗಿರುವ ಸಮಿತಿಯು ಭೂಮಿಯನ್ನು ಅನುದಾನವಾಗಿ ನೀಡುವ ಬಗ್ಗೆ ಸಾರ್ವಜನಿಕರಿಂದ ಹಾಗೂ ಹಿತಾಸಕ್ತರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ನಿರಾಕ್ಷೇಪಣೆಗಳನ್ನು ಖಚಿತಪಡಿಸಿಕೊಂಡ ನಂತರ ಶಿಫಾರಸು ಮಾಡಿ ಸರ್ಕಾರಕ್ಕೆ ಸಲ್ಲಿಸಬೇಕಾದ ಮೊತ್ತದ ಪಾವತಿಯು ಅರ್ಜಿದಾರನಿಂದ ನಿಯೋಜಿತ ಬ್ಯಾಂಕ್ ಖಾತೆಯಲ್ಲಿರುವುದನ್ನು ಖಚಿತಪಡಿಸಿಕೊಳ್ಳಬೇಕು. ತಹಸೀಲ್ದಾರ್‌ರವರು ಅನುದಾನ ಪತ್ರವನ್ನು ನೀಡಿ, ನೀಡಿಕೆಯ ವಹಿಯಲ್ಲಿ ನಮೂದಿಸಬೇಕು. ಮಾಸಿಕ ಪ್ರಗತಿಯನ್ನು ತಹಸೀಲ್ದಾರ್‌ರವರು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು.**

**(2) ಭೂಕಂದಾಯ ಅಧಿನಿಯಮ ಅನ್ವಯ ಹೊಸಕೋಟೆ ತಹಸೀಲ್ದಾರ್‌ರವರು 2009-11ರ ಅವಧಿಯಲ್ಲಿ ಹಲವಾರು ಅರ್ಜಿದಾರರಿಗೆ 88 ಅನುದಾನ ಪತ್ರಗಳನ್ನು ವಿತರಿಸಿದರು. ಇವುಗಳ ಪೈಕಿ ಒಂದೇ ದಿನಾಂಕ, ಅಂದರೆ 21 ಸೆಪ್ಟಂಬರ್ 2010ರಂದು, ಮಂಜೂರು ಮಾಡಿದ 64 ಅನುದಾನ ಪತ್ರಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ. ಆಗ ನಡೆಯುತ್ತಿದ್ದ ಭೂದಾಖಲೆಗಳ ಗಣಕೀಕರಣದ ಒಂದು ಭಾಗವಾಗಿ ಹೊಸಕೋಟೆಯ ತಹಸೀಲ್ದಾರ್‌ರವರ ದಾಖಲೆಗಳನ್ನೂ ಸ್ಕ್ಯಾನ್ ಮಾಡಲಾಯಿತು ಮತ್ತು ಅನುದಾನ ಪತ್ರಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಜೂನ್ 2011ರಲ್ಲಿ ಸ್ಕ್ಯಾನ್ ಮಾಡಲಾಯಿತು. ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ನೀಡದ 64ರಲ್ಲಿ 35 ಪ್ರಕರಣಗಳಿಗೆ ಸ್ಕ್ಯಾನ್ ಮಾಡಿದ ದಾಖಲೆಗಳು ಸಾಫ್ಟ್‌ಕಾಪಿ ಲಭ್ಯವಿದ್ದಿತು. ಹೀಗೆ, ತಹಸೀಲ್ದಾರ್‌ರವರ ಕಛೇರಿಯಲ್ಲಿ ಕಡೆಯಪಕ್ಷ 35 ಅನುದಾನಗಳಿಗೆ ಸಂಬಂಧಪಟ್ಟ ಮೂಲ ದಾಖಲೆಗಳು ಜೂನ್ 2011ರ ಅವಧಿಯಲ್ಲಿ ಸ್ಕ್ಯಾನ್ ಮಾಡಲು ಲಭ್ಯವಿದ್ದರೂ ಸಹ ನವೆಂಬರ್ 2011ರಲ್ಲಿನ ಲೆಕ್ಕಪರಿಶೋಧನೆಗಳಿಗೆ ಅವುಗಳನ್ನು ಲಭ್ಯ ಮಾಡಲಿಲ್ಲ.**

(3) 35 ಪ್ರಕರಣಗಳಲ್ಲಿ ಸ್ಕ್ಯಾನ್ ಮಾಡಿದ ದಾಖಲೆಗಳ ಮುದ್ರಿತ ಪ್ರತಿಗಳ ಪರಿಶೀಲನೆಯು ಕೆಳಕಂಡ ಅಂಶಗಳನ್ನು ತಿಳಿಯಪಡಿಸಿದವು.

- ಸ್ಕ್ಯಾನ್ ಮಾಡಿದ ದಾಖಲೆಗಳು ಹಲವು ರೀತಿಯಲ್ಲಿ ಅಪೂರ್ಣವಾಗಿದ್ದವು. ದಾಖಲೆಗಳಲ್ಲಿನ ಟಿಪ್ಪಣಿಗಳು ಹಾಗೂ ರೆವಿನ್ಯೂ ಇನ್‌ಸ್ಪೆಕ್ಟರ್‌ಗಳ ವರದಿಗಳು ಲಭ್ಯವಿರಲಿಲ್ಲ.
- ಸಮಿತಿಯ ಸಭೆಗಳ ನಡವಳಿಗಳನ್ನು ಒಂದು ವಹಿಯಲ್ಲಿ ನಮೂದಿಸಬೇಕು ಮತ್ತು ನಡವಳಿಗಳನ್ನು ಖಚಿತಪಡಿಸಲು ಸಮಿತಿಯ ಸದಸ್ಯರ ಸಹಿಗಳನ್ನು ಪಡೆಯಬೇಕು. ವಿತರಣಾ ವಹಿಯ ಪ್ರಕಾರ 26 ಮೇ 1993ರಂದು ನಡೆದ ಸಮಿತಿಯ ಸಭೆಯಲ್ಲಿ ಮಾಡಿದ ಶಿಫಾರಸುಗಳ ಆಧಾರದ ಮೇಲೆ ಈ 35 ಪ್ರಕರಣಗಳಲ್ಲಿ ಅನುದಾನ ಪತ್ರಗಳನ್ನು ನೀಡಲಾಗಿತ್ತು. ಜುಲೈ 2010ರಲ್ಲಿ ಭೂ ದಾಖಲೆಗಳ ಸಂಬಂಧವಾಗಿ ಕೆಲಸ ಮಾಡುವ ಹುದ್ದೆಯಲ್ಲಿದ್ದವರು ಬದಲಾಗಿದ್ದನ್ನು ಗಮನಿಸಲಾಯಿತು. ಹೊಸದಾಗಿ ಕಾರ್ಯಭಾರ ನಿರ್ವಹಿಸಿದವರು ತೆಗೆದುಕೊಂಡ ದಾಖಲೆಗಳಲ್ಲಿ 16 ನವಂಬರ್ 1992ರಿಂದ 24 ಆಗಸ್ಟ್ 1993ರವರೆಗಿನ ಸಮಿತಿಯ ಸಭೆಗಳ ನಡವಳಿಗಳನ್ನು ಹೊಂದಿದ ವಹಿಯನ್ನು ಕಾರ್ಯಭಾರ ಹಸ್ತಾಂತರಿಸುವ ವರದಿಯು ತೋರಿಸಿತು. ಆದರೆ ವಹಿಯ ಪರಿಶೀಲನೆಯು 17 ಮೇ 1993ವರೆಗಿನ ಸಮಿತಿಯ ಸಭೆಗಳ ನಡವಳಿಗಳು ಮಾತ್ರ ದಾಖಲಾಗಿದ್ದನ್ನು ತೋರಿಸಿತು. 26 ಮೇ 1993ರಿಂದ 30 ಸೆಪ್ಟಂಬರ್ 1994ರವರೆಗಿನ ಅವಧಿಯ ನಡವಳಿಗಳು ಲಭ್ಯವಿರಲಿಲ್ಲವೆಂದೂ ಸಹ ವಹಿಯಲ್ಲಿ ದಾಖಲಿಸಲಾಗಿತ್ತು.
- 35 ಪ್ರಕರಣಗಳ ಪೈಕಿ 34ರಲ್ಲಿ ಅರ್ಜಿದಾರರು ಹೊಸಕೋಟೆಯ ಸ್ಟೇಟ್ ಬ್ಯಾಂಕ್‌ಆಫ್ ಮೈಸೂರು ಬ್ಯಾಂಕ್ ಶಾಖೆಗೆ ಹಣವನ್ನು ಭರ್ತಿ ಮಾಡಿರುವುದನ್ನು ತೋರಿಸುವ ಚಲನ್‌ಗಳ ಸ್ಕ್ಯಾನ್ ಮಾಡಿದ ಪ್ರತಿಗಳು ಲಭ್ಯವಿದ್ದವು. ಈ ಎಲ್ಲಾ ಜಮೆಗಳನ್ನು ಒಂದೇ ದಿನ,ಅಂದರೆ 12 ಸೆಪ್ಟೆಂಬರ್ 1994ರಂದು ಮಾಡಲಾಗಿತ್ತು. ಈ ಜಮೆಗಳನ್ನು ಹೊಸಕೋಟೆಯ ಉಪ ಖಜಾನೆಯಲ್ಲಿನ ಸೆಪ್ಟಂಬರ್ 1994ರ ತಿಂಗಳಿನ ಪೂರ್ಣ ಸ್ವೀಕೃತಿ ಅನುಸೂಚಿಯ ಜೊತೆ ತಾಳೆ ನೋಡಿದಾಗ ಸೆಪ್ಟೆಂಬರ್ 1994ರಲ್ಲಿ ಅಂತಹಯಾವುದೇ ಜಮೆಗಳನ್ನು ಮಾಡದಿರುವುದು ಕಂಡುಬಂದಿತು. ಆದ್ದರಿಂದ ಚಲನ್‌ಗಳು ಕಾಲ್ಪನಿಕವಾಗಿದ್ದವೆಂದು ಸ್ಪಷ್ಟವಾಗುತ್ತದೆ.
- 35 ಪ್ರಕರಣಗಳ ಸ್ಕ್ಯಾನ್ ಮಾಡಿದ ದಾಖಲೆಗಳ ಪರಿಶೀಲನೆಯು ಮೂಲ ಅನುದಾನ ಪತ್ರದಲ್ಲಿ ಹೆಸರುಗಳು, ಭೂಮಿಯ ವಿಸ್ತೀರ್ಣ, ಹೊಬಳಿಯ ಹೆಸರು ಮುಂತಾದವುಗಳನ್ನು ಸೇರಿಸುವ ಮೂಲಕ ಈ ದಾಖಲೆಗಳನ್ನು ಕಾಲ್ಪನಿಕವಾಗಿ ಸೃಷ್ಟಿ ಮಾಡಲಾಗಿದೆ ಎಂದು ತೋರಿಸಿತು. ಮೂಲ ಪತ್ರದಲ್ಲಿ ಸಂಬಂಧಿತ ಬರಹಗಳನ್ನು ಅಳಿಸಿ ಸೇರಿಸಿದ ಸೇರಿಕೆಗಳು, ಅಳಿಸಿದ್ದ ಮಾಹಿತಿಯ ಸಣ್ಣಪುಟ್ಟ ಗುರುತಿನ ಛಾಯೆಗಳು ಕಾಣಸಿಗುತ್ತವೆಯಾದ್ದರಿಂದ ಪರಿಣತೆಯ ಕೊರತೆಯನ್ನು ತೋರಿಸಿದವು. ಆದ್ದರಿಂದ ಈ ಎಲ್ಲಾ 35 ಪ್ರಕರಣಗಳಲ್ಲಿ ಕಾಲ್ಪನಿಕ ದಾಖಲೆಗಳನ್ನು ಸೃಷ್ಟಿಸಲಾಗಿದೆ.
- ಈ 64 ಪ್ರಕರಣಗಳು 1991–93ರ ಅವಧಿಗೆ ಸಂಬಂಧಿಸಿದ್ದವಾದರೂ ಮತ್ತು ಸೆಪ್ಟಂಬರ್ 1994ರಷ್ಟು ಹಿಂದೆಯೇ ಜಮೆಗಳನ್ನು ಮಾಡಲಾಗಿದ್ದರೂ, ಅನುದಾನ ಪತ್ರಗಳಿಗೆ ಬಹಳ ತಡವಾಗಿ ಅಂದರೆ ಸೆಪ್ಟಂಬರ್ 2010ರಲ್ಲಿ ಅನುಮತಿ ನೀಡಲಾಯಿತು. ವಿಳಂಬಕ್ಕೆ ದಾಖಲೆಗಳಲ್ಲಿ ಯಾವುದೇ ಕಾರಣಗಳು ಇರಲಿಲ್ಲ. 5 ಅಕ್ಟೋಬರ್ 2010ರಂದು ತಹಸೀಲ್ದಾರ್‌ರವರು ಅನುಮತಿ ನೀಡಿದ 12 ಅನುದಾನ ಪತ್ರಗಳನ್ನು ವಿತರಣಾ ವಹಿಯಲ್ಲಿ ಈ 63 ಪ್ರಕರಣಗಳಿಗಿಂತ ಮೊದಲು ನಮೂದಿಸಲಾಗಿದ್ದರಿಂದ 64ರಲ್ಲಿ 63 ಪ್ರಕರಣಗಳನ್ನು ತರ್ಕಬದ್ಧವಾಗಿ ನಮೂದಿಸಿರುವುದಿಲ್ಲ.
- ಅನಧಿಕೃತ ಹಿಡುವಳಿದಾರರು ಸಲ್ಲಿಸಿದ ಅರ್ಜಿಗಳ ವಿವರಗಳನ್ನು ನಿರ್ವಹಿಸಲು ಇಟ್ಟ ವಹಿಯು 64ರಲ್ಲಿ ಕೇವಲ 11 ಪ್ರಕರಣಗಳಲ್ಲಿ ಮಾತ್ರಅರ್ಜಿಗಳನ್ನು ಸ್ವೀಕರಿಸಲಾಗಿದೆ ಎಂದು ತೋರಿಸಿತು.
- ಮೇ 2009ರಿಂದ ಅಕ್ಟೋಬರ್ 2011ರವರೆಗೆ ತಹಸೀಲ್ದಾರ್‌ರವರು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮಾಸಿಕ ಪ್ರಗತಿ ವರದಿಗಳು ವಾಸ್ತವಿಕ ಸ್ಥಿತಿಗೆ ಪ್ರತಿಯಾಗಿ ಅನುದಾನ ಪತ್ರಗಳ ನೀಡಿಕೆಯಲ್ಲಿ ಶೂನ್ಯ ಪ್ರಗತಿಯನ್ನು ತೋರಿಸಿದವು. ಅರ್ಜಿಗಳು ಬಾಕಿ ಇರುವಿಕೆಯೂ ಕೂಡ ಈ ವರದಿಗಳಲ್ಲಿ ಪ್ರತಿಫಲಿತವಾಗಿರಲಿಲ್ಲ. ಪ್ರಗತಿ ವರದಿಗಳನ್ನು ಸಂಬಂಧಿತ ದಾಖಲೆಗಳನ್ನು ಪರಿಶೀಲಿಸದೇ ತಯಾರಿಸಿರುವುದು ಸ್ಪಷ್ಟವಾಗಿತ್ತು.

ಮುದ್ರಾಂಕ ಮತ್ತು ನೋಂದಣಿ ಇಲಾಖೆ ನಿಗದಿಪಡಿಸಿದ ಮಾರ್ಗದರ್ಶಕ ಮೌಲ್ಯದ (ಅನುಬಂಧ–3) ಪ್ರಕಾರ, ಈ 64 ಪ್ರಕರಣಗಳಲ್ಲಿ ಮಂಜೂರು ಮಾಡಿದ ಒಟ್ಟು 150 ಎಕರೆ 38 ಗುಂಟೆಯ ಭೂಮಿಯು ರೂ.23 ಕೋಟಿ ಮೌಲ್ಯದ್ದಾಗಿತ್ತು. ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು 64 ಅನುದಾನಪತ್ರಗಳ

**ನೀಡುವಿಕೆಯಲ್ಲಿ ಅಕ್ರಮಗಳತ್ತ ಬೆರಳು ಮಾಡುವುದರಿಂದ ಅಕ್ರಮಗಳಿಗೆ ಹೊಣೆಗಾರಿಕೆಯನ್ನು ಮತ್ತು ಲೆಕ್ಕಪರಿಶೋಧನೆಯು ಒತ್ತಿ ಹೇಳಿರುವ ನ್ಯೂನತೆಗಳಿಗೆ ಜವಾಬ್ದಾರಿತನವನ್ನು ನಿಗದಿಪಡಿಸುವುದು ಅತ್ಯಂತ ಅವಶ್ಯಕವಾಗಿದೆ.**

## 5.5 ಪರಿಹಾರಧನ ಪಾವತಿಗೆ ಮುನ್ನ ಎಸ್ಎಲ್ಎಓಗಳು ಎಲ್ಲ ದಾಖಲೆಗಳನ್ನು ಪಡೆಯಲಿಲ್ಲ

ಸರ್ಕಾರಿ ಜಮೀನನ್ನು ಅನುದಾನವಾಗಿ ಸ್ವೀಕರಿಸಿದ್ದ ವ್ಯಕ್ತಿಗಳಿಗೆ ಪರಿಹಾರಧನ ವಿತರಿಸುವಾಗ, ಪರೀಕ್ಷಾ–ತನಿಖೆ ನಡೆಸಿದ ಇಬ್ಬರು ಎಸ್ಎಲ್ಎಓಗಳಲ್ಲಿ, ಎಸ್ಎಲ್ಎಓ–2ರವರು ಅನುಸೂಚಿಯಂತೆ ಭೂ ಮಾಲೀಕರು ಸಲ್ಲಿಸಬೇಕಾದ ಎಲ್ಲಾ ದಾಖಲೆಗಳನ್ನು ಪಡೆಯದೆ ಪರಿಹಾರಧನ ವಿತರಿಸಿರುವುದು ಕಂಡುಬಂದಿದೆ. ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್ ಮತ್ತು ಏರೋಸ್ಪೇಸ್ ಕೈಗಾರಿಕಾ ಪ್ರದೇಶ ಇವುಗಳಿಗಾಗಿ ಸ್ವಾಧೀನಪಡಿಸಿಕೊಂಡ ಭೂಸ್ವಾಧೀನ ಪ್ರಕರಣಗಳಲ್ಲಿ ಧನ ಪಾವತಿಯ ಒಟ್ಟಾರೆ 340 ಪಾವತಿಗಳ ಪರೀಕ್ಷಾ–ತನಿಖೆಯಲ್ಲಿ 60 ಪಾವತಿಗಳಲ್ಲಿ ಎಸ್ಎಲ್ಎಓ–2ರವರು ಅನುಸೂಚಿಯಂತೆ ನಮೂದಿಸಿರುವ ಎಲ್ಲಾ ದಾಖಲೆಗಳನ್ನು ಪಡೆಯದೆ ಪರಿಹಾರಧನ ವಿತರಿಸಿರುವುದನ್ನು ಗಮನಿಸಲಾಯಿತು. ತಪಾಸಣೆ ನಡೆಸಿದ 60 ಪ್ರಕರಣಗಳಲ್ಲಿ ದಾಖಲೆಗಳನ್ನು ಪಡೆದ ವಿವರಗಳನ್ನು ಈ ಕೆಳಗೆ ತೋರಿಸಿರುವ **ಕೋಷ್ಟಕ–5.1**ರಲ್ಲಿ ನಮೂದಿಸಲಾಗಿದೆ.

**ಕೋಷ್ಟಕ–5.1 :– ಪರೀಕ್ಷಾ–ತನಿಖೆ ಮಾಡಿದ ಪ್ರಕರಣಗಳಲ್ಲಿ ಎಸ್ಎಲ್ಎಓ–2ರವರು ದಾಖಲೆಗಳನ್ನು ಪಡೆದ ಬಗ್ಗೆ ಮಾಹಿತಿ**

| ಸಲ್ಲಿಸಬೇಕಾದ ದಾಖಲೆ | ಪರೀಕ್ಷಾ–ತನಿಖೆ ನಡೆಸಿದ ಯೋಜನೆಗಳು | | ಅಗತ್ಯವಿದ್ದ 60 ದಾಖಲೆಗಳಿಗೆ ಪ್ರತಿಯಾಗಿ ಸ್ವೀಕರಿಸಿದ ಒಟ್ಟು ದಾಖಲೆಗಳ ಸಂಖ್ಯೆ |
|---|---|---|---|
| | ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್ | ಏರೋಸ್ಪೇಸ್ ಕಾಂಪೊನೆಂಟ್ಸ್ | |
| | ದಾಖಲೆಗಳನ್ನು ಪಡೆದ ಪ್ರಕರಣಗಳು | ದಾಖಲೆಗಳನ್ನು ಪಡೆಯದ ಪ್ರಕರಣಗಳು | |
| ಮೂಲ ಅನುದಾನ | 8 | 8 | 16 |
| 15 ವರ್ಷಗಳ ಪಹಣೆ | 35 | 21 | 56 |
| ಮ್ಯುಟೇಶನ್ ವಹಿಯ ಸಾರಾಂಶ | 22 | 20 | 42 |
| ಋಣಭಾರ ಧೃಢೀಕರಣ ಪತ್ರ | 22 | 21 | 43 |
| ಕಂದಾಯ ಇಲಾಖೆಯಲ್ಲಿ ಬಾಕಿ ಪ್ರಕರಣಗಳು ಇಲ್ಲ ಎನ್ನುವ ಧೃಢೀಕರಣ ಪತ್ರ | 11 | 16 | 27 |
| ಸೆಕ್ಷನ್ 48 ಎ ಕೆಎಲ್ ಆರ್ ಮಸೂದೆಯ ಪ್ರಕಾರ ಅರ್ಜಿ ಬಾಕಿ ಇದೆಯೇ ಎಂಬ ಧೃಢೀಕರಣ ಪತ್ರ | 06 | 13 | 19 |
| ಗ್ರಾಮ ಲೆಕ್ಕಿಗರಿಂದ ವಂಶ ವೃಕ್ಷ ದಾಖಲೆ ಧೃಢೀಕರಣ | 17 | 14 | 31 |
| ಉತ್ತರಾಧಿಕಾರಿ ಧೃಢೀಕರಣ | –– | –– | –– |
| ಚುನಾವಣಾ ಆಯೋಗದ ಮತದಾರ ಗುರುತಿನ ಚೀಟಿ | –– | –– | –– |
| ಬ್ಯಾಂಕುಗಳ ಬಾಕಿ ಇಲ್ಲವೆಂಬ ಧೃಢೀಕರಣ ಪತ್ರ | 12 | 19 | 31 |
| ಇತ್ತೀಚಿನ ಕಂದಾಯ ಪಾವತಿ ಚೀಟಿ | –– | 02 | 02 |
| ಸರ್ಕಾರದ ಬಾಕಿ ಇಲ್ಲ ಧೃಢೀಕರಣ ಪತ್ರ | 07 | 14 | 21 |

(ಆಧಾರ: ಪರಿಹಾರಧನ ಪಾವತಿಯ ಕಡತಗಳಿಂದ ಸಂಗ್ರಹಿಸಿ ಉಲ್ಲೇಖಿಸಿರುವುದು)

(1) ತಪಾಸಣೆ ಮಾಡಿದ 60 ಪ್ರಕರಣಗಳಲ್ಲಿ 16 ಪ್ರಕರಣಗಳಲ್ಲಿ ಮಾತ್ರ ಎಸ್ಎಲ್ಎಓ–2ರವರು ಮೂಲ ಅನುದಾನ ಪತ್ರಗಳನ್ನು ಪಡೆದುಕೊಂಡಿದ್ದರು. ಉಳಿದ ಪ್ರಕರಣಗಳಲ್ಲಿ ಎಸ್ಎಲ್ಎಓ–2ರವರು ಭೂಮಿಯ ಒಡೆತನವನ್ನು ಪ್ರತಿಪಾದಿಸುವ ಮೂಲ ಮತ್ತು ಬಹಳ ಮುಖ್ಯವಾದ ದಾಖಲೆಗಳನ್ನು ಪಡೆಯದೇ ರೂ.42.56 ಕೋಟಿಗಳ ಪರಿಹಾರಧನವನ್ನು ಪಾವತಿ ಮಾಡಿರುತ್ತಾರೆ.

(2) ಪಹಣಿಯು ಹಕ್ಕಿನ ದಾಖಲೆಯಾಗಿದ್ದು ಇದರಲ್ಲಿ ಒಂದು ಸರ್ವೆನಂಬರಿನ ಹಿಡುವಳಿದಾರರ, ವಾರಸುದಾರರ, ಅಡಮಾನ ಮಾಹಿತಿಯುಳ್ಳ, ಉಳುಮೆದಾರರ ಬಗ್ಗೆ ವಿವರಗಳಿದ್ದು, ಅದರಲ್ಲಿ ಅಂತಹ ವ್ಯಕ್ತಿಗಳ ಕ್ರಮವಾದ ಅಭಿರುಚಿ, ಸ್ವರೂಪ ಮತ್ತು ವಿಸ್ತಾರಗಳನ್ನೂ ಇದ್ದು, ಜಮೀನು ಯಾವುದಾದರೂ ಆರ್ಥಿಕ ಬಾದ್ಯತೆಗೆ ಒಳಗಾಗಿದೆಯೋ ಎನ್ನುವ ಮಾಹಿತಿಯನ್ನು ನೀಡುತ್ತದೆ. 56 ಪ್ರಕರಣಗಳಲ್ಲಿ

ಪಹಣಿಯನ್ನು ಸಲ್ಲಿಸಲಾಗಿದ್ದರೂ, ಅವುಗಳಲ್ಲಿ 56ರ ಪೈಕಿ 37 ಪ್ರಕರಣಗಳಲ್ಲಿ ಎಸ್‌ಎಲ್‌ಎಒ-2ರವರು ನಿಗದಿಪಡಿಸಿರುವ 15 ವರ್ಷಗಳಿಗೆ ಪ್ರತಿಯಾಗಿ 1ರಿಂದ 12 ವರ್ಷಗಳ ಅವಧಿಯ ವ್ಯಾಪ್ತಿಯ ಪಹಣಿಗಳಾಗಿದ್ದವು.

(3) ಯಾವುದೇ ವ್ಯಕ್ತಿಯು ಆಸ್ತಿಯ ಉತ್ತರಾಧಿಕಾರಿಯಾಗಿ ಅಸ್ತಿತ್ವದಲ್ಲಿರುವಂತಹ, ವಂಶಾನುಕ್ರಮವಾಗಿ, ವಿಭಜನೆಯಿಂದಾಗಿ, ಕೊಳ್ಳುವುದರಿಂದಾಗಿ, ಅಡಮಾನದಿಂದಾಗಿ, ಉಡುಗೊರೆಯಾಗಿ ಅಥವಾ ಇನ್ನಾವುದೇ ರೀತಿ ಗಳಿಸಿದಲ್ಲಿ ಮಾಲೀಕರಿಂದ, ಹಿಡುವಳಿದಾರನಿಂದ, ವಾಸಿಸುವರಿಂದಾಗಲೀ ಅಥವಾ ಅಡಮಾನದಲ್ಲಾಗಲೀ ಗಳಿಸಿದ ಆಸ್ತಿಯನ್ನು ಕಂದಾಯ ಕಛೇರಿಗಳಿಗೆ ನಮೂದಿಸಬೇಕು ಹಾಗೂ ಅದನ್ನು ಮ್ಯುಟೇಶನ್ ವಹಿಯಲ್ಲಿ ದಾಖಲಿಸಬೇಕು. ಪರಿಹಾರಧನ ಕೋರಿರುವ ಅರ್ಜಿದಾರನ ಭೂಮಿಯ ಮೇಲಿನ ಒಡೆತನದ ಹಕ್ಕು ಪ್ರಮಾಣೀಕರಿಸಲು ಕಂದಾಯ ಇಲಾಖೆಯು ಮ್ಯುಟೇಶನ್ ವಹಿಯ ದಾಖಲೆಗಳು ಅವಶ್ಯಕವಾದರೂ 42 ಪ್ರಕರಣಗಳಲ್ಲಿ ಮಾತ್ರ ಸಲ್ಲಿಸಿರುವುದನ್ನು ಗಮನಿಸಲಾಯಿತು.

(4) ಒಂದು ಆಸ್ತಿಗೆ ಲಗತ್ತಿಸಲಾದ ಹೊಣೆಗಾರಿಕೆಗಳನ್ನು ತೋರಿಸುವ ನೋಂದಣಾ ಪ್ರಾಧಿಕಾರದಿಂದ ನೀಡಿದ ಋಣಭಾರ ಪತ್ರಗಳನ್ನು ಕೇವಲ 43 ಪ್ರಕರಣಗಳಲ್ಲಿ ಸ್ವೀಕರಿಸಲಾಗಿದೆ.

(5) ಕರ್ನಾಟಕ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ (ನಿರ್ದಿಷ್ಟ ಭೂಮಿಯ ವರ್ಗಾವಣೆ ನಿಷೇಧ) ಕಾಯಿದೆ, 1978ರ ಅನ್ವಯ ಅನುಸೂಚಿತ ಜಾತಿ ಅಥವಾ ಪಂಗಡಗಳಿಗೆ ಸೇರಿದ ಭೂಮಿಯನ್ನು ಅನುದಾನ ಪತ್ರದಲ್ಲಿ ವಿಧಿಸಿದ ಷರತ್ತುಗಳಿಗೆ ವಿರುದ್ಧವಾಗಿ ಮತ್ತು ಸರ್ಕಾರದ ಪೂರ್ವಾನುಮತಿ ಇಲ್ಲದೇ ವರ್ಗಾಯಿಸುವುದು ಅನೂರ್ಜಿತ. ಈ ಕಾಯಿದೆಯಡಿ ಬರುವ ಅನುದಾನ ಪಡೆದ ವ್ಯಕ್ತಿಗಳು ಪರಿಹಾರಧನ ಪಾವತಿಗಾಗಿ ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯ ಸಹಾಯಕ ಆಯುಕ್ತರಿಂದ ಯಾವುದೇ ಪ್ರಕರಣವು ಬಾಕಿ ಇಲ್ಲವೆಂಬ ಧೃಢೀಕರಣ ಪತ್ರವನ್ನು ಭೂ ಸ್ವಾಧೀನಾಧಿಕಾರಿಗಳಿಗೆ ಸಲ್ಲಿಸಬೇಕು. 27 ಪ್ರಕರಣಗಳಲ್ಲಿ ಈ ಧೃಢೀಕರಣ ಪತ್ರಗಳನ್ನು ಸಲ್ಲಿಸಲಾಗಿದ್ದರೂ ನಾಲ್ಕು ಪ್ರಕರಣಗಳಲ್ಲಿ ಕಂಡಿಕೆ **5.6.10(4)ರಲ್ಲಿ** ಚರ್ಚಿಸಿರುವಂತೆ ಈ ಕಾಯಿದೆಯನ್ನು ಉಲ್ಲಂಘಿಸಿ ಪರಿಹಾರಧನ ಪಾವತಿ ಮಾಡಲಾಗಿದೆ.

(6) ಭೂಮಿಯ ಸಂಬಂಧವಾಗಿ ಎಲ್ಲಿ ಭೂ ಹಿಡುವಳಿದಾರಿಕೆಯ ವ್ಯಾಜ್ಯಗಳು ಇವೆಯೋ ಅಂತಹ ಸಂದರ್ಭದಲ್ಲಿ ಪ್ರಾಧಿಕಾರವು ಕರ್ನಾಟಕ ಭೂ ಸುಧಾರಣಾ ಕಾಯಿದೆ, 1961ರ ಪರಿಚ್ಛೇದ 48ಎ ಅನ್ವಯ ತನಿಖೆ ಮಾಡಿ ಸೂಕ್ತ ಆದೇಶಗಳನ್ನು ನೀಡಬೇಕು. ಪರಿಹಾರಧನ ಪಾವತಿ ಮಾಡುವ ಮುನ್ನ ಸ್ವಾಧೀನ ಪಡಿಸಿಕೊಂಡ ಭೂಮಿಯ ಬಗ್ಗೆ ಈ ಅಧಿನಿಯಮದಡಿ ಯಾವುದೇ ಭೂ ವ್ಯಾಜ್ಯಗಳು ಬಾಕಿ ಇರುವುದಿಲ್ಲ ಎನ್ನುವುದನ್ನು ಎಸ್‌ಎಲ್‌ಎಒ-2 ಖಚಿತಪಡಿಸಿಕೊಳ್ಳಬೇಕು. ಆದರೆ, ಅಗತ್ಯವಿದ್ದ ಪ್ರಮಾಣ ಪತ್ರಗಳನ್ನು ಕೇವಲ 19 ಪ್ರಕರಣಗಳಲ್ಲಿ ಪಡೆಯಲಾಗಿತ್ತು.

(7) ಆಸ್ತಿಯೊಂದರಲ್ಲಿ ಆಸಕ್ತರಾಗಿರುವ ಕುಟುಂಬ ಸದಸ್ಯರನ್ನು ತೋರಿಸುವ ಗ್ರಾಮ ಲೆಕ್ಕಿಗರಿಂದ ಪಡೆದ ವಂಶವೃಕ್ಷ ಪ್ರಮಾಣ ಪತ್ರಗಳನ್ನು 31 ಪ್ರಕರಣಗಳಲ್ಲಿ ಸಲ್ಲಿಸಿದ್ದರೆ, ಉತ್ತರಾಧಿಕಾರಿ ಪ್ರಮಾಣ ಪತ್ರಗಳನ್ನು ಯಾವುದೇ ಪ್ರಕರಣದಲ್ಲಿಯೂ ಸಲ್ಲಿಸಿರುವುದಿಲ್ಲ.

(8) ಪರಿಹಾರಧನ ಹಕ್ಕು ಮಂಡನೆಗೆ ಗುರುತನ್ನು ಪ್ರಮಾಣೀಕರಿಸಲು ಮತದಾರರ ಗುರುತಿನ ಚೀಟಿಯನ್ನು ಯಾವುದೇ ಪ್ರಕರಣದಲ್ಲೂ ಸಲ್ಲಿಸಿರಲಿಲ್ಲವಾದರೆ, ಯಾವುದೇ ಬಾಕಿ ಇಲ್ಲವೆಂಬ ಅಧಿಕಾರ ವ್ಯಾಪ್ತಿಯಲ್ಲಿರುವ ಬ್ಯಾಂಕಿನಿಂದ ಪ್ರಮಾಣಪತ್ರವನ್ನು 60ರಲ್ಲಿ ಕೇವಲ 31 ಪ್ರಕರಣಗಳಲ್ಲಿ ಪಡೆಯಲಾಗಿತ್ತು ಹಾಗೂ ಅಂದಿನವರೆಗೆ ಕಂದಾಯ ಪಾವತಿ ಮಾಡಿರುವ ರಸೀತಿಗಳು 60ರಲ್ಲಿ ಕೇವಲ 2 ಪ್ರಕರಣಗಳಲ್ಲಿ ಮಾತ್ರ ಲಭ್ಯವಿದ್ದವು.

ಪರಿಹಾರಧನ ಕೋರಿದ ವ್ಯಕ್ತಿಗಳಿಂದ ಪಡೆದ ದಾಖಲೆಗಳು ಅಪೂರ್ಣವಾಗಿದ್ದರೂ ಎಸ್‌ಎಲ್‌ಎಒ-2ರವರು ಈ ವಿಷಯನ್ನು ಕಡೆಗಣಿಸಿದರು. ಪರೀಕ್ಷಾ-ತನಿಖೆ ನಡೆಸಿದ ಎಲ್ಲ ಪ್ರಕರಣಗಳಲ್ಲೂ ಕೋರಿಕೆಗಳನ್ನು ಪರಿಶೀಲಿಸುವ ಸಿಬ್ಬಂದಿಯು ದಾಖಲೆಗಳು ಪೂರ್ಣವಾಗಿಲ್ಲ ಎಂದು ಗಮನ ಸೆಳೆದರೂ ಎಸ್‌ಎಲ್‌ಎಒ-2ರವರು ಪರಿಹಾರಧನದ ಪಾವತಿಯನ್ನು ಅಧಿಕರಿಸಿದರು. ಹೀಗಾಗಿ, ಎಸ್‌ಎಲ್‌ಎಒ-2ರವರು ಮಂಡಳಿಯ ಹಿತಾಸಕ್ತಿಗಳನ್ನು ಕಾಪಾಡಲಿಲ್ಲ ಮತ್ತು ಈ ಕೆಳಗೆ ಚರ್ಚಿಸಿರುವಂತೆ ಹಲವಾರು ಅನರ್ಹ ಪ್ರಕರಣಗಳಲ್ಲಿ ಪರಿಹಾರಧನವನ್ನು ವಿತರಿಸಿದರು.

## 5.6 ಪರಿಹಾರಧನ ಪಾವತಿಯಲ್ಲಿ ಅಕ್ರಮಗಳು

### 5.6.1 ಎಸ್‌ಎಲ್‌ಎಓರವರು ವಿಶೇಷ ಜಿಲ್ಲಾಧಿಕಾರಿಗಳ ವರದಿಯನ್ನು ಕಡೆಗಣಿಸಿ ಪರಿಹಾರಧನವನ್ನು ಪಾವತಿ ಮಾಡಿದರು

ಮೇ 2007ರಲ್ಲಿ ಮಂಡಳಿಯ ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ಗಾಗಿ 450 ಎಕರೆ 5 ಗುಂಟೆಗಳ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತು. ಈ ಸ್ವಾಧೀನಪಡಿಸಿಕೊಂಡ ಭೂಮಿಯು ಬಂಡಿಕೋಡಿಗೆಹಳ್ಳಿ ಗ್ರಾಮದ ಸರ್ಕಾರಿ ಜಮೀನು (ಹಲವಾರು ವ್ಯಕ್ತಿಗಳಿಗೆ ಅನುದಾನ ನೀಡಿದ್ದು ಸೇರಿದಂತೆ) ಸರ್ವೆ ನಂಬರ್ 40, 41 ಮತ್ತು 74ಕ್ಕೆ ಸೇರಿದ 206 ಎಕರೆ ಭೂಮಿಯೂ ಒಳಗೊಂಡಿತ್ತು. ಸೆಪ್ಟೆಂಬರ್ 2007ರಲ್ಲಿ ಮಂಡಳಿಯ ವಿಶೇಷ ಜಿಲ್ಲಾಧಿಕಾರಿಗಳು ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಮಂಡಳಿಗೆ ಹಸ್ತಾಂತರಿಸಬೇಕೆಂದು ಬೆಂಗಳೂರು–ನಗರ ಜಿಲ್ಲಾಧಿಕಾರಿಗಳನ್ನು ಮನವಿ ಮಾಡಿದರು (ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಕಾಯಿದೆಯ ಸೆಕ್ಷನ್ 28(6)ರ ಅಡಿಯಲ್ಲಿ). ತಹಸೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ, ಇವರು ಉಲ್ಲೇಖಿಸಿದ ಸರ್ವೆ ನಂಬರ್‌ನಲ್ಲಿ ಸ್ವಾಧೀನಪಡಿಸಿ ಕೊಂಡಿರುವ ಜಮೀನಿನ ವಿಸ್ತೀರ್ಣದ ಪ್ರಮಾಣವು ಗಣಕೀಕೃತ ಪಹಣಿ ಪತ್ರಗಳಲ್ಲಿ ನಮೂದಿಸಿರುವ ವಿಸ್ತೀರ್ಣಕ್ಕಿಂತಲೂ ಹೆಚ್ಚಾಗಿರುವುದರಿಂದ ಭೂಮಿಯನ್ನು ಹಸ್ತಾಂತರಿಸಲು ಸಾಧ್ಯವಿಲ್ಲವೆಂದು ಬೆಂಗಳೂರು–ನಗರ ಜಿಲ್ಲಾಧಿಕಾರಿಗಳಿಗೂ ಮತ್ತು ಮಂಡಳಿಯ ವಿಶೇಷ ಸ್ವಾಧೀನಾಧಿಕಾರಿಗಳಿಗೂ ನವೆಂಬರ್ 2007ರಲ್ಲಿ ತಿಳಿಸಿದರು. ವಾಸ್ತವವಾಗಿ ಅನುದಾನಿತ ಭೂಮಿಯ ವಿಸ್ತೀರ್ಣ ಸರ್ವೆ ನಂಬರ್ 40ರಲ್ಲಿ 142 ಎಕರೆ 7 ಗುಂಟೆ ಮತ್ತು ಸರ್ವೆ ನಂಬರ್ 74ರಲ್ಲಿ 74 ಎಕರೆ 39 ಗುಂಟೆಗಳಿದ್ದು ಅದೇ ಗಣಕೀಕೃತ ಪಹಣಿಯಲ್ಲಿ 172 ಎಕರೆ 38 ಗುಂಟೆಗಳು ಮತ್ತು 112 ಎಕರೆ 32 ಗುಂಟೆಗಳು ಎಂದು ನಮೂದಿಸಲಾಗಿದೆ. ಈ ಸಂಬಂಧ ಡಿಸೆಂಬರ್ 2007ರಲ್ಲಿ ಬೆಂಗಳೂರು ನಗರ ವಿಶೇಷ ಭೂಸ್ವಾಧೀನಾಧಿಕಾರಿಗಳು ಭೂ ಕಂದಾಯ ಕಾಯಿದೆ, 1964ರ ಸೆಕ್ಷನ್ 136(3)ರ ಅನ್ವಯ ಈ ವಿಷಯದ ಬಗ್ಗೆ ತನಿಖೆ ನಡೆಸುತ್ತಿರುವುದಾಗಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ತಿಳಿಸಿದರು. ಈ ಕಾಯಿದೆಯು ಜಿಲ್ಲಾಧಿಕಾರಿಗಳಿಗೆ ಯಾವುದೇ ಅರ್ಜಿದಾರರ ದಾಖಲೆಗಳನ್ನು ತರಿಸಿಕೊಂಡು ಅಥವಾ ತನ್ನ ಸ್ವಂತಿಕೆಯಿಂದಲೇ ಪರಿಶೀಲಿಸಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ನೀಡುತ್ತದೆ. ಈ ತನಿಖೆಯ ವಿಚಾರವನ್ನು ಮಂಡಳಿಯ ಎಸ್‌ಎಲ್‌ಎಓರವರಿಗೂ ಪತ್ರದ ಪ್ರತಿಯನ್ನು ಕಳುಹಿಸಿ ತಿಳಿಸಲಾಗಿತ್ತು.

ಎಸ್‌ಎಲ್‌ಎಓ–2ರವರಿಗೆ ತನಿಖೆಯ ವಿಚಾರ ತಿಳಿದಿದ್ದರೂ ಅವರು ತನಿಖೆಯ ಅಂತಿಮ ನಿರ್ಧಾರಗಳಿಗೂ ಪ್ರತೀಕ್ಷಿಸದೇ (ಏಪ್ರಿಲ್ 2008ರಿಂದ ಮಾರ್ಚ್ 2010ರವರೆಗೆ) ಪರಿಹಾರಧನದ ಮೊತ್ತವಾದ ರೂ.45.68 ಕೋಟಿಯನ್ನು ಸರ್ವೆ ನಂಬರ್ 40ರ 147 ಎಕರೆ 38 ಗುಂಟೆ ಜಮೀನು ಸ್ವಾಧೀನಕ್ಕಾಗಿ ಮತ್ತು ರೂ.30.39 ಕೋಟಿಯನ್ನು ಸರ್ವೆ ನಂಬರ್ 74ರ 87 ಎಕರೆ 5 ಗುಂಟೆ ಜಮೀನು ಸ್ವಾಧೀನಕ್ಕಾಗಿ ಪಾವತಿ ಮಾಡಿರುತ್ತಾರೆ. ವಿವರಗಳನ್ನು **ಕೋಷ್ಟಕ–5.2**ರಲ್ಲಿ ನೀಡಲಾಗಿದೆ.

**ಕೋಷ್ಟಕ– 5.2 : ಸ್ವಾಧೀನಪಡಿಸಿಕೊಂಡ ಭೂಮಿಯ ವಿಸ್ತೀರ್ಣ ಹಾಗೂ ಪರಿಹಾರಧನ ಪಾವತಿಯ ವಿವರಗಳು**

| ಸರ್ವೆ ಸಂಖ್ಯೆ | ಅಧಿಸೂಚನೆ ಹಾಗೂ ಸ್ವಾಧೀನಪಡಿಸಿಕೊಂಡ ಸರ್ಕಾರಿ ಜಮೀನಿನ ವಿಸ್ತೀರ್ಣ (ಎಕರೆ ಮತ್ತು ಗುಂಟೆಗಳಲ್ಲಿ) | ಪರಿಹಾರಧನ ಪಾವತಿ ಮಾಡಿದ ಅನುದಾನ ಪಡೆದ ಭೂಮಿಯ ವಿಸ್ತೀರ್ಣ (ಎಕರೆ ಮತ್ತು ಗುಂಟೆಗಳಲ್ಲಿ) | ಅನುದಾನ ಪಡೆದ ಭೂಮಿಗೆ ಪಾವತಿಸಿದ ಪರಿಹಾರಧನ (ಕೋಟಿ ರೂ.ಗಳಲ್ಲಿ) |
|---|---|---|---|
| **40** | **206–00** | **147–38** | **45.68** |
| **74** | **41–00** | **87–05** | **30.39** |
| **ಒಟ್ಟು** | **247–00** | **235–03** | **76.07** |

(ಆಧಾರ: ಗೆಜೆಟ್ ಅಧಿಸೂಚನೆ ಮತ್ತು ಮಂಡಳಿಯು ನೀಡಿದ ಮಾಹಿತಿ)

ಭೂಸ್ವಾಧೀನಕ್ಕಾಗಿ ಅಧಿಸೂಚಿಸಿದ ವಿಸ್ತೀರ್ಣ ಸರ್ವೆ ನಂಬರ್ 74ರ 41 ಎಕರೆ ಭೂಮಿಯ ಪರಿಹಾರ ಮೊತ್ತ ರೂ.12.71 ಕೋಟಿಗಳಾಗಿದ್ದರೂ (ಎಕರೆಗೆ ರೂ.31 ಲಕ್ಷದಂತೆ) ಭೂಸ್ವಾಧೀನ ಅಧಿಕಾರಿಗಳು ಏಪ್ರಿಲ್ 2008ರಿಂದ ಮಾರ್ಚ್ 2010ರ ಅವಧಿಯಲ್ಲಿ 87 ಎಕರೆ 5 ಗುಂಟೆ ಭೂಮಿಯ ಪರವಾಗಿ ರೂ.30.39 ಕೋಟಿಗಳನ್ನು ಪರಿಹಾರವಾಗಿ ಪಾವತಿಸಿ ಹೆಚ್ಚುವರಿ 46 ಎಕರೆ 5 ಗುಂಟೆ ಭೂಮಿಗೆ

ರೂ.17.68 ಕೋಟಿಗಳ ಹೆಚ್ಚುವರಿ ಧನ ಪಾವತಿ ಮಾಡಿದರು. ತಾರೀಖು 18 ಫೆಬ್ರವರಿ 2009 ರಂದು ಮಂಡಳಿಯ ಕಛೇರಿಯ ಸಂಬಂಧಪಟ್ಟ ಸಿಬ್ಬಂದಿ ನೌಕರರು ಅಂತಿಮವಾಗಿ ಅಧಿಸೂಚಿತ ಭೂಮಿಯ ವಿಸ್ತೀರ್ಣಕ್ಕೆ ಸಮನಾಗಿ ಇರುವ ಮೊತ್ತಕ್ಕಿಂತ ಪರಿಹಾರಧನಕ್ಕೆ ಲೆಕ್ಕ ಹಾಕುತ್ತಿರುವ ಜಮೀನಿನ ವಿಸ್ತೀರ್ಣ ಹೆಚ್ಚಾಗುತ್ತಿದೆ ಎಂಬ ವಿಚಾರವನ್ನು ಗಮನಕ್ಕೆ ತಂದರೂ ಕೂಡ ಎಸ್‌ಎಲ್‌ಎಓರವರು ಸಿಬ್ಬಂದಿಯ ಅಭಿಪ್ರಾಯಗಳನ್ನು ಕಡೆಗಣಿಸಿ ಮುಂದುವರೆದು 16 ಎಕರೆ ಭೂಮಿಗೆ ರೂ.6.04 ಕೋಟಿಗಳನ್ನು ಪಾವತಿ ಮಾಡಿರುತ್ತಾರೆ.

ಸರ್ವೆ ನಂಬರ್ 40 ಮತ್ತು 74ರಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿಗೆ ನೀಡಿದ ಪರಿಹಾರ ಮೊತ್ತದ ಕಡತಗಳನ್ನು ಮತ್ತು ಯಲಹಂಕದ ತಹಸೀಲ್ದಾರ್‌ರವರ ಕಛೇರಿಯ ದಾಖಲೆಗಳನ್ನು ತಾಳೆಮಾಡಿ ನೋಡಲಾಗಿ ಅಧಿಸೂಚಿತ ಭೂ ಪ್ರದೇಶದ ಹೊರಗಡೆ ಇರುವ ಭೂಮಿಗೆ ರೂ.3.09 ಕೋಟಿಗಳ ಪರಿಹಾರಧನ ಪಾವತಿಯಾಗಿರುವುದು ಕಂಡು ಬಂದಿದ್ದು ಜಂಟಿ-ಮಾಪನಾ ಕಾರ್ಯವನ್ನು ಕೈಗೊಳ್ಳದೆಯೇ ಪರಿಹಾರಧನವನ್ನು ಪಾವತಿ ಮಾಡಿರುವುದು ಗಮನಕ್ಕೆ ಬಂದಿದೆ. ವಿವರಗಳನ್ನು ಈ ಕೆಳಗಿನ **ಕೋಷ್ಟಕ-5.3** ರಲ್ಲಿ ನೀಡಲಾಗಿದೆ.

**ಕೋಷ್ಟಕ-5.3: ಜಂಟಿ ಮಾಪನಗಳನ್ನು ನಡೆಸದೆ ಪರಿಹಾರಧನ ಪಾವತಿ ಮಾಡಿರುವುದು.**

| ಸರ್ವೆ ನಂಬರ್ | ಬ್ಲಾಕ್ ಸಂಖ್ಯೆ | ಭೂ ವಿಸ್ತೀರ್ಣ ಎಕರೆ ಮತ್ತು ಗುಂಟೆ | ಪರಿಹಾರಧನ ಪಾವತಿಸಿರುವುದು (ಲಕ್ಷ ರೂ. ಗಳಲ್ಲಿ) |
|---|---|---|---|
| 40/357 | 69 | 2-00 | 62.00 |
| 40/358 | 73 | 1-20 | 46.50 |
| 40/ಪಿ-358 | 73 | - | 10.00 |
| 40/359 | 76 | 2-00 | 66.00 |
| 74/304 | 34 | 4-00 | 124.00 |
| ಒಟ್ಟು | | 9-20 | 308.50 |

(ಆಧಾರ: ಮಂಡಳಿಯ ಹಾಗೂ ಕಂದಾಯ ಇಲಾಖೆ ನೀಡಿದ ಮಾಹಿತಿ)

ಭೂ ಸ್ವಾಧೀನ ಅಧಿಸೂಚನೆಯಲ್ಲಿ ಕೇವಲ ಖಾತೆದಾರರ[13] (ಪಹಣಿಯಲ್ಲಿರುವಂತೆ) ಹೆಸರುಗಳನ್ನು ಮಾತ್ರ ಸೂಚಿಸಿದ್ದು ಅವರ ಒಡೆತನಕ್ಕೆ ಸೇರಿದ ಭೂಮಿಯ ವಿಸ್ತೀರ್ಣದ ಪ್ರಮಾಣವನ್ನು ಅಧಿಸೂಚನೆ ಹೊರಡಿಸುವ ವೇಳೆಯಲ್ಲಿ ನಿಗದಿಪಡಿಸಿರಲಿಲ್ಲ ಮತ್ತು ಈ ಕಾರಣದಿಂದ ಹೆಚ್ಚುವರಿ ಭೂ ವಿಸ್ತೀರ್ಣಕ್ಕೆ ಪರಿಹಾರಧನ ಪಾವತಿ ಮಾಡುವಂತಾಯಿತು ಎಂದು ಎಸ್‌ಎಲ್‌ಎಓ ತಿಳಿಸಿದರು. ಎರಡೂ ಸರ್ವೆ ನಂಬರಿನ ಭೂಮಿಯ ಜಂಟಿ ಮಾಪನಯನ್ನು ಅಧಿಸೂಚನೆ ಹೊರಡಿಸುವ ಮುಂಚಿತವಾಗಲಿ ಅಥವಾ ಹೊರಡಿಸಿದ ನಂತರವಾಗಲೀ ಕೈಗೊಂಡಿರಲಿಲ್ಲ ಎಂಬ ವಿಷಯವು ಎಸ್‌ಎಲ್‌ಎಓ-2ರವರಿಗೆ ತಿಳಿದಿತ್ತಾದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಅಲ್ಲದೆ ಗಣಿಕೀಕೃತ ಪಹಣಿ ಪತ್ರಗಳಲ್ಲಿ ಹೆಚ್ಚು ವಿಸ್ತೀರ್ಣದ ಭೂಮಿಯನ್ನು ನಮೂದಿಸಿದ್ದರ ಬಗ್ಗೆ ನಡೆಯುತ್ತಿದ್ದ ವಿಶೇಷ ಜಿಲ್ಲಾಧಿಕಾರಿಗಳ ಬೆಂಗಳೂರು ನಗರ ಪ್ರದೇಶ ಇವರ ತನಿಖೆಯೂ ಪ್ರಗತಿಯಲ್ಲಿತ್ತು. ಎಸ್‌ಎಲ್‌ಎಓ-2ರವರು ಇವೆರಡೂ ವಿಷಯಗಳನ್ನು ಕಡೆಗಣಿಸಿ ಕೇವಲ ಅಪೂರ್ಣ ದಾಖಲೆಗಳ ಆಧಾರದ ಮೇಲೆ ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ಗೆ ಅಗತ್ಯವೇ ಇಲ್ಲದ ಹೆಚ್ಚುವರಿ ಭೂ ವಿಸ್ತೀರ್ಣಕ್ಕೆ ಒಟ್ಟು ರೂ.20.77 ಕೋಟಿಗಳ[14] ಪರಿಹಾರಧನವನ್ನು ವಿತರಿಸಿದ್ದಾರೆ.

### 5.6.2 ಮುಟ್ಟುಗೋಲು ಹಾಕಿದ ಸರ್ಕಾರಿ ಭೂಮಿಗೂ ಪರಿಹಾರಧನ ಪಾವತಿ ಮಾಡಲಾಯಿತು

ಬೆಂಗಳೂರು-ನಗರ ಜಿಲ್ಲಾಧಿಕಾರಿಗಳು ಮಂಡಳಿಯ ವಿಶೇಷ ಜಿಲ್ಲಾಧಿಕಾರಿಗಳಿಗೆ ಬಂಡಿಕೋಡಿಗೇಹಳ್ಳಿಯ ಸರ್ವೆ ನಂಬರ್ 40ರ 52 ಎಕರೆ 8 ಗುಂಟೆಗಳ ಭೂಮಿ ಮತ್ತು ಸರ್ವೆ ನಂಬರ್ 74ರ 24 ಎಕರೆ ಭೂಮಿಯನ್ನು ಪ್ರಸಕ್ತ (ಅಕ್ಟೋಬರ್ 2011) ಚಾಲ್ತಿಯಲ್ಲಿರುವ ತನಿಖೆಯಲ್ಲಿ ಕಂಡುಬಂದುದರ ಪರಿಣಾಮವಾಗಿ ಮತ್ತೆ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ತಿಳಿಸಿರುವುದನ್ನು ಗಮನಿಸಲಾಯಿತು (ಮೇ 2010). ಇದರ ಜೊತೆಯಲ್ಲಿ ವೈಮಾನಿಕ ಉಪಕರಣಗಳ

---

[13] ಆಸ್ತಿಗೆ ಒಡೆತನದ ವ್ಯಕ್ತಿಗಳು

[14] ಕೋಷ್ಟಕ-5.3ರಂತೆ ರೂ.3.09 ಕೋಟಿ + ಕೋಷ್ಟಕ-5.2ರಂತೆ ಸರ್ವೆನಂಬರ್ 74ರಲ್ಲಿ 46 ಎಕರೆ 5 ಗುಂಟೆ ಹೆಚ್ಚುವರಿ ಭೂಸ್ವಾಧೀನಕ್ಕಾಗಿ ರೂ.17.68 ಕೋಟಿ

ಕೈಗಾರಿಕಾ ಪ್ರದೇಶಕ್ಕೆ ಸ್ವಾಧೀನ ಪಡಿಸಿಕೊಂಡಿದ್ದ 8 ಎಕರೆ 17 ಗುಂಟೆ ಭೂಮಿಯನ್ನು (ಸರ್ವೆ ನಂಬರ್ 8, ಉಣಸೂರು ಗ್ರಾಮ) ಹಾಗೂ ಐಟಿ ಪಾರ್ಕ್‌ಗೆ ಸ್ವಾಧೀನಪಡಿಸಿಕೊಂಡಿದ್ದ 21 ಎಕರೆ ಭೂಮಿಯನ್ನು (ಸರ್ವೆ ನಂಬರ್ 7, ಬಿ.ಕೆ.ಪಾಳ್ಯ ಗ್ರಾಮ) ಅಂದರೆ ಒಟ್ಟಾರೆ 29 ಎಕರೆ 17 ಗುಂಟೆ ಭೂಮಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು. ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಿದಂತೆ ಎಸ್‌ಎಲ್‌ಎಓರವರು ಈಗಾಗಲೇ ಬಂಡಿಕೋಡಿಗೇಹಳ್ಳಿಯ ಸರ್ವೆನಂಬರ್ 40 ಮತ್ತು 74ರ ಮುಟ್ಟುಗೋಲು ಹಾಕಿಕೊಂಡ ಭೂಮಿಗೆ ರೂ.25.41 ಕೋಟಿಗಳ (ಶೇಕಡಾ 33ರಂತೆ ಒಟ್ಟು ರೂ.76.07 ಕೋಟಿ ಪರಿಹಾರಧನ) ಪಾವತಿ ಮಾಡಿರುವುದು ಮತ್ತು ಏರೋಸ್ಪೇಸ್ ಕೈಗಾರಿಕಾ ಪ್ರದೇಶಕ್ಕೆ ಸಂಬಂಧಿಸಿದಂತೆ ರೂ.14.72 ಕೋಟಿಗಳ ಪರಿಹಾರಧನವನ್ನು ಮುಟ್ಟುಗೋಲು ಹಾಕಿಕೊಂಡ ಭೂಮಿಯ ಪರವಾಗಿ ಪಾವತಿ ಮಾಡಿರುವುದು ಕಂಡು ಬಂದಿರುತ್ತದೆ.

ಈ ಎರಡೂ ಸರ್ವೆ ನಂಬರ್‌ಗಳ ಭೂಮಿಯನ್ನು ಮತ್ತು ಇತರೆ ಕೈಗಾರಿಕಾ ಪ್ರದೇಶಕ್ಕೆ ಸಂಬಂಧಿಸಿದಂತೆ ಭೂಮಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುವುದರ ಪೂರ್ಣ ವಿವರಗಳು ಬೆಂಗಳೂರು ನಗರ ವಿಶೇಷ ಜಿಲ್ಲಾಧಿಕಾರಿಗಳಿಂದ ಇನ್ನೂ ನಿರೀಕ್ಷಿಸಲಾಗಿದೆ (ಅಕ್ಟೋಬರ್ 2011). ಈ ಕೆಳಗಿನ **ಕೋಷ್ಟಕ–5.4**ರಲ್ಲಿ ತೋರಿಸಿರುವಂತೆ ತನಿಖಾ ಕಾರ್ಯ ಇನ್ನೂ ಬಾಕಿಯಿರುವ 356 ಎಕರೆ 15 ಗುಂಟೆಗಳ ಜಮೀನುಗಳ ಪರವಾಗಿ ರೂ.190.30 ಕೋಟಿಗಳನ್ನು ಮೂರು ಕೈಗಾರಿಕಾ ಪ್ರದೇಶಗಳ ಸಂಬಂಧ ಎಸ್‌ಎಲ್‌ಎಓ–2ರವರು ವಿತರಿಸಿರುತ್ತಾರೆ.

**ಕೋಷ್ಟಕ–5.4 : ತನಿಖಾ ಕಾರ್ಯ ಪ್ರಗತಿಯಲ್ಲಿರುವ ಭೂಮಿಯ ವಿವರ**

| ಕೈಗಾರಿಕಾ ಪ್ರದೇಶದ ಹೆಸರು | ತನಿಖೆ ಪ್ರಗತಿಯಲ್ಲಿರುವ ಭೂಮಿಯ ವಿಸ್ತೀರ್ಣ (ಎಕರೆ ಮತ್ತು ಗುಂಟೆಗಳಲ್ಲಿ) | ಪರಿಹಾರಧನ ಪಾವತಿಸಿರುವುದು (ಕೋಟಿ ರೂ.ಗಳಲ್ಲಿ) |
|---|---|---|
| **ಏರೋಸ್ಪೇಸ್ ಕಾಂಪೋನೆಂಟ್ಸ್** | **5–20** | **3.14** |
| **ಐಟಿ ಪಾರ್ಕ್** | **242–18** | **135.02** |
| **ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್** | **108–17** | **52.14** |
| **ಒಟ್ಟು** | **356–15** | **190.30** |

(ಆಧಾರ: ಮಂಡಳಿ ಒದಗಿಸಿದ ಮಾಹಿತಿ)

ಎಸ್‌ಎಲ್‌ಎಓ–2ರವರು ಮೂಲ ಕಡತಗಳನ್ನು ಲೋಕಾಯುಕ್ತರು ವಶಕ್ಕೆ ತೆಗೆದುಕೊಂಡಿರುವುದರಿಂದ ಮುಟ್ಟುಗೋಲು ಹಾಕಿಕೊಂಡ ಜಮೀನುಗಳ ಪರವಾಗಿ ಪಾವತಿ ಮಾಡಿದ ಹೆಚ್ಚುವರಿ ಪರಿಹಾರಧನವನ್ನು ವಸೂಲು ಮಾಡಲು ಸಾಧ್ಯವಾಗಿಲ್ಲವೆಂದು ಮತ್ತು ಕಡತಗಳನ್ನು ಮಾನ್ಯ ಲೋಕಾಯುಕ್ತರಿಂದ ಸ್ವೀಕರಿಸಿದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದ್ದಾರೆ (ಆಗಸ್ಟ್ 2011).

### 5.6.3 ಕ್ರೋಢೀಕರಿಸಿದ ಪಹಣಿ ಮತ್ತು ವೈಯಕ್ತಿಕ ಪಹಣಿಯ ಮಧ್ಯೆ ಕಂಡು ಬಂದ ಭಾರಿ ವ್ಯತ್ಯಾಸಗಳು

ಮಹದೇವ ಕೋಡಿಗೇಹಳ್ಳಿ ಗ್ರಾಮದ ಸರ್ವೆ ನಂಬರ್ 198ರ ಜಮೀನಿನ ಸಂಬಂಧ 2009–10ರ ಕ್ರೋಢೀಕರಿಸಿದ ಪಹಣಿಯಲ್ಲಿ ಸರ್ಕಾರದ 243 ಎಕರೆ 16 ಗುಂಟೆ ಜಮೀನಿನ ಪೈಕಿ 76 ಎಕರೆ 15 ಗುಂಟೆ ಜಮೀನನ್ನು ಹಲವಾರು ವ್ಯಕ್ತಿಗಳಿಗೆ ಅನುದಾನ ಮಂಜೂರು ಮಾಡಲಾಗಿತ್ತು ಎಂದು ತೋರಿಸಲಾಗಿದೆ. ಆದರೆ ಜುಲೈ 2009 ರಲ್ಲಿ ನಡೆಸಿದ ಜಂಟಿ ಮಾಪನದಲ್ಲಿ ಕಂಡುಬಂದ ಪ್ರಕಾರ ಅನುದಾನ ಪಡೆದ ವ್ಯಕ್ತಿಗಳ ವೈಯಕ್ತಿಕ ಪಹಣಿಯ ಪ್ರಕಾರ ಒಟ್ಟಾರೆ 198 ಎಕರೆ 27 ಗುಂಟೆ ಜಮೀನನ್ನು ಅನುದಾನ ಮಂಜೂರು ಮಾಡಲಾಗಿತ್ತು. ಕ್ರೋಢೀಕರಿಸಿದ ಪಹಣಿಯಲ್ಲಿ 2009–10ಕ್ಕೆ ಅನುದಾನ ಮಂಜೂರು ಮಾಡಿದ ಜಮೀನಿನ ಲೆಕ್ಕವನ್ನು ಕೇವಲ 76 ಎಕರೆ 15 ಗುಂಟೆಗಳು ಎಂದು ದಾಖಲಿಸಿರುವಾಗ ಜಂಟಿ ತಪಾಸಣೆ ಕಾರ್ಯದಲ್ಲಿ ಭೂಮಿಯ ವಿಸ್ತೀರ್ಣ 198 ಎಕರೆ 27 ಗುಂಟೆ ಎಂದು ಗುರುತಿಸಿರುವುದು ಹೇಗೆ ಸಾಧ್ಯ ಎನ್ನುವುದು ಅಸ್ಪಷ್ಟವಾಗಿದೆ. ಪರಿಶೋಧನೆಯಲ್ಲಿ ಕಂಡು ಬಂದ ಪ್ರಕಾರ ಎಸ್‌ಎಲ್‌ಎಓ–2ರವರು ಮಹದೇವಕೋಡಿಗೇಹಳ್ಳಿ ಸರ್ವೆ ನಂಬರ್ 198ರ 48 ಎಕರೆ 28 ಗುಂಟೆ ಜಮೀನಿನ ಸ್ವಾಧೀನದ ಪರವಾಗಿ ರೂ.29.30 ಕೋಟಿಗಳ ಪರಿಹಾರಧನವನ್ನು ವಿತರಿಸಿದ್ದರು. ಈ ಮೊತ್ತವನ್ನು ಸ್ವೀಕರಿಸಿದ ಅರ್ಜಿದಾರರು ತಮ್ಮ ವೈಯಕ್ತಿಕ ಪಹಣಿಗಳನ್ನು ಸಲ್ಲಿಸಿದ್ದರಾದರೂ ಈ ಅರ್ಜಿದಾರರ ಹೆಸರುಗಳು ಕ್ರೋಢೀಕೃತ ಪಹಣಿಯಲ್ಲಿ ಕಂಡುಬರಲಿಲ್ಲ.

ಇವೆಲ್ಲವನ್ನು ಗಮನಿಸಿದರೆ ಇಲಾಖೆಯಿಂದ ನೀಡಿದ ವೈಯಕ್ತಿಕ ಪಹಣಿಯಲ್ಲಿನ ಮಾಹಿತಿಗಳು ದೋಷಪೂರಿತವಾಗಿದ್ದು, ಹೆಚ್ಚುವರಿ ಭೂ ವಿಸ್ತೀರ್ಣದ ಒಡೆತನವನ್ನು ಅವುಗಳಲ್ಲಿ ದಾಖಲಿಸಲಾಗಿದ್ದು ಹೆಚ್ಚುವರಿ ಪರಿಹಾರಧನ ಪಾವತಿಗೆ ಕಾರಣವಾಗಿದೆ. ಅಲ್ಲದೆ, ಕರ್ನಾಟಕ ಭೂ ಕಂದಾಯ ಕಾಯಿದೆಯ ಸೆಕ್ಷನ್ 136(3)ರ ಅಡಿ 49 ಎಕರೆ 29 ಗುಂಟೆ ಜಮೀನಿನ ಪೈಕಿ 21 ಎಕರೆ 34 ಗುಂಟೆ ಜಮೀನುಗಳ ಬಗ್ಗೆ ತನಿಖಾ ಕಾರ್ಯವು ಇನ್ನೂ ಪ್ರಗತಿಯ ಹಂತದಲ್ಲಿರುವಾಗಲೇ ಈ ಜಮೀನುಗಳ ಸ್ವಾಧೀನಕ್ಕಾಗಿ ರೂ.13.22 ಕೋಟಿ ಪರಿಹಾರಧನವನ್ನು ಈಗಾಗಲೇ ವಿತರಿಸಲಾಗಿತ್ತು. ತಹಸೀಲ್ದಾರ್‌ರವರಿಂದ ಸಂಬಂಧಪಟ್ಟ ಎಲ್ಲ ಮಾಹಿತಿಗಳನ್ನು ಪಡೆದು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು, ಪಹಣಿಯಲ್ಲಿನ ವಿವಿಧ ಕಾಲಂಗಳಲ್ಲಿನ ವ್ಯತ್ಯಾಸಗಳನ್ನು ಹೊಂದಾಣಿಕೆ ನಡೆಸಲಾಗುವುದು, ಜಂಟಿಮಾಪನವನ್ನು ನಡೆಸಿ ಸರ್ವೆ ನಂಬರ್‌ನಲ್ಲಿ ಆದ ಪಾವತಿಗಳ ನೈಜತೆಯನ್ನು ಪರಿಶೀಲಿಸುವುದಾಗಿ ಎಸ್‌ಎಲ್‌ಎಓ–2 ತಿಳಿಸಿದರು (ಆಗಸ್ಟ್ 2011).

### 5.6.4 ಸಂಸ್ಥೆಯೊಂದರ ಕೋರಿಕೆಯ ಮೇರೆಗೆ ಎಸ್‌ಎಲ್‌ಎಓ ಪರಿಹಾರಧನ ವಿತರಿಸಿದರು

(1) ಮೇ 2007 ರಲ್ಲಿ ಮಂಡಳಿಯು ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 74/ಪಿ3 ಕ್ಕೆ ಸೇರಿದ 4 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿತು. ಪಹಣಿಯ ಪ್ರಕಾರ ಹಾಗು ಮೇ 2007ರಲ್ಲಿ ಪ್ರಕಟಣೆಗೊಂಡ ಅಂತಿಮ ಅಧಿಸೂಚನೆಯಲ್ಲಿ ಈ ಭೂಮಿಯ ಖಾತೆದಾರರಾದ ಶ್ರೀ.ಮಾಗಡಿಯಪ್ಪ ಎಂಬುವವರ ಹೆಸರು ನಮೂದಿಸಲ್ಪಟ್ಟಿತ್ತು. ಆದರೆ ಎಸ್‌ಎಲ್‌ಎಓ–2ರವರು ಸೆಪ್ಟೆಂಬರ್ 2008ರಲ್ಲಿ ಇದೇ ಭೂಮಿಗೆ ರೂ.1.24 ಕೋಟಿಗಳನ್ನು ಶ್ರೀ.ಎಂ.ಹೆಚ್.ಸೋನಿ ಎಂಬುವವರಿಗೆ ಅವರ ಹಕ್ಕಿನ ಯಾವುದೇ ದಾಖಲೆಗಳನ್ನು ಪಡೆಯದೆ ವಿತರಿಸಿದರು. 12 ಜನವರಿ 2004ರಂದು ಈ ಭೂಮಿಯನ್ನು ಶ್ರೀ.ಸೋನಿಯವರಿಂದ ಒಂದು ತೀರುವಳಿ ಒಪ್ಪಂದದ ಮೂಲಕ ಖರೀದಿಸಲಾಗಿದೆ ಎಂದು ಘೋಷಿಸುವ ಕೇವಲ ಒಂದು ಪ್ರಮಾಣಪತ್ರ ಸಲ್ಲಿಕೆಯ ಆಧಾರದ ಮೇಲೆ ಈ ವಿತರಣೆಯನ್ನು ಮಾಡಲಾಯಿತು. ಇದಕ್ಕೆ ಸಂಬಂಧಪಟ್ಟ ಕಡತದ ಟಿಪ್ಪಣಿಗಳಲ್ಲಿ ದಾಖಲಿಸಿದಂತೆ ಇಟಾಸ್ಕಾ ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್ (ಕಂಡಿಕೆ 4.2ರಲ್ಲಿ ಚರ್ಚಿಸಿದಂತೆ) ಎಂಬ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ಶ್ರೀ.ಎಂ.ಹೆಚ್.ಸೋನಿ ಎಂಬುವವರು ಎಸ್‌ಎಲ್‌ಎಓ–2ರವರನ್ನು ಭೇಟಿಯಾಗಿ ಕಾರ್ಯನಿರ್ವಾಹಕ ನಿರ್ದೇಶಕರ ಆಶ್ವಾಸನೆಯಂತೆ ಎಸ್‌ಎಲ್‌ಎಓ–2ರವರು ಪರಿಹಾರಧನವನ್ನು ಶ್ರೀ.ಎಂ.ಹೆಚ್.ಸೋನಿ ಎಂಬುವವರಿಗೆ ಪಾವತಿ ಮಾಡಲಾಗಿದೆ. ಮುಂದುವರೆದು ಗಮನಿಸಿದ ಮತ್ತೊಂದು ಅಂಶವೆಂದರೆ ಮೇಲೆ ಪ್ರಸ್ತಾಪಿಸಿದ ಭೂಮಿಯ ಖಾತೆದಾರರು ದಿವಂಗತರಾಗಿದ್ದ ಅವರ ಉತ್ತರಾಧಿಕಾರಿಯಾಗಿರುವ ಶ್ರೀ.ಬಿ.ಎಂ.ರಂಗಸ್ವಾಮಿ ಎಂಬುವವರಿಗೂ ರೂ.1.24 ಕೋಟಿಗಳನ್ನು ಮಾರ್ಚ್ 2010ರಲ್ಲಿ ಮಾಡಲಾಯಿತು. ಶ್ರೀ.ಸೋನಿ ಎಂಬುವವರಿಗೆ ನೀಡಿದ ಹೆಚ್ಚುವರಿ ಪಾವತಿಯನ್ನು ಕಂಪನಿಯು ಮರಳಿ ಪುನರ್ ಪಾವತಿಯನ್ನು ಮಾಡಿದೆ ಎಂದು ಎಸ್‌ಎಲ್‌ಎಓ–2 ಜುಲೈ 2011ರಲ್ಲಿ ತಿಳಿಸಿದರು. ಸರ್ಕಾರದಿಂದ ಧನ ಪಾವತಿ ಮಾಡಲು ಸೂಕ್ತ ಮಾಹಿತಿ ಹಾಗೂ ದಾಖಲೆಗಳು ಆಧಾರವಾಗಿರಬೇಕೆ ಹೊರತು ಯಾವುದೋ ಕಂಪನಿಯ ಕಾರ್ಯ ನಿರ್ದೇಶಕರ ಆಶ್ವಾಸನೆಯ ಆಧಾರವಾಗಿರಬಾರದು ಎಂಬುದರಿಂದ ಉತ್ತರವನ್ನು ಸಮರ್ಥನೀಯವಲ್ಲ. ಎಸ್‌ಎಲ್‌ಎಓ–2 ಹಾಗೂ ಕಂಪನಿಯ ಮಧ್ಯೆ ಒಳ ಒಪ್ಪಂದ ಇತ್ತು ಎನ್ನುವುದನ್ನು ಖಚಿತಪಡಿಸುವುದಕ್ಕಾಗಿ ಅಕ್ಟೋಬರ್ 2010ರಲ್ಲಿ ಕಂಪನಿಯು ತನ್ನ ಮುಖ್ಯಸ್ಥರಿಗೆ ಬರೆದ ಪತ್ರದ ಸಾರಾಂಶವನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ.

**"ಈ ಹಂತದಲ್ಲಿ ಸ್ವಾಧೀನ ಪ್ರಕ್ರಿಯೆಯನ್ನು ವಿರೋಧಿಸಿ ನಡೆಯಬಹುದಾದ ಯಾವುದೇ ರೀತಿಯ ಭೂ ವ್ಯಾಜ್ಯಗಳನ್ನು ತಪ್ಪಿಸಲು ಕಂಪನಿಯು ಕೆಲವು ಸರ್ವೆ ನಂಬರಿನ ನಿರ್ದಿಷ್ಟ ಜಮೀನುಗಳ ಹಿಡುವಳಿದಾರರು ಭೂಮಿಯ ಮೇಲೆ ಹಕ್ಕು ಸ್ಥಾಪನೆಯನ್ನು ಘೋಷಿಸುತ್ತಿರುವುದರಂದ ಪರಿಹಾರಧನವನ್ನು ಒಬ್ಬ ವ್ಯಕ್ತಿಗಿಂತ ಹೆಚ್ಚಾಗಿ ಅನೇಕರಿಗೆ ಪಾವತಿ ಮಾಡಿ ಎಂದು ಮಂಡಳಿಗೆ ಕೋರಿಕೆ ಸಲ್ಲಿಸಿದ್ದು ಅವಶ್ಯಕವಾಗಿತ್ತು. ಅಲ್ಲದೆ ಈ ಸಂಬಂಧ ಯಾವುದಾದರೂ ಹೆಚ್ಚುವರಿ ಪಾವತಿಯಾದಲ್ಲಿ ಆ ಧನಭಾರದಿಂದ ಮಂಡಳಿಯನ್ನು ಮುಕ್ತಗೊಳಿಸಿ ಕಂಪನಿಯು ನಷ್ಟ ವನ್ನು ತುಂಬಿಕೊಡುವ ಜವಬ್ದಾರಿಯನ್ನು ಘೋಷಿಸಿದ್ದು ವ್ಯಾಜ್ಯಗಳ ತಡೆ ಹಾಗೂ ಯೋಜನೆಯ ಶೀಘ್ರ ಜಾರಿ ಇವೆರಡೂ ಉದ್ದೇಶ ಸಾಧನೆಗಾಗಿ ಕಂಪನಿಯು ಈ ಕ್ರಮ ತೆಗೆದುಕೊಂಡಿದೆ".**

ಕಂಪನಿಯು ಪ್ರಸ್ತಾಪಿಸಿದ ನಷ್ಟಭರ್ತಿ ಪರಿಹಾರ ಘೋಷಣೆಯ ಸಂಬಂಧ ಯಾವುದೇ ದಾಖಲೆಗಳು ದೊರೆತಿರುವುದಿಲ್ಲವಾದ್ದರಿಂದ ಈ ವ್ಯವಸ್ಥೆಯು ಮುಖ್ಯಸ್ಥರಿಂದಾದ ಅನೌಪಚಾರಿಕ ವ್ಯವಸ್ಥೆ ಎಂದು ಹೇಳಬಹುದು. ಈ ಅನೌಪಚಾರಿಕ ವ್ಯವಸ್ಥೆಗಳಿಗೆ ಮಂಡಳಿಯ ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಈ ಕೆಳಕಂಡ **ಕೋಷ್ಟಕ–5.5ರಲ್ಲಿ** ತೋರಿಸಿರುವ ಪ್ರಕರಣಗಳಲ್ಲಿ ಎಸ್‌ಎಲ್‌ಎಓ–2ರವರು ಬಂಡಿಕೋಡಿಗೇಹಳ್ಳಿ ಗ್ರಾಮದಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿಯ ಸಂಬಂಧ ಕಡತಗಳಲ್ಲಿ ಕಂಡುಬಂದ ಟಿಪ್ಪಣಿಗಳಲ್ಲಿನ ಆಧರಿಸಿ ಪರಿಹಾರಧನ ಪಾವತಿಸಿದ್ದಾರೆ.

**ಕೋಷ್ಟಕ–5.5: ಕಂಪನಿಯ ಕೋರಿಕೆಯಂತೆ ಪರಿಹಾರಧನ ಪಾವತಿಸಿದ ವಿವರಗಳು**

| ಸರ್ವೆನಂಬರ್ | ಪರಿಹಾರಧನ ಪಾವತಿಸಿದ ಭೂಮಿಯ ವಿಸ್ತೀರ್ಣ (ಎಕರೆ ಮತ್ತು ಗುಂಟೆಗಳಲ್ಲಿ) | ಪರಿಹಾರಧನ ಪಾವತಿಸಿದ ಮೊಬಲಗಳು (ಕೋಟಿ ರೂಗಳಲ್ಲಿ) |
|---|---|---|
| 74/308 | 4–00 | 1.24 |
| 74/302 | 4–00 | 1.68 |
| 40/359 | 2–00 | 0.66 |
| 124 | 4–00 | 1.24 |
| 75/1 | 1–35 | 0.62 |
| 75/2 | 2–01 | 0.81 |
| ಒಟ್ಟು | 17–36 | 6.25 |

(ಆಧಾರ: ಮಂಡಳಿ ಒದಗಿಸಿದ ಮಾಹಿತಿ)

(2) ಸರ್ವೆನಂಬರ್ 74/308ರ 4 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪ್ರಕರಣಗಳನ್ನು ಪರಿಶೀಲಿಸುವ ವ್ಯವಸ್ಥಾಪಕರು ಈ ಜಮೀನನ್ನು ಪೂರ್ವದಲ್ಲಿ ಯಾರ ಹೆಸರಿಗೆ ಅನುದಾನ ಮಂಜೂರು ಮಾಡಲಾಗಿತ್ತು ಎನ್ನುವ ಮಾಹಿತಿ, ಸಲ್ಲಿಸಿದ ದಾಖಲೆಗಳನ್ನು ಗಮನಿಸಿದಾಗ ಸ್ಪಷ್ಟವಾಗುತ್ತಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ (ಮೇ 2008). ತಹಸೀಲ್ದಾರ್‌ರವರ ವರದಿಯಲ್ಲೂ ಕೂಡ ಈ ಸರ್ವೆ ನಂಬರಿನ ಜಮೀನು ಯಾರ ಹೆಸರಿಗೆ ಅನುದಾನ ಮಂಜೂರು ಮಾಡಲಾಗಿತ್ತು ಎಂಬುದರ ವಿವರ ನಮೂದಿತವಾಗಿರುವುದಿಲ್ಲ. ಎಸ್‌ಎಲ್‌ಎಓ–2ರವರು ಈ ಪ್ರಕರಣದ ವಿಚಾರವನ್ನು ವ್ಯವಸ್ಥಾಪಕರೊಡನೆ ಚರ್ಚಿಸಿದ ಮೇಲೆ ಮತ್ತು ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕರ ಆಶ್ವಾಸನೆಯನ್ನು ಆಧಾರವಾಗಿಟ್ಟುಕೊಂಡು ಪರಿಹಾರಧನ ಪಾವತಿಸಿದೆ.

ಆದರೆ ಯಲಹಂಕ ಉಪ ನೋಂದಣಿ ಅಧಿಕಾರಿಗಳಿಂದ ಪಡೆದ ಋಣಭಾರ ಧೃಡೀಕರಣ ಪತ್ರಗಳನ್ನು ಗಮನಿಸಿದಾಗ, ಇದೇ ಸರ್ವೆ ನಂಬರ್ 74/308ರ ಜಮೀನಿನ 1 ಎಕರೆ ವಿಸ್ತೀರ್ಣದ ಭೂಮಿಯನ್ನು ನವಂಬರ್ 2006ರಲ್ಲಿ ಭೂ ಮಾಲೀಕರು ಇಬ್ಬರು ವ್ಯಕ್ತಿಗಳಿಗೆ ತಲಾ 20 ಗುಂಟೆಯಂತೆ ಮಾರಾಟ ಮಾಡಿರುವುದು ಹಾಗೂ ಬೇರೆ ಬೇರೆ ಕ್ರಯ ಪತ್ರಗಳನ್ನು ನೋಂದಣಿ ಮಾಡಿಸಿರುವುದು ಕಂಡು ಬಂದಿರುತ್ತದೆ. ಈ ವ್ಯವಹಾರದ ನಂತರ ಭೂ ಮಾಲೀಕರ ಸುಪರ್ದಿಯಲ್ಲಿ ಸರ್ವೆ ನಂಬರ್ 74/308 ರಲ್ಲಿ ಕೇವಲ 3 ಎಕರೆ ಜಮೀನು ಉಳಿಯಿತು. 14 ನವೆಂಬರ್ 2006ರಲ್ಲಿ ಕ್ರಯದ ವಿವರಗಳ ದಾಖಲೆಗಳು ಇಲ್ಲವಾದುದರಿಂದ 4 ಎಕರೆಗೆ ಪರಿಹಾರಧನವನ್ನು ಪಾವತಿಸಲಾಯಿತು ಎಂದು ಎಸ್‌ಎಲ್‌ಎಓ–2 ಸಮರ್ಥಿಸಿಕೊಂಡರು. ಹೀಗಿದ್ದರೂ ಅರ್ಜಿದಾರನಿಗೆ ರೂ.31 ಲಕ್ಷಗಳ ಅಧಿಕ ಪರಿಹಾರಧನ ಪಾವತಿಯಾಗಿರುವುದು ಇತ್ತೀಚಿನ ಋಣಭಾರ ಧೃಡೀಕರಣ ಪತ್ರವನ್ನು ಪಡೆಯದೆ ಎಸ್‌ಎಲ್‌ಎಓ–2ರವರು ಪರಿಹಾರಧನ ಪಾವತಿ ಮಾಡಿರುವುದು ಅಕ್ರಮವಾಗಿದೆ.

(3) ಬಂಡಿಕೋಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 74/302ರ 4 ಎಕರೆ ಕೃಷಿ ಭೂಮಿ ಸ್ವಾಧೀನ ಪ್ರಕರಣದಲ್ಲಿ ಮೂಲ ದಾಖಲೆಯಾದ ಭೂ ಅನುದಾನ ಮಂಜೂರು ಧೃಢಿಕರಣ ಪತ್ರವನ್ನು ಪಡೆಯದೆ ಶ್ರೀಮತಿ ಮೇರಿಜಾನ್ ಎಂಬುವರಿಗೆ ರೂ.1.68 ಕೋಟಿಗಳ ಪರಿಹಾರಧನವನ್ನು ಎಸ್‌ಎಲ್‌ಎಓ–2 ವಿತರಿಸಿದರು (ಜನವರಿ 2009). ಈ ಸಂಬಂಧ ಹಕ್ಕುದಾರರು ಸಲ್ಲಿಸಿದ ಪಹಣಿ ಪತ್ರದಲ್ಲಿ ಮೇ 2003 ರಲ್ಲಿಯೇ ಈ ಭೂಮಿಯ ಸಂಬಂಧ ವ್ಯಹರಿಸಲು ನ್ಯಾಯಾಲಯದ ತಡೆಯಾಜ್ಞೆ ಇರುವ ವಿಚಾರ ಸ್ಪಷ್ಟವಾಗಿ ನಮೂದಿಸಲಾಗಿದೆ. ಈ ರೀತಿ ಯಾವುದೇ ಪ್ರಕರಣಗಳು ನ್ಯಾಯಾಲಯದಲ್ಲಿ ವಿಲೇವಾರಿಗೆ ಬಾಕಿ ಇದ್ದು ಪರಿಹಾರಧನ ಪಾವತಿ ಮಾಡಬೇಕಾದಲ್ಲಿ, ಈ ಹಣವನ್ನು ಸಂಬಂಧ ಪಟ್ಟ ನ್ಯಾಯಲಯದಲ್ಲಿ ಎಸ್‌ಎಲ್‌ಎಓ ಠೇವಣಿ ರೂಪದಲ್ಲಿಡಬೇಕೆಂದು ಕರ್ನಾಟಕ ಕೈಗಾರಿಕಾ ಪ್ರದೇಶ

ಅಭಿವೃದ್ಧಿ ಕಾಯಿದೆಯ ಪರಿಚ್ಛೇದ 30ರಡಿ ಉಲ್ಲೇಖಿಸಲಾಗಿದೆ. ಹೀಗಿದ್ದಾಗ್ಯೂ, ಎಸ್ಎಲ್ಎಓ–2 ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕರು ನೀಡಿದ ವೈಯಕ್ತಿಕ ಆಶ್ವಾಸನೆಯ ಮೇರೆಗೆ ಹಾಗೂ ಹಕ್ಕನ್ನು ಖಚಿತಪಡಿಸುವ ಎಲ್ಲಾ ದಾಖಲೆಗಳನ್ನು ಪಡೆಯದೆ ಪರಿಹಾರಧನವನ್ನು ವಿತರಿಸಿದರು.

ನಂತರ, ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ವಿಶೇಷ ಜಿಲ್ಲಾಧಿಕಾರಿಗಳು ಈ ವಿಚಾರವಾಗಿ ತನಿಖೆ ನಡೆಸಿ ಏಪ್ರಿಲ್ 2009ರಲ್ಲಿ ಸರ್ವೆ ನಂಬರ್ 74/302ರ ಜಮೀನಿನಲ್ಲಿ ಅಕ್ರಮವಾಗಿ ಹಿಡುವಳಿ ಮಾಡಿಕೊಂಡಿದ್ದವರನ್ನು ತೆರವುಗೊಳಿಸಲು ಆದೇಶಿಸಿ ಈ ಭೂಮಿಯನ್ನು ಸರ್ಕಾರಿ ಜಮೀನು ಎನ್ನುವ ದಾಖಲೆಯನ್ನು ಸಂಬಂಧಪಟ್ಟ ಕಂದಾಯ ಇಲಾಖೆಯ ಕಡತಗಳಲ್ಲಿ ದಾಖಲಿಸಿದರು. ಈಗಾಗಲೇ ಹಣ ಪಡೆದಿದ್ದ ಶ್ರೀಮತಿ ಮೇರಿಜಾನ್‌ರವರಿಗೆ ಎಸ್ಎಲ್ಎಓ–2 ಮಾರ್ಚ್ 2010ರಲ್ಲಿ ಪರಿಹಾರಧನವನ್ನು ಮರುಪಾವತಿಸುವಂತೆ ಆದೇಶ ಸೂಚನಾ ಪತ್ರವನ್ನು ಜಾರಿ ಮಾಡಿ ಕಳುಹಿಸಿದರೂ ನವಂಬರ್ 2011 ರವರೆವಿಗೂ ಅನರ್ಹವಾಗಿ ಪಾವತಿಯಾದ ರೂ.1.68 ಕೋಟಿ ವಸೂಲಾಗಿರುವುದಿಲ್ಲ. ಈಗಾಗಲೇ ವಿಶೇಷ ಜಿಲ್ಲಾಧಿಕಾರಿಗಳು ಈ ಜಮೀನನ್ನು ಮುಟ್ಟುಗೋಲು ಹಾಕಿಕೊಂಡಿರುವುದರಿಂದ ಪಾವತಿ ಮಾಡಿದ ಪರಿಹಾರಧನವನ್ನು ಭೂ ಕಂದಾಯದ ಬಾಕಿ ಎಂದು ನಿರ್ಧರಿಸಿ ಲೋಕಾಯುಕ್ತರ ವಶದಲ್ಲಿ ಇರುವ ಮೂಲ ದಾಖಲೆಗಳನ್ನು ಸ್ವೀಕರಿಸಿದ ನಂತರ ವಸೂಲಿ ಮಾಡಲಾಗುವುದು ಎಂದು ಎಸ್ಎಲ್ಎಓ–2 ತಿಳಿಸಿದರು (ಜುಲೈ 2011).

(4) ಸರ್ವೆ ನಂಬರ್ 40/359ರ ಜಮೀನಿನ ಸ್ವಾಧೀನ ಪ್ರಕರಣದಲ್ಲಿ ಕಛೇರಿಯ ಸಿಬ್ಬಂದಿ ಹಾಗೂ ವ್ಯವಸ್ಥಾಪಕರು ಈ ಭೂಮಿಯ ಹಕ್ಕುದಾರನಿಗೆ ಈ ಹಿಂದೆ ಸರ್ಕಾರವು ಭೂ ಮಂಜೂರು ಮಾಡಿದ್ದರ ಬಗ್ಗೆ ಯಲಹಂಕ ತಹಶೀಲುದಾರರಿಂದ ದೃಢೀಕರಣವಾಗಿಲ್ಲದ್ದರಿಂದ ಪರಿಹಾರಧನ ಪಾವತಿಯನ್ನು ಮಾಡುವ ಮುನ್ನ ಭೂಮಿಯ ನಕ್ಷೆ ಮತ್ತು ಮೂಲ ಅನುದಾನ ಮಂಜೂರು ದೃಢೀಕರಣ ಪತ್ರ ಇವೆರಡೂ ದಾಖಲೆಗಳನ್ನು ಅರ್ಜಿದಾರರಿಂದ ಪಡೆಯಬೇಕಾಗಿದೆ ಎಂದು ಗಮನಿಸಿದ್ದರು (ಮೇ 2008). ಆದಾಗ್ಯೂ ಜೂನ್ 2008ರಲ್ಲಿ ರೂ.66 ಲಕ್ಷಗಳ ಪರಿಹಾರಧನವನ್ನು ಕೇವಲ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರ ಆಶ್ವಾಸನೆ ಮತ್ತು ಪಾವತಿಯ ಬಗ್ಗೆ ಕಂಪನಿಯು ನೀಡಿದ ಜವಾಬ್ದಾರಿಯ ಆಧಾರದ ಮೇಲೆ ವಿತರಿಸಲು ಅಧಿಕರಿಸಿದರು. ಅಂತಿಮವಾಗಿ ಮೇ 2010ರಲ್ಲಿ ಈ ಭೂಮಿಯನ್ನು ಸರ್ಕಾರದ ಪರವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಯಿತು.

### 5.6.5 ಭೂಮಿಯನ್ನು ಹೊಂದಿರದ ಅಥವಾ ಭೂಮಿಯ ಹಕ್ಕುದಾರಿಕೆಯು ಸಂಶಯಾಸ್ಪದವಾಗಿದ್ದ ವ್ಯಕ್ತಿಗಳಿಗೆ ಪರಿಹಾರಧನ ಪಾವತಿ

ಈ ಕೆಳಗಿನ ಪ್ರಕರಣಗಳಲ್ಲಿ ಭೂಮಿಯನ್ನೇ ಹೊಂದಿರದ ಅಥವಾ ದಾಖಲೆಗಳ ಮೂಲಕ ಭೂಮಿಯ ಹಕ್ಕುದಾರಿಕೆಯನ್ನು ಸ್ಥಾಪಿಸದ ವ್ಯಕ್ತಿಗಳಿಗೆ ಎಸ್ಎಲ್ಎಓ–2 ಪರಿಹಾರಧನ ವಿತರಿಸಿದರು.

(1) ಶ್ರೀ.ಮೊಹಮದ್ ಇಕ್ಬಾಲ್ ಎಂಬುವವರು ಯಾವುದೇ ದಾಖಲೆಗಳನ್ನು ಸಲ್ಲಿಸದೇ ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 75ರ 3 ಎಕರೆ 20 ಗುಂಟೆ ವಿಸ್ತೀರ್ಣದ ಭೂಮಿಗೆ ಪರಿಹಾರಧನದ ವಿತರಣೆಗಾಗಿ ಎಸ್ಎಲ್ಎಓ–2ರವರಿಗೆ ಒಂದು ಆಕ್ಷೇಪಣಾ ಅರ್ಜಿಯನ್ನು ಸಲ್ಲಿಸಿದರು (ಏಪ್ರಿಲ್ 2008). ಎಸ್ಎಲ್ಎಓ–2ರವರು ವಿಚಾರಣೆಗೆ ಹಾಜರಾಗಲು ಈ ವ್ಯಕ್ತಿಗೆ ಸೂಚನಾ ಪತ್ರವನ್ನು ಕಳುಹಿಸಿದರೂ (ಜೂನ್ 2008) ಅರ್ಜಿದಾರರು ವಿಚಾರಣೆಗೆ ಹಾಜರಾಗಲಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ತನ್ನ ಕೋರಿಕೆಗೆ ಬೆಂಬಲವಾಗಿ ಸಲ್ಲಿಸಲಿಲ್ಲ. ಆದಾಗ್ಯೂ ಎಸ್ಎಲ್ಎಓ–2ರವರು ಯಾವುದೇ ವಿಚಾರಣೆ ಇಲ್ಲದೆ ಮತ್ತು ಯಾವುದೇ ದಾಖಲೆಗಳನ್ನು ಪರಿಶೀಲಿಸದೆ ಡಿಸೆಂಬರ್ 2008ರಲ್ಲಿ ಸರ್ವೆ ನಂಬರ್ 75ರ ಬಂಡಿಕೊಡಿಗೇಹಳ್ಳಿ ಗ್ರಾಮದ 3 ಎಕರೆ 20 ಗುಂಟೆಗೆ ಈ ವ್ಯಕ್ತಿಗೆ ರೂ.1.09 ಕೋಟಿಗಳನ್ನು ವಿತರಿಸಿದರು. ಮೊಹಮದ್ ಇಕ್ಬಾಲ್‌ರವರಿಗೆ ತಪ್ಪಾಗಿ ಪರಿಹಾರಧನ ಪಾವತಿಯಾಗಿದ್ದು ಲೋಕಾಯುಕ್ತರ ಕಛೇರಿಯಿಂದ ಮೂಲ ದಾಖಲೆಗಳನ್ನು ಸ್ವೀಕರಿಸಿದ ನಂತರ ಈ ಹೆಚ್ಚುವರಿ ಪಾವತಿಯನ್ನು ವಸೂಲು ಮಾಡುವುದಾಗಿ ತಿಳಿಸಿದ್ದಾರೆ (ಜುಲೈ 2011) ಮತ್ತು ಯಾವುದೇ ದಾಖಲೆಗಳನ್ನು ಪಡೆಯದೆ ಧನ ಪಾವತಿಗೆ ಆದೇಶಿಸಿರುವುದನ್ನು ಎಸ್ಎಲ್ಎಓ–2ರವರು ಒಪ್ಪಿಕೊಂಡಿದ್ದಾರೆ.

(2) ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ತಹಸೀಲ್ದಾರ್‌ರ ಕಛೇರಿಯ ದಾಖಲೆಗಳ ಪ್ರಕಾರ ನವಂಬರ್ 1961ರಲ್ಲಿ ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 74ಕ್ಕೆ ಸೇರಿದ 10 ಎಕರೆ

ಜಮೀನನ್ನು ಶ್ರೀ.ಹೆಚ್.ಸೈಯದ್ ಅಬ್ದುಲ್ ಅಲೀಮ್ ಎಂಬುವವರಿಗೆ ಅನುದಾನ ಮಂಜೂರು ಮಾಡಲಾಗಿತ್ತು. ಈ ಮಂಜೂರಿನ ನಂತರ ಈ ಭೂಮಿಗೆ 157 ಎಂಬ ಹೊಸ ಸರ್ವೆ ನಂಬರ್ ನಿಗದಿ ಮಾಡಲಾಯಿತು. ನ್ಯಾಯಾಲಯದ ಆದೇಶವಂತೆ (ಏಪ್ರಿಲ್ 2010) ಈ ಭೂಮಿಯನ್ನು ಅನುದಾನ ಮಂಜೂರು ಪಡೆದ ವ್ಯಕ್ತಿಯ ವಾರಸುದಾರರಿಗೆ ಪರಿಹಾರಧನವನ್ನು ವಿತರಿಸಿದರು (ಮೇ 2010)

ಇದರ ಬಗ್ಗೆ ಪರಿಶೀಲಿಸಿದಾಗ ಕಂಡುಬಂದ ವಿಷಯವೇನೆಂದರೆ, ಈಗಾಗಲೇ ಅಕ್ಟೋಬರ್ 2008ರಲ್ಲಿಯೇ ಬಂಡಿಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂಬರ್ 74/310ರ 10 ಎಕರೆ 5 ಗುಂಟೆ ಜಮೀನಿನ ಪರವಾಗಿ ರೂ.3.14 ಕೋಟಿಗಳನ್ನು ಶ್ರೀ.ಹೆಚ್.ಸೈಯದ್ ಅಬ್ದುಲ್ ಅಲೀಮ್ ಎಂಬ ವ್ಯಕ್ತಿಗೆ ಪರಿಹಾರಧನವಾಗಿ ಪಾವತಿಸಿದ್ದರು. ಎಸ್‌ಎಲ್‌ಎಓ–2ರವರು 5 ವರ್ಷದ ಪಹಣಿ ಪತ್ರವನ್ನು ಹಾಗೂ 15 ವರ್ಷಗಳ ಋಣಭಾರ ಪತ್ರವನ್ನು ಮಾತ್ರ ನಂಬಿದರು ಹಾಗೂ ಯಾವುದೇ ಮೂಲ ಅನುದಾನ ದಾಖಲೆಗಳನ್ನು ಪಡೆಯಲಿಲ್ಲ. ಆದರೆ, ತಹಸೀಲ್ದಾರ್, ಯಲಹಂಕ, ಬೆಂಗಳೂರು–ಉತ್ತರ ತಾಲ್ಲೂಕಿನ ದಾಖಲೆಗಳಿಂದ ಶ್ರೀ.ಹೆಚ್.ಸಯ್ಯದ್ ಅಬ್ದುಲ್ ಅಲೀಮ್‌ರವರಿಗೆ ಯಾವುದೇ ಭೂಮಿಯ ಅನುದಾನವನ್ನು ಈ ಸರ್ವೆ ನಂಬರ್‌ನಲ್ಲಿ ಇರಲಿಲ್ಲವೆಂದು ಗಮನಿಸಲಾಯಿತು. ಮುಂದುವರೆದು, ಎಸ್‌ಎಲ್‌ಎಓ–2ರವರ ಬಳಿ ಬಂಡಿಕೊಡಿಗೇಹಳ್ಳಿ ಗ್ರಾಮದ ಸರ್ವೆನಂಬರ್ 74ರಲ್ಲಿ ಮಂಜೂರಾದ ವ್ಯಕ್ತಿಗಳ ಪಟ್ಟಿ ಕೂಡ ಸ್ವಾಧೀನದಲ್ಲಿತ್ತು. ನವೆಂಬರ್ 2007 ರಲ್ಲಿಯೇ ಅನುದಾನ ಮಂಜೂರು ಪಡೆದ ವ್ಯಕ್ತಿಗಳ ಪಟ್ಟಿಯನ್ನು ಯಲಹಂಕದಲ್ಲಿರುವ ತಹಸೀಲ್ದಾರ್‌ರವರು ಎಸ್‌ಎಲ್‌ಎಓಗೆ ಸಲ್ಲಿಸಿದರು. ಆದರೆ ಎಸ್‌ಎಲ್‌ಎಓರವರು ಈ ಪಟ್ಟಿಯನ್ನು ಅವಲೋಕಿಸದೇ ಪರಿಹಾರಧನವಾದ ರೂ.3.14 ಕೋಟಿಗಳನ್ನು ಯಾವುದೇ ಭೂಮಿಯನ್ನು ಅನುದಾನ ಮಂಜೂರು ಪಡೆಯದ ವ್ಯಕ್ತಿಗೆ ಪಾವತಿಸಿದರು. ಮೂಲ ದಾಖಲೆಗಳನ್ನು ಲೋಕಾಯುಕ್ತರು ವಶಪಡಿಸಿಕೊಂಡಿರುವುದರಿಂದ ಇದಕ್ಕೆ ಉತ್ತರವನ್ನು ನೀಡಲಾಗುವುದಿಲ್ಲ ಎಂದು ಎಸ್‌ಎಲ್‌ಎಓ–2 ತಿಳಿಸಿದರು (ಜುಲೈ 2011).

(3) ದೇವನಹಳ್ಳಿಯ ತಹಸೀಲ್ದಾರ್‌ರವರು ಬಂಡಿಕೊಡಿಗೆಹಳ್ಳಿಯ ಸರ್ವೆ ನಂಬರ್ 40ರ 8 ಎಕರೆ ಜಮೀನನ್ನು 1962–63ರ ಅವಧಿಯಲ್ಲಿ ಶ್ರೀ.ತಿಮ್ಮರಾಯಪ್ಪ ಎಂಬುವವರಿಗೆ ಅನುದಾನ ಮಂಜೂರು ಮಾಡಿದ್ದರು. ಈ 8 ಎಕರೆ ಜಮೀನಿನ ವಿಸ್ತೀರ್ಣಕ್ಕೆ ಹೊಸ ಸರ್ವೆ ನಂಬರ್ 150 ಎಂದು ನಿಗದಿ ಮಾಡಲಾಗಿತ್ತು. ಈ ಭೂಮಿಯನ್ನು 15 ವರ್ಷಗಳ ಅವಧಿಯವರೆಗೆ ಯಾರಿಗೂ ಪರಭಾರೆ ಮಾಡಬಾರದು ಎಂಬ ನಿಬಂಧನೆ ಇದ್ದರೂ 1971–75ರ ಅವಧಿಯಲ್ಲಿ ಈ ಭೂಮಿಯನ್ನು ಹಲವಾರು ವ್ಯಕ್ತಿಗಳಿಗೆ ಮಾರಾಟ ಮಾಡಿರುವುದನ್ನು ಗಮನಿಸಲಾಯಿತು. ಈ ವ್ಯವಹಾರಗಳನ್ನು ಅಂತಿಮವಾಗಿ ಅಂದರೆ ಆಗಸ್ಟ್ 1974ರಲ್ಲಿ ಶ್ರೀ.ಮುನಿಪಾಪಣ್ಣ ಎಂಬುವವರು ಈ 8 ಎಕರೆ ಜಮೀನನ್ನು ಕ್ರಯಕ್ಕೆ ತೆಗೆದುಕೊಂಡಿದ್ದರು. ಇವರ ಉತ್ತರಾಧಿಕಾರಿಯಾದ ಶ್ರೀ.ಬಿ.ಎಂನಾಗರಾಜುರವರು ಎಂಟು ಎಕರೆ ಜಮೀನಿನ ಪೈಕಿ 4 ಎಕರೆ ಭೂಮಿಯನ್ನು 1998–99ರಲ್ಲಿ ಶ್ರೀ.ಎಂ.ಸಿ.ಚಿಕ್ಕರಾಜು ಎಂಬುವವರಿಗೆ ಹಾಗೂ ಉಳಿದ 4 ಎಕರೆ ಭೂಮಿಯನ್ನು ಜುಲೈ 2004ರಲ್ಲಿ ಶ್ರೀ.ಕೆ.ವೈ.ಅಯೂಬ್‌ಖಾನ್ ಎಂಬುವವರಿಗೆ ಮಾರಾಟ ಮಾಡಿದರು. ಶ್ರೀ.ಎಂ.ಸಿ.ಚಿಕ್ಕರಾಜುರವರು ಆಗಸ್ಟ್ 2004ರಲ್ಲಿ ಮೇಲೆ ತಿಳಿಸಿದ 4 ಎಕರೆ ಭೂಮಿಯನ್ನು ಶ್ರೀ.ಸಿ.ಅಶ್ವತ್ಥನಾರಾಯಣ ಎಂಬುವವರಿಗೆ ಮಾರಾಟ ಮಾಡಿದರು.

ಆಗಸ್ಟ್ 2008ರಲ್ಲಿ ಎಸ್‌ಎಲ್‌ಎಓ–2ರವರು ತಲಾ ರೂ.1.24 ಕೋಟಿಗಳಂತೆ ಶ್ರೀ.ಸಿ.ಅಶ್ವತ್ಥನಾರಾಯಣ ಮತ್ತು ಶ್ರೀ.ಅಯೂಬ್‌ಖಾನ್‌ರವರಿಗೆ ಸರ್ವೆ ನಂಬರ್ 150 ಬಂಡಿಕೊಡಿಗೆಹಳ್ಳಿ ಗ್ರಾಮದ 8 ಎಕರೆ ಜಮೀನಿನ ಸ್ವಾಧೀನದ ಸಂಬಂಧ ಪರಿಹಾರಧನವನ್ನು ಪಾವತಿಮಾಡಿದರು. ಆದರೆ ಮೇ 2007 ರಲ್ಲಿಯೇ ಅದೇ ಗ್ರಾಮದ ಸರ್ವೆ ನಂಬರ್ 40/ಪಿ18ನ 4 ಎಕರೆ ಜಮೀನಿನ ಸಂಬಂಧ ಶ್ರೀ.ಬಿ.ಎಂ. ನಾಗರಾಜು ಎಂಬುವವರಿಗೂ ರೂ.1.24 ಕೋಟಿಗಳನ್ನು ಪಾವತಿ ಮಾಡಿದ್ದರು. ಸರ್ವೆ ನಂಬರ್ 40ರಲ್ಲಿ ಶ್ರೀ.ನಾಗರಾಜುರವರು ಪಿತ್ರಾರ್ಜಿತವಾಗಿ ಪಡೆದ 8 ಎಕರೆ ಜಮೀನಿ ಹೊರತಾಗಿ ಯಾವುದೇ ಜಮೀನನ್ನು ಅವರಿಗೆ ಸರ್ಕಾರವು ಅನುದಾನ ಮಂಜೂರು ಮಾಡಿರಲಿಲ್ಲ ಎಂಬುದನ್ನು ಪರಿಶೀಲನೆಯು ತೋರಿಸಿತು. ಇದನ್ನೂ ಸಹ ಅವರು ಇಬ್ಬರಿಗೆ 1998–99 ಮತ್ತು 2004–05ರ ಅವಧಿಯಲ್ಲಿ ಮಾರಾಟ ಮಾಡಿದ್ದರು. ಈ ಪಾವತಿಯ ವ್ಯವಹಾರದ ಬಗ್ಗೆ ಯಾವುದೇ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಿಲ್ಲ. ಆದ್ದರಿಂದ ರೂ.1.24 ಕೋಟಿಯನ್ನು ಶ್ರೀ.ಬಿ.ಎಂ.ನಾಗರಾಜುರವರಿಗೆ ಪಾವತಿಸಿರುವುದು ಅಪ್ರಾಮಾಣಿಕವಾಗಿದೆ. ಮೂಲ ದಾಖಲೆಗಳನ್ನು ಲೋಕಾಯುಕ್ತರಿಂದ ಪಡೆದ ನಂತರ ಉತ್ತರ ನೀಡುವುದಾಗಿ ಎಸ್‌ಎಲ್‌ಎಓ–2 ತಿಳಿಸಿದರು (ಜುಲೈ 2011).

(4) ಮಂಡಳಿಯು ಕವಡದಾಸನಹಳ್ಳಿ ಗ್ರಾಮದ ಸರ್ವೆ ನಂಬರ್ 21/ಪಿ–24ಕ್ಕೆ ಸೇರಿದ 3 ಎಕರೆ 5 ಗುಂಟೆ ಜಮೀನನ್ನು ಶ್ರೀ.ಉತ್ತನಲ್ಲಪ್ಪನವರ ಮಗ ಶ್ರೀ.ಚಿಕ್ಕಲಕ್ಷ್ಮಣ ಎಂಬುವವರಿಂದ ಸ್ವಾಧೀನ ಪಡಿಸಿಕೊಂಡಿತು. ಮಾರ್ಚ್ 2009ರಲ್ಲಿ ಅರ್ಜಿದಾರನು ಪರಿಹಾರಧನ ಪಾವತಿ ಕೋರಿ ಈ ಭೂಮಿಗೆ ಸಂಬಂಧಪಟ್ಟ ಮೂಲ ಅನುದಾನ ಮಂಜೂರು ಪತ್ರದ ದಾಖಲೆಗಳು ಕಳೆದು ಹೋಗಿರುವುದನ್ನು ಘೋಷಿಸುವ ಪ್ರಮಾಣಪತ್ರವನ್ನು ಸಲ್ಲಿಸಿದನು. ದೇವನಹಳ್ಳಿಯ ತಹಸೀಲ್ದಾರರೂ ಕೂಡ ಜನವರಿ 2009ರಲ್ಲಿ ಈ ಭೂಮಿಗೆ ಸಂಬಂಧಿಸಿದ ಮೂಲ ಅನುದಾನ ಮಂಜೂರು ದಾಖಲೆಗಳು ಸಿಗುತ್ತಿಲ್ಲ ಎಂದು ವರದಿ ಮಾಡಿದ್ದರು. ಆದಾಗ್ಯೂ, ಎಸ್ಎಲ್ಎಓರವರು ಪಹಣಿ ಪತ್ರದಲ್ಲಿ ಮತ್ತು ಮೋಜಣಿದಾರರ ವರದಿಯಲ್ಲಿ ಈ ಅರ್ಜಿದಾರರು ಕೇವಲ ಉಳುಮೆ ಮಾಡುತ್ತಿರುವವರು ಎಂದು ದಾಖಲಿಸಿದ ವಿಚಾರವನ್ನು ಆಧಾರವಾಗಿಟ್ಟುಕೊಂಡು ಪರಿಹಾರಧನ ಪಾವತಿ ಮಾಡಿದರು. ಮಾರ್ಚ್ 2009ರಲ್ಲಿ ರೂ.1.72 ಕೋಟಿ ಹಣ ಪಾವತಿಯಾದ ನಂತರ ಜೂನ್ 2009ರಲ್ಲಿ ಎಸ್ಎಲ್ಎಓ–2ರವರಿಗೆ ಒಂದು ದೂರು ದಾಖಲಾಗಿದ್ದು ಅರ್ಜಿದಾರರು ಸುಳ್ಳಿನ ಕೋರಿಕೆ ಸಲ್ಲಿಸಿ ಪರಿಹಾರವನ್ನು ಪಡೆದಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಆಗಸ್ಟ್ 2009ರಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಕಛೇರಿಯ ಗುಮಾಸ್ತರು ಮತ್ತು ವ್ಯವಸ್ಥಾಪಕರಿಗೆ, ದಾಖಲೆಗಳಿಲ್ಲದೆ ಪರಿಹಾರಧನ ಪಾವತಿಗೆ ಅನುವು ಮಾಡಿಕೊಟ್ಟ ತಪ್ಪಿಗೆ ವಿವರಣೆ ಕೇಳುವ ಸೂಚನಾ ಪತ್ರಗಳನ್ನು ಎಸ್ಎಲ್ಎಓ–2ರವರು ಜಾರಿಗೊಳಿಸಿದರು. ಈ ಪ್ರಕರಣದಲ್ಲಿ ಮುಂದಿನ ಬೆಳವಣಿಗೆಗಳು ದಾಖಲೆಗಳಲ್ಲಿ ಕಂಡುಬರುತ್ತಿಲ್ಲ. ಅರ್ಜಿದಾರರಿಗೆ ಎಲ್ಲ ಮೂಲ ದಾಖಲೆಗಳನ್ನು ಪರಿಶೀಲಿಸಲು ಮಂಡಿಸಬೇಕೆಂದು ಎಸ್ಎಲ್ಎಓ–2 ಆಗಸ್ಟ್ 2011ರಲ್ಲಿ ನೋಟೀಸ್ ನೀಡಲಾಗಿದೆ ಎಂದು ತಿಳಿಸಿದರು. ಆದಾಗ್ಯೂ, ವಾಸ್ತವವಾಗಿ ಯಾವುದೇ ದಾಖಲೆಗಳನ್ನು ಮಂಡಿಸಲಿಲ್ಲ (ಆಗಸ್ಟ್ 2011).

(5) ಬಂಡಿಕೋಡಿಗೆಹಳ್ಳಿಯ ಗ್ರಾಮದ ಸರ್ವೆ ನಂಬರ್ 40/ಪಿ–358ರ 1 ಎಕರೆ 20 ಗುಂಟೆ ಜಮೀನಿನಕ್ಕಾಗಿ ರೂ.0.47 ಕೋಟಿಗಳನ್ನು ಜುಲೈ 2008ರಲ್ಲಿ ಶ್ರೀ.ಸುಬ್ಬಣ್ಣ ಮತ್ತು ಶ್ರೀ.ರಾಮ ಎಂಬುವವರಿಗೆ ಎಸ್ಎಲ್ಎಓ ಪಹಣಿಯಲ್ಲಿ ನ್ಯಾಯಾಲಯ ಆದೇಶದ ತಡೆಯಾಜ್ಞೆಯ ಉಲ್ಲೇಖವಿದ್ದರೂ ಅದನ್ನು ಕಡೆಗಣಿಸಿ ವಿತರಿಸಿದರು. ಇದೇ ಭೂಮಿಗೆ ರೂ.10 ಲಕ್ಷಗಳ ಪರಿಹಾರಧನವನ್ನು ಶ್ರೀ.ನಾರಾಯಣಪ್ಪ ಎಂಬುವವರಿಗೂ ಸೆಪ್ಟಂಬರ್ 2008ರಲ್ಲಿ ಪಾವತಿಸಲಾಯಿತು. ಪರಿಶೀಲನೆಯಲ್ಲಿ 2005–06ರ ಅವಧಿಯಲ್ಲಿ ಶ್ರೀ.ನಾರಾಯಣಪ್ಪ ಉತ್ತರ ಉಪವಿಭಾಗದ ಸಹಾಯಕ ಆಯುಕ್ತರ ನ್ಯಾಯಾಲಯದಲ್ಲಿ ಪಿಟಿಸಿಎಲ್ ಕಾಯಿದೆಯಡಿ ತನ್ನ ಭೂಮಿಯ ಪುನರ್–ವಶಕ್ಕೆ ಕೋರಿಕೆಯನ್ನು ಸಲ್ಲಿಸುವ ಪ್ರಕರಣವನ್ನು ದಾಖಲಿಸಿದ್ದರು. ಈ ಪ್ರಕರಣದ ತೀರ್ಮಾನ ಇನ್ನೂ ಬಾಕಿ ಇರುವುದರಿಂದ ಶ್ರೀ.ಸುಬ್ಬಣ್ಣ ಮತ್ತು ಶ್ರೀ.ರಾಮ ಎಂಬುವವರಿಗೆ ಪರಿಹಾರಧನ ಪಾವತಿ ಮಾಡುವುದರ ವಿರುದ್ಧ ಆಕ್ಷೇಪಣೆಯನ್ನು ಜುಲೈ 2008ರಲ್ಲಿ ಸಲ್ಲಿಸಿದ್ದರು. ಆದರೆ, ಯಾವುದೇ ದಾಖಲೆಗಳನ್ನು ಒದಗಿಸದಿದ್ದರೂ ಶ್ರೀ.ನಾರಾಯಣಪ್ಪರವರಿಗೆ ರೂ.10 ಲಕ್ಷಗಳ ಪರಿಹಾರಧನವನ್ನು ಎಸ್ಎಲ್ಎಓ–2 ವಿತರಿಸಿದರು. ಮೂಲ ದಾಖಲೆಗಳು ಲೋಕಾಯುಕ್ತರಲ್ಲಿರುವುದರಿಂದ ಉತ್ತರವನ್ನು ನೀಡಲಾಗುವುದಿಲ್ಲ ಎಂದು ಎಸ್ಎಲ್ಎಓ–2 ತಿಳಿಸಿದರು (ಜುಲೈ 2011).

(6) ಮಂಡಳಿಯು ಬಂಡಿಕೊಡಿಗೆಹಳ್ಳಿಯ ಗ್ರಾಮದಲ್ಲಿ ಶ್ರೀ.ಎಂ.ಎಸ್.ವೆಂಕಟಶಾಮಪ್ಪ ಎಂಬುವವರಿಗೆ ಸೇರಿದ ಜಮೀನು ಸರ್ವೆ ನಂಬರ್ 74/301, 74/321 ಮತ್ತು 74/346ರಲ್ಲಿ ತಲಾ 4 ಎಕರೆ ಭೂಮಿಯನ್ನು ಮೇ 2007ರಲ್ಲಿ ಸ್ವಾಧೀನ ಪಡಿಸಿಕೊಂಡಿತು. ಇದರ ಖಾತೆದಾರರು ಮತ್ತು ಅವರ ಪತ್ನಿ ಇಬ್ಬರೂ ದಿವಂಗತರಾಗಿದ್ದರಿಂದ ಅವರ ಪುತ್ರರಾದ ಶ್ರೀ.ಎಂ.ವಿ.ನಂದೀಶ್ ಮತ್ತು ಶ್ರೀ.ಎಂ.ವಿ.ಗೋವಿಂದರಾಜು ರವರು ಸರ್ವೆ ನಂಬರ್ 74/301 ಮತ್ತು 74/321ಕ್ಕೆ ಸೇರಿದ ತಲಾ 4 ಎಕರೆ ಜಮೀನನ್ನು ಕಂದಾಯ ಕಡತಗಳಲ್ಲಿ ತಮ್ಮ ಹೆಸರಿಗೆ ವರ್ಗಾಯಿಸಿಕೊಂಡರು. ಆದರೆ ಎಸ್ಎಲ್ಎಓ–2ರವರು ಶ್ರೀ.ಎಂ.ವಿ.ನಂದೀಶ್ ಮತ್ತು ಶ್ರೀ.ಎಂ.ವಿ.ಗೋವಿಂದರಾಜುರವರಿಗೆ 12 ಎಕರೆಗಳಿಗೆ ರೂ.4.80 ಕೋಟಿಗಳನ್ನು ಇವರ ಒಡೆತನಕ್ಕೆ ಸೇರಿದ ಸರ್ವೆ ನಂಬರ್ 74/346ರ 4 ಎಕರೆಗಳನ್ನೂ ಸೇರಿಸಿಕೊಂಡು ಕೇವಲ ಸರ್ವೆ ನಂಬರ್ 74/301 ಮತ್ತು 74/321 ಇವೆರಡು ಜಮೀನಿಗೆ ಸಂಬಂಧಿಸಿದ ಮೂಲ ಕ್ರಯ ಪತ್ರ 2007–08ರ ಪಹಣಿ ಪತ್ರದ ಪ್ರತಿ ಮತ್ತು ಕೇವಲ ಸರ್ವೆ ನಂಬರ್ 74/301 ಮತ್ತು 74/321ರ ಮ್ಯುಟೇಶನ್ ಬದಲಾವಣೆಯ ಸಾರಂಶ ದಾಖಲೆಗಳನ್ನು ಸಲ್ಲಿಸಲಾಗಿ ಪರಿಹಾರಧನವನ್ನು ವಿತರಿಸಿದ್ದಾರೆ (ಫೆಬ್ರವರಿ 2009). ಅರ್ಜಿದಾರರು ಇತರ ಯಾವುದೇ ದಾಖಲೆಗಳನ್ನು ಸಲ್ಲಿಸಲಿಲ್ಲ. ಅರ್ಜಿಯನ್ನು ಸಲ್ಲಿಸಿದ ದಿನವೇ ಪರಿಹಾರಧನವನ್ನು 18ನೇ ಫೆಬ್ರವರಿ 2009ರಂದು ವಿತರಿಸಲಾಗಿದೆ. ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಮತ್ತೊಂದು ಅಂಶವೆಂದರೆ ಸರ್ವೆ

ನಂಬರ್ 74/346ರ 4 ಎಕರೆಗಳ ಭೂಮಿಯನ್ನು ಬೆಂಗಳೂರಿನ ವಿಶೇಷ ಜಿಲ್ಲಾಧಿಕಾರಿಗಳು ಮೇ 2010ರಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಪರಿಹಾರಧನ ಪಾವತಿಯ ಪ್ರಕರಣದಲ್ಲಿ ತೋರಿದ ಅನಗತ್ಯ ಅವಸರದಿಂದಾಗಿ ಮತ್ತು ಅಗತ್ಯ ದಾಖಲೆಗಳನ್ನು ಪಡೆದು ಅವುಗಳನ್ನು ಪರಿಶೀಲಿಸಲು ವಿಫಲರಾಗಿದ್ದು ಭೂಮಿಯ ಒಡೆತನದ ಹಕ್ಕು ಇಲ್ಲದ ವ್ಯಕ್ತಿಗೆ ರೂ.1.60 ಕೋಟಿಗಳ ಪಾವತಿಯಲ್ಲಿ ಪರಿಣಮಿಸಿತು. ಲೋಕಾಯುಕ್ತರಿಂದ ಮೂಲದಾಖಲೆಗಳು ಬಂದ ನಂತರ ಉತ್ತರಿಸುವುದಾಗಿ ಎಸ್‌ಎಲ್‌ಎಓ–2 ತಿಳಿಸಿದರು (ಜುಲೈ 2011).

(7) ಆಗಸ್ಟ್ 2008ರಲ್ಲಿ ಬೆಂಗಳೂರು ಉತ್ತರ ವಿಭಾಗದ ಜಿಲ್ಲಾಧಿಕಾರಿಗಳು ಬಾಗಲೂರು ಗ್ರಾಮದ ಸರ್ವೆ ನಂಬರ್ 177/ಪಿ–17ರ 2 ಎಕರೆ 22 ಗುಂಟೆ ಜಮೀನಿಗೆ ಸಂಬಂಧಿಸಿದ ಪಹಣಿ ಪತ್ರವು ಶ್ರೀ.ನಂಜುಂಡಪ್ಪ ಎನ್ನುವವರ ಪರವಾಗಿದ್ದ ದಾಖಲೆಯನ್ನು ತೆಗದು ಅದಕ್ಕೆ ಬದಲಾಗಿ 2 ಎಕರೆ ವಿಸ್ತೀರ್ಣವನ್ನು ನಮೂದಿಸಿ ಪಹಣಿಯನ್ನು ಶ್ರೀ.ಚಿನ್ನಬಿಡ್ಡಪ್ಪ ಎನ್ನುವವರ ಹೆಸರಿಗೆ ಬದಲಾಯಿಸುವಂತೆ ಆದೇಶಿಸಿದರು. ದತ್ತಾಂಶದ ಗಣಕೀಕರಣ ಮಾಡುವಾಗ ಸಂಭವಿಸಿದ ತಪ್ಪನ್ನು ಸರಿಪಡಿಸುವುದಕ್ಕಾಗಿ ಇದನ್ನು ಮಾಡಲಾಯಿತು. ಸರಿಪಡಿಸಿದ ಪಹಣಿ ಪತ್ರದ ಆಧಾರದ ಮೇಲೆ ಎಸ್‌ಎಲ್‌ಎಓ–2ರವರು ಡಿಸೆಂಬರ್ 2009ರಲ್ಲಿ 2 ಎಕರೆ ಭೂಸ್ವಾಧೀನದ ಸಂಬಂಧ ರೂ.1.40 ಕೋಟಿಗಳನ್ನು ದಿವಂಗತ ಶ್ರೀ.ಚಿನ್ನಬಿಡ್ಡಪ್ಪನವರ ಪುತ್ರ ಶ್ರೀ. ಗುಂಡಪ್ಪ ಎಂಬುವವರಿಗೆ ಪರಿಹಾರಧನ ವಿತರಿಸಿದರು. ಹೀಗೆ, ಸರ್ವೆ ನಂಬರ್ 177/ಪಿ–17 ರಲ್ಲಿ ದಿವಂಗತ ಶ್ರೀ.ನಂಜುಂಡಪ್ಪ ಎಂಬುವವರಿಗೆ ಯಾವುದೇ ಜಮೀನು ಸೇರಿರಲಿಲ್ಲ ಎಂದಾಯಿತು. ಇವರ ಹೆಸರನ್ನು ಪಹಣಿ ಪತ್ರದಿಂದ ತೆಗೆದು ಹಾಕಿರುವ ವಿಚಾರ ಡಿಸೆಂಬರ್ 2009ರಲ್ಲಿ ಎಸ್‌ಎಲ್‌ಎಓ–2ರವರಿಗೆ ಅರಿವಿದ್ದರೂ ಅದೇ ಸರ್ವೆ ನಂಬರಿನ 26½ ಗುಂಟೆ ಜಮೀನಿಗೆ ರೂ.0.46 ಕೋಟಿಗಳ ಪರಿಹಾರಧನವನ್ನು ದಿವಂಗತ ನಂಜುಂಡಪ್ಪನವರ ಪುತ್ರ ಶ್ರೀ.ಬಿ.ಎಂ. ನಾರಾಯಣಪ್ಪ ಎಂಬುವವರಿಗೆ ಏಪ್ರಿಲ್ 2010ರಲ್ಲಿ ವಿತರಿಸಿದರು. ಈ ಪಾವತಿಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಿದಾಗ ದಿವಂಗತ ನಂಜುಂಡಪ್ಪನವರ ಪುತ್ರ ಶ್ರೀ.ನಾರಾಯಣಸ್ವಾಮಿ ಎಂದು ಗುರುತಿಸಲಾಯಿತು. ಸಲ್ಲಿಸಿದ ದಾಖಲೆಗಳಾದ ಅರ್ಜಿದಾರರ ಹೆಸರು, ಗ್ರಾಮ ಲೆಕ್ಕಿಗರಿಂದ ಪಡೆದ ವಂಶ ವೃಕ್ಷ ದಾಖಲೆ, ಚುನಾವಣಾ ಮತದಾರರ ಗುರುತಿನ ಚೀಟಿ, ಬ್ಯಾಂಕ್ ಪಾಸ್ ಬುಕ್ ಇತ್ಯಾದಿ ದಾಖಲೆಗಳಲ್ಲಿ ದಿವಂಗತ ನಂಜುಂಡಪ್ಪನವರ ಪುತ್ರ ಶ್ರೀ.ಎನ್.ನಾರಾಯಣಸ್ವಾಮಿ ಎಂದು ನಮೂದಿಸಲಾಗಿತ್ತು. ಆದರೆ ಎಸ್‌ಎಲ್‌ಎಓ–2ರವರು ಶ್ರೀ.ಬಿ.ಎಂ.ನಾರಾಯಣಪ್ಪ ಎಂಬುವವರ ಪರವಾಗಿ ಚೆಕ್ಕನ್ನು ಶ್ರೀ.ಎನ್.ನಾರಾಯಣಸ್ವಾಮಿ ಎಂಬುವವರಿಗೆ ನೀಡಿದ್ದರು. ಈ ಪಾವತಿಯು ವಂಚನೆಯಿಂದ ಕೂಡಿದ್ದು ಅನರ್ಹ ವ್ಯಕ್ತಿಗೆ ಪರಿಹಾರಧನ ಪಾವತಿಯಾಗಿರುವುದರ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಲೋಕಾಯುಕ್ತರಿಂದ ಮೂಲ ದಾಖಲೆಗಳು ಬಂದ ನಂತರ ಅಂತಿಮ ಉತ್ತರವನ್ನು ಸಲ್ಲಿಸಲಾಉವುದು ಎಂದು ಎಸ್‌ಎಲ್‌ಎಓ–2 ತಿಳಿಸಿದರು (ಜುಲೈ 2011).

(8) ಆಗಸ್ಟ್ 2009ರಲ್ಲಿ ಬಂಡಿಕೊಡಿಗೆಹಳ್ಳಿ ಪಾಳ್ಯ ಗ್ರಾಮದ ಸರ್ವೆ ನಂಬರ್ 7ರ ಜಮೀನಿನ ಸ್ವಾಧೀನದ ಪರಿಹಾರದ ಪಾವತಿಯ ಸಲುವಾಗಿ ನಂಜಪ್ಪನವರ ಪುತ್ರ ಶ್ರೀ.ಹೆಚ್.ಎನ್.ಬೈರಪ್ಪ ಮತ್ತು ಶ್ರೀಮತಿ ಸವಿತ (ದಿವಂಗತ ಕೃಷ್ಣಸ್ವಾಮಿ ಪೆರುಮಾಳ್ ಶೆಟ್ಟಿರವರ ಪುತ್ರಿ) ರವರುಗಳು ತಮ್ಮ ತಲಾ 4 ಎಕರೆ ಭೂಮಿಯ ಸಂಬಂಧ ಅರ್ಜಿಯನ್ನು ಸಲ್ಲಿಸಿದರು. ಸೆಪ್ಟೆಂಬರ್ 2008ರಲ್ಲಿ ಹೊರಡಿಸಿದ ಅಂತಿಮ ಭೂ ಸ್ವಾಧೀನ ಅಧಿಸೂಚನೆಯಲ್ಲಿ ಹಾಗೂ ಜಂಟಿ ಮಾಪನಾ ವರದಿಯಲ್ಲಿ ಈ ಅರ್ಜಿದಾರರ ಹೆಸರುಗಳು ಇಲ್ಲದ ಕಾರಣ ಎಸ್‌ಎಲ್‌ಎಓ ಜುಲೈ 2009ರಲ್ಲಿ ಒಂದು ಹೊಸ ಜಂಟಿ ಮಾಪನ ವರದಿಯನ್ನು ತರಿಸಿಕೊಂಡರು ಹಾಗೂ ಆ ವರದಿಯಲ್ಲಿ ಶ್ರೀಮತಿ ಸವಿತಾರವರ ತಂದೆಯವರ ಮತ್ತು ಇನ್ನೊಬ್ಬ ವ್ಯಕ್ತಿ ಶ್ರೀ.ಹೆಚ್.ಎನ್.ಬೈರಪ್ಪ (ನಂಜಪ್ಪನವರ ಪುತ್ರ) ಎಂಬ ಹೆಸರುಗಳು ಇದ್ದವು. ಶ್ರೀಮತಿ ಸವಿತಾ ಮತ್ತು ಶ್ರೀ.ಹೆಚ್.ಎನ್.ಬೈರಪ್ಪರವರು ಸಲ್ಲಿಸಿದ ಅನುದಾನ ಮಂಜೂರು ಧೃಢೀಕರಣ ಪತ್ರಗಳ ಪ್ರತಿಗಳನ್ನು ಅವಲೋಕಿಸಿದಾಗ ತಿಳಿದು ಬಂದದ್ದೇನೆಂದರೆ ಈ ಭೂಮಿಯನ್ನು ಅಕ್ಟೋಬರ್ 1963ರ ಅವಧಿಯಲ್ಲಿಯೇ ಶ್ರೀಮತಿ ಸವಿತಾರವರ ತಂದೆಗೆ ಮತ್ತು ಶ್ರೀ.ಹೆಚ್.ಎನ್.ಭೈರಪ್ಪ ಎನ್ನುವವರಿಗೆ ಭೂ ಅನುದಾನ ಮಂಜೂರು ಮಾಡಿದ್ದರೂ ಇವರ ಹೆಸರುಗಳನ್ನು ಕೇವಲ 2007ರಲ್ಲಿ ಪಹಣಿ ಪತ್ರದಲ್ಲಿ ನಮೂದಿಸಲಾಗಿತ್ತು. ಇದರ ಬಗ್ಗೆ ಶ್ರೀಮತಿ ಸವಿತಾರವರ ತಂದೆಗೆ ಹಾಗೂ ಹೆಚ್.ಎನ್.ಭೈರಪ್ಪನವರಿಗೆ ನೀಡಿದ ಭೂ ಅನುದಾನವನ್ನು ಪರಿಶೀಲಿಸಿ ಸತ್ಯಾಸತ್ಯತೆಯನ್ನು ವರದಿ ಮಾಡಲು ಆಗಸ್ಟ್ 2009ರಲ್ಲಿ ಯಲಹಂಕದ ತಹಸೀಲ್ದಾರ್‌ರವರನ್ನು ಎಸ್‌ಎಲ್‌ಎಓ–2 ಕೋರಿದರು. ಸೆಪ್ಟೆಂಬರ್ 2009ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕು ಜಾಲ ಹೋಬಳಿಯ ಕಂದಾಯ ಇನ್ಸ್‌ಪೆಕ್ಟರ್‌ರವರು ವರದಿ ನೀಡಿದ್ದು ಅದರ ಪ್ರಕಾರ ಒದಗಿಸಿದ ದಾಖಲೆಗಳಲ್ಲಿ ಈ ಇಬ್ಬರು ಅರ್ಜಿದಾರರಿಗೆ ಭೂ ಅನುದಾನ ಮಂಜೂರು

ಮಾಡಿರುವುದು ಕಂಡುಬಂದಿದ್ದರೂ ಈ ಭೂಮಿಯ ಸಂಬಂಧ "ಭೂ ಒತ್ತುವರಿ"ಯ ಆಪಾದನೆಯನ್ನು ಹೊರಿಸಿ ಶ್ರೀಮತಿ ಸವಿತಾರವರ ಪತಿ ಶ್ರೀ.ರಘುರವರ ಮೇಲೆ ಮತ್ತು ಶ್ರೀ.ಹೆಚ್.ಎನ್.ಭೈರಪ್ಪರವರ ಮೇಲೆ ವಿಶೇಷ ಜಿಲ್ಲಾಧಿಕಾರಿಗಳು ಕರ್ನಾಟಕ ಭೂ ಕಂದಾಯ ಕಾಯಿದೆಯ ಸೆಕ್ಷನ್ 136(3)ರಡಿ ನಡೆಸುತ್ತಿರುವ ತನಿಖಾ ಕ್ರಮವು ಇನ್ನೂ ಬಾಕಿಯಿದೆ ಎಂದೂ ತಿಳಿಸಲಾಯಿತು (ಡಿಸೆಂಬರ್ 2008).

ಮುಂದುವರೆದು ಪರಿಶೀಲನೆಯಲ್ಲಿ ಗಮನಿಸಿದಂತೆ ಮೇ 2009ರಲ್ಲಿ ಶ್ರೀಮತಿ ಸವಿತಾ ಮತ್ತು ಶ್ರೀ.ಎಚ್.ಎನ್.ಭೈರಪ್ಪ ಇವರುಗಳು ಸ್ವತ: ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕದ ತಹಶೀಲುದಾರರನ್ನು ತಮಗೆ ಸರ್ಕಾರದಿಂದ ಮಂಜೂರು ಮಾಡಿದ ಭೂಮಿಯ ವಿಚಾರದ ಸತ್ಯಾಸತ್ಯತೆಯನ್ನು ಪರಿಶೀಲಿಸಬೇಕೆಂದು ಮನವಿ ಮಾಡಿದ್ದರು. ಇದಕ್ಕೆ ಪ್ರತಿಕ್ರಿಯೆಯಾಗಿ ತಹಸೀಲ್ದಾರ್‌ರವರು ಎಸ್‌ಎಲ್‌ಎಓ–2ರವರಿಗೆ ಮೇ 2009ರಲ್ಲಿ ವರದಿ ಮಾಡಿ ಪ್ರಸ್ತಾಪಿಸಿದ ಭೂಮಿಯ ಸಂಬಂಧ ಮೂಲ ಅನುದಾನ ಮಂಜೂರು ದಾಖಲೆಗಳು ದೊರಕುತ್ತಿಲ್ಲವಾದರೂ ಕಛೇರಿಯಲ್ಲಿ ಭೂ ಮಂಜೂರು ವಹಿಯ ಪ್ರತಿಗಳಲ್ಲಿ ಇರುವಂತೆ ಅಕ್ಟೋಬರ್ 1963ರಲ್ಲಿ ಈ ಇಬ್ಬರು ವ್ಯಕ್ತಿಗಳಿಗೆ ಭೂಮಿಯನ್ನು ಅನುದಾನ ಮಾಡಲಾಗಿದೆ ಎಂದು ತಿಳಿಸಿದರು. ತನಿಖೆಯು ಪೂರ್ಣವಾಗುವುದನ್ನು ಪ್ರತೀಕ್ಷಿಸದೇ ಎಸ್‌ಎಲ್‌ಎಓ–2ರವರು ಅಕ್ಟೋಬರ್ 2009ರಲ್ಲಿ ಶ್ರೀಮತಿ ಸವಿತಾ ಮತ್ತು ಶ್ರೀ.ಎಚ್.ಎನ್.ಭೈರಪ್ಪ ಇವರುಗಳಿಗೆ ತಲಾ ರೂ.2.48 ಕೋಟಿಗಳನ್ನು ಪಾವತಿ ಮಾಡಿದರು. ಮೂಲ ದಾಖಲೆಗಳು ಲೋಕಾಯುಕ್ತರ ಬಳಿ ಇರುವುದರಿಂದ ಉತ್ತರವನ್ನು ನೀಡಲಾಗುವುದಿಲ್ಲ ಎಂದು ಎಸ್‌ಎಲ್‌ಎಓ–2 ತಿಳಿಸಿದರು (ಜುಲೈ 2011).

(9) ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 41ರಲ್ಲಿನ 12 ಗುಂಟೆ ಜಮೀನಿಗೆ ಶ್ರೀ.ಡಿ.ರವಿಶಂಕರ್‌ರವರಿಗೆ ಪಾವತಿ ಮಾಡಿದ ರೂ.9.30 ಲಕ್ಷಗಳ ಸಂಬಂಧವಾಗಿ ಪಾವತಿಯನ್ನು ಪುಷ್ಠೀಕರಿಸುವ ಯಾವುದೇ ದಾಖಲೆಗಳು ದೊರಕುತ್ತಿಲ್ಲ.

### 5.6.6 ಒಂದೇ ಭೂಮಿಗೆ ಎರಡು ಬಾರಿ ಪರಿಹಾರಧನ ಪಾವತಿ ಮಾಡಿರುವುದು

ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್41ರಲ್ಲಿರುವ 4 ಎಕರೆ 20 ಗುಂಟೆ ಜಮೀನಿನ ಸ್ವಾಧೀನ ಸಂಬಂಧ ಒಂದು ಸಂಸ್ಥೆಗೆ ಮಾಡಿದ ರೂ.1.49 ಕೋಟಿಗಳ (ಜುಲೈ ಮತ್ತು ಆಗಸ್ಟ್ 2008) ಪರಿಹಾರಧನದ ಪಾವತಿಯು ಭೂಮಾಲೀಕರ ಪರವಾಗಿರುವ ಪಹಣಿ ಪತ್ರದ ಆಧಾರದ ಮೇಲೆ ಹಾಗೂ ಭೂಮಾಲೀಕರ ಪರವಾಗಿ (ಜನವರಿ 1996) ಸಾಮಾನ್ಯ ಅಧಿಕಾರ ಪತ್ರ ಪಡೆದುಕೊಂಡ ಸಂಸ್ಥೆಯವರು ನೋಂದಣಿ ಮಾಡಿಸಿದ ಎರಡು ಕ್ರಯಪತ್ರದ ಆಧಾರದ ಮೇಲೆ ಮಾಡಲಾಗಿತ್ತು. ಹಣವನ್ನು ಪಾವತಿ ಮಾಡುವುದಕ್ಕೆ ಮುನ್ನ ಎಸ್‌ಎಲ್‌ಎಓ–2ರವರು ಸಂಸ್ಥೆಯವರಿಂದ ಭೂಒಡೆತನದ ಬಗ್ಗೆ ಸ್ಪಷ್ಟ ಹಕ್ಕನ್ನು ಖಚಿತ ಪಡಿಸುವ ಬೇರಾವ ಮೂಲ ದಾಖಲೆಗಳನ್ನು ಒದಗಿಸಲು ಸೂಚಿಸಲಿಲ್ಲ. ಮುಂದುವರೆದು, ಪರಿಶೀಲನೆಯಲ್ಲಿ ಕಂಡು ಬಂದ ಹಾಗೆ ಪ್ರಸ್ತಾಪಿಸಿದ ಸರ್ವೆ ನಂಬರ್ 41ರ 4 ಎಕರೆ 20 ಗುಂಟೆ ಜಮೀನಿನ ಒಡೆತನದ ಹಕ್ಕಿಗೆ ಸಂಬಂಧಿಸಿದಂತೆ ಮಾರ್ಚ್ 2007ರಲ್ಲಿ ದೇವನಹಳ್ಳಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಒಂದು ದಾವೆಯ ದಾಖಲಾಗಿದ್ದು ಆ ದಾವೆಯಲ್ಲಿ ಮೇಲೆ ಹೇಳಿದ ಸಂಸ್ಥೆಯನ್ನು ಪ್ರತಿವಾದಿಯನ್ನಾಗಿ ಮಾಡಲಾಗಿದೆ. ಈ ದಾವೆಯ ವಿಚಾರವನ್ನು ಡಿಸೆಂಬರ್ 2007ರಲ್ಲಿಯೇ ಕಕ್ಷಿದಾರರು ತಮ್ಮ ವಕೀಲರ ಮೂಲಕ ಎಸ್‌ಎಲ್‌ಎಓ–2ರವರಿಗೆ ತಿಳಿಸಿದ್ದರು. ನ್ಯಾಯಾಲಯ ಯಾವುದೇ ಆದೇಶ ಹೊರಡಿಸಿಲ್ಲ ಎಂಬ ಕಾರಣವನ್ನು ಮುಂದಿಟ್ಟುಕೊಂಡು ಈ ಭೂ ವ್ಯಾಜ್ಯದ ವಿಚಾರವನ್ನು ಗಣನೆಗೆ ತೆಗೆದುಕೊಳ್ಳದೇ ಎಸ್‌ಎಲ್‌ಎಓ–2ರವರು ರೂ.1.49 ಕೋಟಿಗಳ ಪರಿಹಾರಧನವನ್ನು ಸಂಸ್ಥೆಗೆ ಪಾವತಿ ಮಾಡಿದರು.

ತದನಂತರ ಅಕ್ಟೋಬರ್ 2008ರಲ್ಲಿ ಸರ್ವೆ ನಂಬರ್ 41ರ 3 ಎಕರೆ ಜಮೀನಿಗೆ ಎಸ್‌ಎಲ್‌ಎಓ–2ರವರು ರೂ.93 ಲಕ್ಷಗಳನ್ನು ಶ್ರೀ.ಹನುಮಂತರಾಯಪ್ಪ ಎನ್ನುವವರಿಗೆ ಪಾವತಿ ಮಾಡಿದರು. ಧನ ಪಾವತಿಗೆ ಸಲ್ಲಿಸಿದ ಅರ್ಜಿಯೂ ಸೇರಿದಂತೆ ಯಾವುದೇ ದಾಖಲೆಗಳೂ ಇರಲಿಲ್ಲ. ಮಾರ್ಚ್ 2007ರಲ್ಲಿ ಶ್ರೀ.ಹನುಮಂತರಾಯಪ್ಪ ಮತ್ತು ಇತರ ಮೂವರು ಸಂಸ್ಥೆಯ ವಿರುದ್ಧ ತಮಗೆ ಬರಬೇಕಾದ 4/6ನೇ ಭಾಗದ 4 ಎಕರೆ 20 ಗುಂಟೆ ಭೂಮಿಯ ಪರವಾಗಿ ಭೂಪರಿಹಾರಧನವನ್ನು ಕೋರಿ ಸಲ್ಲಿಸಲಾದ ದಾವೆಯ ಪ್ರತಿ ಮಾತ್ರ ದೊರಕಿದೆ. 2 ಎಕರೆ 20 ಗುಂಟೆ ಭೂಮಿಯ 4/6ನೇ ಭಾಗದ ಪ್ರಮಾಣ 3 ಎಕರೆಗಳಾಗಿದ್ದು ಎಸ್‌ಎಲ್‌ಎಓರವರು ಈ 3 ಎಕರೆಗಳ ಜಮೀನಿನ ಪರಿಹಾರಧನವನ್ನು ಶ್ರೀ.ಹನುಮಂತರಾಯಪ್ಪರವರಿಗೆ ಯಾವುದೇ ದಾಖಲೆಗಳನ್ನು ಪಡೆಯದೆ ಪಾವತಿ ಮಾಡಿರುವುದನ್ನು

ಗಮನಿಸಿದರೆ ಸಂಸ್ಥೆಗೆ ಈಗಾಗಲೇ ತಪ್ಪಾಗಿ ಪರಿಹಾರಧನ ಪಾವತಿ ಮಾಡಿರುವುದನ್ನು ಮುಚ್ಚಿಹಾಕಲು ಮಾಡಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ. ಲೋಕಾಯುಕ್ತರಿಂದ ಮೂಲ ದಾಖಲೆಗಳ ಸ್ವೀಕೃತಿಯಾದ ನಂತರ ಉತ್ತರಿಸುವುದಾಗಿ ಎಸ್‌ಎಲ್‌ಎಓ–2 ತಿಳಿಸಿದರು (ಜುಲೈ 2011).

### 5.6.7 ಸಂದೇಹಾಸ್ಪದ ಜಿಪಿಎಯನ್ನು ಆಧರಿಸಿ ಪರಿಹಾರಧನವನ್ನು ಪಾವತಿಸಲಾಗಿದೆ

(1) ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 41ರ 1 ಎಕರೆ 20 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಶ್ರೀ.ಟಿ.ಎಚ್.ರಾಮೇಗೌಡರವರಿಗೆ ರೂ.49.50 ಲಕ್ಷಗಳನ್ನು ಪರಿಹಾರಧನ ಪಾವತಿಯ ಪ್ರಕರಣದಲ್ಲಿ ಗಮನಿಸಿದ ಪ್ರಕಾರ, ಈ ಭೂಮಿಯ ಮಾಲೀಕರಾದ ಶ್ರೀಮತಿ ಧನಲಕ್ಷ್ಮಿಯವರು ದಿನಾಂಕ 21 ನವೆಂಬರ್ 1995ರಂದು ಶ್ರೀ.ಡಿ.ರವಿಶಂಕರ್ ಮತ್ತು ಶ್ರೀ.ಬಿ.ಎಸ್.ಎನ್.ಹರಿ ಎಂಬುವವರಿಗೆ ಜಂಟಿಯಾಗಿ ಜಿಪಿಎಯನ್ನು ನೋಂದಣಿ ಮಾಡಿಸಿದ್ದರು. ಅದೇ ದಿನಾಂಕದಂದು ಅದೇ ಭೂಮಿಯನ್ನು ಶ್ರೀಮತಿ ಧನಲಕ್ಷ್ಮಿಯವರು ಶ್ರೀ.ಟಿ.ಹೆಚ್.ರಾಮೇಗೌಡ ಎಂಬುವವರಿಗೆ ಮಾರಾಟ ಮಾಡಿದ ಕ್ರಯಪತ್ರವನ್ನು ನೋಂದಣಿ ಮಾಡಿಸಿದ್ದರು. ತದನಂತರ ಜಿಪಿಎ ಹೊಂದಿರುವವರಲ್ಲಿ ಒಬ್ಬರಾದ ಶ್ರೀ.ಡಿ.ರವಿಶಂಕರ್‌ರವರು ಇದೇ ಆಸ್ತಿಯ ಜಿಪಿಎ ಅಧಿಕಾರವನ್ನು 20 ಜುಲೈ 2007ರಂದು ಶ್ರೀ.ಶಶಿಶೇಖರ್ ಎಂಬುವವರಿಗೆ ನೋಂದಣಿ ಮಾಡಿಸಿದ್ದರು. ಮತ್ತೆ ಅದೇ ದಿನಾಂಕದಂದು ಶ್ರೀ.ಡಿ.ರವಿಶಂಕರ್‌ರವರು ಶ್ರೀ.ಟಿ.ಹೆಚ್.ರಾಮೇಗೌಡ ಎಂಬುವವರಿಗೆ 1 ಎಕರೆ 20 ಗುಂಟೆ ಭೂಮಿಯ ಸ್ವಾಧೀನ ಸಂಬಂಧ ಪರಿಹಾರಧನವನ್ನು ಮಂಡಳಿಯ ಕಡೆಯಿಂದ ಪಡೆಯುವ ಅಧಿಕಾರವನ್ನು ನೀಡುವ ಒಂದು ಹೆಚ್ಚುವರಿ ಒಪ್ಪಂದ ಪತ್ರವನ್ನು ಕೂಡ ನೋಂದಣಿ ಮಾಡಿಸಿಕೊಟ್ಟರು. ಈ ರೀತಿಯ ಬಹುಮುಖಿ ಜಿಪಿಎಗಳ ಹಸ್ತ ಬದಲಾವಣೆಗಳು ಮತ್ತು ವಿವೇಚನಾರಹಿತ ಒಪ್ಪಂದಗಳು ನಂಬಲರ್ಹವಲ್ಲದ ವ್ಯವಹಾರಗಳ ಲಕ್ಷಣವನ್ನು ಹೊಂದಿದ್ದರೂ ಎಸ್‌ಎಲ್‌ಎಓ–2ರವನ್ನು ಎಚ್ಚರಿಸುವಲ್ಲಿ ವಿಫಲವಾಯಿತು.

ಜೂನ್ 2001 ಮಂಡಳಿಯ ಸುತ್ತೋಲೆಯ ಸೂಚನೆಗಳ ಪ್ರಕಾರ 1882ನೇ ಇಸವಿಯ ಸ್ಥಿರಾಸ್ತಿ ವರ್ಗಾವಣೆ ಅಧಿನಿಯಮದ ಪರಿಚ್ಛೇದ 54ರಡಿಯಲ್ಲಿ ಹಾಗೂ ಭಾರತೀಯ ನೊಂದಣಿ ಕಾಯಿದೆಯ ಅಧಿನಿಯಮ 14 ಮತ್ತು 17ರನ್ನೊಳಗೊಂಡು ಓದಿದಂತೆ ಪರಿಹಾರಧನದ ಅರ್ಜಿಗಳನ್ನು ಪರಿಗಣಿಸುವಾಗ ಎಸ್‌ಎಲ್‌ಎಓರವರು ಭೂಮಾಲೀಕರ ಅರ್ಜಿಗಳನ್ನು ಪರಿಗಣಿಸಬೇಕೇ ಹೊರತು ಒಪ್ಪಂದಗಳ ಭಾಗೀದಾರರು ಹಾಗೂ ಜಿಪಿಎ ಹೊಂದಿದವರ ಅರ್ಜಿಗಳನ್ನು ಪರಿಗಣಿಸದೆ ತಿರಸ್ಕರಿಸಬೇಕು ಎಂದು ಆದೇಶಿಸಿದೆ. ನಂಬಲಾಗದ ಜಿಪಿಎಗಳನ್ನು ಹೊಂದಿದ್ದರೂ ಸಹ ಜೂನ್ 2001ರ ಮಂಡಳಿಯ ಈ ಸೂಚನೆಗಳನ್ನು ಕಡೆಗಣಿಸಿ ಭೂ ಒಡೆತನವಿಲ್ಲದ ವ್ಯಕ್ತಿಗೆ ರೂ.49.50 ಲಕ್ಷಗಳನ್ನು ಎಸ್‌ಎಲ್‌ಎಓ–2ರವರು ಪಾವತಿ ಮಾಡಿದ್ದಾರೆ.

(2) ಎಸ್‌ಎಲ್‌ಎಓ–2ರವರು ಜೂನ್ 2008ರಲ್ಲಿ ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್74/ಪಿ–4ರ 4 ಎಕರೆ ಜಮೀನು ಸ್ವಾಧೀನದ ಸಂಬಂಧ ರೂ.1.24 ಕೋಟಿಗಳ ಪರಿಹಾರಧನವನ್ನು ಶ್ರೀ.ಶಶಿಶೇಖರ್‌ರವರಿಗೆ ವಿತರಿಸಿದರು. ಈ ಭೂಮಿಯನ್ನು ಅನುದಾನ ಮಂಜೂರು ಪಡೆದ ವ್ಯಕ್ತಿಗಳಾದ ಶ್ರೀಮತಿ ಲಕ್ಷ್ಮಮ್ಮ ಮತ್ತು ಶ್ರೀ.ವೆಂಕಟೇಶಪ್ಪ ಎಂಬುವವರು ಈ ಆಸ್ತಿಯ ಬಗ್ಗೆ ಜನವರಿ 1997ರಲ್ಲಿ ಶ್ರೀ.ಬಿ.ಎಸ್.ಎನ್.ಹರಿ ಮತ್ತು ಶ್ರೀ.ಡಿ.ರವಿಶಂಕರ್‌ರವರ ಪರವಾಗಿ ಸರ್ವೆ ನಂಬರ್ 74/ಪ4ರಲ್ಲಿ 4 ಎಕರೆ ಭೂಮಿಗೆ ಜಿಪಿಎ ಅಧಿಕಾರವನ್ನು ನೀಡಿದ್ದರು. ತದನಂತರ ಮೇ 2005ರಲ್ಲಿ ಶ್ರೀಮತಿ ಲಕ್ಷ್ಮಮ್ಮ ಮತ್ತು ಶ್ರೀ.ವೆಂಕಟೇಶಪ್ಪ ಇವರುಗಳು ಸ್ವತ: ತಾವೇ ಈ 4 ಎಕರೆ ಭೂಮಿಯನ್ನು ಶ್ರೀ.ಶಶಿಶೇಖರ್‌ರವರಿಗೆ ಮಾರಾಟ ಮಾಡಿ ಕ್ರಯಪತ್ರವನ್ನು ನೋಂದಣಿ ಮಾಡಿದರು. ಈ ಕ್ರಯಪತ್ರದಲ್ಲಿನ ಒಪ್ಪಂದದ ರೀತ್ಯ ಈ ಭೂಮಿಯನ್ನು ಮಾರಾಟ ಮಾಡುವುದಕ್ಕೆ ಸರ್ಕಾರದಿಂದ ಅಗತ್ಯ ಅನುಮತಿಯನ್ನು ಪಿ.ಟಿ.ಸಿ.ಎಲ್ ಕಾಯಿದೆಯ ಅನುಬಂಧಗಳ ಪ್ರಕಾರ ಪಡೆಯಬೇಕು ಎನ್ನುವ ಅಂಶವೂ ಇದ್ದಿತು. ದಿನಾಂಕ 20 ಜುಲೈ 2007ರಂದು ಶ್ರೀ.ಡಿ.ರವಿಶಂಕರ್‌ರವರು (ಜಿಪಿಎ ಅಧಿಕಾರ ಹೊಂದಿದವರಲ್ಲಿ ಒಬ್ಬರು) ಶ್ರೀ.ಶಶಿಶೇಖರ್‌ರವರ ಪರವಾಗಿ 4 ಎಕರೆ ಜಮೀನಿನ ಜಿಪಿಎ ಅಧಿಕಾರ ವರ್ಗಾಯಿಸುವ ಪತ್ರವನ್ನು ನೋಂದಾಯಿಸಿದರು. ಅದೇ ದಿನ ಶ್ರೀ.ಶಶಿಶೇಖರ್‌ರವರು ಮಂಡಳಿಯಿಂದ ಪರಿಹಾರಧನ ಪಡೆಯಬಹುದೆಂದು ಘೋಷಣೆ ನೀಡಿದ ಒಪ್ಪಂದ ಪತ್ರವನ್ನೂ ಶ್ರೀ.ಡಿ.ರವಿಶಂಕರ್‌ರವರು ನೋಂದಾಯಿಸಿದರು. ಸಂಭವನೀಯವಾಗಿ ಈ ನೋಂದಾಯಿತ ಕ್ರಯಪತ್ರಗಳಲ್ಲಿ ಹಾಗೂ ಜಿ.ಪಿ.ಎ ಪತ್ರಗಳಲ್ಲಿ ಗಮನಿಸಿದ್ದೇನೆಂದರೆ ಶ್ರೀ.ಡಿ.ರವಿಶಂಕರ್, ಶ್ರೀ.ಬಿ.ಎಸ್.ಎನ್.ಹರಿ, ಶ್ರೀ.ಶಶಿಶೇಖರ್ ಮತ್ತು ಜೆ.ಬಿ.ಹರ ಅಂಡ್ ಪ್ರಾಪರ್ಟೀಸ್ ಇವರೆಲ್ಲರ ನಿವಾಸದ ವಿಳಾಸಗಳು ಒಂದೇ ಆಗಿದ್ದವು. ಈ ಎಲ್ಲಾ

ವ್ಯವಹಾರಗಳೂ ಸಂದೇಹಾಸ್ಪದವಾಗಿದ್ದವು. ಎಸ್‌ಎಲ್‌ಎಓ–2ರವರು ಭೂಮಿಯ ನೈಜ ಒಡೆತನದ ಹಕ್ಕನ್ನು ಖಚಿತಪಡಿಸುವ ಸೂಕ್ತ ದಾಖಲೆಗಳ ಸಲ್ಲಿಸುವಿಕೆಯನ್ನು ಒತ್ತಾಯಿಸದೆ ಮತ್ತು ಶ್ರೀ.ಶಶಿಶೇಖರ್‌ರವರ ಪರವಾಗಿ ಭೂಮಿಯ ಮೇಲಿನ ಸ್ಪಷ್ಟ ಹಕ್ಕು ಇಲ್ಲದಿರುವುದನ್ನು ತಿಳಿದೂ ಸಹ ಪರಿಹಾರಧನವನ್ನು ಅವರಿಗೆ ವಿತರಿಸಿದರು. ತದನಂತರ, ಸ್ವಾಧೀನ ಪ್ರಕ್ರಿಯೆಯ ಅಂತಿಮ ಅಧಿಸೂಚನೆಯಲ್ಲಿ ಘೋಷಿಸಿದ ಖಾತೆದಾರರಾದ ಶ್ರೀ.ವೆಂಕಟೇಶಪ್ಪ ಎನ್ನುವವರು ಈ 4 ಎಕರೆ ಜಮೀನಿನ ಸ್ವಾಧೀನದ ಸಂಬಂಧ ಪರಿಹಾರಧನಕ್ಕೆ ಅರ್ಜಿಯನ್ನು ಸಲ್ಲಿಸಿ ಅಗತ್ಯ ದಾಖಲೆಗಳನ್ನು ಒದಗಿಸಿ ಎಸ್‌ಎಲ್‌ಎಓ–2ರವರನ್ನು ಸಂಪರ್ಕಿದರು. ಅಕ್ಟೋಬರ್ 2008ರಲ್ಲಿ ಎಸ್‌ಎಲ್‌ಎಓ–2ರವರು ಶ್ರೀ.ಶಶಿಶೇಖರ್‌ರವರಿಗೆ ತನಿಖೆಗೆ ಹಾಜರಾಗಲು ಸೂಚನಾ ಪತ್ರವನ್ನು ಕಳುಹಿಸಿದ್ದಾಗ್ಯೂ, ಅವರು ಹಾಜರಾಗಲಿಲ್ಲ. ಲೋಕಾಯುಕ್ತರಿಂದ ಮೂಲ ದಾಖಲೆಗಳು ಸ್ವೀಕೃತಿಯಾದ ನಂತರ ಉತ್ತರಿಸುವುದಾಗಿ ಎಸ್‌ಎಲ್‌ಎಓ–2 ತಿಳಿಸಿದರು (ಆಗಸ್ಟ್ 2001).

### 5.6.8 ಅಧಿಕ ಪ್ರಮಾಣದಲ್ಲಿ ಪರಿಹಾರಧನ ಪಾವತಿ

(1) ಮಂಡಳಿಯು ಮೇ 2007ರಲ್ಲಿ 199 ಎಕರೆ 5 ಗುಂಟೆ ಖಾಸಗಿ ಜಮೀನೂ ಸೇರಿದಂತೆ ಒಟ್ಟಾರೆ 450 ಎಕರೆ 5 ಗುಂಟೆ ಭೂಮಿಯನ್ನು ಬಂಡಿಕೊಡಿಗೆಹಳ್ಳಿಯಲ್ಲಿ ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ನ್ನು ಸ್ಥಾಪಿಸುವುದಕ್ಕಾಗಿ ಸ್ವಾಧೀನಪಡಿಸಿಕೊಂಡಿತು. ಮೇ 2010ರ ಅವಧಿಯ ತನಕ ಎಸ್‌ಎಲ್‌ಎಓ–2ರವರು 115 ಎಕರೆ 13 ಗುಂಟೆ ಖಾಸಗಿ ಜಮೀನುಗಳಿಗೆ ರೂ.37.84 ಕೋಟಿಗಳನ್ನು ಪರಿಹಾರವಾಗಿ ವಿತರಿಸಿದ್ದರು ಮತ್ತು 119 ಎಕರೆ 8 ಗುಂಟೆ ಜಮೀನಿಗೆ ಪರಿಹಾರ ಪಾವತಿ ಬಾಕಿಯಿದ್ದಿತು. ಈ ರೀತಿ ಪರಿಹಾರಕ್ಕೆ ಅರ್ಜಿ ಸಲ್ಲಿಸಿದ ಭೂ ವಿಸ್ತೀರ್ಣದ ಪ್ರಮಾಣವು ನೈಜವಾಗಿ ಅಧಿಸೂಚನೆಯಲ್ಲಿ ಸ್ವಾಧೀನಕ್ಕೆ ಘೋಷಣೆ ಪಡಿಸಿದ ಭೂಮಿಯ ವಿಸ್ತೀರ್ಣಕ್ಕಿಂತ 35 ಎಕರೆ 16 ಗುಂಟೆಗಳಷ್ಟು ಹೆಚ್ಚಾಗಿತ್ತು. ಲೋಕಾಯುಕ್ತರಿಂದ ಪರಿಹಾರಧನಕ್ಕೆ ಸೇರಿದ ಎಲ್ಲ ಕಡತಗಳನ್ನು ಲೋಕಾಯುಕ್ತರ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಮತ್ತು ಮೂಲ ದಾಖಲೆಗಳನ್ನು ಸ್ವೀಕರಿಸಿದ ನಂತರ ಉತ್ತರಿಸುವುದಾಗಿ ಎಸ್‌ಎಲ್‌ಎಓ–2ರವರು ತಿಳಿಸಿದರು (ಆಗಸ್ಟ್ 2011). ಪರಿಹಾರ ಪಾವತಿಯ ಪ್ರಕರಣಗಳ ಪಾವತಿಗಳನ್ನು ಪರಿಶೀಲಿಸಿದಾಗ ಈ 115 ಎಕರೆ 13 ಗುಂಟೆ ಭೂಮಿಯ ಸ್ವಾಧೀನಕ್ಕೆ ಈಗಾಗಲೇ ಪರಿಹಾರ ಪಾವತಿ ಮಾಡಿದ್ದು ಈ ಕೆಳಗೆ ವಿವರಿಸಿದ ಪ್ರಕರಣಗಳಲ್ಲಿ 84.35 ಲಕ್ಷಗಳನ್ನು ಅಕ್ರಮವಾಗಿ ಪಾವತಿಸಲಾಗಿರುವುದು ಕಂಡು ಬಂದಿದೆ.

- ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 75/2ರ ಎರಡು ಎಕರೆ ಜಮೀನನ್ನು ಮಂಡಳಿಯು ಸ್ವಾಧೀನ ಪಡಿಸಿಕೊಂಡಿದ್ದು ಪಿಎಸಿ ನಿಗದಿಪಡಿಸಿದಂತೆ ಒಂದು ಎಕರೆಗೆ ರೂ.31 ಲಕ್ಷಗಳಂತೆ ಪರಿಹಾರಧನವನ್ನು ನೀಡಬೇಕಾಗಿತ್ತು. ರೂ.62.78 ಲಕ್ಷಗಳನ್ನು ಪಾವತಿಸುವ ಬದಲಾಗಿ ಎಸ್‌ಎಲ್‌ಎಓ–2ರವರು ಜುಲೈ 2008ರಲ್ಲಿ ಎಕರೆಗೆ ರೂ.40 ಲಕ್ಷಗಳ ದರದಲ್ಲಿ 2 ಎಕರೆ 1 ಗುಂಟೆ ಭೂಮಿಗೆ ರೂ.81 ಲಕ್ಷಗಳನ್ನು ವಿತರಿಸಿದ್ದಾರೆ. ಇದರಿಂದಾಗಿ ರೂ.18.22 ಲಕ್ಷಗಳ ಅಧಿಕ ಪರಿಹಾರಧನ ಪಾವತಿಯಾಗಿರುತ್ತದೆ. ಇದೇ ರೀತಿ, ಅದೇ ಗ್ರಾಮದ ಸರ್ವೆ ನಂಬರ್ 75/1ರ 1 ಎಕರೆ 35 ಗುಂಟೆಗಳ ಜಮೀನಿಗೆ ಜುಲೈ 2008ರಲ್ಲಿ ಎಕರೆಗೆ ರೂ.33 ಲಕ್ಷಗಳ ದರದಲ್ಲಿ ಪರಿಹಾರಧನ ಪಾವತಿ ಮಾಡಿದ್ದು, ಸ್ವಾಧೀನ ಪಡಿಸಿಕೊಂಡ ಭೂಮಿಯ ವಿಸ್ತೀರ್ಣ 1 ಎಕರೆ 30 ಗುಂಟೆ ಮಾತ್ರ ಆಗಿದ್ದು ರೂ.4.13 ಲಕ್ಷಗಳ ಹೆಚ್ಚುವರಿ ಮೊತ್ತ ಪಾವತಿಯಾಗಿರುತ್ತದೆ. ರೂ.22.35 ಲಕ್ಷಗಳಷ್ಟು ಹೆಚ್ಚುವರಿ ಮೊತ್ತ ಪಾವತಿಯಾಗಿರುವುದನ್ನು ಎಸ್‌ಎಲ್‌ಎಓ–2ರವರು ಒಪ್ಪಿಕೊಂಡಿರುತ್ತಾರೆ (ಜುಲೈ 2011).

- ಮಂಡಳಿಯು ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್74/ಪಿ–6ರ 4 ಎಕರೆ ಭೂಮಿಯನ್ನು ಮೇ 2007ರಲ್ಲಿ ಸ್ವಾಧೀನಪಡಿಸಿಕೊಂಡಿತು. ಎಕರೆಗೆ ರೂ.31 ಲಕ್ಷಗಳ ದರದಲ್ಲಿ ಒಟ್ಟು ರೂ.1.24 ಕೋಟಿಗಳನ್ನು ಪರಿಹಾರವಾಗಿ ನೀಡಬೇಕಿತ್ತು. ಆದರೆ, ಜೂನ್ 2008 ಮತ್ತು ಸೆಪ್ಟಂಬರ್ 2008ರಲ್ಲಿ ಎಸ್‌ಎಲ್‌ಎಓ–2ರವರು 6 ಎಕರೆ ಭೂಮಿಗೆ ಒಟ್ಟು ರೂ.1.86 ಕೋಟಿಗಳನ್ನು ವಿತರಿಸಿದ್ದರು. ಹೆಚ್ಚುವರಿಯಾಗಿ ಪಾವತಿಯಾದ ರೂ.62 ಲಕ್ಷಗಳನ್ನು ವಸೂಲು ಮಾಡಲು ಕ್ರಮ ತೆಗೆದುಕೊಳ್ಳುವುದಾಗಿ ಎಸ್‌ಎಲ್‌ಎಓ–2ರವರು ತಿಳಿಸಿದ್ದಾರೆ (ಜುಲೈ 2011).

(2) ಎಸ್ಎಲ್ಎಓ-2ರವರು ಜೂನ್ 2008ರಲ್ಲಿ ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 74ರ 4 ಎಕರೆ ಪರಿವರ್ತಿತ ಭೂಮಿಯ ಸ್ವಾಧೀನಕ್ಕಾಗಿ ರೂ.1.32 ಕೋಟಿಗಳ ಪರಿಹಾರವನ್ನು ಒಂದು ಜಂಟಿ ಮಾಲೀಕತ್ವದ ಸಂಸ್ಥೆಗೆ ಬಿಡುಗಡೆ ಮಾಡಿದರು. ಕ್ರಯಪತ್ರಗಳ ಪ್ರತಿಗಳ ಪ್ರಕಾರ ಸಂಸ್ಥೆಯು ಈ ಜಮೀನನ್ನು ಶ್ರೀ.ಬಿ.ಎಂ.ಲಕ್ಷ್ಮೀನಾರಾಯಣ ಎಂಬುವವರಿಂದ ಸೆಪ್ಟೆಂಬರ್ 1997ರಲ್ಲಿ ಖರೀದಿಸಿತ್ತು. ಈ ಸಂಬಂಧದಲ್ಲಿ ಪರಿಹಾರಧನ ಪಾವತಿಯ ಸಲುವಾಗಿ ಎಸ್ಎಲ್ಎಓ-2ರವರು ಕೇವಲ ಕ್ರಯಪತ್ರ ಮತ್ತು 1989-92ರ ಅವಧಿಯವರೆಗೆ ಶ್ರೀ.ಬಿ.ಎಂ.ಲಕ್ಷ್ಮೀನಾರಾಯಣರವರ ಪರವಾಗಿರುವ ಪಹಣಿ ಪತ್ರವನ್ನು ಆಧರಿಸಿಕೊಂಡಿದ್ದರು. ದಾಖಲೆಗಳ ಪ್ರಕಾರ ಪಿತ್ರಾರ್ಜಿತವಾಗಿ 2 ಎಕರೆ ಭೂಮಿಯು ಶ್ರೀ.ಬಿ.ಎಂ.ಲಕ್ಷ್ಮೀನಾರಾಯಣರವರಿಗೆ ಬಂದಿದೆ ಮತ್ತು ಪಹಣಿಯಲ್ಲಿ ಶ್ರೀ.ಬಿ.ಎಂ.ಲಕ್ಷ್ಮೀನಾರಾಯನರವರ ಪರವಾಗಿ ಭೂಮಿಯ ವಿಸ್ತೀರ್ಣದ ಪ್ರಮಾಣ ಕೇವಲ 2 ಎಕರೆಗಳು ಎಂದು ನಮೂದಿಸಲಾಗಿದೆ. ಸೆಪ್ಟೆಂಬರ್ 1997ರಲ್ಲೇ ಸಂಸ್ಥೆಯು ಈ ಭೂಮಿಯನ್ನು ಖರೀದಿಸದ್ದರೂ ಭೂಮಿಯನ್ನು ತನ್ನ ಹೆಸರಿಗೆ ಹಕ್ಕು ವರ್ಗಾವಣೆಯನ್ನು ಮಾಡಿಕೊಂಡಿರಲಿಲ್ಲ. ಮುಂದುವರೆದು, 9 ಜೂನ್ 2008ರಂದು ಪರಿಹಾರಧನ ಪಾವತಿಗೆಂದು ಅರ್ಜಿಯನ್ನು ಪಡೆದು ತರಾತುರಿಯಲ್ಲಿ ವಿಲೇವಾರಿ ಮಾಡಿ 10ನೇ ಜೂನ್ 2008ರಂದೇ ಪರಿಹಾರಧನವನ್ನು ಪಾವತಿ ಮಾಡಲಾಗಿದೆ ಎನ್ನುವುದನ್ನು ಗಮನಿಸಲಾಯಿತು. ಶ್ರೀ.ಬಿ.ಎಂ.ಲಕ್ಷ್ಮೀನಾರಾಯಣರವರಿಗೆ ಪಿತ್ರಾರ್ಜಿತವಾಗಿ 2 ಎಕರೆಯನ್ನು ಹೊರತುಪಡಿಸಿ ಮತ್ತಾವುದಾದರೂ ಭೂಮಿ ಅನುದಾನವಾಗಿ ಬಂದಿರುವುದೇ ಎಂಬ ಲೆಕ್ಕಪರಿಶೋಧನಾ ಪ್ರಶ್ನೆಗೆ ಯಲಹಂಕದ ತಹಸೀಲ್ದಾರ್‌ರವರು ಜೂನ್ 2011ರಲ್ಲಿ ಗಣಕೀಕೃತ ಪಹಣಿಯ ಪ್ರಕಾರ ಯಾವುದೇ ಭೂಮಿಯು ಅನುದಾನವಾಗಿ ಮಂಜೂರಾಗಿರುವುದಿಲ್ಲವೆಂದು ಸ್ಪಷ್ಟಪಡಿಸಿದರು. ಆದುದರಿಂದ, ಈ ಪ್ರಕರಣದಲ್ಲಿ 2 ಎಕರೆ ಭೂ ವಿಸ್ತೀರ್ಣಕ್ಕೆ ರೂ.66 ಲಕ್ಷಗಳ ಹೆಚ್ಚುವರಿ ಭೂ ಪರಿಹಾರ ಮೊತ್ತವನ್ನು ಪಾವತಿಸಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಮೂಲ ದಾಖಲೆಗಳು ಲೋಕಾಯುಕ್ತರ ಸ್ವಾಧೀನದಲ್ಲಿರುವುದರಿಂದ ಉತ್ತರ ನೀಡಲು ಸಾಧ್ಯವಿಲ್ಲವೆಂದು ಎಸ್ಎಲ್ಎಓ-2ರವರು (ಆಗಸ್ಟ್ 2011) ತಿಳಿಸಿರುತ್ತಾರೆ.

(3) ದೇವನಹಳ್ಳಿಯ ತಹಶೀಲುದಾರರು ಸೆಪ್ಟೆಂಬರ್ 1982ರಲ್ಲಿ ಶ್ರೀ.ದೊಡ್ಡತಿಮ್ಮಣ್ಣ (ತಿಮ್ಮಯ್ಯನವರ ಪುತ್ರ) ಎಂಬುವವರಿಗೆ ಕವಡದಾಸನಹಳ್ಳಿ ಗ್ರಾಮದ ಸರ್ವೆ ನಂಬರ್21/ಪಿ-37ರ 2 ಎಕರೆ ಭೂಮಿಯನ್ನು ಅನುದಾನವಾಗಿ ಮಂಜೂರು ಮಾಡಿದ್ದರು. ಈ ಸಂಬಂಧ 1991-92ರ ಅವಧಿಯಲ್ಲಿ ಕಂದಾಯ ಇಲಾಖೆಯ ಕಡತಗಳಲ್ಲಿ ಕೇವಲ 1 ಎಕರೆ 25 ಗುಂಟೆಗಳಿಗೆ ಮಾತ್ರ ಖಾತೆ ಮತ್ತು ಹಕ್ಕು ವರ್ಗಾವಣೆಯಾಗಿತ್ತು. 2004-05ರ ಅವಧಿಯಲ್ಲಿ ಶ್ರೀ.ದೊಡ್ಡತಿಮ್ಮಣ್ಣರವರ ಸ್ವರ್ಗಸ್ಥರಾದ ನಂತರ ಖಾತೆಯು ಅವರ ಪತ್ನಿ ಶ್ರೀಮತಿ ಅಕ್ಕಯ್ಯಮ್ಮರವರ ಹೆಸರಿಗೆ ವರ್ಗಾವಣೆಯಾಯಿತು. ಎಸ್ಎಲ್ಎಓ-2ರವರು 30 ಸೆಪ್ಟೆಂಬರ್ 2008ರಲ್ಲಿ ತಹಸೀಲ್ದಾರ್‌ರವನ್ನು ಶ್ರೀ.ದೊಡ್ಡತಿಮ್ಮಣ್ಣನವರ ಹೆಸರಿನಲ್ಲಿ 2 ಎಕರೆ ಅನುದಾನ ಮಂಜೂರಾಗಿರುವ ಬಗ್ಗೆ ಅಥವಾ ಖಾತೆಯಲ್ಲಿ ತೋರಿಸಿರುವಂತೆ 1 ಎಕರೆ 25 ಗುಂಟೆಗೆ ಮಂಜೂರಾತಿಯನ್ನು ಮಿತಿಗೊಳಿಸುವ ಬಗ್ಗೆ ಒಂದು ಪರಿಷ್ಕೃತ ಆದೇಶವನ್ನು ಜಾರಿಗೊಳಿಸಬೇಕೆಂದು ಕೋರಿದರು (ಡಿಸೆಂಬರ್ 2008). ನಂತರ ಡಿಸೆಂಬರ್ 2008ರಲ್ಲಿ ಶ್ರೀಮತಿ ಅಕ್ಕಯ್ಯಮ್ಮನವರಿಗೆ 1 ಎಕರೆ 25 ಗುಂಟೆ ಭೂಮಿಗೆ ರೂ.0.89 ಕೋಟಿ ಭೂಪರಿಹಾರವನ್ನು ಎಸ್ಎಲ್ಎಓ-2ರವರು ವಿತರಿಸಿದರು. ಆದರೆ ಜನವರಿ 2009ರಲ್ಲಿ ತಹಸೀಲ್ದಾರ್‌ರವರ ಪರಿಷ್ಕೃತ ಆದೇಶವನ್ನು ಪಡೆಯದೆ ಎಸ್ಎಲ್ಎಓ-2ರವರು ರೂ.20.62 ಲಕ್ಷಗಳ ಮತ್ತೊಂದು ಮೊಬಲಗನ್ನು ಪಾವತಿ ಮಾಡಿದರು. ಗಮನಕ್ಕೆ ಬಂದ ಮತ್ತೊಂದು ಅಂಶವೆಂದರೆ ಎಸ್ಎಲ್ಎಓರವರು ಸೆಪ್ಟೆಂಬರ್ 2008ರಲ್ಲಿ ಮಾಡಿದ ಮೊದಲನೆಯ ಪಾವತಿಗೆ ಮುನ್ನವೇ ಇದೇ ಸರ್ವೆ ನಂಬರಿನ ಭೂಮಿಯ ಹಕ್ಕುದಾರಿಕೆ ಮತ್ತು ವಾರಸುದಾರಿಕೆಯ ಬಗ್ಗೆ ಸಹಾಯಕ ಆಯುಕ್ತರು, ದೊಡ್ಡಬಳ್ಳಾಪುರ, ಅವರ ಮುಂದೆ ಒಂದು ಮೇಲ್ಮನವಿ ಬಾಕಿಯಿರುವ ಕಾರಣದಿಂದ ಪರಿಹಾರಧನದ ಪಾವತಿ ಮಾಡಕೂಡದು ಎಂದು ಆಗಸ್ಟ್ 2008ರಲ್ಲಿ ಎಸ್ಎಲ್ಎಓ-2ರವರ ಮುಂದೆ ಒಂದು ಆಕ್ಷೇಪಣೆಯನ್ನು ಸಲ್ಲಿಸಲಾಯಿತು. ಈ ವಿಷಯದ ಬಗ್ಗೆ ಸಂಬಂಧಿತ ಕಛೇರಿ ಗುಮಾಸ್ತರು ಟಿಪ್ಪಣಿಯನ್ನು ಕಡತದಲ್ಲಿ ಬರೆದಿದ್ದರೂ ಅದನ್ನು ಕಡೆಗಣಿಸಿ ಎಸ್ಎಲ್ಎಓ-2ರವರು ಪರಿಹಾರಧನ ಪಾವತಿಗೆ ಆದೇಶಿಸಿದರು.

(4) ಎಸ್ಎಲ್ಎಓ-2ರವರು ಜೂನ್ 2008ರಲ್ಲಿ ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 74ರ 4 ಎಕರೆ ಭೂಮಿಯ ಸ್ವಾಧೀನಕ್ಕಾಗಿ ರೂ.1.32 ಕೋಟಿಗಳನ್ನು ಒಂದು ಸಂಸ್ಥೆಗೆ ಪಾವತಿ ಮಾಡಿದರು. ಈ ಸಂಸ್ಥೆಯು ಒಂದು ವಸತಿ ನಿವೇಶನ ಬಡಾವಣೆಯನ್ನು ಮಾಡುವ ಉದ್ದೇಶಕ್ಕಾಗಿ ಬಂಡಿಕೊಡಿಗೆಹಳ್ಳಿ ಮತ್ತು ಬೊಯಿಲಹಳ್ಳಿಯ ಗ್ರಾಮಗಳಲ್ಲಿರುವ ಅನೇಕ ಸರ್ವೆ ನಂಬರ್‌ಗಳಲ್ಲಿನ 9

ಎಕರೆ 24 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಬಡಾವಣೆಯ ನಿರ್ಮಾಣಕ್ಕಾಗಿ ಬಿಐಎಪಿಎ ಮಂಜೂರಾತಿಯನ್ನು ಪಡೆದಿತ್ತು. ಈ ಮಂಜೂರಾತಿಯಲ್ಲಿ ಹೇಳಿರುವ ಷರತ್ತು ಮತ್ತು ನಿಯಮಗಳ ಪ್ರಕಾರ ರಸ್ತೆಗಳಿಗೆ, ಸಾರ್ವಜನಿಕ ಸೌಲಭ್ಯಗಳಿಗೆ ಮತ್ತು ಉದ್ಯಾನಗಳಿಗೆ ನಿಗದಿಯಾದ ಭೂ ವಿಸ್ತೀರ್ಣವನ್ನು ಬಿಟ್ಟುಕೊಡಲು ಅಭಿವೃದ್ಧಿದಾರರು ಬಿಡುಗಡೆ ಪತ್ರವನ್ನು ನೀಡಬೇಕಾಗಿತ್ತು. ಇದರಂತೆ, ಜೂನ್ 2006ರಲ್ಲಿ ಸಂಸ್ಥೆಯು ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 74ರ 14 ಗುಂಟೆ ಜಮೀನನ್ನು ಬಿಐಎಪಿಎಗೆ ಬಿಡುಗಡೆ ಮಾಡಿ ನೋಂದಣಿ ಮಾಡಿಕೊಟ್ಟಿತ್ತು. ಇದರಿಂದಾಗಿ ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 74ರಲ್ಲಿ ಈ ಸಂಸ್ಥೆಯ ಸ್ವಾಧೀನದಲ್ಲಿ 3 ಎಕರೆ 26 ಗುಂಟೆ ವಿಸ್ತೀರ್ಣದ ಭೂಮಿ ಮಾತ್ರ ಉಳಿದುಕೊಂಡಿತ್ತು. ಆದರೆ, ಎಸ್‌ಎಲ್‌ಎಓ–2ರವರು ಜೂನ್ 2008ರಲ್ಲಿ 4 ಎಕರೆಗಳ ಲೆಕ್ಕದಲ್ಲಿ ಪರಿಹಾರಧನ ಪಾವತಿ ಮಾಡಿರುವುದರಿಂದ ರೂ.11.55 ಲಕ್ಷಗಳ ಅಧಿಕ ಪಾವತಿಯಲ್ಲಿ ಪರಿಣಮಿಸಿತು. ಲೆಕ್ಕಪರಿಶೋಧನೆಯಲ್ಲಿ ತಿಳಿಸಿರುವಂತೆ ಬಿಡುಗಡೆ ಪತ್ರಕ್ಕೆ ಅನ್ವಯಿಸುವಂತೆ ವಿವರಗಳು ದಾಖಲೆಗಳಲ್ಲಿ ಇಲ್ಲದಿರುವುದರ ಕಾರಣ ಅಂತಿಮ ಉತ್ತರವನ್ನು ಲೋಕಾಯುಕ್ತರು ಹಿಂತಿರುಗಿಸಿದ ನಂತರ ನೀಡುವುದಾಗಿ ತಿಳಿಸಿದರು (ಡಿಸೆಂಬರ್ 2011).

### 5.6.9 ಪರಿಹಾರಧನ ಪಾವತಿಗೆ ಮುನ್ನ ಬಾಕಿ ಇದ್ದ ಮೊಕದ್ದಮೆಗಳನ್ನು ಎಸ್‌ಎಲ್‌ಎಓರವರು ಕಡೆಗಣಿಸಿದರು

(1) ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 74/302ರ 4 ಎಕರೆ ಜಮೀನಿನ ಸ್ವಾಧೀನದ ಸಂಬಂಧ ಎಸ್‌ಎಲ್‌ಎಓ–2ರವರು ಭೂ ಅನುದಾನ ಮಂಜೂರು ಧೃಡೀಕರಣ ಪತ್ರವನ್ನು ಪಡೆಯದೆ ಶ್ರೀ.ಭೈರಣ್ಣ ಎಂಬುವವರಿಗೆ ರೂ.1.60 ಕೋಟಿಗಳನ್ನು ಏಪ್ರಿಲ್ 2008ರಲ್ಲಿ ವಿತರಿಸಿದರು. ಈ ಸಂಬಂಧ ಅರ್ಜಿದಾರರು ಸಲ್ಲಿಸಿದ ಪಹಣಿಯಲ್ಲಿ ಮೇ 2003ರಲ್ಲಿ ನ್ಯಾಯಾಲಯ ಆದೇಶಿಸಿದ ತಡೆಯಾಜ್ಞೆ ಬಗ್ಗೆ ದಾಖಲಾತಿ ಮಾಡಲಾಗಿತ್ತು. ಕೆಐಎಡಿ ಅಧಿನಿಯಮ ಪರಿಚ್ಛೇದ 30ರ ಪ್ರಕಾರ ನ್ಯಾಯಾಲಯದಲ್ಲಿ ಯಾವುದಾದರೂ ಪ್ರಕರಣ ಬಾಕಿಯಿದ್ದಲ್ಲಿ ನೀಡಬೇಕಾದ ಪರಿಹಾರಧನವನ್ನು ಸಂಬಂಧಪಟ್ಟ ನ್ಯಾಯಾಲಯದಲ್ಲಿ ಠೇವಣಿಯ ರೂಪದಲ್ಲಿ ಇಡಬೇಕಾಗಿತ್ತು. ಆದರೆ, ಎಸ್‌ಎಲ್‌ಎಓ–2ರವರು ಹಕ್ಕನ್ನು ಪ್ರತಿಪಾದಿಸುವ ಎಲ್ಲ ದಾಖಲೆಗಳನ್ನು ಪಡೆಯದೆ ನೇರವಾಗಿ ಅರ್ಜಿದಾರರಿಗೆ ಪರಿಹಾರಧನವನ್ನು ಪಾವತಿ ಮಾಡಿದರು. ನಂತರ, ಉಚ್ಚ ನ್ಯಾಯಾಲಯದ ಆದೇಶದಂತೆ ವಿಶೇಷ ಜಿಲ್ಲಾಧಿಕಾರಿಗಳು ನಡೆಸಿದ ತನಿಖೆಯ ಫಲಿತಾಂಶವಾಗಿ ಏಪ್ರಿಲ್ 2009ರಲ್ಲಿ ಈ ಭೂಮಿ ಸರ್ಕಾರಿ ಭೂಮಿಯಾಗಿದ್ದು ಇದರ ಹಿಡುವಳಿದಾರರನ್ನು (ಸರ್ವೆ ನಂಬರ್ 74/ಪಿ–2 ಹೊರ ಹಾಕಬೇಕೆಂದು ಆದೇಶಿಸಲಾಯಿತು. ಪರಿಹಾರಧನ ಪಾವತಿಯಾಗಿದ್ದರಿಂದ ಎಸ್‌ಎಲ್‌ಎಓ–2ರವರು ಶ್ರೀ.ಭೈರಣ್ಣರವರಿಗೆ ತಾವು ಪಡೆದ ಪರಿಹಾರಧನವನ್ನು ಹಿಂತಿರುಗಿಸಬೇಕೆಂದು ಸೂಚನಾ ಪತ್ರವನ್ನು ಜಾರಿ ಮಾಡಿದ್ದರೂ ಹೆಚ್ಚುವರಿ ಪಾವತಿಯಾದ ರೂ.1.60 ಕೋಟಿಗಳನ್ನು ನವೆಂಬರ್ 2011ರವರೆಗೆ ವಸೂಲಾಗಿರಲಿಲ್ಲ. ವಿಶೇಷ ಜಿಲ್ಲಾಧಿಕಾರಿಗಳು ಈ ಭೂಮಿಯನ್ನು ಮುಟ್ಟುಗೋಲು ಹಾಕಿಕೊಂಡಿರುವ ಕಾರಣ ಹಾಗೂ ಈ ಸಂಬಂಧ ಇರುವ ಮೂಲ ದಾಖಲೆಗಳು ಲೋಕಾಯುಕ್ತರಿಂದ ಸ್ವೀಕರಿಸಿದ ನಂತರ ಹೆಚ್ಚುವರಿ ಪರಿಹಾರಧನದ ಪಾವತಿಯನ್ನು ಭೂ ಕಂದಾಯದ ಬಾಕಿಯ ರೂಪದಲ್ಲಿ ವಸೂಲಿ ಮಾಡಲಾಗುವುದು ಎಂದು ಎಸ್‌ಎಲ್‌ಎಓ–2 ತಿಳಿಸಿದರು (ಜುಲೈ 2011).

(2) ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್74/ಪಿ–302 4 ಎಕರೆಗಳ ಪರಿಹಾರಧನ ಪಾವತಿಗಾಗಿ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸುತ್ತ ಎಸ್‌ಎಲ್‌ಎಓ–2ರವರು ಏಪ್ರಿಲ್ 2008ರಲ್ಲಿ ಗಮನಿಸಿದಂತೆ ಈ ಭೂಮಿಯ ಸಂಬಂಧ ದೇವನಹಳ್ಳಿಯ ಸಿವಿಲ್ ನ್ಯಾಯಾಲಯದಲ್ಲಿ ಒಂದು ಪ್ರಕರಣ ದಾಖಲಿಸಲಾಗಿದ್ದು ಅದರಲ್ಲಿ ಈ ಅರ್ಜಿದಾರರು ಹಾಗೂ ಎಸ್‌ಎಲ್‌ಎಓ–2ರವರನ್ನು ಪ್ರತಿವಾದಿಗಳನ್ನಾಗಿ ಮಾಡಿದ್ದರು. ಮೇ 2008ರಲ್ಲಿ ಎಸ್‌ಎಲ್‌ಎಓ–2ರವರು ಮೊಕದ್ದಮೆ ಇರುವುದರಿಂದ ಪರಿಹಾರಧನ ಪಾವತಿ ಮಾಡಲಾಗುವುದಿಲ್ಲ ಎಂದು ಅರ್ಜಿದಾರರಿಗೆ ತಿಳಿಸಿದರು. ಆದರೆ, ಜುಲೈ 2008ರಲ್ಲಿ ತಾವೇ ಖುದ್ದಾಗಿ ಈ ಪ್ರಕರಣವನ್ನು ಮತ್ತೆ ತೆಗೆದು ಅರ್ಜಿದಾರರು ನ್ಯಾಯಾಲಯದಿಂದ ತಮ್ಮ ಪಾಲನ್ನು ಪಡೆಯಬಹುದೆಂಬ ಆಧಾರದ ಮೇಲೆ ರೂ.1.24 ಕೋಟಿಗಳನ್ನು ಅರ್ಜಿದಾರರಿಗೆ ವಿತರಿಸಿದರು. ಮುಂದುವರೆದು ಏಪ್ರಿಲ್ 1961ರಲ್ಲಿ ಒಬ್ಬ ವ್ಯಕ್ತಿಗೆ ಅನುದಾನವಾದ ಭೂಮಿಯನ್ನು 1969ರಲ್ಲಿ ಮತ್ತು 1974ರಲ್ಲಿ ಎರಡು ಬಾರಿ ಮಾರಾಟ ಮಾಡಿರುವುದು ಭೂಮಿಯ 15 ವರ್ಷದೊಳಗಿನ ಮಂಜೂರಾತಿಯ ನಿಯಮಗಳನ್ನು ಉಲ್ಲಂಘನೆ ಮಾಡಿರುವುದನ್ನು ಗಮನಿಸಲಾಗಿದೆ.

### 5.6.10 ಹಲವಾರು ನಿಯಮಗಳನ್ನು ಉಲ್ಲಂಘಿಸಿರುವುದನ್ನು ಎಸ್‌ಎಲ್‌ಎಓರವರು ಕಡೆಗಣಿಸಿದರು

(1) ಕರ್ನಾಟಕ ಭೂ ಸುಧಾರಣೆ ಅಧಿನಿಯಮ, 1961ರ ಪರಿಚ್ಛೇದ-80ರ ಪ್ರಕಾರ ವ್ಯವಸಾಯ ಭೂಮಿಯ ಹಿಡುವಳಿ ಹಕ್ಕು ಹೊಂದಿರುವಂಥ ವ್ಯಕ್ತಿಗೆ ಮಾರಾಟ ಮಾಡಿ ವರ್ಗಾವಣೆ ಮಾಡಿದ್ದಲ್ಲಿ ಅಂಥ ಪ್ರಕರಣದಲ್ಲಿ ಭೂಮಿಯನ್ನು ಪಡೆದ ವ್ಯಕ್ತಿ ಭೂಮಿಯು ತನ್ನ ಸ್ವಾಧೀನಕ್ಕೆ ಬಂದ ಒಂದು ವರ್ಷದ ಒಳಗೆ ವ್ಯವಸಾಯವನ್ನು ಆರಂಭಿಸಬೇಕು. ಒಂದು ವೇಳೆ ಐದು ವರ್ಷಗಳ ಒಳಗೆ ವ್ಯವಸಾಯವನ್ನು ಮಾಡಲಾಗದೆ ತೊರೆದರೆ ಆ ಭೂಮಿಯು ಮರಳಿ ಸರ್ಕಾರದ ಅಧೀನಕ್ಕೆ ಬರಬೇಕು ಮತ್ತು ಹಿಡುವಳಿದಾರನಿಗೆ ಕೊಂಡುಕೊಂಡ ಬೆಲೆ ಅಥವಾ ಭೂಮಿಯಿಂದ ಬರಬಹುದಾದ ವಾರ್ಷಿಕ ನಿವ್ವಳ ಆದಾಯದ 8 ಪಟ್ಟು ಹಣ ಅಥವಾ ನಿವ್ವಳ ಆದಾಯ ಎಂಟು ಪಟ್ಟಿಗಿಂತ ಕಡಿಮೆ ಇದ್ದಲ್ಲಿ ಕೊಂಡ ಬೆಲೆಯನ್ನು ಪರಿಹಾರವಾಗಿ ಕೊಡಬೇಕು.

ಬಂಡಿಕೊಡಿಗೆಹಳ್ಳಿ ಗ್ರಾಮದ ಭೂ ಸ್ವಾಧೀನ ಪ್ರಕರಣದಲ್ಲಿ ಎಸ್‌ಎಲ್‌ಎಓ-2ರವರು ಸರ್ವೆ ನಂಬರ್ 74/ಪಿ-316 ಮತ್ತು 40/359ರ 4 ಎಕರೆ ಭೂಮಿಗೆ ರೂ1.32 ಕೋಟಿ, ಸರ್ವೆ ನಂಬರ್ 74/355ರ 5 ಎಕರೆ ಭೂಮಿಗೆ ರೂ.2.09 ಕೋಟಿ, ಸರ್ವೆ ನಂಬರ್ 74/318ರ 2 ಎಕರೆ ಭೂಮಿಗೆ ರೂ.0.66 ಕೋಟಿ, ಮತ್ತು ಸರ್ವೆ ನಂಬರ್ 74/308ರ 4 ಎಕರೆ ಭೂಮಿಗೆ ರೂ.1.32 ಕೋಟಿಗಳ ಪರಿಹಾರಧನ ಪಾವತಿ ಮಾಡಿದರು. ಈ ಪ್ರಕರಣಗಳಲ್ಲಿನ ಅರ್ಜಿದಾರರು ಭೂಮಿಯನ್ನು ಜುಲೈನಿಂದ ಸೆಪ್ಟೆಂಬರ್ 2004 ಅವಧಿಯಲ್ಲಿ ಕ್ರಯಕ್ಕೆ ತೆಗೆದುಕೊಂಡಿದ್ದು ಅದರ, 7ರಿಂದ 9 ತಿಂಗಳ ಅವಧಿಯಲ್ಲಿ ವಸತಿಯ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಸಿಕೊಂಡಿದ್ದಾರೆ. ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ ಪ್ರಕಾರ ಕೃಷಿ ಭೂಮಿಯನ್ನು ಕೊಂಡವರು ಐದು ವರ್ಷಗಳ ಒಳಗೆ ಕೃಷಿಯನ್ನು ತೊರೆದದ್ದರಿಂದ ಭೂಮಿಯು ಸರ್ಕಾರದ ಅಧೀನಕ್ಕೆ ಒಳಗಾಗಬೇಕು. ಆದುದರಿಂದ, ಅರ್ಜಿದಾರರಿಗೆ 15 ಎಕರೆಗಳ ಪರವಾಗಿ ರೂ.5.39 ಕೋಟಿಗಳ ಪರಿಹಾರಧನ ನೀಡಿರುವುದು ಅಕ್ರಮವಾಗಿದೆ ಏಕೆಂದರೆ ಅವರಿಗೆ ಸಲ್ಲಬೇಕಾದ ಪರಿಹಾರ ಭೂಮಿಯನ್ನು ಖರೀದಿಸಿದ ದರವಾದ ಅಂದರೆ ರೂ.0.81 ಕೋಟಿ ಮತ್ತು ಪರಿಹಾರಧನವಾದ ರೂ.5.39 ಕೋಟಿ ಅಲ್ಲವೆಂಬ ಅಂಶವನ್ನು ಗಮನಕ್ಕೆ ತರಲಾಗಿದೆ.

ಈ ವಿಚಾರದಲ್ಲಿ ಎಸ್‌ಎಲ್‌ಎಓ-2ರವರು ಜುಲೈ 2011ರಲ್ಲಿ ಉತ್ತರ ನೀಡುತ್ತ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964, ಪರಿಚ್ಛೇದ 95ರಡಿ ಭೂ ಬಳಕೆಯ ಬದಲಾವಣೆಯನ್ನು ಮಂಜೂರು ಮಾಡುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇದ್ದು, ಅದರಿಂದಾಗಿ ಅವರ ಆದೇಶಕ್ಕೆ ಆಕ್ಷೇಪಣೆಯನ್ನು ತಾವು ಮಾಡಲಾಗುವುದಿಲ್ಲ ಎಂದು ಹೇಳಿದ್ದಾರೆ. ಮುಂದುವರೆದು ಎಸ್‌ಎಲ್‌ಎಓರವರ ಪರಿಮಿತಿಯು ಕೇವಲ ಸಮಿತಿಯ ಶಿಫಾರಸ್ಸಿನಂತೆ ಹಾಗೂ ಮಂಡಳಿಯು ಭೂಮಿಯ ವಿಚಾರದಲ್ಲಿ ಅನುಮೋದನೆ ನೀಡಿದ ಪರಿಹಾರಧನ ಪಾವತಿ ಮಾಡುವುದಕ್ಕೆ ಮಾತ್ರ ಮಿತಿಗೊಳ್ಳುತ್ತದೆ ಎಂದು ಹೇಳಿದ್ದಾರೆ. ಆದರೆ, ಕರ್ನಾಟಕ ಭೂ ಸುಧಾರಣೆ ಅಧಿನಿಯಮದ ಪರಿಚ್ಛೇದ 82ರಡಿ ಸೂಚಿಸಿದಂತೆ ಯಾವುದಾದರೂ ಉಪಬಂಧದ ಉಲ್ಲಂಘನೆ ಆದಲ್ಲಿ ಪ್ರತಿ ಅಧಿಕಾರಿಯು (ಕಂದಾಯ, ನೋಂದಣಿ ಮತ್ತು ಭೂ ದಾಖಲೆ ಇಲಾಖೆಯವರು) ಇನ್ನೊಬ್ಬ ನಿಗಧಿತ ಪ್ರಾಧಿಕಾರಕ್ಕೆ ತಾವು ಗಮನಿಸಿದ ಉಲ್ಲಂಘನೆಯ ವಿಚಾರವನ್ನು ವರದಿ ಮಾಡಬೇಕು ಎಂಬ ನಿಯಮ ಇರುವುದರಿಂದ ಮೇಲೆ ನೀಡಿದ ಉತ್ತರವು ಸಮಂಜಸವಾಗಿರುವುದಿಲ್ಲ. ಉಪಬಂಧಗಳ ಪ್ರಕಾರ ಎಸ್‌ಎಲ್‌ಎಓರವರು ಭೂ ಕಂದಾಯ ಕಾಯಿದೆಯ ಉಲ್ಲಂಘನೆ ಪ್ರಕರಣಗಳನ್ನು ವರದಿ ಮಾಡಿ ಪರಿಹಾರಧನ ಪಾವತಿಯ ಅರ್ಜಿಗಳನ್ನು ತಿರಸ್ಕರಿಸಬೇಕಾಗಿದ್ದು ಅವಶ್ಯಕವಾಗಿತ್ತು.

(2) ಮೇ 2007ರಲ್ಲಿ ಪ್ರಕಟಗೊಂಡ ಅಂತಿಮ ಅಧಿಸೂಚನೆ ಹಾಗೂ ಪಹಣಿ ಪತ್ರದ ಪ್ರಕಾರ ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 40ಪಿ-345ರ ಒಂದು ಎಕರೆ ಜಮೀನಿನ ಖಾತೆದಾರರ ಹೆಸರು ಶ್ರೀ.ಆಂಜಿನಪ್ಪ ಎಂದಾಗಿತ್ತು. ಆದರೆ, ಡಿಸೆಂಬರ್ 2004ರಲ್ಲಿ ನಡೆದ ಈ ಭೂಮಿಯ ಪರಭಾರೆ ಕ್ರಯಪತ್ರದ ಆಧಾರದ ಮೇಲೆ ಎಸ್‌ಎಲ್‌ಎಓರವರು ಮೇ 2008ರಲ್ಲಿ ಶ್ರೀಮತಿ ಕೆ.ಉಮಾಮಹೇಶ್ವರಿ ಎಂಬುವವರಿಗೆ ರೂ.0.31 ಕೋಟಿಗಳ ಪರಿಹಾರಧನವನ್ನು ಪಾವತಿ ಮಾಡಿದರು. ಕ್ರಯಪತ್ರ, ಋಣಭಾರ ಧೃಡೀಕರಣ ಪತ್ರ (ಏಪ್ರಿಲ್-ಮೇ 2008) ಮತ್ತು 2007-08ರವರೆಗಿನ ಪಹಣಿ ಪತ್ರ ಇವೇ ಕೆಲವು ದಾಖಲೆಗಳನ್ನು ಬಿಟ್ಟರೆ ಯಾವುದೇ ದಾಖಲೆಗಳನ್ನು ಸಲ್ಲಿಸಿರಲಿಲ್ಲ. ಕೊನೆಗೆ ಪರಿಹಾರಕ್ಕಾಗಿ ಕೋರಿಕೆ ಸಲ್ಲಿಸಿರುವವರ ಅರ್ಜಿಯೂ ಕೂಡ ಲಭ್ಯವಿರಲಿಲ್ಲ. ಮುಂದುವರೆದು ಶ್ರೀ.ಆಂಜಿನಪ್ಪರವರು ಜನವರಿ 2007ರ ಅವಧಿಯಲ್ಲಿ ಎಸ್‌ಎಲ್‌ಎಓರವರ ಮುಂದೆ ಹಾಜರಾಗಿ ಒಂದು ಲಿಖಿತ ಆಕ್ಷೇಪಣೆಯನ್ನು ಸಲ್ಲಿಸಿ ತಾವು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು ಈ ಭೂಮಿಯಲ್ಲಿ ಬೆಳೆಯನ್ನು

ಬೆಳೆಯುತ್ತಿರುವುದರಿಂದ ಭೂಮಿಯನ್ನು ಬಿಟ್ಟುಕೊಡಲು ತನ್ನ ಸಮ್ಮತಿ ಇರುವುದಿಲ್ಲ ಎಂದು ಅರಿಕೆ ಮಾಡಿಕೊಂಡಿದ್ದರು. ಈ ಆಕ್ಷೇಪಣೆಯಂತೆ 1978ರ ನಿರ್ದಿಷ್ಟ ಭೂಮಿಯ ವರ್ಗಾವಣೆ ನಿಷೇಧ ಅಧಿನಿಯಮದ ಉಲ್ಲಂಘನೆಯು ಆಗಿದೆಯೇ ಇಲ್ಲವೆ ಎಂಬುದನ್ನು ತನಿಖೆ ಮಾಡಿ ಪರಿಶೀಲಿಸದೆಯೇ ರೂ.0.31 ಕೋಟಿ ಪರಿಹಾರಧನವನ್ನು ತಕ್ಕ ದಾಖಲೆಗಳನ್ನು ಪಡೆಯದೆ ವಿತರಿಸಿದರು. ಲೋಕಾಯುಕ್ತರಿಂದ ಮೂಲ ದಾಖಲೆಗಳ ಸ್ವೀಕೃತಿಯಾದ ನಂತರ ಉತ್ತರಿಸುವುದಾಗಿ ಎಸ್ಎಲ್ಎಓ-2 ತಿಳಿಸಿದರು (ಆಗಸ್ಟ್ 2011).

(3) ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್40/ಪಿ-35ರ 1 ಎಕರೆ 16 ಗುಂಟೆ ಭೂಮಿಗಾಗಿ ಎಸ್ಎಲ್ಎಓರವರು ಜೂನ್ 2008ರಲ್ಲಿ ಒಬ್ಬ ವ್ಯಕ್ತಿಗೆ ರೂ.43.40 ಲಕ್ಷಗಳನ್ನು ಪಾವತಿಸಿದರು. ಈ ಮೊದಲು ಸರ್ಕಾರಿ ಜಮೀನು ಆಗಿದ್ದ ಈ ಭೂಮಿಯನ್ನು ಸೆಪ್ಟೆಂಬರ್ 1994ರಲ್ಲಿ ಶ್ರೀ.ಅಬ್ದುಲ್ ಮಜೀದ್ ಎಂಬುವವರಿಗೆ ಅನುದಾನ ಮಂಜೂರು ಮಾಡಲಾಗಿತ್ತು. ಮಂಜೂರಾತಿಯಲ್ಲಿ ವಿಧಿಸಿದ ಷರತ್ತುಗಳ ಪ್ರಕಾರ ಮಂಜೂರಾದ ಸರ್ಕಾರಿ ಭೂಮಿಯನ್ನು ಪಡೆದವರು ಮಂಜೂರಾತಿಯ ದಿನಾಂಕದಿಂದ 15 ವರ್ಷಗಳವರೆಗೆ ಮಾರಾಟ ಅಥವಾ ವರ್ಗಾವಣೆ ಮಾಡುವುದನ್ನು ನಿಷೇಧಿಸಲಾಗಿದೆ. ಹೀಗಿದ್ದಾಗ್ಯೂ, 15 ವರ್ಷಗಳ ಅವಧಿಯಲ್ಲಿಯೇ ಅಂದರೆ ನವೆಂಬರ್ 2004ರಲ್ಲಿ ಇವರು ರೂ.3.5 ಲಕ್ಷಗಳಿಗೆ ಶ್ರೀ.ಕೆ.ಎಸ್.ಜಗದೀಶ್ ಎಂಬುವವರಿಗೆ ಮಾರಾಟ ಮಾಡಿದರು. ಅನುದಾನ ಪಡೆದವರಿಂದ ಕರ್ನಾಟಕ ಭೂ ಮಂಜೂರಾತಿ ನಿಯಮಗಳ ಉಲ್ಲಂಘನೆಯಾಗಿದ್ದರಿಂದ ಅನುದಾನಿತರು ಮತ್ತು ಕೊಳ್ಳುವವರು ಈ ಇಬ್ಬರೂ ಪರಿಹಾರಧನ ಪಾವತಿಗೆ ಅರ್ಹತೆಯನ್ನು ಪಡೆದಿರುವುದಿಲ್ಲ. ಆದರೂ ಎಸ್ಎಲ್ಎಓ-2ರವರು ಕಾಯಿದೆಯ ಉಲ್ಲಂಘನೆಯ ವಿಚಾರಗಳನ್ನು ಕಡೆಗಣಿಸಿ ರೂ.43.40 ಲಕ್ಷಗಳ ಪರಿಹಾರಧನವನ್ನು ಪಾವತಿಸಿದರು. ಲೋಕಾಯುಕ್ತರಿಂದ ಮೂಲ ದಾಖಲೆಗಳನ್ನು ಸ್ವೀಕರಿಸಿದ ನಂತರ ವಿಷಯವನ್ನು ಪರಿಶೀಲಿಸುವುದಾಗಿ ಎಸ್ಎಲ್ಎಓ-2 ತಿಳಿಸಿದರು (ಆಗಸ್ಟ್ 2011).

(4) ನಿರ್ದಿಷ್ಟ ಭೂಮಿಯ ವರ್ಗಾವಣೆ ತಡೆ ಅಧಿನಿಯಮದ ಪರಿಚ್ಛೇದ 4(2)ರಡಿಯಲ್ಲಿ ಸೂಚಿಸಿರುವಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ವ್ಯಕ್ತಿಗೆ ಈ ಅಧಿನಿಯಮವು ಜಾರಿಗೆ ಬಂದಾಗಿನಿಂದ ಯಾವುದಾದರೂ ಸರ್ಕಾರಿ ಭೂಮಿಯು ಮಂಜೂರಾಗಿದ್ದರೆ ಅಂತಹ ಭೂಮಿಯನ್ನು ಸರ್ಕಾರದ ಪೂರ್ವಾನುಮತಿ ಇಲ್ಲದೆ ಆ ವ್ಯಕ್ತಿಯು ವರ್ಗಾವಣೆ ಮಾಡುವಂತಿಲ್ಲ. ಈ ಕಾಯಿದೆಯನ್ನು ಉಲ್ಲಂಘಿಸಿ ಜರುಗಿದ ಹಸ್ತಾಂತರವು ಅನೂರ್ಜಿತವಾಗಲಿದ್ದು ಮತ್ತು ವರ್ಗಾವಣೆಯಲ್ಲಿ ಯಾವುದೇ ರೀತಿಯ ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿಗಳನ್ನು ಹಸ್ತಾಂತರಿಸುವಂತಿಲ್ಲ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಯಾವುದೇ ವ್ಯಕ್ತಿಗಳಿಗೆ ಅನುದಾನವು ಮಂಜೂರಾತಿಯಾದ ದಿನದಿಂದ ಭೂಮಿಯನ್ನು 15 ವರ್ಷಗಳ ಕಾಲ ಮಾರಾಟ ಮಾಡುವಂತಿಲ್ಲ ಎಂಬ ಷರತ್ತಿನೊಂದಿಗೆ ಮಂಜೂರಾತಿ ಮಾಡಲಾಗುತ್ತದೆ. ಒಂದುಪಕ್ಷ ಮಾರಾಟ ಮಾಡಿದರೂ ಸರ್ಕಾರದ ಪೂರ್ವಾನುಮತಿಯಿಂದ ಮಾಡಬೇಕು. ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿದ ಪ್ರಕರಣಗಳಲ್ಲಿ ನಿಯಮಗಳ ಉಲ್ಲಂಘನೆಯಾಗಿದ್ದರೂ ಎಸ್ಎಲ್ಎಓ-2ರವರು ಉಲ್ಲಂಘನೆಗಳನ್ನು ಕಡೆಗಣಿಸಿ ಪರಿಹಾರಧನವನ್ನು ವಿತರಿಸಿದ್ದಾರೆ.

**ಕೋಷ್ಟಕ-5.6 : ಉಲ್ಲಂಘನೆಗಳನ್ನು ಕಡೆಗಣಿಸಿ ಪರಿಹಾರಧನ ಪಾವತಿ ಮಾಡಿರುವುದು**

| ಗ್ರಾಮದ ಹೆಸರು | ಸರ್ವೆ ಸಂಖ್ಯೆ | ಸ್ವಾಧೀನಪಡಿಸಿಕೊಂಡ ಜಮೀನು ವಿಸ್ತೀರ್ಣ (ಎಕರೆ-ಗುಂಟೆ) | ಮಂಜೂರಾತಿಯ ಅವಧಿ | ಭೂಮಿಯ ಮಾರಾಟ ಮಾಡಿದ ತಿಂಗಳು | ಪರಿಹಾರಧನ ಪಾವತಿ (ಕೋಟಿ ರೂಗಳಲ್ಲಿ) |
|---|---|---|---|---|---|
| ಜೊನ್ನಹಳ್ಳಿ | 63/ಪಿ-45 | 3-00 | ಜನವರಿ 1972 | ಮೇ 1973 | 1.65 |
| ಜೊನ್ನಹಳ್ಳಿ | 63/ಪಿ-10 | 1-00 | ಆಗಸ್ಟ್ 1963 | ಆಗಸ್ಟ್ 1975 | 0.55 |
| ಜೊನ್ನಹಳ್ಳಿ | 63/ಪಿ-22 | 2-25 | ಆಗಸ್ಟ್ 1963 | ಫೆಬ್ರವರಿ 1977 | 1.44 |
| ಬಾಗಲೂರು | 176/484 | 1-00 | ಮೇ 1979 | ಮಾರ್ಚ್ 2007 | 0.70 |
| ಒಟ್ಟು | | 7-25 | | | 4.34 |

(ಆಧಾರ: ಮಂಡಳಿ ಒದಗಿಸಿದ ಮಾಹಿತಿ)

ಎಸ್ಎಲ್ಎಓ-2ರವರು ಉತ್ತರ ನೀಡುತ್ತ (ಆಗಸ್ಟ್ 2011) ಈ ವಿಷಯಗಳು ಕಂದಾಯ ಇಲಾಖೆಯ ಅಧಿಕಾರಿಗಳ ವ್ಯಾಪ್ತಿಗೆ ಬರುತ್ತದೆ ಎಂದು ತಿಳಿಸಿದ್ದಾರೆ. ಆದರೂ, ಪರಿಹಾರಧನ ಪಾವತಿ ಮಾಡುವ

ಮುನ್ನ ಇಂಥಹ ಪ್ರಕರಣಗಳನ್ನು ಕಂದಾಯ ಅಧಿಕಾರಿಗಳಿಗೆ ಪರಿಶೀಲನೆಗಾಗಿ ಕಳುಹಿಸಬೇಕಾಗಿದ್ದರಿಂದ ನೀಡಿದ ಉತ್ತರವು ಸಮಂಜಸವಾಗಿರುವುದಿಲ್ಲ.

### 5.6.11 ಅಧಿಸೂಚನೆಯ ಪ್ರಕಟಣೆಯ ನಂತರ ಖರೀದಿಸಿದ ಜಮೀನುಗಳಿಗೆ ಪರಿಹಾರಧನ ಪಾವತಿಸಿರುವುದು

ಕರ್ನಾಟಕ ಭೂ ಅಧಿನಿಯಮ (ವರ್ಗಾವಣೆ ನಿರ್ಬಂಧಗಳು), 1991ರ ಪರಿಚ್ಛೇದ 4ರ ಪ್ರಕಾರ ನಗರ ಪ್ರದೇಶಗಳಲ್ಲಿ ಯಾವುದೇ ಯೋಜನೆಯನ್ನು ಜಾರಿಗೆ ತರಲು ಯಾವುದಾದರೂ ಭೂಮಿಯನ್ನು ಸ್ವಾಧೀನಕ್ಕಾಗಿ ಘೋಷಿಸಿ ಅಧಿಸೂಚನೆ ಪ್ರಕಟಿಸಿದ್ದಲ್ಲಿ ಅತಹ ಭೂಮಿಯನ್ನು ಯಾವುದೇ ವ್ಯಕ್ತಿಯು ಪೂರ್ಣವಾಗಿಯಾಗಲಿ ಅಥವಾ ಭಾಗಶ: ಪ್ರಮಾಣದಲ್ಲಾಗಲಿ ಮಾರಾಟ/ವರ್ಗಾವಣೆ ಮಾಡಬಾರದು.

ಆದರೆ, ಕೆಐಎಡಿ ಅಧಿನಿಯಮದಡಿಯಲ್ಲಿ ಅಧಿಸೂಚನೆಯ ಪ್ರಕಟಣೆಯ ನಂತರ ಹಕ್ಕು ವರ್ಗಾವಣೆ ಮಾಡಿದ 9 ಎಕರೆ 10½ ಗುಂಟೆಗಳ ಜಮೀನಿಗೆ ರೂ.5.72 ಕೋಟಿಗಳ ಪರಿಹಾರಧನವನ್ನು ಎಸ್‌ಎಲ್‌ಎಓ ಪಾವತಿಸಿದ್ದಾರೆ. ವಿವರಗಳು ಕೆಳಗಿನ **ಕೋಷ್ಟಕ–5.7ರಲ್ಲಿವೆ.**

**ಕೋಷ್ಟಕ–5.7: ಅಧಿಸೂಚನೆಯ ಪ್ರಕಟಣೆಯ ನಂತರ ಖರೀದಿಸಿದ ಜಮೀನುಗಳಿಗೆ ಪರಿಹಾರಧನ ಪಾವತಿಸಿರುವುದು**

| ಗ್ರಾಮ | ಸರ್ವೆ ನಂಬರ್ | ಭೂಮಿಯ ವಿಸ್ತೀರ್ಣ | ಅಧಿಸೂಚನೆಯ ಪ್ರಕಟಣೆಯ ತಿಂಗಳು | ವರ್ಗಾವಣೆಗೊಂಡ ತಿಂಗಳು | ಪಾವತಿಸಿದ ಪರಿಹಾರಧನ (ಕೋಟಿ ರೂಗಳಲ್ಲಿ) | ಪಾವತಿಯ ತಿಂಗಳು |
|---|---|---|---|---|---|---|
| ಹೂವಿನಾಯಕನ ಹಳ್ಳಿ | 78/1 | 1 ಎಕರೆ 10½ ಗುಂಟೆ | ಡಿಸೆಂಬರ್ 2006 | ಫೆಬ್ರವರಿ 2007 | 0.76 | ಸೆಪ್ಟೆಂಬರ್ 2009 ಮತ್ತು ಮಾರ್ಚ್ 2010 |
| ಬಂಡಿಕೊಡಿಗೆಹಳ್ಳಿ ಪಾಳ್ಯ | 7/ಪಿ–19 | 8 ಎಕರೆ | ಆಗಸ್ಟ್ 2006 | ಜನವರಿ 2007 | 4.96 | ಡಿಸೆಂಬರ್ 2008 ಮತ್ತು ಅಕ್ಟೋಬರ್ 2009 |
| ಒಟ್ಟು | | 9 ಎಕರೆ 10½ ಗುಂಟೆ | | | 5.72 | |

(ಆಧಾರ: ರಾಜ್ಯಪತ್ರದ ಅಧಿಸೂಚನೆ ಮತ್ತು ಮಂಡಳಿಯು ಒದಗಿಸಿದ ಮಾಹಿತಿ)

### 5.6.12 ಸ್ವಾಧೀನ ಅಧಿಸೂಚನೆಯಲ್ಲಿ ಪ್ರಕಟವಾಗದಿರುವ ಭೂಮಿಗೆ ಹಾಗೂ ಜಂಟಿ ಮಾಪನಾ ವರದಿಯಲ್ಲಿ ಪ್ರಸ್ತಾಪಿಸಿಲ್ಲದ ಭೂಮಿಗೆ ಪರಿಹಾರಧನ

ಈ ಕೆಳಕಂಡ **ಕೋಷ್ಟಕ–5.8ರಲ್ಲಿನ** ಪ್ರಕರಣಗಳಲ್ಲಿ ಸ್ವಾಧೀನಕ್ಕಾಗಿ ಅಧಿಸೂಚಿಸಿರದ ಭೂಮಿಗಳಿಗೆ ಅಥವಾ ಜಂಟಿ ಮಾಪನಾ ವರದಿಯಲ್ಲಿ ಸೇರಿರದ ಭೂಮಿಗಳಿಗೆ ಎಸ್‌ಎಲ್‌ಎಓರವರು ರೂ.15.76 ಕೋಟಿಗಳ ಪರಿಹಾರಧನವನ್ನು ವಿತರಿಸಿದ್ದರು.

**ಕೋಷ್ಟಕ–5.8 : ಅಧಿಸೂಚನೆಯಲ್ಲಿ ಪ್ರಕಟಗೊಳ್ಳದ ಹಾಗೂ ಜಂಟಿ ಮಾಪನಗೊಳ್ಳದ ಜಮೀನುಗಳಿಗೆ ಪರಿಹಾರಧನದ ಪಾವತಿ**

| ಗ್ರಾಮದ ಹೆಸರು | ಸರ್ವೆ ನಂಬರ್ | ಭೂ ವಿಸ್ತೀರ್ಣ (ಎಕರೆ–ಗುಂಟೆ) | ಪರಿಹಾರಧನ ಪಾವತಿಸಿರುವುದು (ಕೋಟಿ ರೂಗಳಲ್ಲಿ) | ಟಿಪ್ಪಣಿ |
|---|---|---|---|---|
| ಬಾಗಲೂರು | 177/ಪಿ 25 | 4–00 | 2.80 | ಅಧಿಸೂಚನೆಯಲ್ಲಿ ಅನುದಾನಿತರ ಹೆಸರಿರಲಿಲ್ಲ. ಸಂಬಂಧಿಸಿದ ಕಛೇರಿ ಸಿಬ್ಬಂದಿಯ ಗಮನಿಸಿದ್ದನ್ನು ಕಡೆಗಣಿಸಲಾಯಿತು |
| ಮಹದೇವ ಕೊಡಿಗೇಹಳ್ಳಿ | 198/ಪಿ1 198/ಪಿ1, 198/ಪಿ1–ಪಿ1 | 5–04 | 3.06 | ಅಧಿಸೂಚನೆಯಲ್ಲಿ ಅನುದಾನಿತರ ಹೆಸರುಗಳಿದ್ದರೂ ಜಂಟಿ ಮಾಪನಾ ವರದಿಯಲ್ಲಿ ಇರಲಿಲ್ಲ. ಕ್ರೋಢೀಕೃತ ಪಹಣಿ ದಾಖಲೆಯಲ್ಲಿ ಹೆಸರುಗಳು ಕಾಣಸಿಗುತ್ತಿಲ್ಲ. |
| ಜೊನ್ನಹಳ್ಳಿ | 63 | 0–09 | 0.12 | ಅಂತಿಮ ಅಧಿಸೂಚನೆಯಲ್ಲಿ ಹೆಸರು ನಮೂದಿತವಾಗಿಲ್ಲ |
| ಕಾವಡದಾಸನಹಳ್ಳಿ | 21/ಪಿ | 4–00 | 2.20 | ಅಂತಿಮ ಅಧಿಸೂಚನೆಯಲ್ಲಿ ಹೆಸರು ನಮೂದಿತವಾಗಿಲ್ಲ |
| ಕಾವಡದಾಸನಹಳ್ಳಿ | 21/ಪಿ | 4–00 | 2.20 | ಅಧಿಸೂಚನೆಯಲ್ಲಿ ಭೂಮಿಯ ಪ್ರಸ್ತಾಪ ಆಗಿರುವುದಿಲ್ಲ ಚೆಕ್ಕನ್ನು ಶ್ರೀಮತಿ ಮುನಿಯಮ್ಮನವರ ಹೆಸರಿಗೆ ಬರಿದಿತ್ತಾದರೂ ಎಸ್‌ಎಲ್‌ಎಓ ಶ್ರೀ.ಮುನಿಯಪ್ಪ ಎಂಬುವವರ ಹೆಸರಿನಲ್ಲಿ ಪಾವತಿಯ ಆದೇಶವನ್ನು ನೀಡಿದರು. |
| ಕಾವಡದಾಸನಹಳ್ಳಿ | 21ಪಿ | 4–00 | 2.20 | ಅಧಿಸೂಚನೆಯಲ್ಲಿ ಭೂಮಿಯನ್ನು ಸೇರಿಸಿಲ್ಲ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದರೂ ಎಸ್‌ಎಲ್‌ಎ ಪಾವತಿಗೆ ಆದೇಶಿಸಿದ್ದಾರೆ. |

| ಗ್ರಾಮದ ಹೆಸರು | ಸರ್ವೆ ನಂಬರ್ | ಭೂ ವಿಸ್ತೀರ್ಣ (ಎಕರೆ–ಗುಂಟೆ) | ಪರಿಹಾರಧನ ಪಾವತಿಸಿರುವುದು (ಕೋಟಿ ರೂಗಳಲ್ಲಿ) | ಟಿಪ್ಪಣಿ |
|---|---|---|---|---|
| ಬಂಡಿಕೊಡಿಗೇಹಳ್ಳಿ ಪಾಳ್ಯ | 7/ಪಿ/12 | 4–00 | 2.48 | ಜಂಟಿ ಮಾಪನಾ ವರದಿಯಲ್ಲಿ ಹೆಸರಿಲ್ಲವೆಂದು ಕಛೇರಿ ಸಿಬ್ಬಂದಿ ದಾಖಲಿಸಿದರೂ ಎಸ್‌ಎಲ್‌ಎಓ ಅದನ್ನು ಕಡೆಗಾಣಿಸಿದರು. |
| ಬಂಡಿಕೊಡಿಗೆಹಳ್ಳಿ | 40/ಪಿ1 | 2–10 | 0.70 | ಅಧಿಸೂಚನೆಯಲ್ಲಿ ಹೆಸರು ಇಲ್ಲವೆಂದು ಕಛೇರಿ ಸಿಬ್ಬಂದಿ ದಾಖಲಿಸಿದ್ದನ್ನು ಎಸ್‌ಎಲ್‌ಎಓ ಕಡೆಗಾಣಿಸಿದರು |
| ಒಟ್ಟು | | 27–23 | 15.76 | |

(ಆಧಾರ: ರಾಜ್ಯಪತ್ರ ಅಧಿಸೂಚನೆ ಮತ್ತು ಪರಿಹಾರ ಕಡತಗಳ ಮಾಹಿತಿಯಿಂದ ಲೆಕ್ಕಪರಿಶೋಧನೆಯು ಸಂಕಲಿಸಿರುವುದು)

ಅರೆಬಿನ್ನಮಂಗಲ ಗ್ರಾಮದ ಸರ್ವೆ ನಂಬರ್1/1ರಲ್ಲಿರುವ 2 ಎಕರೆ 20 ಗುಂಟೆಗಳ ಜಮೀನಿನ ಸಂಬಂಧವಾಗಿ ಪರಿಹಾರಧನ ಪಾವತಿಗಾಗಿ ಶ್ರೀ.ನಾರಾಯಣಸ್ವಾಮಿಯ ಪುತ್ರ ಶ್ರೀ.ಬಿ.ಎನ್.ಶ್ರೀನಿವಾಸ್ ಹಾಗೂ ಶ್ರೀ.ನಾರಾಯಣಪ್ಪನವರ ಪುತ್ರ ಶ್ರೀ.ಬಿ.ಎನ್.ಶ್ರೀನಿವಾಸ್ ಎಂಬ ಇಬ್ಬರು ವ್ಯಕ್ತಿಗಳಿಂದ ಎರಡು ಅರ್ಜಿಗಳನ್ನು ಎಸ್‌ಎಲ್‌ಎಓ–2 ಸ್ವೀಕರಿಸಿದರು. ತಹಸೀಲ್ದಾರ್, ಬೆಂಗಳೂರು ಉತ್ತರ, ಯಲಹಂಕ, ಇವರು ಅರ್ಜಿದಾರರುಗಳು ಬೇರೆಯವರಾಗಿದ್ದಾರೆ ಮತ್ತು ಒಂದೇ ಸರ್ವೆನಂಬರಿನ ಬೇರೆ ಬೇರೆ ಬ್ಲಾಕ್‌ಗಳಲ್ಲಿ ಭೂಮಿಯನ್ನು ಅನುಭವಿಸುತ್ತಿದ್ದಾರೆ ಎಂಬ ಸ್ಪಷ್ಟೀಕರಣವನ್ನು ನೀಡಿದ (ಮೇ 2009) ನಂತರವೂ ಎಸ್‌ಎಲ್‌ಎಓ–2 ಶ್ರೀ.ನಾರಾಯಣಸ್ವಾಮಿಯ ಪುತ್ರನಾದ ಶ್ರೀ.ಬಿ.ಎನ್.ಶ್ರೀನಿವಾಸ್‌ರವರಿಗೆ ರೂ.1.55 ಕೋಟಿಗಳನ್ನು ಪಾವತಿ ಮಾಡಿದರು. ತಹಸೀಲ್ದಾರ್‌ರವರು ಎರಡೂ ಭೂಮಿಗಳು ಅಧಿಸೂಚಿತ ಪ್ರದೇಶದಲ್ಲಿವೆಯೇ ಎಂಬುದನ್ನು ಸ್ಪಷ್ಟಪಡಿಸಲಿಲ್ಲ. ತಹಸೀಲ್ದಾರ್‌ರವರು ತಯಾರಿಸಿದ (ಜುಲೈ 2009) ಜಂಟಿ ಮಾಪನಾ ವರದಿಯು ಶ್ರೀ.ನಾರಾಯಣಪ್ಪನವರ ಪುತ್ರ ಶ್ರೀ.ಬಿ.ಎನ್.ಶ್ರೀನಿವಾಸ್‌ರವರಿಗೆ ಸೇರಿದ ಭೂಭಾಗವು ಅಧಿಸೂಚಿತ ಪ್ರದೇಶದಲ್ಲಿದ್ದರೆ ಈಗಾಗಲೇ ಪರಿಹಾರಧನದ ಪಾವತಿಯಾಗಿರುವ ವ್ಯಕ್ತಿಗೆ ಸೇರಿದ ಭೂಭಾಗವು ಅಧಿಸೂಚಿತ ಪ್ರದೇಶದ ಹೊರಭಾಗದಲ್ಲಿದೆ ಎಂದು ತೋರಿಸಿತ್ತು. ತತ್ಪರಿಣಾಮವಾಗಿ ಎಸ್‌ಎಲ್‌ಎಓ–2ರವರು ಶ್ರೀ.ನಾರಾಯಣಪ್ಪನವರ ಪುತ್ರ ಶ್ರೀ.ಬಿ.ಎನ್.ಶ್ರೀನಿವಾಸ್ ಎಂಬುವವರಿಗೂ ಆಗಸ್ಟ್ 2009ರಲ್ಲಿ ರೂ.1.24 ಕೋಟಿಗಳನ್ನು ಪಾವತಿ ಮಾಡಿದರು. ಲೋಕಾಯುಕ್ತರಿಂದ ಮೂಲ ದಾಖಲೆಗಳನ್ನು ಪಡೆದ ನಂತರ ಉತ್ತರ ನೀಡಲಾಗುವುದೆಂದು ಎಸ್‌ಎಲ್‌ಎಓ–2 ತಿಳಿಸಿದರು. ಹೀಗೆ, ಪರಿಹಾರಧನ ಪಾವತಿಗೆ ಮುನ್ನ ಅಧಿಸೂಚಿಸಿದ ಪ್ರದೇಶವನ್ನು ನಿರ್ಧಾರಣೆ ಮಾಡುವಲ್ಲಿನ ಎಸ್‌ಎಲ್‌ಎಓ–2ರವರ ವಿಫಲತೆಯು ಸ್ವಾಧೀನಕ್ಕೆ ಅಧಿಸೂಚಿಸಿರದ 2 ಎಕರೆ 20 ಗುಂಟೆಗಳ ಭೂಮಿಗೆ ರೂ.1.55 ಕೋಟಿಗಳ ಪರಿಹಾರಧನವನ್ನು ಪಾವತಿಸುವಲ್ಲಿ ಪರಿಣಮಿಸಿತು.

### 5.6.13 ಪುಷ್ಟೀಕರಿಸುವ ದಾಖಲೆಗಳಿಲ್ಲದೆ ಹೆಚ್ಚಿಸಿದ ಪರಿಹಾರಧನವನ್ನು ಪಾವತಿಸಿರುವುದು

ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ಗಾಗಿ ಸ್ವಾಧೀನಪಡಿಸಿಕೊಂಡ ಭೂಮಿಗೆ ಎಕರೆ ಒಂದಕ್ಕೆ ರೂ.31 ಲಕ್ಷಗಳ ಪರಿಹಾರಧನವನ್ನು ಪಿಎಸಿ ನಿಗದಿಪಡಿಸಿತ್ತು. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಗೆ ಹೊಂದಿಕೊಂಡ ಜಮೀನುಗಳಿಗೆ ಎಕರೆ ಒಂದಕ್ಕೆ ರೂ.40 ಲಕ್ಷಗಳೆಂದು ನಿಗದಿಪಡಿಸಲಾಗಿತ್ತು. ಈ ಕೆಳಗಿನ **ಕೋಷ್ಟಕ–5.9ರಲ್ಲಿ** ತೋರಿಸಿರುವ ಪ್ರಕರಣಗಳಲ್ಲಿ ಯಾವುದೇ ಪುಷ್ಟೀಕರಿಸುವ ದಾಖಲೆಗಳಾದ ಭೂಮಿಯ ನಕ್ಷೆ, ಮೋಜಣಿದಾರರ ವರದಿ ಮುಂತಾದವುಗಳನ್ನು ಪಡೆಯದೆ ಎಸ್‌ಎಲ್‌ಎಓ–2ರವರು ಎಕರೆ ಒಂದಕ್ಕೆ ರೂ40 ಲಕ್ಷಗಳಂತೆ ಪರಿಹಾರಧನವನ್ನು ವಿತರಿಸಿದರು.

**ಕೋಷ್ಟಕ–5.9: ಪರಿಶೀಲನೆಯಿಲ್ಲದೇ ಪರಿಹಾರಧನವನ್ನು ಪಾವತಿಸಿರುವುದು**

| ಸರ್ವೆ ನಂಬರ್ | ಭೂ ವಿಸ್ತೀರ್ಣ (ಎಕರೆ–ಗುಂಟೆ) | ಪರಿಹಾರಧನ ಪಾವತಿ (ಲಕ್ಷ ರೂಗಳಲ್ಲಿ) | ಪಾವತಿಯ ತಿಂಗಳು |
|---|---|---|---|
| 74/302 | 4–00 | 160.00 | ಏಪ್ರಿಲ್ 2008 |
| 74/ಪಿ355 | 5–00 | 208.75[15] | ಏಪ್ರಿಲ್ 2008 |
| 74/320 | 4–00 | 160.00 | ಜುಲೈ 2008 |
| 74/ಪಿ2 | 4–00 | 160.00 | ಜುಲೈ 2008 |
| 74/302 | 4–00 | 168.00[16] | ಡಿಸೆಂಬರ್ 20008 |

[15] ಪರಿವರ್ತಿತ ಭೂಮಿಗೆ ಕೊಟ್ಟ ರೂ.8.75 ಲಕ್ಷ ಸೇರಿಕೊಂಡು

| ಸರ್ವೆ ನಂಬರ್ | ಭೂ ವಿಸ್ತೀರ್ಣ (ಎಕರೆ-ಗುಂಟೆ) | ಪರಿಹಾರಧನ ಪಾವತಿ (ಲಕ್ಷ ರೂಗಳಲ್ಲಿ) | ಪಾವತಿಯ ತಿಂಗಳು |
|---|---|---|---|
| 75/2 | 2-01 | 81.00 | ಜನವರಿ 2009 |
| 74/301, 74/321 ಮತ್ತು 74/346 | 12-00 | 480.00 | ಫೆಬ್ರವರಿ 2009 |
| ಒಟ್ಟು | 35-01 | 1,417.75 | |

(ಆಧಾರ: ರಾಜ್ಯಪತ್ರದ ಅಧಿಸೂಚನೆ ಮತ್ತು ಪರಿಹಾರ ದಾಖಲೆಗಳ ಆಧಾರದ ಮಾಹಿತಿ)

ಈ ಪ್ರಕರಣಗಳಲ್ಲಿ ಪಾವತಿಸಿದ ಒಟ್ಟು ರೂ.14.18 ಕೋಟಿಗಳ ಪೈಕಿ ರೂ.3.15 ಕೋಟಿಗಳನ್ನು ಪುಷ್ಟೀಕರಿಸುವ ದಾಖಲೆಗಳಿಲ್ಲದೇ ಪಾವತಿಸಲಾಗಿದೆ. ಲೋಕಾಯುಕ್ತರಿಂದ ಮೂಲ ದಾಖಲೆಗಳನ್ನು ಪಡೆದ ನಂತರ ಉತ್ತರವನ್ನು ಸಲ್ಲಿಸಲಾಗುವುದೆಂದು ಎಸ್ಎಲ್ಎಓ-2 ತಿಳಿಸಿದರು (ಆಗಸ್ಟ್ 2011).

### 5.6.14 ಕೇವಲ ಒಂದು ವರ್ಷದ ಪಹಣಿಯ ಆಧಾರದ ಮೇಲೆ ಎಸ್ಎಲ್ಎಓ ಪರಿಹಾರಧನ ವಿತರಿಸಿದರು

ಬಂಡಿಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 40/331ರ 1 ಎಕರೆ 20 ಗುಂಟೆ ಜಮೀನಿಗೆ ಪರಿಹಾರಧನವನ್ನು ಕೋರಿ ಶ್ರೀ.ಮುನಿಯಪ್ಪ ಎಂಬುವವರಿಂದ ಸಹಿ ಮಾಡಿರದ ಪತ್ರವೊಂದನ್ನು 8 ಜುಲೈ 2008ರಂದು ಎಸ್ಎಲ್ಎಓ-2 ಸ್ವೀಕರಿಸಿದರು. ಈ ಪತ್ರಕ್ಕೆ 2007-08ರ ಅವಧಿಯ ಒಂದು ಪಹಣಿಯನ್ನು ಮಾತ್ರ ಲಗತ್ತಿಸಲಾಗಿತ್ತು. ಬೇರಾವ ದಾಖಲೆಗಳನ್ನೂ ಸಲ್ಲಿಸಿರಲಿಲ್ಲ. ಆದರೂ, ಅದೇ ದಿನದಂದು ಎಸ್ಎಲ್ಎಓ-2ರವರು ಶ್ರೀ.ಮುನಿಯಪ್ಪರವರ ಪರವಾಗಿ ರೂ.46.50 ಲಕ್ಷಗಳ ಪರಿಹಾರಧನವನ್ನು ವಿತರಿಸಿದರು. ನಂತರ ಅದೇ ಭೂಮಿಗೆ ತಾನೇ ಮುನಿಯಪ್ಪ ಎಂದು ಪ್ರತಿಪಾದಿಸುವ ವ್ಯಕ್ತಿಯಿಂದ ಮತ್ತೊಂದು ಪರಿಹಾರಧನ ಎಸ್ಎಲ್ಎಓ-2 ಸ್ವೀಕರಿಸಿದರೂ (ಜೂನ್ 2009) ಸಹ ಮತ್ತು ಅರ್ಜಿದಾರರು ತಮ್ಮ ಕೋರಿಕೆಗೆ ಆಧಾರವಾಗಿ ಹಲವಾರು ದಾಖಲೆಗಳನ್ನು ಸಲ್ಲಿಸಿದರೂ ಸಹ ಎಸ್ಎಲ್ಎಓ-2ರವರು ಈ ಕೋರಿಕೆಯ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ. ಕೇವಲ ಒಂದು ವರ್ಷದ ಪಹಣಿಯ ಆಧಾರದ ಮೇಲೆ ಜುಲೈ 2008ರಲ್ಲಿ ಪಾವತಿಸಲಾದ ರೂ.46.50 ಲಕ್ಷ ಕಾಲ್ಪನಿಕವೆಂದು ಸ್ಪಷ್ಟವಾಗುತ್ತದೆ. ಲೋಕಾಯುಕ್ತರಿಂದ ಮೂಲ ದಾಖಲೆಗಳನ್ನು ಪಡೆದ ನಂತರ ಉತ್ತರವನ್ನು ಸಲ್ಲಿಸಲಾಗುವುದೆಂದು ಎಸ್ಎಲ್ಎಓ-2 ತಿಳಿಸಿದರು (ಆಗಸ್ಟ್ 2011).

### 5.6.15 ಎಸ್ಎಲ್ಎಓ ಪರಿಹಾರಧನ ಸ್ವೀಕರಿಸಿದ ವ್ಯಕ್ತಿಗಳ ಅರ್ಹತೆಯನ್ನು ಖಚಿತಪಡಿಸಿಕೊಳ್ಳಲಿಲ್ಲ

(1) ಮಹದೇವಕೊಡಿಗೆಹಳ್ಳಿ ಗ್ರಾಮದ ಶ್ರೀ.ಚನ್ನಪ್ಪನವರ ಪತ್ನಿ ಶ್ರೀಮತಿ ಪದ್ಮಮ್ಮರವರಿಗೆ ಸೇರಿದ ಸರ್ವೆ ನಂಬರ್ 198ರಲ್ಲಿನ 1 ಎಕರೆ ಭೂಮಿಯನ್ನು ಎಸ್ಎಲ್ಎಓ-2 ಏಪ್ರಿಲ್ 2008ರಲ್ಲಿ ಸ್ವಾಧೀನಪಡಿಸಿಕೊಂಡರು. ಈ ಭೂಮಿಗೆ ಡಿಸೆಂಬರ್ 2009ರಲ್ಲಿ ರೂ.0.60 ಕೋಟಿಗಳ ಪರಿಹಾರಧನವನ್ನು ವಿತರಿಸಲಾಯಿತು. ಪಹಣಿ, ತಹಸೀಲ್ದಾರ್‌ರವರ ವರದಿ, ಭೂ ಮಂಜೂರು ಪ್ರಮಾಣಪತ್ರ, ಮ್ಯುಟೇಶನ್ ಪ್ರತಿ, ಬ್ಯಾಂಕ್ ಪಾಸ್‌ಬುಕ್, ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್ ಒದಗಿಸಿದ ಪ್ರಮಾಣಪತ್ರ ಮುಂತಾದ ದಾಖಲೆಗಳಲ್ಲಿ ಖಾತೆದಾರರ ಹೆಸರನ್ನು ಶ್ರೀಮತಿ ಪದ್ಮಮ್ಮ-ಶ್ರೀ.ಚನ್ನಪ್ಪನವರ ಪತ್ನಿ ಎಂದು ನಮೂದಿಸಲಾಗಿರುವುದನ್ನು ಗಮನಿಸಲಾಯಿತು. ಆದರೆ ಎಸ್ಎಲ್ಎಓ-2 ಶ್ರೀ.ನಾಗರಾಜಪ್ಪರವರ ಪತ್ನಿ ಶ್ರೀಮತಿ ಪದ್ಮಮ್ಮರವರಿಗೆ, ಅವರ ಹೆಸರು ದಾಖಲೆಗಳಲ್ಲಿ ಕೈತಪ್ಪಿನಿಂದಾಗಿ ಶ್ರೀ.ಚನ್ನಪ್ಪನವರ ಪತ್ನಿ ಶ್ರೀಮತಿ ಪದ್ಮಮ್ಮ ಎಂದು ನಮೂದಾಗಿದೆ ಎಂದು ತಿಳಿಸುವ ಒಂದು ಅಫಿಡವಿಟ್‌ನ ಆಧಾರದ ಮೇಲೆ, ಪರಿಹಾರಧನ ಪಾವತಿ ಮಾಡಿದರು. ಎಸ್ಎಲ್ಎಓ-2ರವರು ಪಾವತಿ ಮಾಡುವ ಮುನ್ನ ಪರಿಷ್ಕೃತ ಕಂದಾಯ ದಾಖಲೆಗಳ ಸಲ್ಲಿಕೆಗಾಗಿ ಒತ್ತಾಯಿಸಲಿಲ್ಲ.

ಭೂಮಿಯನ್ನು ಚನ್ನಪ್ಪನವರ ಪತ್ನಿ ಶ್ರೀಮತಿ ಪದ್ಮಮ್ಮರವರಿಗೆ ಮಂಜೂರು ಮಾಡಲಾಗಿದ್ದರೂ, 2004-05ರ ಮ್ಯುಟೇಶನ್‌ನಲ್ಲಿ ತಪ್ಪನ್ನು ಸರಿಪಡಿಸಲಾಯಿತು ಎಂದು ಎಸ್ಎಲ್ಎಓ-2 ತಿಳಿಸಿದರು (ಸೆಪ್ಟಂಬರ್ 2011). ಆದರೆ ಇದೇ 2004-05ರ ಮ್ಯುಟೇಶನ್ ಸಾರಾಂಶವು ಭೂಮಾಲೀಕರ ಹೆಸರನ್ನು ಚನ್ನಪ್ಪರವರ ಪತ್ನಿ ಶ್ರೀಮತಿ ಪದ್ಮಮ್ಮ ಎಂದೇ ತೋರಿಸಿದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಈ

[16] ಪರಿವರ್ತಿತ ಭೂಮಿಗೆ ಕೊಟ್ಟ ರೂ.8 ಲಕ್ಷ ಸೇರಿಕೊಂಡು

ಕಾರಣಗಳಿಂದಾಗಿ ರೂ.0.60 ಕೋಟಿಗಳ ಪಾವತಿಯನ್ನು ಅರ್ಹ ವ್ಯಕ್ತಿಗೆ ಮಾಡಲಾಯಿತೇ ಎನುವುದನ್ನು ಲೆಕ್ಕಪರಿಶೀಲನೆಯಲ್ಲಿ ಖಚಿತಪಡಿಸಿಕೊಳ್ಳಲಾಗಲಿಲ್ಲ.

(2) ಬಾಗಲೂರು ಗ್ರಾಮದ ಸರ್ವೆ ನಂಬರ್ 177/ಪಿ–17ರಲ್ಲಿನ 2 ಎಕರೆ ಭೂಮಿಯನ್ನು ಮೂಲ ಅನುದಾನಿಯು ಒಬ್ಬ ವ್ಯಕ್ತಿಗೆ ಮಾರಾಟ ಮಾಡಿದರು (ಏಪ್ರಿಲ್ 1968). ಭೂಮಿಯನ್ನು ವರ್ಗಾಯಿಸಿಕೊಂಡ ವ್ಯಕ್ತಿಯ ಮೊಮ್ಮಗನಿಗೆ ಈ ಎರಡು ಎಕರೆಗಳಿಗೆ ರೂ.1.40 ಕೋಟಿಗಳನ್ನು ಡಿಸೆಂಬರ್ 2009ರಲ್ಲಿ ಎಸ್‌ಎಲ್‌ಎಓ–2 ವಿತರಿಸಿದರು. ಆದರೆ, ಗ್ರಾಮಲೆಕ್ಕಿಗರು ಒದಗಿಸಿದ ವಂಶವೃಕ್ಷದ ಪ್ರಕಾರ ಈ ಭೂಮಿಯನ್ನು ವರ್ಗಾಯಿಸಿಕೊಂಡ ವ್ಯಕ್ತಿಗೆ ಮೂವರು ಪುತ್ರರಿದ್ದು ವರ್ತಮಾನದಲ್ಲಿ ಪತ್ನಿ ಮತ್ತು ಇಬ್ಬರು ಪುತ್ರರು ಉಳಿದಿರುವುದು ಕಂಡುಬಂದಿತು. ವರ್ಗಾಯಿಸಿಕೊಂಡ ವ್ಯಕ್ತಿಯ ಮರಣ ಧೃಡೀಕರಣ ಪತ್ರ ಮತ್ತು ಉತ್ತರಾಧಿಕಾರಿ ಪ್ರಮಾಣಪತ್ರವನ್ನು ಪಡೆಯದೆ ಎಸ್‌ಎಲ್‌ಎಓ–2ರವರು ಪರಿಹಾರಧನವನ್ನು ಪಾವತಿ ಮಾಡಿರುತ್ತಾರೆ. ಲೋಕಾಯುಕ್ತರಿಂದ ಮೂಲ ದಾಖಲೆಗಳನ್ನು ಪಡೆದ ನಂತರ ಉತ್ತರವನ್ನು ಸಲ್ಲಿಸಲಾಗುವುದೆಂದು ಎಸ್‌ಎಲ್‌ಎಓ–2 ತಿಳಿಸಿದರು (ಆಗಸ್ಟ್ 2011).

### 5.6.16 ಸರ್ಕಾರಿ ಭೂಮಿಯನ್ನು ಅನಧಿಕೃತವಾಗಿ ಅತಿಕ್ರಮಿಸಿಕೊಂಡವರಿಗೆ ಮಂಡಳಿಯು ಪರಿಹಾರಧನವನ್ನು ಪಾವತಿಸಿತು

ಕೆಐಎಡಿಬಿ ಅಧಿನಿಯಮ, 1966ರ ಪರಿಚ್ಛೇದ 28(4)ರಡಿಯಲ್ಲಿ ಅಕ್ಟೋಬರ್ 2007ರಲ್ಲಿ ಗಾಮನಗಟ್ಟಿ ಮತ್ತು ತರಿಹಾಳ ಗ್ರಾಮಗಳ (ಧಾರವಾಡ ಜಿಲ್ಲೆ) ಸರ್ವೆನಂಬರ್ 208ರಲ್ಲಿನ 278 ಎಕರೆ 20 ಗುಂಟೆ ಸರ್ಕಾರಿ ಜಮೀನು ಸೇರಿದಂತೆ ಒಟ್ಟು 510 ಎಕರೆ 3 ಗುಂಟೆಗಳ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಯಿತು. ಈ ಸರ್ಕಾರಿ ಜಮೀನನ್ನು ಅನಧಿಕೃತ ವ್ಯಕ್ತಿಗಳು ಅತಿಕ್ರಮಿಸಿಕೊಂಡಿದ್ದರು. ಪ್ರಾಥಮಿಕ ಅಧಿಸೂಚನೆ ಪ್ರಕಟಗೊಳ್ಳುತ್ತಲೇ ವ್ಯವಸಾಯ ಮಾಡಿಕೊಂಡಿದ್ದ ಈ ಅನಧಿಕೃತ ಹಿಡುವಳಿದಾರರು ಸ್ವಾಧೀನ ಪ್ರಕ್ರಿಯೆಯನ್ನು ಪ್ರಶ್ನಿಸಿ ಸರ್ಕಾರಿ ಭೂಮಿಯ ಒಡೆತನವನ್ನು ತಮ್ಮ ಪರವಾಗಿ ನೀಡಬೇಕು ಎಂದು ಬೇಡುತ್ತ ಹುಬ್ಬಳ್ಳಿಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಮುಂದೆ ಒಂದು ದಾವೆಯನ್ನು ಹೂಡಿದರು. ಆದರೆ ಏಪ್ರಿಲ್ 2006ರಲ್ಲಿ ಈ ದಾವೆಯು ಅನೂರ್ಜಿತಗೊಂಡಿತು. ಈ ಅನಧಿಕೃತ ಹಿಡುವಳಿದಾರರು ಮಾಡಿಕೊಂಡ ಅಪೀಲನ್ನು ಇತ್ಯರ್ಥಗೊಳಿಸುತ್ತ ಉಚ್ಚ ನ್ಯಾಯಾಲಯವು ಅರ್ಜಿದಾರರು ಶಾಂತಿ ಮತ್ತು ನೆಮ್ಮದಿಯಿಂದ ಈ ಭೂಮಿಯನ್ನು ಅನುಭವಿಸುವುದಕ್ಕೆ ಮಂಡಳಿಯು ಅಡ್ಡಿ ಮಾಡಕೂಡದೆಂದು ಆದೇಶಿಸಿತು. ಆದರೆ ಈ ಅಪೀಲುದಾರರ ಹಕ್ಕುದಾರಿಕೆಯ ಕೋರಿಕೆಯನ್ನು ಉಚ್ಚನ್ಯಾಯಾಲಯವು ತಳ್ಳಿ ಹಾಕಿತು. ಆದರೆ ಸರ್ಕಾರೀ ಭೂಮಿಯ ಒಡೆತನ ಕೇಳಿದ ಅವರ ಕ್ಲೈಮನ್ನು ಉಚ್ಚ ನ್ಯಾಯಾಲಯವು ತಿರಸ್ಕರಿಸಿತು. ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ರಾಜ್ಯಸರ್ಕಾರವು 2007ರಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಒಂದು ವಿಶೇಷ ಮೇಲ್ಮನವಿಯನ್ನು ದಾಖಲಿಸಿತು.

ಈ ವಿಶೇಷ ಮೇಲ್ಮನವಿ ವಿಲೇವಾರಿ ಬಾಕಿ ಇರುವ ಅವಧಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರಕರಣವನ್ನು ಮಂಡಳಿಯು ನಿರ್ಧರಿಸಿದ ಮಾರುಕಟ್ಟೆ ಬೆಲೆಯ ಶೇಕಡ 75ರಷ್ಟು ಪರಿಹಾರಧನವನ್ನು ನೀಡುವ ಮೂಲಕ ನ್ಯಾಯಾಲಯದ ಹೊರಗೆ ಇತ್ಯರ್ಥಗೊಳಿಸಲು ನಿರ್ಧರಿಸಲಾಯಿತು (ಅಕ್ಟೋಬರ್ 2008). ಅನಧಿಕೃತವಾಗಿ ಅತಿಕ್ರಮಿಸಿ ಕೊಂಡವರು ಎಲ್ಲಾ ವ್ಯಾಜ್ಯಗಳನ್ನು ಹಿಂತೆಗೆದುಕೊಂಡು ಮಂಡಳಿಗೆ ಭೂಮಿಯನ್ನು ಹಸ್ತಾಂತರಿಸಬೇಕು ಎನ್ನುವ ಷರತ್ತಿನೊಂದಿಗೆ ಈ ಇತ್ಯರ್ಥಕ್ಕೆ ಬರಲಾಗಿತ್ತು. ಸರ್ಕಾರವು ಈ ಇತ್ಯರ್ಥವನ್ನು ಒಪ್ಪಿಕೊಂಡಿತು ಮತ್ತು ಮೇಲ್ಮನವಿ ಹಿಂತೆಗೆದುಕೊಳ್ಳಲು ಆದೇಶಿಸಿತು (ಮಾರ್ಚ್ 2009). ಹೀಗೆ, ಸರ್ಕಾರಿ ಜಮೀನನ್ನು ಅನಧಿಕೃತವಾಗಿ ಅತಿಕ್ರಮಿಸಿಕೊಂಡವರಿಗೆ ಮಂಡಳಿಯು ರೂ.27.91 ಕೋಟಿಗಳ ಆರ್ಥಿಕ ಹೊರೆಯನ್ನೊಳಗೊಂಡ ಪರಿಹಾರಧನ ನೀಡಬೇಕಾಯಿತು ಮತ್ತು ಅದರಲ್ಲಿ ರೂ.26.70 ಕೋಟಿಗಳನ್ನು ಈಗಾಗಲೇ ಪಾವತಿ ಮಾಡಲಾಗಿದೆ (ಮೇ–ಅಕ್ಟೋಬರ್ 2009).

### 5.6.17 ಎಸ್‌ಎಲ್‌ಎಓರವರು ಅರಣ್ಯ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅದಕ್ಕೂ ಪರಿಹಾರಧನ ಪಾವತಿಸಿದರು

ಮಂಡಳಿಯು ಏರೋಸ್ಪೇಸ್ ಕಾಂಪೊನೆಂಟ್ಸ್ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಂಡ ಭೂಮಿಯು ಜೊನ್ನಹಳ್ಳಿ ಗ್ರಾಮದ ಸರ್ವೆ ನಂಬರ್ 63ರಲ್ಲಿಯ 70 ಎಕರೆಗಳನ್ನು ಒಳಗೊಂಡಿತ್ತು. ಪಹಣಿಯ ಪ್ರಕಾರ ಸರ್ವೆ ನಂಬರ್ 63ರಲ್ಲಿ ಲಭ್ಯವಿದ್ದ 209 ಎಕರೆ 12 ಗುಂಟೆಗಳ ಪೈಕಿ 152 ಎಕರೆ 32 ಗುಂಟೆ ಜಮೀನು ಸರ್ಕಾರ/ಅರಣ್ಯ ಇಲಾಖೆಗೆ ಸೇರಿತ್ತು. ಮಂಡಳಿಯು ಒಂದು ಖಾಸಗಿ ಸಂಸ್ಥೆಯಿಂದ ಈ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಂಡ ಭೂಮಿಯ ಜಂಟಿ ಮಾಪನವನ್ನು ನಡೆಸಿದರೂ ಸಹ ಸರ್ವೆ ನಂಬರ್ 63ರಲ್ಲಿನ ಅರಣ್ಯ ಭೂಮಿಯನ್ನು ಗುರುತಿಸಲು ಜಂಟಿ ಮಾಪನ ವರದಿಯು (ಮಾರ್ಚ್ 2007) ವಿಫಲವಾಯಿತು. ಸರ್ವೆ ನಂಬರ್ 63ರಲ್ಲಿ ಸ್ವಾಧೀನಪಡಿಸಿಕೊಂಡ 70 ಎಕರೆಗಳ ಪೈಕಿ ಮಂಡಳಿಯು ಪ್ರತಿ ಎಕರೆಗೆ ರೂ.55 ಲಕ್ಷಗಳ ದರದಂತೆ 58 ಎಕರೆ 5½ ಗುಂಟೆ ಜಮೀನಿಗೆ ರೂ.31.98 ಕೋಟಿಗಳ ಪರಿಹಾರಧನವನ್ನು ವಿತರಿಸಿತ್ತು (ಅಕ್ಟೋಬರ್ 2010ರಲ್ಲಿದ್ದಂತೆ). ಆದರೆ ಅರಣ್ಯ ಉಪ–ಸಂರಕ್ಷಣಾಧಿಕಾರಿಗಳು, ಬೆಂಗಳೂರು (ಗ್ರಾಮಾಂತರ), ಇವರು ಸರ್ವೆ ನಂಬರ್ 63ರಲ್ಲಿನ 39 ಎಕರೆ 38 ಗುಂಟೆಗಳ ಅರಣ್ಯ ಭೂಮಿಯನ್ನು ಮಂಡಳಿಯು ಇತರ ವ್ಯಕ್ತಿಗಳಿಂದ ಸ್ವಾಧೀನಪಡಿಸಿಕೊಂಡಿರುವುದರ ಬಗ್ಗೆ ಎಸ್‌ಎಲ್‌ಎಓರವರಿಗೆ ತಿಳಿಸಿದರು (ಮಾರ್ಚ್ 2010). ಸರ್ವೆ ನಂಬರ್ 63ರ ಜಮೀನಿಗೆ ಪರಿಹಾರಧನವನ್ನು ಭೂ ಮಂಜೂರಾತಿ ಪ್ರಮಾಣಪತ್ರ ಹಾಗೂ ಇತರೆ ಕಂದಾಯ ದಾಖಲೆಗಳ ಆಧಾರದ ಮೇಲೆ ವಿತರಿಸಲಾಯಿತು ಎಂದು ಎಸ್‌ಎಲ್‌ಎಓ ತಿಳಿಸಿದರು (ಸೆಪ್ಟೆಂಬರ್ 2011). ಆದರೆ ಕಂದಾಯ ದಾಖಲೆಯೇ ಆಗಿರುವ ಪಹಣಿಯು ಸರ್ಕಾರಿ ಮತ್ತು ಅರಣ್ಯ ಭೂಮಿಯ ವಿಸ್ತೀರ್ಣವನ್ನು ಪ್ರತ್ಯೇಕವಾಗಿ ಸೂಚಿಸಿರದಿದ್ದರೂ ಸಹ ಸರ್ವೆ ನಂಬರ್ 63ರಲ್ಲಿ ಸರ್ಕಾರಿ/ಅರಣ್ಯ ಭೂಮಿ ಇರುವುದನ್ನು ತೋರಿಸಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಕಂದಾಯ ಹಾಗೂ ಅರಣ್ಯ ಇಲಾಖೆಯ ದಾಖಲೆಗಳನ್ನು ಆಧರಿಸಿ ನಡೆಸಿದ ಜಂಟಿ ಮಾಪನವು ಸರ್ವೆ ನಂಬರ್ 63ರಲ್ಲಿ ಸ್ವಾಧೀನಪಡಿಸಲು ಉದ್ದೇಶಿಸಿದ 70 ಎಕರೆಗಳಲ್ಲಿ ಅರಣ್ಯ ಭೂಮಿಯ ವಿಸ್ತಾರವನ್ನು ತೋರಿಸಬೇಕಿತ್ತು. ಆದರೆ ಜಂಟಿ ಮಾಪನವನ್ನು ವಹಿಸಿಕೊಂಡಿದ್ದ ಖಾಸಗಿ ಸಂಸ್ಥೆಯು ಕಂದಾಯ ಮತ್ತು ಅರಣ್ಯ ದಾಖಲೆಗಳನ್ನು ಸಮಾಲೋಚಿಸದೇ ಮಾಪನವನ್ನು ನಡೆಸಿಲ್ಲದಿರುವುದು ಸ್ಪಷ್ಟವಾಗಿದೆ. ಸರ್ವೆ ನಂಬರ್ 63ರಲ್ಲಿ ಸ್ವಾಧೀನವಾದ ಭೂಮಿಯಲ್ಲಿ 39 ಎಕರೆ 38 ಗುಂಟೆಗಳು ಅರಣ್ಯ ಭೂಮಿಯೆಂದು ಅರಣ್ಯ ಇಲಾಖೆಯು ಖಚಿತಪಡಿಸಿರುವುದರಿಂದ ಪರಿಹಾರಧನವನ್ನು ವಿತರಿಸಲು ಎಸ್‌ಎಲ್‌ಎಓರವರು ಒಪ್ಪಿಕೊಂಡ ಅನುದಾನ ಪ್ರಮಾಣಪತ್ರ ಹಾಗೂ ಇತರ ದಾಖಲೆಗಳು ತಪ್ಪಾಗಿದ್ದವೆಂದು ಸ್ಪಷ್ಟವಾಗಿದೆ. ಎಸ್‌ಎಲ್‌ಎಓರವರು ಅರಣ್ಯ ಇಲಾಖೆಯೊಂದಿಗೆ ಸಮಾಲೋಚಿಸಿದೇ ಸ್ವಾಧೀನಪಡಿಸಿಕೊಂಡ 58 ಎಕರೆ 5½ ಗುಂಟೆಗಳ ಭೂಮಿಯಲ್ಲಿ ಅರಣ್ಯ ಭೂಮಿಗೆ ಎಷ್ಟು ಪರಿಹಾರಧನ ಪಾವತಿಯಾಯಿತು ಎಂಬುದನ್ನು ನಿರ್ಧರಿಸಿದರು.

ಡಿಓ–3ರವರು ಎಸ್‌ಎಲ್‌ಎಓರವರಿಗೆ ಸಲ್ಲಿಸಿದ ವರದಿಯ (ಸೆಪ್ಟೆಂಬರ್ 2010) ಪ್ರಕಾರ ಏರೋಸ್ಪೇಸ್ ಕಾಂಪೊನೆಂಟ್ಸ್ ಕೈಗಾರಿಕಾ ಪ್ರದೇಶಕ್ಕೆ ಅಗತ್ಯವಾಗಿದ್ದ 979 ಎಕರೆ 34 ಗುಂಟೆಯ ಪೈಕಿ ಪ್ರಸ್ತಾವಿತ ಪ್ರದೇಶದಲ್ಲಿ, ಒಂದು ಸರ್ವೆಯ ಫಲಿತಾಂಶದ ಪ್ರಕಾರ ಕೈಗಾರಿಕಾ ಪ್ರದೇಶದಲ್ಲಿ ತಮಗೆ ಸೇರಿದ ಭೂಮಿ ಎಂದು ಅರಣ್ಯ ಇಲಾಖೆ ಗುರುತಿಸಲಾಗಿದ್ದ 62.85 ಎಕರೆಗಳ ಭೂಮಿಯನ್ನು ಹೊರತುಪಡಿಸಿ, ಕೇವಲ 893.94 ಎಕರೆ ಭೂಮಿ ಮಾತ್ರ ಲಭ್ಯವಿದ್ದಿತು. ಈ ಅರಣ್ಯ ಭೂಮಿಯನ್ನು ಲೆಕ್ಕಕ್ಕೆ ತೆಗೆದುಕೊಂಡರೂ 22.55 ಎಕರೆಗಳಷ್ಟು ಕೊರತೆ ಇದ್ದಿತು. ಅಂದರೆ ಭೂಮಿಯು ಇದೆ ಎಂದು ದಾಖಲೆಗಳು ತೋರಿಸಿದ್ದರೂ 22.55 ಎಕರೆಗಳ ಭೂಮಿಯು ಅಸ್ತಿತ್ವದಲ್ಲಿರಲಿಲ್ಲ. ಸ್ವಾಧೀನಪಡಿಸಿಕೊಳ್ಳುವ ಪ್ರಾಧಿಕಾರ ಹಾಗೂ ಕಂದಾಯ ಇಲಾಖೆಯವರು ಸ್ವಾಧೀನಕ್ಕೆ ಪ್ರಸ್ತಾವಿತ ಪ್ರದೇಶದ ವಿಸ್ತೀರ್ಣವನ್ನು ಜಂಟಿಯಾಗಿ ಅಳತೆ ಮಾಡಿದ ನಂತರವೇ ಪ್ರಾಥಮಿಕ ಅಧಿಸೂಚನೆಯನ್ನು ಪ್ರಕಟಿಸಬೇಕೆಂಬ ಸರ್ಕಾರದ ಮಾರ್ಗದರ್ಶಿಸೂತ್ರಗಳನ್ನು (ಮಾರ್ಚ್ 1997) ಮಂಡಳಿ/ಎಸ್‌ಎಲ್‌ಎಓ ಅನುಸರಿಸದಿದ್ದುದರಿಂದ ಈ ಪರಿಸ್ಥಿತಿ ಉಂಟಾಯಿತು. ಅರಣ್ಯ ಭೂಮಿಯ ವ್ಯಾಪ್ತಿ ಮತ್ತು ಭೂಮಿಯ ಲಭ್ಯತೆಯಲ್ಲಿ ಕೊರತೆಗಳನ್ನು ಡಿಓ–3ರವರು ನಿರ್ಧಾರಣೆ ಮಾಡಿದ್ದರೂ ಸಹ ಈ ಅರಣ್ಯ ಭೂಮಿಗೆ ಮತ್ತು ಭೌತಿಕವಾಗಿ ಇರದಿದ್ದ ಭೂಮಿಗೆ ಏನಾದರೂ ಪರಿಹಾರಧನ ಪಾವತಿಯಾಗಿದೆಯೇ ಎಂಬುದನ್ನು ಪರಿಶೀಲಿಸಲು ಎಸ್‌ಎಲ್‌ಎಓರವರು ಯಾವುದೇ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ.

### 5.6.18 ಸ್ವಾಧೀನಪಡಿಸಿಕೊಂಡ ಭೂಮಿಯಿಂದ ಮರಮುಟ್ಟು ಮತ್ತು ಕಟ್ಟಡಗಳನ್ನು ತೆಗೆದುಹಾಕಿ ವಿಲೇವಾರಿ ಮಾಡಿದ ವಿವರಗಳನ್ನು ಅಭಿವೃದ್ಧಿ ಅಧಿಕಾರಿಗಳು ಸಲ್ಲಿಸಿರುವುದಿಲ್ಲ

ಭೂಮಿಯ ಜೊತೆಗೆ ಮಂಡಳಿಯು ಅಲ್ಲಿದ್ದ ಮರಮುಟ್ಟು ಮತ್ತು ಕಟ್ಟಡ ಭಾಗಗಳನ್ನು ಸಹ ಸ್ವಾಧೀನಪಡಿಸಿಕೊಂಡಿತು ಹಾಗೂ ಅವುಗಳಿಗೆ ತೋಟಗಾರಿಕೆ ಮತ್ತು ಲೋಕೋಪಯೋಗಿ ಇಲಾಖೆಗಳು ನಿರ್ಧರಿಸಿದ ದರಗಳಂತೆ ಪರಿಹಾರಧನವನ್ನು ಪಾವತಿ ಮಾಡಿತು. 2006–07ರಿಂದ 2010–11ರ ಅವಧಿಯಲ್ಲಿ ಮಂಡಳಿಯು ಮರಮುಟ್ಟುಗಳು ಮತ್ತು ಕಟ್ಟಡಗಳಿಗಾಗಿ ಭೂ ಮಾಲೀಕರಿಗೆ ಪರಿಹಾರಧನ ಪಾವತಿಗೆಂದು ರೂ.82.85 ಕೋಟಿಗಳನ್ನು ವೆಚ್ಚ ಮಾಡಿತ್ತು. ಆದರೆ ಈ ಮರಮುಟ್ಟು ಮತ್ತು ಕಟ್ಟಡಗಳ ತಪಶೀಲು ಪಟ್ಟಿಯ ಲೆಕ್ಕವನ್ನು ಮಂಡಳಿಯ ಕಛೇರಿಯಲ್ಲಾಗಲೀ ಅಥವಾ ಪರೀಕ್ಷಾ–ತನಿಖೆ ನಡೆಸಿದ ದಾವಣಗೆರೆ ಮತ್ತು ತುಮಕೂರು ವಿಭಾಗೀಯ ಕಛೇರಿಗಳಲ್ಲಾಗಲೀ ನಿರ್ವಹಿಸಿರಲಿಲ್ಲ. ಕೈಗಾರಿಕಾ ಪ್ರದೇಶಗಳಿಂದ ಮರಮುಟ್ಟು ಮತ್ತು ಕಟ್ಟಡಭಾಗಗಳನ್ನು ಬಿಡುಗಡೆ ಮಾಡಿದ ಮತ್ತು ಅವುಗಳನ್ನು ಯಾವ ರೀತಿ ವಿಲೇವಾರಿ ಮಾಡಲಾಯಿತು ಎಂಬ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ. ಮರಮುಟ್ಟು ಮತ್ತು ಕಟ್ಟಡಗಳ ವಿಲೇವಾರಿಯಿಂದ 2006–11ರ ಅವಧಿಯಲ್ಲಿ ಪಡೆದ ಆದಾಯವು ಕೇವಲ ರೂ.3.66 ಲಕ್ಷಗಳಾಗಿತ್ತು. ತೆರವುಗೊಳಿಸಿದ ಮರಮುಟ್ಟುಗಳು ಮತ್ತು ಕಟ್ಟಡಗಳ ವಿಲೇವಾರಿ ಬಗ್ಗೆ ಸೂಕ್ತ ಲೆಕ್ಕಪತ್ರಗಳನ್ನು ಒದಗಿಸದಿದ್ದುದರಿಂದ ಮತ್ತು ಮರಮುಟ್ಟು ಹಾಗೂ ಕಟ್ಟಡಗಳಿಗೆ ಹೆಚ್ಚಿನ ಮೊತ್ತವನ್ನು ಪರಿಹಾರಧನವನ್ನಾಗಿ ಪಾವತಿ ಮಾಡಿರುವುದು ಮತ್ತು ಅದರ ವಿಲೇವಾರಿಯಿಂದ ಬಂದ ಆದಾಯವು ಕೇವಲ ಶೇಕಡಾ 0.05ರಷ್ಟಿರುವುದರಿಂದ ಈ ವಿಷಯದಲ್ಲಿ ಕೂಲಂಕುಶ ತನಿಖೆಯ ಅಗತ್ಯವಿದೆ.

### 5.6.19 ಆದಾಯ ತೆರಿಗೆಯನ್ನು ವಸೂಲು ಮಾಡದಿರುವುದು

ಆದಾಯ ತೆರಿಗೆ ಕಾಯಿದೆ 1961ರ ಪರಿಚ್ಛೇದ 10(1) ಮತ್ತು 10(37)ರ ಪ್ರಕಾರ ಕೃಷಿ ಆದಾಯ ಮತ್ತು ಕಡ್ಡಾಯವಾಗಿ ಸ್ವಾಧೀನಪಡಿಸಿಕೊಂಡ ಕೃಷಿ ಭೂಮಿಯ ಪರವಾಗಿ ಸ್ವೀಕರಿಸಿದ ಪರಿಹಾರಧನದ ಮೂಲಕ ಬಂದ ಆದಾಯಗಳಿಂದ ಆದಾಯ ತೆರಿಗೆಯನ್ನು ಮುಕ್ತಗೊಳಿಸಲಾಗಿದೆ. ಸ್ವಾಧೀನ ಪಡಿಸಿಕೊಂಡ ದಿನದಿಂದ ಆ ಕೃಷಿ ಭೂಮಿಯು ಕೃಷಿಯೇತರ ಭೂಮಿಯಾಗಿ ಪರಿವರ್ತಿತವಾಗಿದ್ದರೆ ಅಂತಹ ಭೂಮಿಗೆ ಪಾವತಿಸಿದ ಪರಿಹಾರಧನಕ್ಕೆ ಈ ರಿಯಾಯಿತಿಯು ಅನ್ವಯವಾಗುವುದಿಲ್ಲ. 17 ಪ್ರಕರಣಗಳಲ್ಲಿ ಏಪ್ರಿಲ್ 2008ರಿಂದ ನವೆಂಬರ್ 2008ರವರೆಗೆ ಪಾವತಿ ಮಾಡಿದ ರೂ.20.55 ಕೋಟಿ ಮೊತ್ತದ ಪರಿಹಾರಧನದಲ್ಲಿ ರೂ.2.33 ಕೋಟಿಗಳ ಆದಾಯ ತೆರಿಗೆಯನ್ನು **(ಅನುಬಂಧ–4)** ಕಳೆಯಲು ಎಸ್ಎಲ್ಎಓರವರು ವಿಫಲರಾಗಿರುವುದನ್ನು ಗಮನಿಸಲಾಯಿತು.

# ಅಧ್ಯಾಯ 6
# ಭೂಮಿಯ ಹಂಚಿಕೆ

ಮಂಡಳಿಯು 136 ಕೈಗಾರಿಕಾ ಪ್ರದೇಶಗಳನ್ನು ರಾಜ್ಯದ 28 ಜಿಲ್ಲೆಗಳಲ್ಲಿ ಸ್ಥಾಪಿಸಿತ್ತು. ಮಾರ್ಚ್ 2011ರವರೆಗೆ 41,126 ಎಕರೆ 27 ಗುಂಟೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಶೇಕಡ 79 ಭಾಗವನ್ನು ಮಂಡಳಿಯು ಅಭಿವೃದ್ಧಿಗೊಳಿಸಿತ್ತು. ಸ್ವಾಧೀನಪಡಿಸಿಕೊಂಡ ಭೂಮಿಯನ್ನು 14,435 ಕೈಗಾರಿಕಾ ಘಟಕಗಳಿಗೆ 26,524 ಎಕರೆ 34 ಗುಂಟೆಗಳನ್ನು ಹಂಚಿಕೆ ಮಾಡಲಾಗಿತ್ತು. ರಸ್ತೆಗಳಿಗೆ ಮತ್ತು ಇತರ ಸೌಲಭ್ಯಗಳಿಗೆ ಹೊರತುಪಡಿಸಿ 3510 ಎಕರೆ 37 ಗುಂಟೆಗಳ ಅಭಿವೃದ್ಧಿಗೊಳಿಸಿದ ಭೂಮಿ ಈವರೆಗೂ ಹಂಚಿಕೆಯಾಗಿರಲಿಲ್ಲ (**ಅನುಬಂಧ–5**). ಹಂಚಿಕೆಯಾಗದೆ ಅಭಿವೃದ್ಧಿಹೊಂದಿದ ಭೂಮಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ (ಶೇಕಡ 44), ಹಾಸನ (ಶೇಕಡ 14), ದಕ್ಷಿಣ ಕನ್ನಡ (ಶೇಕಡ 10), ಚಿಕ್ಕಬಳ್ಳಾಪುರ (ಶೇಕಡ 7), ಬೀದರ್ (ಶೇಕಡ 6) ಜಿಲ್ಲೆಗಳು ಒಟ್ಟು ಅಭಿವೃದ್ಧಿಹೊಂದಿದ ಹಂಚಿಕೆಯಾದ ಶೇಕಡ 37ರಷ್ಟು ಭೂಮಿಯನ್ನು ಹೊಂದಿದ್ದವು.

## 6.1 ಭೂಮಿಯ ಹಂಚಿಕೆಗೆ ಅರ್ಜಿಯನ್ನು ಆಹ್ವಾನಿಸುವಾಗ ಮಂಡಳಿಯು ಜಾಹಿರಾತನ್ನು ಸೀಮಿತಗೊಳಿಸಿತು

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ ನಿಯಮಾವಳಿ–1969 ಅಧಿನಿಯಮದ ನಿಯಮಾವಳಿ 7ರಿಂದ 9ರಲ್ಲಿ ಸೂಚಿಸಿದಂತೆ ಮಂಡಳಿಯು ಭೂಮಿಯ ಲಭ್ಯತೆ, ವಿಲೇವಾರಿಯಲ್ಲಿ ಅನುಸರಿಸುವ ರೀತಿ, ಅರ್ಜಿಯನ್ನು ಸಲ್ಲಿಸಲು ಕಡೆಯ ದಿನಾಂಕ ಮುಂತಾದ ಅವಶ್ಯಕ ವಿವರಗಳನ್ನು ಕರ್ನಾಟಕದಲ್ಲಿ ಮತ್ತು ಹೊರರಾಜ್ಯಗಳಲ್ಲೂ ಚಲಾವಣೆಯಲ್ಲಿರುವ ಸುದ್ದಿ ಪತ್ರಿಕೆಗಳ ಮುಖಾಂತರ ಪ್ರಚಾರಪಡಿಸಿ ಕೈಗಾರಿಕೆಯನ್ನು ಪ್ರಾರಂಭಿಸುವ ಇಚ್ಛೆಯುಳ್ಳ ವ್ಯಕ್ತಿಗಳಿಂದ ಅಥವಾ ಉದ್ಯಮಿಗಳಿಂದ ಅರ್ಜಿಯನ್ನು ಆಹ್ವಾನಿಸಬೇಕು. ಭೂಮಿಯನ್ನು ಹಂಚಿಕೆ ಮಾಡುವ ಮುನ್ನ ಸ್ವೀಕರಿಸಿದ ಎಲ್ಲಾ ಅರ್ಜಿಗಳನ್ನು ನೋಂದಾಯಿಸಿಕೊಂಡು ಯಾವ ಅರ್ಜಿದಾರರು ಭೂಮಿಯ ಸಂಭಾವ್ಯ ಮೌಲ್ಯದ ಮೊಬಲಗನ್ನು ಪಾವತಿಸುತ್ತಾರೋ ಅವರಿಗೆ ಆದ್ಯತೆಯನ್ನು ನೀಡಬೇಕಾಗಿರುತ್ತದೆ.

ಲೆಕ್ಕಪರಿಶೋಧನೆಯಲ್ಲಿ ಗಮನಿಸಿದಂತೆ ಮಂಡಳಿಯು ಪ್ರಸ್ತಕದಲ್ಲಿರುವ ನಿಯಮಾವಳಿಯನ್ನು ತಿದ್ದುಪಡಿ ಮಾಡಿ 1996–97ರಿಂದ ವೃತ್ತ ಪತ್ರಿಕೆಯ ಮುಖಾಂತರ ಭೂಮಿ ಹಂಚಿಕೆಗೆ ಅರ್ಜಿಗಳನ್ನು ಆಹ್ವಾನಿಸುವ ವಿಧಾನವನ್ನು ಕೈಬಿಟ್ಟು ಏಪ್ರಿಲ್ 1996ರಲ್ಲಿ ಆಯಾ ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ, ಜಿಲ್ಲಾ ಕೈಗಾರಿಕಾ ಕೇಂದ್ರಗಳಲ್ಲಿ ಮತ್ತು ಮಂಡಳಿಯ ವಿಭಾಗಾಧಿಕಾರಿಗಳ ಕಛೇರಿಗಳಲ್ಲಿರುವ ಸೂಚನಾ ಫಲಕಗಳಲ್ಲಿ ಕೈಗಾರಿಕಾ ಪ್ರದೇಶಗಳಲ್ಲಿನ ಖಾಲಿ ನಿವೇಶನಗಳ ಮಾಹಿತಿಯನ್ನು ಪ್ರದರ್ಶಿಸುವ ವಿಧಾನವನ್ನು ಅನುಸರಿಸುತ್ತಿದೆ. ವೃತ್ತ ಪತ್ರಿಕೆಗಳಲ್ಲಿ ಜಾಹೀರಾತು ನೀಡಿಕೆಯಿಂದ ಆಗುವ ಅಧಿಕ ವೆಚ್ಚವನ್ನು ಕಾರಣ ನೀಡಿ ಮಂಡಳಿಯು ನಿರ್ಣಯವನ್ನು ತೆಗೆದುಕೊಂಡಿತು. ಆದರೆ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಅಧಿನಿಯಮ–1966ರ ಪರಿಚ್ಛೇಧ 42ರ ಪ್ರಕಾರ ನಿಯಮಾವಳಿಗಳ ಯಾವುದೇ ತಿದ್ದುಪಡಿಗಳನ್ನು ಶಾಸಕಾಂಗದ ಮುಂದೆ ಸಲ್ಲಿಸಿ ಮಂಜೂರಾತಿ ಪಡೆಯಬೇಕು. ಮಂಡಳಿಯು ಸಮರ್ಥವಲ್ಲದಿದ್ದರೂ ಅನುಮೋದಿತ ನಿಯಮಾವಳಿಗೆ ತಿದ್ದುಪಡಿ ಮಾಡಿತು. ಈ ತಿದ್ದುಪಡಿಯು ವಿಶೇಷವಾಗಿ ಹೊರ ರಾಜ್ಯದ ಉದ್ಯಮಿಗಳಿಗೆ ಪ್ರಚಾರದಲ್ಲಿ ನಿರ್ಬಂಧನೆಯಾಯಿತು.

ಕರ್ನಾಟಕ ಕೈಗಾರಿಕಾ (ಸೌಲಭ್ಯ) ಅಧಿನಿಯಮ 2002ರ ಪ್ರಕಾರ ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಸಮಿತಿಗಳನ್ನು ರಚಿಸಲಾಗಿದ್ದು ಭಾವೀ ಉದ್ಯಮಿಗಳು ಭೂಮಿಯ ಹಂಚಿಕೆಗಾಗಿ ವರ್ಷಪೂರ್ತಿ ಅರ್ಜಿಗಳನ್ನು ಸಲ್ಲಿಸುವ ಅವಕಾಶವಿದೆಯೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು (ಸಿಇಒ) ಹೇಳಿದ್ದಾರೆ (ಜುಲೈ 2011). ಆದರೆ, ನಿಯಮಾವಳಿಗಳ ತಿದ್ದುಪಡಿಯು ಶಾಸಕಾಂಗದ ಸಮ್ಮತಿಯಿಲ್ಲದೇ ಮಂಡಳಿಯ ನಿರ್ಧಾರದಿಂದ ತಿದ್ದುಪಡಿಯಾಗದ ಕಾರಣ ಉತ್ತರವು ಸಮಂಜಸವಲ್ಲ.

## 6.2 ಭೂ ಹಂಚಿಕೆ ಸಮಿತಿ ಮತ್ತು ಅಭಿವೃದ್ಧಿ ಅಧಿಕಾರಿಗಳು ಭೂಮಿಯನ್ನು ಉದ್ಯಮಿಗಳಿಗೆ ಅನಧಿಕೃತವಾಗಿ ಹಂಚಿಕೆ ಮಾಡಿದರು

ಮಂಡಳಿಯಿಂದ ಡಿಸೆಂಬರ್ 2005 ರಲ್ಲಿ ಹೊರಡಿಸಿದ ಠರಾವಿನಂತೆ, ಸಿಇಒ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಒಂದು ಎಕರೆಗೆ ಮೀರದಂತೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಎರಡು ಎಕರೆಗೆ ಮೀರದಂತೆ ಹಂಚಿಕೆ ಮಾಡಲು ಭೂ ಹಂಚಿಕೆ ಸಮಿತಿಗೆ (ಎಲ್ಎಸಿ) ಅನುಮತಿ ನೀಡಿತ್ತು. ಆದರೆ, ಎಲ್ಎಸಿಯು ಠರಾವನ್ನು ಉಲ್ಲಂಘಿಸಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಭೂಮಿಯನ್ನು ಹಂಚಿಕೆ ಮಾಡಿತು. ವಿಭಾಗೀಯ ಅಭಿವೃದ್ಧಿ ಅಧಿಕಾರಿಗಳೂ ತಮ್ಮ ಪರಿಮಿತಿಯಲ್ಲಿನ ಕೈಗಾರಿಕಾ ಪ್ರದೇಶಗಳಲ್ಲಿರುವ ಭೂಮಿಯನ್ನು ಹಂಚಿಕೆ ಮಾಡಿದ್ದು ಈ ಹಂಚಿಕೆ ಕ್ರಮವನ್ನು ಬಹಳ ತಡವಾಗಿ ಮತ್ತು ಮಾಮೂಲಿನ ರೀತಿಯಲ್ಲಿ ಎಲ್ಎಸಿಯು ಸ್ಥಿರೀಕರಿಸಿತು. ಎಲ್ಎಸಿಯು 2006–11ರ ಅವಧಿಯಲ್ಲಿ ಹಂಚಿಕೆ ಮಾಡಿದ ಹಾಗೂ ಅನುಮೋದನೆ ಮಾಡಿದ ಪ್ರಕರಣಗಳ ಪಟ್ಟಿಯನ್ನು ಒದಗಿಸಲಿಲ್ಲ. ಆದರೆ ಈ ಅವಧಿಯಲ್ಲಿ ಎಲ್ಎಸಿಯು ನಡವಳಿಗಳನ್ನು ಒದಗಿಸಿದೆ. ಲೆಕ್ಕಪರಿಶೋಧನೆಯು ಇಂತಹ ಹಂಚಿಕೆಗಳ ಸಂಕಲನವನ್ನು 2010–11ರ ಅವಧಿಯಲ್ಲಿ ಮಾಡಿದಾಗ, ಅಭಿವೃದ್ಧಿ ಅಧಿಕಾರಿಗಳು (ಡಿಒ) 101 ಎಕರೆಗಳನ್ನು ಹಂಚಿಕೆ ಮಾಡಿರುವುದು ತೋರಿತು.

## 6.3 ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡಲು ಮಂಡಳಿಯು ನಿಯಮಾವಳಿಗಳನ್ನು ರೂಪಿಸಿರಲಿಲ್ಲ

ಪಟ್ಟಣ ಯೋಜನಾ ಪ್ರಾಧಿಕಾರದ ವಿಭಾಗೀಯ ನಿಯಮಾವಳಿಗಳಲ್ಲಿ ನಾಗರೀಕ ಸೌಲಭ್ಯವನ್ನು (ಸಿಎ) ಮಾರುಕಟ್ಟೆ, ಅಂಚೆ ಕಛೇರಿ, ಬ್ಯಾಂಕು, ಬಸ್ ನಿಲ್ದಾಣ/ತಂಗುದಾಣ, ನ್ಯಾಯಬೆಲೆ ಅಂಗಡಿ, ವಾಚನಾಲಯ, ವ್ಯಾಯಾಮಶಾಲೆ, ಹೆರಿಗೆ ಕೇಂದ್ರ, ಹಾಲು ವಿತರಣಾ ಕೇಂದ್ರ, ಶಿಶುಪಾಲನಾ ಕೇಂದ್ರ, ಆರಕ್ಷಕ ಠಾಣೆ, ಸ್ಥಳೀಯ ಪ್ರಾಧಿಕಾರದ ಸೇವಾ ಕೇಂದ್ರ, ಸರ್ಕಾರದ/ಸ್ಥಳೀಯ ಪ್ರಾಧಿಕಾರದಿಂದ ನಡೆಸಲಾಗುವ ಮನರಂಜನಾ ಕೇಂದ್ರ, ಸಹಕಾರಿ ಸಂಸ್ಥೆಗಳು ನಡೆಸುವ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಮತ್ತು ಮನರಂಜನಾ ಚಟುವಟಿಕೆ ಕೇಂದ್ರ, ಇತ್ಯಾದಿ ಎಂದು ವಿವರಿಸಲಾಗಿದೆ.

ಮಂಡಳಿಯು ಸಿಎ ನಿವೇಶನಗಳನ್ನು ಈ ಉದ್ದೇಶಗಳಿಗಾಗಿ ಮಾತ್ರ ಹಂಚಿಕೆ ಮಾಡಬೇಕು. ಆದರೆ ಮಂಡಳಿಯು ಈ ನಿವೇಶನಗಳನ್ನು ಕೈಗಾರಿಕೆಗಳಿಗೆ ಹಂಚಿಕೆ ಮಾಡಿರುವುದು ಕಂಡು ಬಂದಿದೆ. 2006–11ರ ಅವಧಿಯಲ್ಲಿ ನಡೆಸಿದ ಪರೀಕ್ಷಾ ತನಿಖೆಯಲ್ಲಿ ಬೆಂಗಳೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ ಮಂಡಳಿಯು ನಾಗರೀಕ ಸೌಲಭ್ಯ ಮತ್ತು ಉದ್ಯಾನಗಳಿಗೆ ಮೀಸಲಾದ ನಿವೇಶನಗಳನ್ನು 14 ಕೈಗಾರಿಕೆಗಳಿಗೆ ಹಂಚಿಕೆ ಮಾಡಿರುವುದು ಕಂಡುಬಂದಿದೆ. ಮೈಸೂರು ಮತ್ತು ತುಮಕೂರು ಜಿಲ್ಲೆಗಳ ಅಭಿವೃದ್ಧಿ ಡಿಒಗಳು ನಾಗರೀಕ ಸೌಲಭ್ಯ ನಿವೇಶನಗಳನ್ನು ಕೈಗಾರಿಕೆಗಳಿಗೆ ಹಂಚಿಕೆ ಮಾಡಿದ್ದಾರೆ. ಮಂಡಳಿಯು 136 ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆಯಾದ ನಾಗರಿಕ ಸೌಲಭ್ಯ ನಿವೇಶನಗಳ ಹಾಗೂ ಉದ್ಯಾನಗಳ ವಿಸ್ತೀರ್ಣದ ವಿವರಗಳನ್ನು ಲೆಕ್ಕಪರಿಶೋಧನೆಗೆ ನೀಡದ ಕಾರಣ ನಾಗರೀಕ ಸೌಲಭ್ಯ ನಿವೇಶನಗಳು ಕೈಗಾರಿಕೆಗಳಿಗೆ ಹಂಚಿಕೆಯಾದ ವ್ಯಾಪ್ತಿಯನ್ನು ಲೆಕ್ಕಪರಿಶೋಧನೆಗೆ ನಿಗದಿ ಮಾಡಲಾಗಲಿಲ್ಲ. ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆಯ ಬಗ್ಗೆ ಯಾವುದೇ ರೀತಿಯ ಕಾರ್ಯ ನೀತಿಯನ್ನು ಮಂಡಳಿಯು ರೂಪಿಸಿರಲಿಲ್ಲ ಮತ್ತು ಅದರ ನಿವೇಶನಗಳ ಹಂಚಿಕೆಯಲ್ಲಿ ಪಾರದರ್ಶಕತೆ ಇರಲಿಲ್ಲ. ಮಂಡಳಿಯು (ಜೂನ್ 2011)ರಲ್ಲಿ ನಾಗರೀಕ ಸೌಲಭ್ಯ ನಿವೇಶನಗಳನ್ನು ವಿಲೇವಾರಿ ಮಾಡಲು ಪ್ರಸಕ್ತ ನಿಯಾಮಾವಳಿಗಳಿಗೆ ತಿದ್ದುಪಡಿ ತರಲು ನಿರ್ಧರಿಸಿದೆ ಎಂದು ಸಿಇಒ (ಜುಲೈ 2011) ರಲ್ಲಿ ತಿಳಿಸಿದರು.

## 6.4 ಸಮಿತಿಗಳು ಅನುಮೋದಿಸಿದ ಯೋಜನೆಗಳಿಗೆ ಭೂ ಸ್ವಾಧೀನ/ಹಂಚಿಕೆಗಳನ್ನು ಮಂಡಳಿಯು ವಿಳಂಬ ಮಾಡಿತು

ಮಂಡಳಿಯು ಸಲ್ಲಿಸಿದ ಯೋಜನೆಯ ತೀರುವಳಿಗಳನ್ನು ಆಯಾ ಸಮಿತಿಗಳು ( ಎಸ್ಎಚ್ಎಲ್ಸಿಸಿ, ಎಸ್ಎಲ್ಎಸ್ಡಬ್ಲುಸಿಸಿ ಮತ್ತು ಡಿಎಲ್ಎಸ್ಡಬ್ಲುಸಿಸಿ) ಒಪ್ಪಿಕೊಂಡು ಸಮ್ಮತಿ ನೀಡಿದ ಮೇಲೆ ಮಂಡಳಿಯು ಅಂಥ ಉದ್ಯಮಿಗಳಿಗೆ ಭೂಮಿಯನ್ನು ಹಂಚಿಕೆ ಮಾಡುತ್ತದೆ. ಕರ್ನಾಟಕ

ಕೈಗಾರಿಕೋದ್ಯಮ ಸೌಲಭ್ಯಗಳ ಅಧಿನಿಯಮ 2002ರ ಪರಿಚ್ಛೇದ 12ರಡಿಯಲ್ಲಿ ಕರ್ನಾಟಕ ಉದ್ಯೋಗ ಮಿತ್ರ ಎಂಬ ಸಂಪರ್ಕ ಸಂಸ್ಥೆಯನ್ನು ಸ್ಥಾಪಿಸಿದ್ದು ಅದು ರಾಜ್ಯಮಟ್ಟದಲ್ಲಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವ ಚಟುವಟಿಕೆಗಳನ್ನು ಮತ್ತು ರಾಜ್ಯದಲ್ಲಿ ಕೈಗಾರಿಕಾ ಸಂಸ್ಥೆಗಳನ್ನು ಸ್ಥಾಪಿಸಲಿಚ್ಛಿಸುವ ಉದ್ಯಮಿಗಳಿಗೆ ಮಾರ್ಗದರ್ಶನ ಮತ್ತು ಸಹಾಯವನ್ನು ಒದಗಿಸಬೇಕಿತ್ತು. ಕರ್ನಾಟಕ ಉದ್ಯೋಗ ಮಿತ್ರ ತೀರುವಳಿ ಪಡೆದ ಯೋಜನೆಗಳನ್ನು ಉದ್ಯಮಿಗಳಿಗೆ ತಿಳಿಸಿ ಒಂದು ತಿಂಗಳಿನೊಳಗೆ ಅವರು ಭೂ ಹಂಚಿಕೆಗಾಗಿ ಮಂಡಳಿಯನ್ನು ಸಂಪರ್ಕಿಸಬೇಕೆಂದು ನಿರ್ದೇಶಿಸುತ್ತಾರೆ. ಕರ್ನಾಟಕ ಉದ್ಯೋಗ ಮಿತ್ರ ನೀಡುವ ಮಂಜೂರಾತಿಗಳು ಎರಡು ವರ್ಷಗಳ ಮಾನ್ಯತೆ ಪಡೆದಿರುತ್ತವೆ.

ಉದ್ಯಮಿಗಳಿಗೆ ಹಂಚಿಕೆಯಾಗಬೇಕಾದ ಭೂಮಿಯು ಸಾಮಾನ್ಯವಾಗಿ ಮಂಡಳಿಯ ವಶದಲ್ಲಿರುವ ಕಾರಣ ಸ್ವಾಧೀನ ಪ್ರಕ್ರಿಯೆಯು ಅಪೂರ್ಣವಾಗಿತ್ತು. ಭೂ ಸ್ವಾಧೀನ ಹಾಗೂ ಅಭಿವೃದ್ಧಿಯನ್ನು ಮಂಡಳಿಯು ಪೂರೈಸುವ ಬಹಳ ಮೊದಲೇ ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯು ಯೋಜನೆಯ ಮಂಜೂರಾತಿ ಮತ್ತು ಭೂಮಿಯ ಹಂಚಿಕೆಯನ್ನು ದೃಢಪಡಿಸಿತ್ತು. ಈ ರೀತಿ, ಅಂತಿಮ ಸ್ವಾಧೀನ ಅಧಿಸೂಚನೆಯನ್ನು ಪ್ರಕಟಿಸುವುದಕ್ಕೆ ಮುನ್ನವೇ ಕರ್ನಾಟಕ ಉದ್ಯೋಗ ಮಿತ್ರ ಯೋಜನೆಗಳಿಗೆ ತೀರುವಳಿ ನೀಡಿದ ಪ್ರಕರಣಗಳ ಪಟ್ಟಿಯನ್ನು **ಅನುಬಂಧ–6**ರಲ್ಲಿ ವಿವರಿಸಲಾಗಿದೆ.

ಭೂಮಿಯ ಹಂಚಿಕೆಯ ವಿಚಾರದಲ್ಲಿ ಮಂಡಳಿಯ ಹಾಗೂ ಕರ್ನಾಟಕ ಉದ್ಯೋಗ ಮಿತ್ರ ನಡುವೆ ಸಮನ್ವಯತೆ ಇರಲಿಲ್ಲ. ಕರ್ನಾಟಕ ಉದ್ಯೋಗ ಮಿತ್ರ ಯೋಜನೆಗಳಿಗೆ ತೀರುವಳಿ ನೀಡುವ ಮುನ್ನ ಭೂ ಸ್ವಾಧೀನ ಹಾಗೂ ಪ್ರದೇಶಾಭಿವೃದ್ಧಿಯ ಸ್ಥಿತಿಯನ್ನು ಖಚಿತಪಡಿಸಿಕೊಂಡಿರಲಿಲ್ಲ ಹಾಗೂ ಮಂಡಳಿಯು ಹಲವಾರು ಕೈಗಾರಿಕಾ ಪ್ರದೇಶಗಳಲ್ಲಿ ಭೂಮಿಯ ಲಭ್ಯತೆ ಹಾಗೂ ಹಂಚಿಕೆಯ ಬಗ್ಗೆ ಇರುವ ಮಾಹಿತಿ/ಸ್ಥಿತಿಯನ್ನು ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಗೆ ತಿಳಿಸಿರಲಿಲ್ಲ. **ಕೋಷ್ಟಕ–6.1**ರಲ್ಲಿ ಪರೀಕ್ಷಾ ತನಿಖೆ ನಡೆಸಿರುವ ಕೈಗಾರಿಕಾ ಪ್ರದೇಶಗಳಲ್ಲಿ, ಕರ್ನಾಟಕ ಉದ್ಯೋಗ ಮಿತ್ರ ಯೋಜನೆಗಳಿಗೆ ತೀರುವಳಿ ನೀಡಿ ಮೂರರಿಂದ ನಾಲ್ಕು ವರ್ಷಗಳು ಕಳೆದರೂ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದಿರುವುದು ಅಥವಾ ಭೂಮಿಯ ಹಂಚಿಕೆ ಮಾಡದಿರುವ ಪ್ರಕರಣಗಳನ್ನು ಹೊಂದಿರುವ ಕೈಗಾರಿಕಾ ಪ್ರದೇಶಗಳ ಪಟ್ಟಿ ಮಾಡಲಾಗಿದೆ.

**ಕೋಷ್ಟಕ–6.1: ಕರ್ನಾಟಕ ಉದ್ಯೋಗ ಮಿತ್ರ ಯೋಜನೆಗಳಿಗೆ ಸಮ್ಮತಿ ನೀಡಿದ ನಂತರವೂ ಭೂಮಿಯ ಸ್ವಾಧೀನ/ಹಂಚಿಕೆ ಮಾಡದಿರುವುದು**

| ಕೈಗಾರಿಕಾ ಪ್ರದೇಶದ ಹೆಸರು | ಮಂಜೂರಾದ ಯೋಜನೆಗಳ ಸಂಖ್ಯೆ | ಕೈಗಾರಿಕಾ ಪ್ರದೇಶದ ಹೆಸರು | ಮಂಜೂರಾದ ಯೋಜನೆಗಳ ಸಂಖ್ಯೆ |
|---|---|---|---|
| ಉಡುಪು ತಯಾರಿಕಾ ಪ್ರದೇಶ, ದೊಡ್ಡಬಳ್ಳಾಪುರ | 24 | ಇಲವಾಲ–ಬೆಳಗೋಳ | 14 |
| ದಾವಣಗೆರೆ | 01 | ಮಾಲೂರು | 11 |
| ಡಾಬಸ್‌ಪೇಟೆ | 110 | ನರಸಾಪುರ | 02 |
| ಗೌರಿಬಿದನೂರು | 02 | ವಸಂತ ನರಸಾಪುರ | 08 |

(ಆಧಾರ : ಕರ್ನಾಟಕ ಉದ್ಯೋಗ ಮಿತ್ರ ಮಾಹಿತಿ ಸಂಕಲನ)

ಒಬ್ಬ ಡಿಓ ವಿವರಗಳನ್ನು ಒದಗಿಸುವುದಕ್ಕಾಗಿ ಕರ್ನಾಟಕ ಉದ್ಯೋಗ ಮಿತ್ರ ನಿಯೋಜಿಸಿದ್ದು, ವಿಭಾಗ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಜಿಲ್ಲಾ ಭೂ ಹಂಚಿಕೆಯ ಸಮಿತಿಗೆ ಮಾಹಿತಿ ಒದಗಿಸುತ್ತಿದ್ದರು ಎಂದು ಸಿಇಓ ಉತ್ತರಿಸಿದರು (ಜುಲೈ 2011). ಆದರೆ ದಾಖಲೆಗಳ ಪರಿಶೀಲನೆಯ ಪ್ರಕಾರ, ಕರ್ನಾಟಕ ಉದ್ಯೋಗ ಮಿತ್ರ ಉದ್ಯಮಿಗಳಿಂದ ಪಡೆದ ಮಾಹಿತಿಯನ್ನು ಮಾತ್ರ ಸಂಕಲಿಸುತ್ತಿದ್ದು ಮಂಡಳಿಯ ವತಿಯಿಂದ ಅಧಿಕೃತವಾಗಿ ಕರ್ನಾಟಕ ಉದ್ಯೋಗ ಮಿತ್ರಗೆ ಮಾಹಿತಿಗಳು ರವಾನೆಯಾಗುತ್ತಿರಲಿಲ್ಲ.

## 6.5 ಹಂಚಿಕೆಯ ದರವನ್ನು ಇಳಿಸಲು ಮಂಡಳಿಯು ಅನಗತ್ಯ ಅವಸರ ತೋರಿತು

ಬಿಡದಿ ಕೈಗಾರಿಕಾ ಪ್ರದೇಶದ ಹಂತ–2, ಸೆಕ್ಟರ್–I ರಲ್ಲಿ ಹಂಚಿಕೆ ಮಾಡಬಲ್ಲ 152.50 ಎಕರೆ ಜಮೀನು ಇದ್ದು ಅದರ ಹಂಚಿಕೆಯ ದರ ಎಕರೆಗೆ ರೂ.60 ಲಕ್ಷಗಳು ಇತ್ತು. ಆದರೆ, ಹಂಚಿಕೆದಾರರು ಆರ್ಥಿಕ ಮತ್ತು ಕೈಗಾರಿಕಾ ಹಿನ್ನಡೆಯ ಕಾರಣಗಳನ್ನೊಡ್ಡಿ ನೀಡಿದ ಮನವಿಗಳನ್ನು ಆಧರಿಸಿ ಮಂಡಳಿಯು (ನವಂಬರ್ 2009) ದರವನ್ನು ಎಕರೆಗೆ ರೂ.47.80 ಲಕ್ಷಗಳಿಗೆ ಇಳಿಸಿತು. ಕಡಿತಗೊಳಿಸಿದ ದರದಲ್ಲಿ

37 ಎಕರೆಗಳನ್ನು ಪಡೆದ 12 ಹಂಚಿಕೆದಾರರಿಗೆ ಈ ನಿರ್ಧಾರದಿಂದ ಲಾಭ ಉಂಟಾಯಿತು ಎಂದು ಲೆಕ್ಕಪರಿಶೋಧನೆಯು ಗಮನಿಸಿತು. ನಂತರ ಜೂನ್ 2010 ರಲ್ಲಿ ಮಂಡಳಿಯು ಪುನಃ ಆರು ತಿಂಗಳ ಅವಧಿಯ ಒಳಗೆ ಭೂ ಹಂಚಿಕೆಯ ದರವನ್ನು ಮೊದಲಿನ ದರಕ್ಕಿಂತ ರೂ.60 ಲಕ್ಷ ಹೆಚ್ಚಿಸಿ ಎಕರೆಗೆ ರೂ.78 ಲಕ್ಷಗಳಂತೆ ನಿಗದಿಗೊಳಿಸಿತು, ಭೂಮಿಗೆ ಬಹಳ ಹೆಚ್ಚಿನ ಬೇಡಿಕೆ ಇರುವುದರಿಂದ ಈ ನಿರ್ಧಾರ ತೆಗೆದುಕೊಳ್ಳಲಾಯಿತು. ಮಂಡಳಿಯ ಅನಗತ್ಯ ಅವಸರದಿಂದ ದರವನ್ನು ಇಳಿಸಿದ್ದರಿಂದ ರೂ.4.51 ಕೋಟಿಗಳ ನಷ್ಟ ಉಂಟಾಯಿತು.

## 6.6 ಹಂಚಿಕೆದಾರರೊಂದಿಗೆ ಮಾಡಿಕೊಂಡ ಒಪ್ಪಂದದಲ್ಲಿ ವಿಳಂಬದ ಸಂದಾಯಕ್ಕೆ ದಂಡನೆಯ ಉಪಬಂಧಗಳಿರಲಿಲ್ಲ

ಇಟಸ್ಕಾ ತಂತ್ರಾಂಶ ಅಭಿವೃದ್ಧಿ ಖಾಸಗಿ ನಿಯಮಿತ ಇವರು ರೂ.1130 ಕೋಟಿಗಳ ಬಂಡವಾಳ ಹೂಡಿ ಒಂದು ವಿಶೇಷ ವಿತ್ತ ವಲಯವನ್ನು (ಎಸ್‌ಇಝಡ್) ಸ್ಥಾಪಿಸಲು ಸಲ್ಲಿಸಿದ ಪ್ರಸ್ತಾಪವನ್ನು ಭೂ ಹಂಚಿಕೆ ಸಮಿತಿಯವರು ಆಗಸ್ಟ್ 2006 ರಲ್ಲಿ ಮಂಜೂರು ಮಾಡಿದರು. ಬಂಡಿಕೋಡಿಗೇಹಳ್ಳಿ ಗ್ರಾಮದಲ್ಲಿ ಉದ್ದೇಶಿತ ಹಾರ್ಡ್ ವೇರ್ ತಂತ್ರಜ್ಞಾನ ಪ್ರದೇಶದಲ್ಲಿ ಮಂಡಳಿಯು 325 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಹಂಚಬೇಕಿತ್ತು.

ಮಂಡಳಿಯು 450 ಎಕರೆ 24 ಗುಂಟೆ ಭೂಮಿಯನ್ನು ನವೆಂಬರ್ 2006ರಲ್ಲಿ ಪ್ರಾರಂಭಿಕ ಅಧಿಸೂಚನೆಯನ್ನು ಮತ್ತು ಮೇ 2007 ರಲ್ಲಿ ಅಂತಿಮ ಅಧಿಸೂಚನೆಯನ್ನು ಪ್ರಕಟಿಸಿ ಸ್ವಾಧೀನ ಪಡಿಸಿಕೊಂಡಿತು. 325 ಎಕರೆ ಭೂಮಿಯ ತಾತ್ಕಾಲಿಕ ಮೌಲ್ಯದ ಶೇ. 40ರ ಮೊತ್ತವಾದ ರೂ.42.53 ಕೋಟಿಗಳನ್ನು ಠೇವಣಿಯಿಟ್ಟು ಒಪ್ಪಂದವನ್ನು ಜಾರಿ ಮಾಡಿಕೊಳ್ಳಬೇಕೆಂದು ಮಂಡಳಿಯು ಕಂಪನಿಗೆ ಆದೇಶ ನೀಡಿತು (ಡಿಸೆಂಬರ್ 2006) (ಮೌಲ್ಯವನ್ನು ಎಕರೆ ಒಂದಕ್ಕೆ ರೂ.25.56 ಲಕ್ಷಗಳಂತೆ ಮತ್ತು ಮಂಡಳಿಯ ಶುಲ್ಕ ಶೇಕಡಾ 28ರಂತೆ ಲೆಕ್ಕ ಹಾಕಿ ಒಟ್ಟು ರೂ.106.33 ಕೋಟಿಗಳಂತೆ ಲೆಕ್ಕ ಹಾಕಿರುವುದು). ಕಂಪನಿಯು ಅರ್ಜಿಯ ಜೊತೆಯಲ್ಲಿ ತಿಂಗಳು ಕೇವಲ ರೂ.3.00 ಲಕ್ಷಗಳನ್ನು ಪಾವತಿಸಿದ್ದು (ಡಿಸೆಂಬರ್ 2006) ನಂತರ ಮೇ 2007ರಲ್ಲಿ ಒಪ್ಪಂದಕ್ಕೆ ಒಳಪಟ್ಟಿತು. ಒಪ್ಪಂದದ ಪ್ರಕಾರ 15 ದಿನಗಳಲ್ಲಿ ತಾತ್ಕಾಲಿಕ ಮೌಲ್ಯದ ಶೇಕಡಾ 40ರ ಭಾಗದ ಮೊತ್ತವನ್ನು ಪಾವತಿಸಬೇಕು ಮತ್ತು ಉಳಿದ ಶೇಕಡಾ 60ರ ಭಾಗದ ಮೊತ್ತವನ್ನು ಅಂತಿಮ ಅಧಿಸೂಚನೆಯ ಮುನ್ನ ಪಾವತಿಸಬೇಕಿತ್ತು. ಕಂಪನಿಯು ಮೇ 2007 ರಿಂದ ಅಕ್ಟೋಬರ್ 2010 ರವರೆಗಿನ ಅವಧಿಯಲ್ಲಿ ಉಳಿದ ತಾತ್ಕಾಲಿಕ ಹಣವನ್ನು ಪಾವತಿ ಮಾಡಿದ್ದು ಒಪ್ಪಂದದಲ್ಲಿ ವಿಳಂಬ ಪಾವತಿಗಾಗಿ ಯಾವುದೇ ಕ್ರಮಗಳ ಬಗ್ಗೆ ಪ್ರಸ್ತಾಪ ಇಲ್ಲದ ಕಾರಣ ಮಂಡಳಿಯು ಈ ಕಂಪನಿಯ ವಿರುದ್ಧ ಪಾವತಿಯನ್ನು ವಿಳಂಬಿಸಿದ್ದಕ್ಕಾಗಿ ದಂಡ ಬಡ್ಡಿಯನ್ನು ವಿಧಿಸಲಾಗಲಿಲ್ಲ. ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆಯಾದ ಭೂಮಿಗೆ ಮಂಡಳಿಯು ವಿಳಂಬವಾಗಿ ಪಾವತಿಸಿದ ಉದ್ಯಮಿಗಳಿಗೆ ಶೇಕಡಾ 12.75ರಂತೆ ಬಡ್ಡಿಯನ್ನು ವಿಧಿಸಿತ್ತು. ಅದೇ ಅನುಪಾತದಲ್ಲಿ ಮಂಡಳಿಯು ಕಂಪನಿಯಿಂದ ರೂ.2.90 ಕೋಟಿಯಷ್ಟು ಬಡ್ಡಿಯನ್ನು ವಸೂಲಿ ಮಾಡಬೇಕಾಗಿತ್ತಾದರೂ ಒಪ್ಪಂದದಲ್ಲಿ ದಂಡನೆಯ ಕ್ರಮಗಳ ಬಗ್ಗೆ ಪ್ರಸ್ತಾಪ ಇಲ್ಲದ ಕಾರಣ ಅದು ಸಾಧ್ಯವಾಗಲಿಲ್ಲ. ಮಂಡಳಿಯು ಕಂಪನಿಯಿಂದ ಕಡ್ಡಾಯವಾಗಿ ಮಾಡಬೇಕಿದ್ದ ರೂ.32.50 ಲಕ್ಷಗಳ ಕೊಳಚೆ ಅಭಿವೃದ್ಧಿ ಉಪಕರವನ್ನು ಸಹ ವಸೂಲಿ ಮಾಡಲಿಲ್ಲ. ಲೋಕಾಯುಕ್ತದಲ್ಲಿರುವ ವಿಚಾರಣೆಯು ಮುಕ್ತಾಯವಾದ ನಂತರ ನಿರ್ದಿಷ್ಟ ಉತ್ತರ ನೀಡಲಾಗುವುದೆಂದು ವಿಶೇಷ ಜಿಲ್ಲಾಧಿಕಾರಿಗಳು ತಿಳಿಸಿದರು (ಫೆಬ್ರವರಿ 2012).

## 6.7 ಉದ್ಯಾನಕ್ಕಾಗಿ ಮೀಸಲಿಟ್ಟ ಭೂಮಿಯನ್ನು ಸರ್ಕಾರವು ಎರಡು ಕಂಪನಿಗಳಿಗೆ ಅಕ್ರಮವಾಗಿ ಹಂಚಿಕೆ ಮಾಡಿತು

ಎಸ್‌ಎಲ್‌ಎಸ್‌ಡಬ್ಲುಸಿಸಿ ಎರಡು ಕಂಪನಿಗಳಿಗೆ ಪ್ರಸ್ತಾಪಗಳನ್ನು ಮಂಜೂರು (ಜೂನ್ ಮತ್ತು ಜುಲೈ 2009) ಮಾಡಿದರು; ಒಂದು ಪ್ರಸ್ತಾಪವು ವ್ಯಾಪಾರಿ ಮಳಿಗೆ, ವಿವಿಧೋದ್ದೇಶ ಕಟ್ಟಡ ಮತ್ತು ಬಹು ಮಹಡಿ ಕಾರು ನಿಲ್ದಾಣ ತಾಣ ನಿರ್ಮಾಣ ಮತ್ತೊಂದು ಪ್ರಸ್ತಾಪದಂತೆ ಮಾಹಿತಿ ತಂತ್ರಜ್ಞಾನ ಪಾರ್ಕ್ ಸ್ಥಾಪಿಸುವ ಉದ್ದೇಶಗಳಿಂದ ಕೂಡಿದ್ದಿತು. ಈ ಕಂಪನಿಗಳಿಗೆ ಭೂಮಿಯನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ಇಪಿಐಪಿ ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆ ಮಾಡಬೇಕಿತ್ತು. ಅದರಂತೆ, ಸರ್ಕಾರಿ

ಆದೇಶದನ್ವಯ (ನವೆಂಬರ್ 2009), ಮಂಡಳಿಯು ಉದ್ಯಾನಕ್ಕೆ ಮೀಸಲಾಗಿಟ್ಟಿದ್ದ ಮೂರು ಎಕರೆ 2.85 ಎಕರೆ ಭೂಮಿಯನ್ನು ಪ್ರತಿ ಕಂಪನಿಗೂ ಎಕರೆಗೆ ರೂ.2.20 ಕೋಟಿಗಳಂತೆ ಹಂಚಿಕೆ (ಮಾರ್ಚ್ 2010) ಮಾಡಿತು. ಈ ಕ್ರಮವು ಕರ್ನಾಟಕ ಪಟ್ಟಣ ಮತ್ತು ಗ್ರಾಮೀಣ ಯೋಜನೆ ಅಧಿಸೂಚನೆ, 1961ಯ ಉಲ್ಲಂಘನೆಯಾಗಿದ್ದು ಇದರಂತೆ ಬಡಾವಣೆಗಳನ್ನು ಅಭಿವೃದ್ಧಿ ಪಡಿಸಿ ಮಂಜೂರು ಮಾಡುವಾಗ ವಿಧಿಸಿದ ವಿಭಾಗೀಯ ನಿಯಮಗಳನ್ನು ಕಡ್ಡಾಯವಾದ ಪಾಲನೆ ಯೋಜನಾ ಪ್ರಾಧಿಕಾರಿಗಳು ನೋಡಿಕೊಳ್ಳಬೇಕು. ಪ್ರಸ್ತಾಪಿಸಿದ ವಿಭಾಗೀಯ ನಿಯಮಗಳ ಪ್ರಕಾರ ಯಾವುದೇ ವಸತಿ/ವಸತಿಯೇತರ/ಕೈಗಾರಿಕಾ ಪ್ರದೇಶದ ಬಡಾವಣೆಯ ಶೇಕಡಾ 10ರ ಭೂ ವಿಸ್ತೀರ್ಣವನ್ನು ತೆರೆದ ಪ್ರದೇಶ/ಉದ್ಯಾನಗಳು ಮತ್ತು ನಾಗರೀಕ ಸೌಲಭ್ಯಗಳಿಗೆ ಮೀಸಲಿಡಬೇಕಿದ್ದು ಈ ಮೀಸಲಿಟ್ಟ ಭೂಮಿಯನ್ನು ಬೇರಾವ ಉದ್ದೇಶಗಳಿಗೂ ಬಳಕೆ ಮಾಡಬಾರದು ಎಂದಿದೆ. ಇಪಿಐಪಿ 1ನೇ ಮತ್ತು 2ನೇ ಹಂತಕ್ಕಾಗಿ ಒಟ್ಟು 554 ಎಕರೆ 20 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದ್ದು ಈ ವಿಸ್ತೀರ್ಣದ ಕೇವಲ 22 ಎಕರೆ 47 ಗುಂಟೆ (ಶೇಕಡಾ 4) ವಿಸ್ತೀರ್ಣವನ್ನು ಉದ್ಯಾನವನಕ್ಕೆ ಮೀಸಲಿರಿಸಲಾಗಿರುವುದು ಕಂಡು ಬಂದಿದೆ. ಆದರೂ ಉದ್ಯಾನಕ್ಕೆ ಮೀಸಲಾದ ಅಲ್ಪ ಭೂಮಿಯನ್ನು 2000 ಮತ್ತು 2009ರ ನಡುವೆ ಮಂಡಳಿಯು ನೀರಿನ ತೊಟ್ಟಿಯನ್ನು ಕಟ್ಟಲು 1.82 ಎಕರೆ ಪ್ರದೇಶವನ್ನು ಹೊರತುಪಡಿಸಿ ಉಳಿದ ಭೂಮಿಯನ್ನು ಹಂಚಿಕೆ ಮಾಡಿದೆ. ಜುಲೈ 2011ರಲ್ಲಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಉತ್ತರ ನೀಡುತ್ತ ಉದ್ಯಾನಕ್ಕಾಗಿ ಮೀಸಲಿಟ್ಟ 22.47 ಎಕರೆ ಜಮೀನನ್ನು ಶೇಕಡಾ 50ರಷ್ಟು ಕಡಿಮೆ ಮಾಡಿರುವ ನಿರ್ಧಾರವನ್ನು ಹಿಂದೆ ಅಧಿಕಾರ ವಹಿಸಿಕೊಂಡಿದ್ದ ಅಧಿಕಾರಿಗಳು 1998ರ ಅವಧಿಯಲ್ಲಿ ಇಪಿಐಪಿ ಪ್ರದೇಶದಲ್ಲಿ ಕೈಗಾರಿಕಾ ನಿವೇಶನಗಳಿಗೆ ಇದ್ದ ಬೇಡಿಕೆಯನ್ನು ಪೂರೈಸುವ ಉದ್ದೇಶದಿಂದ ಕೈಗೊಂಡಿದ್ದಾರೆ ಎಂದು ತಿಳಿಸಿದ್ದಾರೆ. ಎಸ್‌ಎಲ್‌ಎಸ್‌ಡಬ್ಲುಸಿಸಿ ಮತ್ತು ಮಂಡಳಿಯ ಉಪಸಮಿತಿಯು ಮಂಜೂರು ಮಾಡಿದ ಯೋಜನೆಗಳಿಗೆ ಜಮೀನು ಹಂಚಿಕೆ ಮಾಡುವುದಕ್ಕೋಸ್ಕರ ಉದ್ಯಾನ ಪ್ರದೇಶದ ಉಳಿದ ವಿಸ್ತೀರ್ಣವು 1.82 ಗುಂಟೆಗೆ ಇಳಿಸಲಾಯಿತು. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಪ್ರಕಾರ ಈ ಎಲ್ಲ ನಿರ್ಧಾರಗಳನ್ನು ಮಂಡಳಿಯ ಹಿತಾಸಕ್ತಿಯ ದೃಷ್ಟಿಯಲ್ಲಿ ಮತ್ತು ಹೆಚ್ಚುವರಿ ಆದಾಯವನ್ನು ಉತ್ಪತ್ತಿ ಮಾಡುವ ಉದ್ದೇಶದಿಂದ ತೆಗೆದುಕೊಳ್ಳಲಾಯಿತು. ಆದರೆ ಕರ್ನಾಟಕ ಪಟ್ಟಣ ಮತ್ತು ಗ್ರಾಮೀಣ ಯೋಜನೆಯ ಅಧಿನಿಯಮ 1961ರಲ್ಲಿ ಉದ್ದೇಶಿಸಿದಂತೆ ಬೆಂಗಳೂರು ನಗರದ ಯೋಜಿತ ಅಭಿವೃದ್ಧಿ ಮತ್ತು ಉತ್ತಮ ಜೀವನ ಶೈಲಿಯನ್ನು ಖಾತ್ರಿ ಮಾಡಿಕೊಳ್ಳುವ ಸದುದ್ದೇಶಕ್ಕೆ ದ್ರೋಹ ಬಗೆದಂತಾಗಿರುವುದನ್ನು ಉತ್ತರವು ತೋರಿದೆ.

ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆ ಮಾಡಲು ಭೂಮಿ ಇರಲಿಲ್ಲವೆಂಬ ಕಾರಣದಿಂದ ಒಬ್ಬ ಉದ್ಯಮಿಗೆ ಹಂಚಿಕೆಯಾಗಿದ್ದ 2 ಎಕರೆ ಜಮೀನಿನ ಹಂಚಿಕೆ ಆದೇಶವನ್ನು ಮಂಡಳಿಯು ಫೆಬ್ರವರಿ 2006ರಲ್ಲಿ ರದ್ದು ಮಾಡಿ ರೂ.16 ಲಕ್ಷಗಳ ಠೇವಣಿಯನ್ನು ಮರು ಪಾವತಿಸಿತೆಂದು ಲೆಕ್ಕಪರಿಶೋಧನೆಯು ಗಮನಿಸಿತು. ಆ ಕಂಪನಿಯವರು ಉಚ್ಚ ನ್ಯಾಯಲಯದಲ್ಲಿ ಪ್ರಕರಣ ದಾಖಲು ಮಾಡಿದ್ದು ನಂತರ ಫೆಬ್ರವರಿ 2009ರಲ್ಲಿ ಜಂಟಿ ಜ್ಞಾಪನ ಪತ್ರದ ಮೂಲಕ ಪರಸ್ಪರ ರಾಜೀ ದಾಖಲಿಸಿ ಪ್ರಕರಣ ಕೈ ಬಿಡಲಾಯಿತು. ಜಂಟಿ ಜ್ಞಾಪನ ಪತ್ರದಂತೆ ಇಪಿಐಪಿ ಕೈಗಾರಿಕಾ ಪ್ರದೇಶದಲ್ಲಿ ನಾಗರೀಕ ಸೌಲಭ್ಯಗಳಿಗೆ ಮೀಸಲಾದ ಜಾಗವನ್ನು ಬೇರೆಯ ಉದ್ದೇಶಗಳಿಗೆ ಹಂಚಿಕೆ ಮಾಡಬಾರದು ಎನ್ನುವ ಸರ್ಕಾರೀ ಸೂಚನೆಯಾಗಿತ್ತು. ಮಂಡಳಿಯು ಪರ್ಯಾಯ ಕ್ರಮವಾಗಿ ದೇವನಹಳ್ಳಿಯ ಹಾರ್ಡ್ ವೇರ್ ತಂತ್ರಜ್ಞಾನ ಪಾರ್ಕ್ ವ್ಯಾಪ್ತಿಯಲ್ಲಿ 2 ಎಕರೆ ಜಮೀನನ್ನು ಉದ್ಯಮಿಗೆ ಹಂಚಿಕೆ ಮಾಡಬೇಕಾಯಿತು.

ಈ ಎರಡೂ ಕಂಪನಿಗಳಿಗೆ ತಲಾ 3 ಎಕರೆ ಮತ್ತು 2.85 ಎಕರೆ ಜಮೀನನ್ನು ಹಂಚಿಕೆ ಮಾಡಬೇಕು ಎಂದು ನಂತರದಲ್ಲಿ ಹೊರಡಿಸಿದ ಸರ್ಕಾರೀ ಸೂಚನೆಗಳು ವಿವೇಚನಾ ರಹಿತ ಹಾಗೂ ನ್ಯಾಯಬಾಹಿರವಾಗಿವೆ. ಮುಂದುವರೆದು ಗಮನಿಸಿದಂತೆ ಉದ್ದೇಶಿತ ಇಪಿಐಪಿ ಕೈಗಾರಿಕಾ ಪ್ರದೇಶವು ಒಂದು ಕೇಂದ್ರ ಸರ್ಕಾರೀ ಪ್ರಾಯೋಜಿತ ಯೋಜನೆಯಾಗಿದ್ದು ಕೇವಲ ರಫ್ತು ಉದ್ದೇಶಿಸಿತ ಕೈಗಾರಿಕಾ ಘಟಕಗಳು ಮಾತ್ರ ಭೂಮಿಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೆ, ಯಾವುದೇ ರಫ್ತು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳದೆ ವ್ಯಾಪಾರೀ ಮಳಿಗೆ, ವಿವಿದ್ದೋದ್ದೇಶ ಕಟ್ಟಡ ಇತ್ಯಾದಿಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿದ್ದರೂ ಅವರಿಗೆ ಭೂಮಿಯನ್ನು ಹಂಚಿಕೆ ಮಾಡಿರುವುದು ಗಮನಕ್ಕೆ ಬಂದಿದೆ. ಇದಕ್ಕೆ ನೀಡಿದ ಉತ್ತರದಲ್ಲಿ (ಡಿಸೆಂಬರ್ 2010) ಸಮಯಕ್ಕೆ ಸರಿಯಾಗಿ ನಿಗದಿಯಾದ ಹಣವನ್ನು ಪಾವತಿಸಲಿಲ್ಲವೆಂಬ ಕಾರಣಕ್ಕಾಗಿ ಈ ಎರಡು ಕಂಪನಿಗಳಿಗೆ ನೀಡಿದ ಭೂ ಹಂಚಿಕೆಯನ್ನು ರದ್ದುಪಡಿಸಲಾಗಿದೆ ಎಂದು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಸೆಪ್ಟಂಬರ್ 2010

ತಿಳಿಸಿದರು. ಸರ್ಕಾರೀ ಸೂಚನೆಗಳ ಪಾಲನೆಗೆ ಮಂಡಳಿಯು ಬದ್ಧವಾಗಿರಬೇಕು ಎಂದು ಹೇಳಲಾಗಿದೆ. ಈ ರದ್ದತಿ ಸೆಪ್ಟಂಬರ್ 2010ರಲ್ಲಿ ಹಣ ಪಾವತಿಯಲ್ಲಿ ಉಂಟಾದ ತಪ್ಪಿಗಾಗಿ ಮಾಡಿರುವ ಕ್ರಮವಾಗಿದ್ದು ಸರ್ಕಾರದಿಂದ ಹೊರಡಿಸಲಾದ ದೋಷಪೂರಿತ ಸೂಚನೆಗಳನ್ನು ಬದಲಾಯಿಸುವ ಉದ್ದೇಶವಿರಲಿಲ್ಲವಾದ್ದರಿಂದ ಉತ್ತರವು ಸಮರ್ಥನೀಯವಾಗಿಲ್ಲ. ಆಡಳಿತ ವ್ಯವಸ್ಥೆಯು ತಪ್ಪು ನಿರ್ಧಾರಗಳನ್ನು ಸ್ಪಷ್ಟವಾಗಿ ತೆಗೆದುಕೊಳ್ಳುವುದನ್ನು ತಪ್ಪಿಸಲಾಗಲಿಲ್ಲ.

## 6.8 ಬಾಕಿ ಹಣವನ್ನು ವಸೂಲು ಮಾಡದೆ ಹಂಚಿಕೆ ಮಾಡಿದ ಭೂಮಿಯ ಒಂದು ಭಾಗದ ಸ್ವಾಧೀನವನ್ನು ಮಂಡಳಿಯು ಹಸ್ತಾಂತರಿಸಿತು

ವೈಮಾನಿಕ ಬಿಡಿಭಾಗಗಳನ್ನು ತಯಾರಿಸಲು ಉದ್ದೇಶಿಸಿ ಒಂದು ಕಂಪನಿಯು ಸಲ್ಲಿಸಿದ ಪ್ರಸ್ತಾವನೆಯನ್ನು (ಎಸ್‌ಎಚ್‌ಎಲ್‌ಎಸ್‌ಸಿಸಿ) ಸಮ್ಮತಿಸಿದ್ದು (ಜನವರಿ 2010) ವೈಮಾನಿಕ ಯಾನ ಘಟಕಗಳ ಕೈಗಾರಿಕಾ ಪ್ರದೇಶದಲ್ಲಿರುವ 35 ಎಕರೆ ಭೂಮಿಯನ್ನು ಹಂಚಿಕೆ ಮಾಡಬೇಕೆಂದು ಮಂಡಳಿಗೆ ಸೂಚಿಸಿದರು. ಅದರಂತೆ ಮಂಡಳಿಯು (ಸೆಪ್ಟಂಬರ್ 2010) 35 ಎಕರೆ ಜಮೀನಿನ ಮೂಲೆ ನಿವೇಶನ ಕಂಪನಿಗೆ ಹಂಚಿಕೆ ಮಾಡಿತು. ಭೂಮಿಯ ಹಂಚಿಕೆಯ ಒಪ್ಪಂದದ ನಿಬಂಧನೆ ಮತ್ತು ಷರತ್ತುಗಳನ್ವಯ ಹಂಚಿಕೆದಾರರು ನಿಗದಿಗೊಂಡ ಭೂಮಿಯ ತಾತ್ಕಲಿಕ ಬೆಲೆಯನ್ನು ಪಾವತಿ ಮಾಡಿದ ನಂತರವೇ ಭೂಮಿಯನ್ನು ಅವರ ವಶಕ್ಕೆ ನೀಡಬೇಕು. ಹೀಗಿದ್ದಾಗ್ಯೂ, ಕಂಪನಿಯು ಪಾವತಿ ಮಾಡಬೇಕಾಗಿದ್ದ ರೂ.63.90 ಕೋಟಿಗಳ ಪೈಕಿ ಕೇವಲ ರೂ.18.94 ಕೋಟಿಗಳು ಪಾವತಿ ಮಾಡಿದ್ದು ಮಂಡಳಿಯು ಕಂಪನಿಯ ವಶಕ್ಕೆ 5 ಎಕರೆಗಳ ಭೂಮಿಯನ್ನು ನೀಡಿದ್ದು (ಫೆಬ್ರವರಿ 2011) ಕಂಡುಬಂದಿದೆ. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಜುಲೈ 2011ರಲ್ಲಿ ನೀಡಿದ ಉತ್ತರದ ಪ್ರಕಾರ ಕಂಪನಿಯ ಶಿಲಾನ್ಯಾಸ ಕಾರ್ಯಕ್ರಮಕ್ಕೆ ಅನುವು ಮಾಡಿಕೊಡಲು 5 ಎಕರೆಗಳನ್ನು ಜಮೀನನ್ನು ಅದರ ಮೌಲ್ಯವನ್ನು ಪಾವತಿಸಿದ ನಂತರ ಸ್ವಾಧೀನಕ್ಕೆ ನೀಡಲಾಗಿದೆ ಎಂದು ಹೇಳಿದ್ದಾರೆ. ದೊಡ್ಡ ವಿಸ್ತೀರ್ಣದ ಭೂಮಿಯು ಹಂಚಿಕೆಯಾದ ಸಂದರ್ಭದಲ್ಲಿ ಸಣ್ಣ ಪ್ರಮಾಣದ ಭೂ ಪ್ರದೇಶವನ್ನು ಸ್ವಾಧೀನಕ್ಕೆ ನೀಡುವುದರಲ್ಲಿ ಯಾವುದೇ ಅಡ್ಡಿ ಇರುವುದಿಲ್ಲ ಎಂದೂ ಸಹ ತಿಳಿಸಿದ್ದಾರೆ. ಕೆಲವೇ ಪ್ರಕರಣಗಳಲ್ಲಿ ರಿಯಾಯಿತಿ ತೋರಿಸುವುದು ಹಂಚಿಕೆ ಕ್ರಮದ ವಿಧಿ ವಿಧಾನಗಳ ಉಲ್ಲಂಘನೆಯಾಗುವುದಲ್ಲದೆ, ಉಲ್ಲಂಘನೆಯಾಗಲು ಅನುಮತಿ ನೀಡಿರುವುದ್ದರಿಂದ ಉತ್ತರವು ಸ್ವೀಕಾರವಲ್ಲ. ಒಪ್ಪಂದದ ನಿಬಂಧನೆಯನ್ನು ಉಲ್ಲಂಘಿಸಿ ಅನ್ಯ ಮಾರ್ಗವನ್ನು ಬಳಸಿದಲ್ಲಿ ಅದು ಹಂಚಿಕೆದಾರನಿಗೆ ಅನಧಿಕೃತ ಒಲವು ತೋರುವಲ್ಲಿ ಪರಿಣಮಿಸುವುದು.

## 6.9 ಮೂಲೆ ನಿವೇಶನಕ್ಕೆ ವಿಧಿಸಬೇಕಾದ ಹೆಚ್ಚುವರಿ ಬೆಲೆಯನ್ನು ಪೂರ್ವಾನ್ವಯವಾಗಿ ಕಡಿತಗೊಳಿಸಿ ಮಂಡಳಿಯು ಕಂಪನಿಯೊಂದಕ್ಕೆ ಅನಗತ್ಯ ಒಲವು ತೋರಿತು

ಮಂಡಳಿಯು ಯಾವುದೇ ಅಳತೆಯ ಮೂಲೆ ನಿವೇಶನವನ್ನು ಹಂಚಿಕೆ ಮಾಡಿದ್ದರೂ, ಕೇವಲ 5 ಎಕರೆ ಭೂಮಿಗೆ ಮೂಲೆ ನಿವೇಶನದ ದರವನ್ನು ವಸೂಲಿ ಮಾಡಬೇಕು ಎಂದು ನಿರ್ಣಯಿಸಿತು (ನವಂಬರ್ 2010). ಆದರೆ, ಒಂದು ಕಂಪನಿಗೆ 35 ಎಕರೆಗಳ ಮೂಲೆ ನಿವೇಶನ ಹಂಚಿಕೆ ಮಾಡಿದ (ಸೆಪ್ಟಂಬರ್ 2010) ಪ್ರಕರಣದಲ್ಲಿ 5 ಎಕರೆ ವಿಸ್ತೀರ್ಣಕ್ಕೆ ಮಾತ್ರ ಹೆಚ್ಚುವರಿ ಶೇಕಡಾ 10 ದರವನ್ನು ವಿಧಿಸುವ ಮಂಡಳಿಯ ಈ ನಿರ್ಧಾರವು ಸೆಪ್ಟಂಬರ್ 2010ರಲ್ಲೇ ತೆಗೆದುಕೊಂಡಿದ್ದರಿಂದ ನವೆಂಬರ್ 2010ರಲ್ಲಿ ನೀಡಿದ ರಿಯಾಯಿತಿ ಅನ್ವಯಿಸುವುದಿಲ್ಲ. ಮುಂದೆ, ಒಂದು ಸರ್ಕಾರೀ ಕಂಪನಿ (ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್) ಅಕ್ಟೋಬರ್ 2010ರಲ್ಲಿ 25 ಎಕರೆಗಳಷ್ಟು ಹಂಚಿಕೆಯನ್ನು ಮೇಲೆ ತಿಳಿಸಿರುವ ಕಂಪನಿಗೆ ಮಂಜೂರಾದ ನಂತರ ಹಂಚಿಕೆ ಮಾಡಿದ ಪ್ರಕರಣದಲ್ಲಿ 25 ಎಕರೆ ಜಮೀನಿಗೂ ಹೆಚ್ಚುವರಿ ಶೇಕಡಾ 10ರಷ್ಟು ವಿಧಿಸಲಾಗಿದೆ. ಮಂಡಳಿಯು ಕಂಪನಿಗೆ ರೂ.5.40 ಕೋಟಿಗಳ ಅನಗತ್ಯ ಲಾಭವನ್ನು ದೊರಕಿಸಿಕೊಟ್ಟಿತು. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ತಿಳಿಸಿದ್ದೇನೆಂದರೆ, (ಜುಲೈ 2011) ಕಂಪನಿಯು ಅಕ್ಟೋಬರ್ 2010ರಲ್ಲಿ ನೀಡಿದ ಮನವಿಯನ್ನು ಸಮ್ಮತಿಸಿ ಮಂಡಳಿಯು ನಿರ್ಧಾರದ ಲಾಭವನ್ನು ಕಂಪನಿಗೆ ನೀಡಲಾಯಿತೆಂದರು. ಸರ್ಕಾರಿ ಕಂಪನಿಯ ಮನವಿಯು 7ನೇ ಅಕ್ಟೋಬರ್ 2010ರಂದು ಸ್ವೀಕೃತವಾಗಿದ್ದು, ಸರ್ಕಾರಿ ಕಂಪನಿಗೆ 1ನೇ ಸೆಪ್ಟಂಬರ್ 2010 ರಲ್ಲಿ ನಿವೇಶನ ಮಂಜೂರಾತಿಯಾಗಿರುವುದರಿಂದ ಹಂಚಿಕೆಯ ಆದೇಶದಲ್ಲಿರುವ ವಿಧಿ ಮತ್ತು ಷರತ್ತುಗಳನ್ನು ಕಂಪನಿಯ ಅನುಕೂಲಕ್ಕಾಗಿ ಮುಂದಿನ ದಿನಾಂಕದಲ್ಲಿ ಬದಲಾಯಿಸಲಾಗುವುದಿಲ್ಲ. ಈ ಕಾರಣಕ್ಕಾಗಿ

ಉತ್ತರವು ಸಮರ್ಥನೀಯವಲ್ಲ, ವಾಸ್ತವ್ಯದಲ್ಲಿ ಸರ್ಕಾರಿ ಕಂಪನಿಗೆ ಹಂಚಿಕೆಯಾದ 25 ಎಕರೆ ಜಮೀನಿಗೆ ರಿಯಾಯಿತಿ (5ನೇ ಅಕ್ಟೋಬರ್ 2010) ಮಂಡಳಿಯು ರಿಯಾಯಿತಿಗಳನ್ನು ಆಯ್ಕೆ ಆಧಾರದ ಮೇಲೆ ನೀಡಲ್ಪಟ್ಟವು ಎಂಬುದನ್ನು ಗಮನಿಸಲಾಯಿತು.

## 6.10 ರಿಯಾಯಿತಿ ದರದಲ್ಲಿ ಮಾಡಿದ ಭೂ ಹಂಚಿಕೆಯಿಂದ ಉಂಟಾದ ನಷ್ಟವನ್ನು ಮಂಡಳಿಯು ವಸೂಲು ಮಾಡಲಿಲ್ಲ

ಸರ್ಕಾರವು ಒಂದು ಕಂಪನಿಗೆ ಶಿವಮೊಗ್ಗದ ವಿಶೇಷ ವಿತ್ತ ವಲಯದಲ್ಲಿ (ಎಸಿಝಡ್) 250 ಎಕರೆಗಳಷ್ಟು ಭೂಮಿಯನ್ನು ರಿಯಾಯಿತಿ ದರವಾದ ಎಕರೆ ಒಂದಕ್ಕೆ ರೂ.10 ಲಕ್ಷಗಳಂತೆ ಹಂಚಿಕೆ ಮಾಡುವ ಮಂಜೂರಾತಿ (ಡಿಸೆಂಬರ್ 2009) ನೀಡಿತ್ತು. ಮಂಡಳಿಗೆ ಆಗುವ ನಷ್ಟವನ್ನು ಸರ್ಕಾರವು ಎಕರೆ ಒಂದಕ್ಕೆ ರೂ.3 ಲಕ್ಷಗಳಿಗೆ ಮೀರದಂತೆ ಸಹಾಯಧನವನ್ನು ನೀಡುವ ಪ್ರಸ್ತಾಪವಿತ್ತು. ಫೆಬ್ರವರಿ 2010 ರಲ್ಲಿ ಮಂಡಳಿಯು ಕಂಪನಿಯೊಂದಕ್ಕೆ 221.62 ಎಕರೆ ಭೂಮಿಯನ್ನು ಹಂಚಿಕೆ ಮಾಡಿದ್ದರೂ, ಎಕರೆ ಒಂದಕ್ಕೆ ಮಂಡಳಿಯ ವತಿಯಿಂದ ರೂ.13.04 ಲಕ್ಷಗಳು ವೆಚ್ಚವಾಗಿದ್ದು ಹಂಚಿಕೆಯನ್ನು ಎಕರೆಗೆ ರೂ.10 ಲಕ್ಷಗಳಂತೆ ಮಾಡಿದ್ದು ಇದರಿಂದ ಉಂಟಾದ ರೂ.6.64 ಕೋಟಿಗಳ ನಷ್ಟವನ್ನು ಭರಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಮಾಡುವಲ್ಲಿ ವಿಫಲವಾಯಿತು. ಅಲ್ಲದೆ ನೀರು ಸರಬರಾಜು ಕೊಳವೆಗಳಿಗೆ ವೆಚ್ಚವಾದ ರೂ.1.67 ಕೋಟಿಗಳು ದರವನ್ನು ಹಾಗೂ ರೂ.25.30 ಲಕ್ಷಗಳ ಕೊಳಚೆ ಪ್ರದೇಶ ಅಭಿವೃದ್ಧಿ ಶುಲ್ಕವನ್ನು ಕಂಪನಿಯಿಂದ ಪಡೆಯಲಿಲ್ಲ.

# ಅಧ್ಯಾಯ 7
# ನಿರ್ಣಯ ಮತ್ತು ಶಿಫಾರಸುಗಳು

## 7.1 ನಿರ್ಣಯ

ಮಂಡಳಿಯ ಕಾರ್ಯವೈಖರಿಯು, ವಿಶೇಷವಾಗಿ ಕೈಗಾರಿಕಾ ಪ್ರದೇಶಗಳಿಗೆ ಸ್ಥಳಗಳ ಆಯ್ಕೆಯ ವಿಷಯದಲ್ಲಿ, ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವಲ್ಲಿ ಪರಿಣಾಮಕಾರಿಯಾಗಿರಲಿಲ್ಲ. ಕೈಗಾರಿಕೇತರ ಬಳಕೆಗಾಗಿ ಮೀಸಲಿಟ್ಟ ಭೂಮಿಯನ್ನು ಕೈಗಾರಿಕಾ ಪ್ರದೇಶಗಳಿಗೆ ಅಧಿಸೂಚನೆ ಮಾಡಲಾಗಿಲ್ಲ ಎಂಬುದನ್ನು ಖಚಿತಪಡಿಸಕೊಳ್ಳಲು ಮಂಡಳಿಯು ಯೋಜನಾ ಪ್ರಾಧಿಕಾರಗಳೊಂದಿಗೆ ಪೂರ್ವಭಾವಿ ಸಮಾಲೋಚನೆ ನಡೆಸಲಿಲ್ಲ. ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಸರ್ಕಾರವು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿರುವುದು ನಿಯಮಗಳಲ್ಲಿ ಗಂಭೀರ ಸಡಿಲತೆಗಳನ್ನು ಮತ್ತು ನ್ಯಾಯಾಲಯಗಳು ನೀಡಿರುವ ಪ್ರಮುಖ ತೀರ್ಪುಗಳನ್ನು ಉಪೇಕ್ಷಿಸಿರುವುದನ್ನು ಪ್ರತಿಬಿಂಬಿಸುತ್ತವೆ. ಈ ವರದಿಯಲ್ಲಿ ಅಡಕವಾಗಿರುವ ಪರಿಹಾರಧನ ಪಾವತಿಗಳಲ್ಲಿನ ಗಂಭೀರ ಅಕ್ರಮಗಳು, ಯಾವುದೇ ತುಲನೆ ಮತ್ತು ತನಿಖೆಗಳ ಅನುಪಸ್ಥಿತಿಯಲ್ಲಿ ಸಂಬಂಧಪಟ್ಟ ಎಸ್‌ಎಲ್‌ಎಓಗಳು ತಮ್ಮ ಕಾರ್ಯವೈಖರಿಯಲ್ಲಿ ಅಧಿನಿಯಮ ಮತ್ತು ನಿಯಮಗಳನ್ನು ನಿರಂತರ ಬುಡಮೇಲು ಮಾಡುವುದನ್ನು ತೋರ್ಪಡಿಸುತ್ತದೆ.

## 7.2 ಶಿಫಾರಸುಗಳು

- ರಾಜ್ಯದಲ್ಲಿ ಕೈಗಾರಿಕೆಗಳ ಕ್ರಮಬದ್ಧ ಸ್ಥಾಪನೆ, ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಖಚಿತಪಡಿಸಲು ಪ್ರಾದೇಶಿಕ ಯೋಜನಾ ಪ್ರಾಧಿಕಾರಗಳೊಂದಿಗೆ ಪೂರ್ವಭಾವಿ ಸಮಾಲೋಚನೆಯ ನಂತರ ಮಂಡಳಿಯು ಕೈಗಾರಿಕಾ ಪ್ರದೇಶಗಳ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಿಕೊಳ್ಳುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳುವ ಅವಶ್ಯಕತೆಯಿದೆ.

- ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಮಂಡಳಿಯು ಸಾರ್ವಜನಿಕ ಹಿತಾಸಕ್ತಿಯನ್ನು ಕಡೆಗಣಿಸಿ ಖಾಸಗಿ ಹಿತಾಸಕ್ತಿಗಾಗಿ ಅಧಿಸೂಚನೆಯಿಂದ ಕೈಬಿಡಬಾರದು ಎಂಬುದನ್ನು ಸರ್ಕಾರವು ಖಚಿತಪಡಿಸಕೊಳ್ಳುವ ಅವಶ್ಯಕತೆಯಿದೆ.

- ಸರ್ಕಾರವು, ಮೌಲ್ಯ ಸಲಹಾ ಸಮಿತಿಯು ಪಾಲಿಸಬೇಕಾದಂತಹ ನಿಖರ ಮಾದರಿ ಸೂತ್ರಗಳನ್ನು ರೂಪಿಸುವುದರ ಮೂಲಕ ಪರಸ್ಪರ ಒಪ್ಪಂದದ ಆಧಾರದ ಮೇಲೆ ಪರಿಹಾರಧನ ನಿರ್ಧರಿಸುವಂತಹ ಅವಶ್ಯಕತೆಯಿದೆ. ಇದು ಪರಸ್ಪರ ಒಪ್ಪಂದದ ಸೋಗಿನಲ್ಲಿ ಮೌಲ್ಯ ಸಲಹಾ ಸಮಿತಿಯಿಂದ ಅಸಹಜ ಪ್ರಮಾಣದಲ್ಲಿ ಪರಿಹಾರಧನದ ನಿರ್ಧಾರಣೆಯಾಗುವುದನ್ನು ತಡೆಯಲು ಆವಶ್ಯಕವಾಗಿದೆ.

- ವರದಿಯಲ್ಲಿ ಪ್ರಮುಖವಾಗಿ ತೋರಿಸಿರುವ ಅಕ್ರಮಗಳು ಕೇವಲ ಉದಾಹರಣೆಗಳಾಗಿವೆ ಮತ್ತು ಕರ್ತವ್ಯ ಚ್ಯುತಿ ಹಾಗೂ ಹೊಣೆಗಾರಿಕೆಯ ತೀವ್ರ ಕೊರತೆಯ ಸುಸ್ಪಷ್ಟ ಉದಾಹರಣೆಗಳಾಗಿ ಗೋಚರಿಸುತ್ತವೆ ವಾದ್ದರಿಂದ ತನಿಖೆ ಮಾಡಬೇಕಾದ ಅಗತ್ಯವಿದೆ. 2006–11ರ ಅವಧಿಯಲ್ಲಿ ಸ್ವಾಧೀನಪಡಿಸಿಕೊಳ್ಳಲಾದ ಎಲ್ಲ ಸರ್ಕಾರಿ ಜಮೀನಿಗೆ ಎಸ್‌ಎಲ್‌ಎಓರವರು ಪಾವತಿಸಿರುವ ಪರಿಹಾರಧನದ ಪ್ರಕರಣಗಳನ್ನು, ನಡೆದಿರುವ ಅಕ್ರಮಗಳ ತೀವ್ರತೆಯನ್ನು ನಿರ್ಧರಿಸಲು ಪರಿಶೀಲಿಸಬೇಕಾದ ಅಗತ್ಯವಿದೆ.

- ಭೂಸ್ವಾಧೀನವು ಸರ್ಕಾರದ ಸೂಚನೆಗಳಿಗೆ ಅನುಗುಣವಾಗಿವೆ ಮತ್ತು ನಿಗದಿತ ಕಾರ್ಯವಿಧಾನಗಳ ಸೂಕ್ತ ಅನುಸರಣೆಯ ನಂತರ ಮಂಡಳಿಯು ವಶಪಡಿಸಿಕೊಂಡ ಭೂಮಿಗೆ ಪರಿಹಾರಧನದ ಪಾವತಿ ಮಾಡಲಾಗಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಒಂದು ಪರಿಣಾಮಕಾರಿ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ರೂಪಿಸುವ ಅವಶ್ಯಕತೆಯಿದೆ.

- ಮಂಡಳಿಯಿಂದ ಅಭಿವೃದ್ಧಿಯಾದ ಕೈಗಾರಿಕಾ ಪ್ರದೇಶಗಳಲ್ಲಿ ನಾಗರೀಕ ಸೌಲಭ್ಯದ ನಿವೇಶನದ ಹಂಚಿಕೆಯಲ್ಲಿ ಪಾರದರ್ಶಕತೆಯಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ಅದು ಸೂಕ್ತ ಮಾದರಿ ಸೂತ್ರಗಳನ್ನು ರಚಿಸುವ ಅವಶ್ಯಕತೆಯಿದೆ.

ಬೆಂಗಳೂರು (ಡಿ.ಜೆ. ಭದ್ರ)
ದಿನಾಂಕ ಪ್ರಧಾನ ಮಹಾಲೇಖಾಪಾಲರು
(ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ)

ಮೇಲುರುಜು ಮಾಡಲಾಗಿದೆ

ನವದೆಹಲಿ (ವಿನೋದ್ ರಾಯ್)
ದಿನಾಂಕ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು

# ಅನುಬಂಧ–1
## (ಉಲ್ಲೇಖ: ಕಂಡಿಕೆ 3.7. ಪುಟ 15)
## ಕೆಐಎಡಿಬಿ ಅಧಿನಿಯಮ, 1966ರ ಪರಿಚ್ಛೇದ 28(4)ರಡಿಯಲ್ಲಿ ಅಂತಿಮ ಅಧಿಸೂಚನೆ ಪ್ರಕಟನೆಯ ನಂತರ 2006–11ರ ಅವಧಿಯಲ್ಲಿ ಕೈಬಿಟ್ಟ ಭೂಮಿಯ ವಿವರಗಳು

| ಕೈಗಾರಿಕಾ ಪ್ರದೇಶದ/ಏಕ ಘಟಕ ಸಂಕೀರ್ಣ ಹೆಸರು | ಸ್ಥಳ | ಅಂತಿಮ ಅಧಿಸೂಚನೆಯ ದಿನಾಂಕ | ಅಧಿಸೂಚನೆಯಿಂದ ಕೈಬಿಟ್ಟ ದಿನಾಂಕ | ಅವಧಿ (ವರ್ಷ–ತಿಂಗಳು) | ಕೈಬಿಟ್ಟ ಭೂಮಿಯ ವಿಸ್ತಾರ (ಎಕರೆ–ಗುಂಟೆ) |
|---|---|---|---|---|---|
| ಏಕ ಘಟಕ ಸಂಕೀರ್ಣಗಳು | | | | | |
| ಮೈಕೋ ಲಿಮಿಟೆಡ್ | ಬೆಂಗಳೂರು ದಕ್ಷಿಣ | 21.11.86 | 26.11.05 | 19–00 | 7–03 |
| ಬಿಎಮ್‌ಟಿಸಿ | ಹೊಸಕೋಟೆ | 25.6.05 | 20.1.07 | 1–7 | 3–13 |
| ಬಿಎಮ್‌ಟಿಸಿ | ನೆಲಮಂಗಲ | 6.5.05 | 22.2.07 | 1–7 | 4–21 |
| ನಂದಿ ಎಂಜಿನಿಯರಿಂಗ್ | ಹುಬ್ಬಳ್ಳಿ | 28.9.05 | 11.9.08 | 3–0 | 4–27 |
| ಹೆಪಿಸಿಎಲ್ | ಮಂಗಳೂರು | 14.2.03 | 26.12.09 | 6–11 | 0–25 |
| ಲೇಕ್‌ವ್ಯೂ ಟೂರಿಸಮ್ | ಬೆಂಗಳೂರು ಉತ್ತರ | 11.5.04 | 3.2.10 | 5–9 | 4–04 |
| ಕೆಎಸ್‌ಆರ್‌ಟಿಸಿ | ವಿರಾಜಪೇಟೆ | 28.2.09 | 20.4.10 | 1–2 | 4–13 |
| ಉಪ–ಮೊತ್ತ | | | | | 28–26 |
| ಕೈಗಾರಿಕಾ ಪ್ರದೇಶಗಳು | | | | | |
| ಕೈಗಾರಿಕಾ ಪ್ರದೇಶ | ಬೆಂಗಳೂರು ಪೂರ್ವ | 10.12.01 | 21.6.06 | 4–6 | 15–14 |
| ಟೆಕ್ಸ್‌ಟೈಲ್ ಪಾರ್ಕ್ | ಮೈಸೂರು | 25.10.06 | 22.2.07 | 0–4 | 4–14 |
| ಕೈಗಾರಿಕಾ ಪ್ರದೇಶ | ಬೆಂಗಳೂರು ಗ್ರಾಮಾಂತರ | 24.2.05 | 18.5.07 | 2–3 | 5–00 |
| ಎಲೆಕ್ಟ್ರಾನಿಕ್ ಸಿಟಿ 4ನೇ ಹಂತ | ಬೆಂಗಳೂರು ಗ್ರಾಮಾಂತರ | 27.8.03 | 30.8.07 | 4–0 | 89–25 |
| ಕೈಗಾರಿಕಾ ಪ್ರದೇಶ | ಬೆಂಗಳೂರು ಪೂರ್ವ | 10.12.01 | 5.5.08 | 6–6 | 41–30 |
| ಕೈಗಾರಿಕಾ ಪ್ರದೇಶ | ಬೆಳಗಾಮ್ | 6.7.2000 | 18.10.08 | 8–3 | 100.00 |
| ಇಲವಾಲ | ಮೈಸೂರು | | 3.7.09 | | 133.02 |
| ಕಪನೂರ್ | ಗುಲ್ಬರ್ಗ | 12.11.07 | 18.11.09 | 2–0 | 8–30 |
| ಗಣಪತಿಹಳ್ಳಿ | ಬೆಂಗಳೂರು | 19.8.08 | 22.1.10 | 1–5 | 6–23 |
| ಕಿಟ್ಟಗಾನಹಳ್ಳಿ | ಬೆಂಗಳೂರು | 8.8.96 | 1.2.10 | 13–6 | 9–20 |
| ಕರಿಯಮ್ಮನ ಅಗ್ರಹಾರ | ಬೆಂಗಳೂರು | – | 8.3.10 | – | 0–31 |
| ಹಾರ್ಡ್‌ವೇರ್ ಪಾರ್ಕ್ | ಬೆಂಗಳೂರು | 9.4.08 | 23.2.10 | 1–10 | 20–00 |
| ಹಾರ್ಡ್‌ವೇರ್ ಪಾರ್ಕ್ | ಬೆಂಗಳೂರು | 9.4.08 | 28.4.10 | 2–0 | 2–00 |
| ನರಸಾಪುರ | ಕೋಲಾರ | 25.8.07 | 21.5.10 | 2–9 | 11–07 |
| ಡಾಬಸ್‌ಪೇಟೆ | ಬೆಂಗಳೂರು ಗ್ರಾಮಾಂತರ | – | 21.7.10 | – | 16–01 |
| ಕಡುಬೀಸನಹಳ್ಳಿ | ಬೆಂಗಳೂರು | – | 24.7.10 | – | 1–01 |
| ಕಡುಬೀಸನಹಳ್ಳಿ | ಬೆಂಗಳೂರು | – | 7.9.10 | – | 0–20 |
| ನಂದಿಕೂರ್ | ಉಡುಪಿ | – | 14.9.10 | – | 44–31 |
| ಐಟಿ ಕಾರಿಡಾರ್ | ಬೆಂಗಳೂರು ಪೂರ್ವ | 19.12.05 | 2.11.10 | 4–11 | 3–13 |
| ಅಪೆರಲ್ ಪಾರ್ಕ್ | ಬಳ್ಳಾರಿ | 23.12.05 | 10.12.10 | 5–0 | 15–27 |
| ಕರಿಯಮ್ಮನ ಅಗ್ರಹಾರ | ಬೆಂಗಳೂರು | 28.2.04 | 10.1.11 | 6–11 | 0–20 |
| ಡಾಬಸ್‌ಪೇಟೆ 4ನೇ ಹಂತ | ಬೆಂಗಳೂರು | 27.5.10 | 30.4.11 | 0–11 | 5–01 |
| ಉಪ–ಮೊತ್ತ | | | | | 534–30 |
| ಒಟ್ಟು ಮೊತ್ತ | | | | | 563–16 |

**ಅನುಬಂಧ-2**
**(ಉಲ್ಲೇಖ: ಕಂಡಿಕೆ 5.2. ಪುಟ 27)**
**ದಾಖಲೆಗಳ ತಪಶೀಲು ಪಟ್ಟಿ**

**(ಎ) ಧಾರವಾಡ ಎಸ್‌ಎಲ್‌ಎಓ ರವರು ನಿಗದಿಪಡಿಸಿದ ದಾಖಲೆಗಳ ತಪಶೀಲುಪಟ್ಟಿ**

1. ಭೂ ಸ್ವಾಧೀನವಾದ ದಿನಾಂಕದಿಂದ ಈವರೆಗಿನ ಪಹಣಿ ಪತ್ರಿಕೆಗಳು (ಹಿಂದಿನ 15 ವರ್ಷ)
2. ಮೂಲ ಕ್ರಯಪತ್ರ (ಖರೀದಿಸಿದ್ದರೆ)
3. ಮ್ಯುಟೇಶನ್ ಪ್ರತಿ
4. ಸಬ್‌ರಿಜಿಸ್ಟ್ರಾರ್‌ರವರಿಂದ ಪಡೆದ 14 ವರ್ಷಗಳ ಋಣಭಾರ ಪತ್ರ-ಋಣಭಾರ ರಾಹಿತ್ಯ ಪ್ರಮಾಣಪತ್ರ
5. ಭೂಮಿಯ ಪಿಟಿಸಿಎಲ್ ಅಧಿನಿಯಮದಡಿ ಬಂದರೆ ಸಹಾಯಕ ಆಯುಕ್ತರಿಂದ ಯಾವುದೇ ಬಾಕಿ ಇಲ್ಲದ ಬಗ್ಗೆ ಪ್ರಮಾಣಪತ್ರ
6. ಇನಾಮ್ ಭೂಮಿಯ ಮಂಜೂರಿಪತ್ರದ ಪ್ರತಿ ಮತ್ತು ಅದು ಇನಾಮ್ ಭೂಮಿಯಾಗಿದ್ದರೆ ಅನುದಾನಿತರು ಪಾವತಿ ಮಾಡಿದ ಮೊತ್ತದ ವಿವರಗಳು
7. ಭೂ ಸುಧಾರಣಾ ಅಧಿನಿಯಮದ 79ಎ ಮತ್ತು 79ಬಿ ಗಳಡಿ ಯಾವುದೇ ಬಾಕಿ ಇಲ್ಲದ ಪ್ರಕರಣಗಳ ಬಗ್ಗೆ ಪ್ರಮಾಣ ಪತ್ರ
8. ಭೂ ಸುಧಾರಣಾ ಅಧಿನಿಯಮದ 7 ಮತ್ತು 7ಎ ನಮೂನೆಗಳಲ್ಲಿ ಯಾವುದೇ ಬಾಕಿ ಇಲ್ಲದ ಬಗ್ಗೆ ಪ್ರಮಾಣ ಪತ್ರ
9. ಸರ್ಕಾರಿ ಗೋಮಾಳ ಜಮೀನು ಮಂಜೂರಾಗಿದ್ದಲ್ಲಿ ಸಾಗುವಳಿ ಚೀಟಿ ಮೂಲಪ್ರತಿ
10. ಗ್ರಾಮ ಲೆಕ್ಕಿಗರಿಂದ ಕುಟುಂಬ ವೃಕ್ಷದ ಪ್ರಮಾಣಪತ್ರ
11. ಗ್ರಾಮ ಲೆಕ್ಕಿಗರಿಂದ ಅಂದಿನವರೆಗೆ ತೆರಿಗೆ ಪಾವತಿಸಿರುವ ಬಗ್ಗೆ ಪ್ರಮಾಣಪತ್ರ
12. ರಾಷ್ಟ್ರೀಯ ಬ್ಯಾಂಕ್, ಸಹಕಾರಿ ಬ್ಯಾಂಕ್ ಅಥವಾ ಇತರೆ ಬ್ಯಾಂಕ್‌ಗಳಿಂದ ಯಾವುದೇ ಸಾಲವಿಲ್ಲ ಎನ್ನುವ ಪ್ರಮಾಣಪತ್ರ
13. ಸ್ವಾಧೀನಪಡಿಸಿಕೊಂಡ ಭೂಮಿಯ ಮೇಲೆ ಯಾವುದೇ ಪ್ರಕರಣಗಳು ಬಾಕಿಯಿಲ್ಲದಿರುವುದಕ್ಕೆ ಅಫಿಡವಿಟ್ ಅಂತಹ ಭೂಮಿಯ ಮೇಲೆ ಇತರೆ ಇಲಾಖೆಗಳಿಂದ ಪರಿಹಾರ ಪಡೆದಿರದ ಬಗ್ಗೆ ಪ್ರಮಾಣಪತ್ರ, ಈ ಹಿಂದೆ ಪರಿಹಾರವನ್ನು ಪಡೆದಿರದ ಬಗ್ಗೆ ಅಫಿಡವಿಟ್
14. ರೂ.100ರ ಛಾಪಾ ಕಾಗದದಲ್ಲಿ ಪ್ರತಿಬಂಧ ನಿಯಮ ಒಪ್ಪಂದವನ್ನೊಳಗೊಂಡ ಕರಾರು ಪತ್ರ
15. ರೂ.100ರ ಛಾಪಾ ಕಾಗದದಲ್ಲಿ ನಷ್ಟಪೂರ್ತಿ ಪ್ರತಿಬಂಧ ಪತ್ರ
16. ಇತ್ತೀಚಿನ ಮೂರು ಭಾವಚಿತ್ರಗಳು
17. ಎರಡು ರೆವಿನ್ಯೂ ಸ್ಟಾಂಪ್‌ಗಳು
18. ಚುನಾವಣಾ ಗುರುತು ಚೀಟಿ
19. ಮೂಲ ಉತ್ತರಾಧಿಕಾರ ಪ್ರಮಾಣಪತ್ರ

**(ಬಿ) ಬೆಂಗಳೂರು ಎಸ್‌ಎಲ್‌ಎಓ ರವರು ನಿಗದಿಪಡಿಸಿದ ದಾಖಲೆಗಳ ತಪಶೀಲುಪಟ್ಟಿ**

1. 2005-06ರಿಂದ ಗಣಕೀಕೃತ ಆರ್‌ಟಿಸಿಯ ಪ್ರಮಾಣಿತ ಪ್ರತಿ
2. ಹಕ್ಕು ಬದಲಾವಣೆ ಆದೇಶದ ದೃಢೀಕೃತ ಪ್ರತಿ
3. ಜಮೀನಿನ ಮೇಲೆ ಹಕ್ಕು ಪ್ರಾಪ್ತವಾದ ಬಗೆಯನ್ನು ದೃಢಕರಿಸುವ ಮೂಲ ಕ್ರಯ ಪತ್ರ/ವಿಭಾಗ ಪತ್ರ/ಸಾಗುವಳಿ ಚೀಟಿ. ಇನಾಂ ವಿಶೇಷ ಜಿಲ್ಲಾಧಿಕಾರಿಗಳ ಆದೇಶ/ದಾನಪತ್ರ/ಭೂನ್ಯಾಯ ಮಂಡಳಿ ಆದೇಶ/ಇತ್ಯಾದಿ ಮೂಲ ದಾಖಲೆ ಅಥವಾ ದೃಢೀಕೃತ ದಾಖಲೆಗಳು
4. ದೃಢೀಕೃತ ವಂಶವೃಕ್ಷ
5. ಭೂ ಸುಧಾರಣಾ ಅಧಿನಿಯಮ ಪರಿಚ್ಛೇದ 48ಎ ಮತ್ತು 77ಎ ಅಡಿ ಭೂಗೇಣಿಯ ಯಾವುದೇ ನೋಂದಾವಣೆ ಇರುವುದಿಲ್ಲ ಎನ್ನುವ ಬಗ್ಗೆ ತಹಶೀಲ್ದಾರ್‌ರವರಿಂದ ಪ್ರಮಾಣಪತ್ರ
6. ಯಾವುದೇ ಸರ್ಕಾರಿ ಬಾಕಿಯಿರುವುದಿಲ್ಲ ಎನ್ನುವ ಬಗ್ಗೆ ಗ್ರಾಮ ಲೆಕ್ಕಿಗರಿಂದ ಪ್ರಮಾಣಪತ್ರ ಮತ್ತು ಭೂ ಮಂಜೂರಾತಿ ಪ್ರಮಾಣಪತ್ರ
7. ಪ್ರಾಥಮಿದ ಕೃಷಿ ಸಹಕಾರಿ ಮತ್ತು ಗ್ರಾಮೀಣ ಬ್ಯಾಂಕ್/ಕೃಷಿ ಸಹಕಾರ ಬ್ಯಾಂಕ್ ಮತ್ತು ಇತರೆ ಸ್ಥಳೀಯ ಬ್ಯಾಂಕ್‌ಗಳಿಂದ ಕೃಷಿ ಅಭಿವೃದ್ಧಿ/ಇತರೆ ಉದ್ದೇಶಗಳಿಗೆ ಸಾಲ ಪಡೆದಲ್ಲಿ ಬ್ಯಾಂಕ್‌ನಿಂದ ಬಾಕಿ ರಹಿತ ದೃಢೀಕರಣ ಪತ್ರ

8. ಉಪನೋಂದಾಣಾಧಿಕಾರಿಯರಿಂದ ನಮೂನೆ 15 ಮತ್ತು 16ರಲ್ಲಿ 13 ವರ್ಷಗಳಿಗೆ ಋಣಭಾರ ರಾಹಿತ್ಯ ದೃಢೀಕರಣ ಪತ್ರ
9. ಭೂಸುಧಾರಣಾ ಅಧಿನಿಯಮದ 79ಎ ಮತ್ತು 79ಬಿ ಪರಿಚ್ಛೇದಗಳಡಿ ಉಲ್ಲಂಘನೆ ಮಾಡದಿರುವುದಕ್ಕೆ ಪ್ರಮಾಣಪತ್ರ (1.3.1974ರ ನಂತರ ಭೂಮಿಯನ್ನು ಖರೀದಿಸದ್ದರೆ ತಹಶೀಲ್ದಾರ್ ಅಥವಾ ಸಹಾಯಕ ಜಿಲ್ಲಾಧಿಕಾರಿಯವರಿಂದ ಪ್ರಮಾಣಪತ್ರ)
10. ಒಂದು ವೇಳೆ ಭೂಮಿಯು ಅನುದಾನಗಳಿಂದ ಮಂಜೂರಾಗಿದ್ದರೆ ಪಿಟಿಸಿಎಲ್ ಅಧಿನಿಯಮದಡಿ ನೋಂದಾಯಿತವಾಗಿರುವ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಸಹಾಯಕ ಜಿಲ್ಲಾಧಿಕಾರಿಯವರಿಂದ ಪ್ರಮಾಣಪತ್ರ
11. ಜಮೀನು ಭೂ ಪರಿವರ್ತನೆಯಾಗಿದ್ದಲ್ಲಿ ಭೂಪರಿವರ್ತನೆ ಆದೇಶದ ದೃಢೀಕರಣ ಪತ್ರ
12. ಬ್ಯಾಂಕ್‌ನ ಮೂಲಕ ಪಡೆದ ಪರಿಹಾರವನ್ನು ಜಮಾ ಮಾಡಲು 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳ ಜೊತೆಗೆ ಉಳಿತಾಯ ಖಾತೆಯ ಪ್ರತಿ
13. ರೂ.100ರ ಛಾಪಾ ಕಾಗದದಲ್ಲಿ ಕರಾರು ಪತ್ರ ಮತ್ತು ರೂ.100 ಛಾಪಾ ಕಾಗದದಲ್ಲಿ ನಷ್ಟಭರ್ತಿ ಪ್ರತಿಬಂಧ ಪತ್ರ
14. ಜಮೀನಿನ ಟಿಪ್ಪಣಿ ಪ್ರತಿ

**(ಸಿ) ಬೆಂಗಳೂರು ಎಸ್‌ಎಲ್‌ಎಓ–2ರವರು ನಿಗದಿಪಡಿಸಿದ ದಾಖಲೆಗಳ ತಪಶೀಲುಪಟ್ಟಿ**

1. 12 ವರ್ಷಗಳಿಗೆ ಗಣಕೀಕೃತ ಆರ್‌ಟಿಸಿಯ ಪ್ರಮಾಣಿತ ಪ್ರತಿ
2. ಹಕ್ಕು ಬದಲಾವಣೆ ಆದೇಶದ ದೃಢೀಕೃತ ಪ್ರತಿ
3. ಜಮೀನಿನ ಮೇಲೆ ಹಕ್ಕು ಪ್ರಾಪ್ತವಾದ ಬಗೆಯನ್ನು ದೃಢಕರಿಸುವ ಮೂಲ ಕ್ರಯ ಪತ್ರ/ವಿಭಜನಾ ಕ್ರಯಪತ್ರ/ಭೂ ಅನುದಾನ ದೃಢೀಕರಣ ಪತ್ರ
4. ದೃಢೀಕೃತ ವಂಶವೃಕ್ಷ
5. ಸರ್ಕಾರಕ್ಕೆ ಯಾವುದೇ ಸರ್ಕಾರಿ ಬಾಕಿಯಿರುವುದಿಲ್ಲ ಎನ್ನುವ ಬಗ್ಗೆ ಪ್ರಮಾಣಪತ್ರ
6. ಪರಿಚ್ಛೇದ 48ಎ ಅಡಿ ಭೂಗೇಣಿಯ ಯಾವುದೇ ನೋಂದಾವಣಿ ಇರುವುದಿಲ್ಲ ಬಗ್ಗೆ ತಹಶೀಲ್ದಾರ್‌ರವರಿಂದ ಪ್ರಮಾಣಪತ್ರ
7. ಪ್ರಾಥಮಿಕ ಕೃಷಿ ಸಹಕಾರಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಬಾಕಿ ರಹಿತ ದೃಢೀಕರಣ ಪತ್ರ
8. ಕೃಷಿ ಸಹಕಾರ ಸಂಘಗಳಿಂದ ಯಾವುದೇ ಬಾಕಿಯಿಲ್ಲ ಎನ್ನುವ ಪ್ರಮಾಣಪತ್ರ
9. ಉಪನೋಂದಾಣಾಧಿಕಾರಿಯರಿಂದ ನಮೂನೆ 15 ಮತ್ತು 16ರಲ್ಲಿ 30 ವರ್ಷಗಳಿಗೆ ಋಣಭಾರ ರಾಹಿತ್ಯ ದೃಢೀಕರಣ ಪತ್ರ
10. ಹಿಡುವಳಿ ಪ್ರಮಾಣಪತ್ರ
11. ಭೂಸುಧಾರಣಾ ಅಧಿನಿಯಮಗಳ ಪರಿಚ್ಛೇದ 66, 79ಎ ಮತ್ತು 79ಬಿಗಳನ್ನು ಉಲ್ಲಂಘನೆ ಮಾಡಲಾಗಿಲ್ಲ ಎನ್ನುವ ಬಗ್ಗೆ ಸಹಾಯಕ ಜಿಲ್ಲಾಧಿಕಾರಿಯವರಿಂದ ದೃಢೀಕರಣ ಪತ್ರ
12. ಒಂದು ವೇಳೆ ಸರ್ಕಾರಿ ಭೂಮಿಯಾಗಿದ್ದರೆ ಪಿಟಿಸಿಎಲ್ ಅಧಿನಿಯಮದಡಿ ಸಹಾಯಕ ಜಿಲ್ಲಾಧಿಕಾರಿಯವರಿಂದ ದೃಢೀಕರಣ ಪತ್ರ
13. ಒಂದು ವೇಳೆ ಕೃಷಿಯೇತರ ಭೂಮಿಯಾಗಿ ಪರಿವರ್ತಿತವಾಗಿದ್ದರೆ, ಪರಿವರ್ತನಾ ಆದೇಶದ ಪ್ರತಿ

# ಅನುಬಂಧ–3

## (ಉಲ್ಲೇಖ: ಕಂಡಿಕೆ 5.4(3), ಪುಟ 30)

## 64 ಪ್ರಕರಣಗಳಲ್ಲಿ ಮಾಡಿದ ಪಾವತಿಗಳು

| ಕ್ರಮ ಸಂಖ್ಯೆ | ನೀಡಿಕೆ ವಹಿಯ ಪ್ರಕಾರ ಕ್ರಮ ಸಂಖ್ಯೆ | ಫೈಲ್ ಸಂಖ್ಯೆ – LND RUC ಕ್ರಮ ಸಂಖ್ಯೆ | ಹೋಬಳಿ | ಗ್ರಾಮ | ಸರ್ವೆ ನಂಬರ್ | ವಿಸ್ತಾರ (ಎಕರೆ ಮತ್ತು ಗುಂಟೆ) | ಅನುದಾನ ಪಡೆದವರ ಹೆಸರು | ಚಲನ್ ಸಂಖ್ಯೆ (ಸ್ಕ್ಯಾನ್ ಮಾಡಿದ ಪ್ರಕರಣಗಳು) | ಜಮಾ ಮಾಡಿದ ಮೊತ್ತ ರೂ.ಗಳಲ್ಲಿ (ಸ್ಕ್ಯಾನ್ ಮಾಡಿದ ಪ್ರಕರಣಗಳು) | ಒಂದು ಎಕರೆಗೆ ಮೌಲ್ಯ–ಲಕ್ಷ ರೂ.ಗಳಲ್ಲಿ | ಭೂಮಿ ಬೆಲೆ (ಲಕ್ಷ ರೂ.ಗಳಲ್ಲಿ) |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 = 7 x 11 |
| 01 | 14/09–10 | 1014/91–92 | ಕಸಬ | ಭಕ್ತರಹಳ್ಳಿ | 54 | 0–10 | ಕೃಷ್ಣಪ್ಪ | – | – | 15.00 | 03.75 |
| 02 | 13/10–11 | 20/91–92 | ಅನುಗೊಂಡನಹಳ್ಳಿ | ದೊಡ್ಡದುನ್ನಸಂದ್ರ | 21 | 1–00 | ಮುನಿಯಮ್ಮ | – | – | 45.00 | 45.00 |
| 03 | 14/10–11 | 23/91–92 | ಅನುಗೊಂಡನಹಳ್ಳಿ | ಬೈಲಹಳ್ಳಿ | 165 | 3–00 | ದೊಡ್ಡತಿಮ್ಮರಾಯ | – | – | 15.00 | 45.00 |
| 04 | 15/10–11 | 1/91–92 | ಅನುಗೊಂಡನಹಳ್ಳಿ | ಬೆಳ್ಳಿಕೆರೆ | 95 | 2–00 | ಭೈರಮ್ಮ | – | – | 40.00 | 80.00 |
| 05 | 16/10–11 | 39/91–92 | ಸೂಲಿಬೆಲೆ | ಮುಟ್ಸಂದ್ರ | 79 | 3–00 | ಮುನಿವೆಂಕಟಪ್ಪ | ಲಭ್ಯವಿಲ್ಲ | 4430.00 | 8.00 | 24.00 |
| 06 | 17/10–11 | 39/91–92 | ಸೂಲಿಬೆಲೆ | ಮುಟ್ಸಂದ್ರ | 79 | 2–00 | ವೆಂಕಟೇಶಪ್ಪ | ಲಭ್ಯವಿಲ್ಲ | 4430.00 | 8.00 | 16.00 |
| 07 | 18/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–00 | ಜಯಮ್ಮ | ಲಭ್ಯವಿಲ್ಲ | 4430.00 | 8.00 | 16.00 |
| 08 | 19/10–11 | 35/91–92 | ಸೂಲಿಬೆಲೆ | ಬೇಗೂರ್ | 141 | 3–35 | ಕುಮಾರ್ | 26 | 6550.00 | 10.00 | 38.75 |
| 09 | 20/10–11 | 35/91–92 | ಸೂಲಿಬೆಲೆ | ಬೇಗೂರ್ | 141 | 3–20 | ನಾರಾಯಣಪ್ಪ | 27 | 6550.00 | 10.00 | 35.00 |
| 10 | 21/10–11 | 35/91–92 | ಸೂಲಿಬೆಲೆ | ಬೇಗೂರ್ | 141 | 3–00 | ಮಂಜುನಾಥ | 28 | 4430.00 | 10.00 | 30.00 |
| 11 | 22/10–11 | 35/91–92 | ಸೂಲಿಬೆಲೆ | ಬೇಗೂರ್ | 141 | 3–00 | ರಾಜಣ್ಣ | ಲಭ್ಯವಿಲ್ಲ | ಲಭ್ಯವಿಲ್ಲ | 10.00 | 30.00 |
| 12 | 23/10–11 | 15/91–92 | ನಂದಿಗುಡಿ | ಮೋಟಕಾಡಹಳ್ಳಿ | 16 | 2–00 | ಚಿಕ್ಕನರಸಿಂಹಯ್ಯ | ಲಭ್ಯವಿಲ್ಲ | 2265.00 | 8.00 | 16.00 |
| 13 | 24/10–11 | 35/91–92 | ಸೂಲಿಬೆಲೆ | ಬೇಗೂರ್ | 141 | 2–28 | ಭೈರೇಗೌಡ | 25 | 3660.00 | 10.00 | 27.00 |
| 14 | 25/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–38 | ಮಮತ | 47 | 3700.00 | 8.00 | 23.60 |
| 15 | 26/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–38 | ಶಾಂತಮ್ಮ | 49 | 4780.00 | 8.00 | 23.60 |
| 16 | 27/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 3–39 | ಜಗನ್ನಾಥ | 51 | 4800.00 | 8.00 | 31.80 |
| 17 | 28/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 3–00 | ಹನುಮಂತೇಗೌಡ | 53 | 4300.00 | 8.00 | 24.00 |
| 18 | 29/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–00 | ವೆಂಕಟೇಗೌಡ | 55 | 3800.00 | 8.00 | 16.00 |
| 19 | 30/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 3–36 | ಜಯರಾಮಚಾರಿ | 57 | 4500.00 | 8.00 | 31.20 |
| 20 | 31/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 3–00 | ಕೆ.ಎಮ್.ದೇವರಾಜ | 59 | 3850.00 | 8.00 | 24.00 |
| 21 | 32/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–20 | ಮುನಿರಾಜ | 61 | 3000.00 | 8.00 | 20.00 |

| ಕ್ರಮ ಸಂಖ್ಯೆ | ನೀಡಿಕೆ ವಹಿಯ ಪ್ರಕಾರ ಕ್ರಮ ಸಂಖ್ಯೆ | ಫೈಲ್ ಸಂಖ್ಯೆ – LND RUC ಕ್ರಮ ಸಂಖ್ಯೆ | ಹೋಬಳಿ | ಗ್ರಾಮ | ಸರ್ವೆ ನಂಬರ್ | ವಿಸ್ತಾರ (ಎಕರೆ ಮತ್ತು ಗುಂಟೆ) | ಅನುದಾನ ಪಡೆದವರ ಹೆಸರು | ಚಲನ್ ಸಂಖ್ಯೆ (ಸ್ಕ್ಯಾನ್ ಮಾಡಿದ ಪ್ರಕರಣಗಳು) | ಜಮಾ ಮಾಡಿದ ಮೊತ್ತ ರೂ.ಗಳಲ್ಲಿ (ಸ್ಕ್ಯಾನ್ ಮಾಡಿದ ಪ್ರಕರಣಗಳು) | ಒಂದು ಎಕರೆಗೆ ಮೌಲ್ಯ–ಲಕ್ಷ ರೂ.ಗಳಲ್ಲಿ | ಭೂಮಿ ಬೆಲೆ (ಲಕ್ಷ ರೂ.ಗಳಲ್ಲಿ) |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 = 7 x 11 |
| 22 | 33/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–00 | ಶ್ರೀರಾಮಯ್ಯ | 63 | 1850.00 | 8.00 | 16.00 |
| 23 | 34/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–00 | ಶ್ರೀನಿವಾಸಮೂರ್ತಿ | 65 | 1950.00 | 8.00 | 16.00 |
| 24 | 35/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–00 | ನಾರಾಯಣಸ್ವಾಮಿ | 67 | 1950.00 | 8.00 | 16.00 |
| 25 | 36/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–26 | ಆನಂದ | 69 | 2300.00 | 8.00 | 21.20 |
| 26 | 37/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–20 | ಸುಶೀಲಮ್ಮ | 71 | 2350.00 | 8.00 | 20.00 |
| 27 | 38/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–00 | ಅಶ್ವತ್ತಮ್ಮ | 73 | 3500.00 | 8.00 | 16.00 |
| 28 | 39/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–00 | ವೆಂಕಟೇಶಪ್ಪ | 75 | 3300.00 | 8.00 | 16.00 |
| 29 | 40/10–11 | 93/91–92 | ಜಡಿಗೇನಹಳ್ಳಿ | ತಾವಟಹಳ್ಳಿ | 1 | 2–07 | ರಾಧಮ್ಮ | – | – | 15.00 | 32.63 |
| 30 | 41/10–11 | 36/91–92 | ಸೂಲಿಬೆಲೆ | ಚಿಕ್ಕಕೊಳಿಗ | 50 | 1–20 | ಸುಧ | – | – | 10.00 | 15.00 |
| 31 | 42/10–11 | 45/91–92 | ಸೂಲಿಬೆಲೆ | ಯೆಕ್ಕರಾಜಪುರ | 32 | 3–30 | ಶಿವಣ್ಣ | – | – | 40.00 | 150.00 |
| 32 | 43/10–11 | 45/91–92 | ಸೂಲಿಬೆಲೆ | ಯೆಕ್ಕರಾಜಪುರ | 32 | 3–00 | ನಾಗರಾಜ | – | – | 40.00 | 120.00 |
| 33 | 44/10–11 | 45/91–92 | ಸೂಲಿಬೆಲೆ | ಯೆಕ್ಕರಾಜಪುರ | 132 | 3–10 | ವೆಂಕಟರಾಮ್ | – | – | 20.00 | 65.00 |
| 34 | 45/10–11 | 1/91–92 | ಸೂಲಿಬೆಲೆ | ಯೆಕ್ಕರಾಜಪುರ | 15 | 2–00 | ಸೊಂಬಯ್ಯ | – | – | 20.00 | 40.00 |
| 35 | 46/10–11 | 44/91–92 | ಸೂಲಿಬೆಲೆ | ಬಾಗಲೂರ್ | 32 | 1–20 | ಎನ್.ಎಮ್.ಶಂಕರ್ | – | – | 8.00 | 12.00 |
| 36 | 47/10–11 | 45/91–92 | ಕಸಬ | ಹೊಸಕೋಟೆ | 300 | 1–00 | ಸೊಂಬಯ್ಯ | – | – | 100.00 | 100.00 |
| 37 | 48/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–00 | ಗೋವಿಂದರಾಜ್ | 77 | 2600.00 | 8.00 | 16.00 |
| 38 | 49/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–00 | ಶ್ರೀನಿವಾಸ | 79 | 3010.00 | 8.00 | 16.00 |
| 39 | 50/10–11 | 139/91–92 | ಸೂಲಿಬೆಲೆ | ತೆನೆಯೂರು | 17 | 3–00 | ಪಿ.ವಿಜಯಲಕ್ಷ್ಮಿ | 21 | 3810.00 | 12.00 | 36.00 |
| 40 | 51/10–11 | 139/91–92 | ಸೂಲಿಬೆಲೆ | ತೆನೆಯೂರು | 17 | 2–00 | ಚಂದ್ರಪ್ರಭ | 22 | 2665.00 | 12.00 | 24.00 |
| 41 | 52/10–11 | 139/91–92 | ಸೂಲಿಬೆಲೆ | ತೆನೆಯೂರು | 17 | 4–32 | ಕೆ.ಎಮ್.ಮುನೇಗೌಡ | 20 | 8660.00 | 12.00 | 57.60 |
| 42 | 53/10–11 | 739/91–92 | ಸೂಲಿಬೆಲೆ | ಬಟ್ಟಿಗಾನಹಳ್ಳಿ | 1 | 2–00 | ಎಸ್.ಎ.ಶಾಂತಮ್ಮ | – | – | 8.00 | 16.00 |
| 43 | 54/10–11 | 335/91–92 | ಸೂಲಿಬೆಲೆ | ಬೇಗೂರು | 36 | 2–00 | ತಮ್ಮಣ್ಣ | – | – | 10.00 | 20.00 |
| 44 | 55/10–11 | 39/91–92 | ಸೂಲಿಬೆಲೆ | ದೊಡ್ಡರಲಗೆರೆ | 45 | 3–38 | ಪಿಲ್ಲಮರಿಯಪ್ಪ | 06 | 6330.00 | 8.00 | 31.60 |
| 45 | 56/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–00 | ಮುಬೀನಾತಾಜ್ | 81 | 2660.00 | 8.00 | 16.00 |
| 46 | 57/10–11 | 39/91–92 | ಸೂಲಿಬೆಲೆ | ಮುತ್ಸಂದ್ರ | 79 | 2–00 | ಖಿಸಿಮ | 83 | 3660.00 | 8.00 | 16.00 |
| 47 | 58/10–11 | 117/91–92 | ಅನುಗೊಂಡನಹಳ್ಳಿ | ದೊಡ್ಡದುನ್ನಸಂದ್ರ | 21 | 0–10 | ಮುನಿಯಮ್ಮ | – | – | 45.00 | 11.25 |

| ಕ್ರಮ ಸಂಖ್ಯೆ | ನೀಡಿಕೆ ವಹಿಯ ಪ್ರಕಾರ ಕ್ರಮ ಸಂಖ್ಯೆ | ಫೈಲ್ ಸಂಖ್ಯೆ – LND RUC ಕ್ರಮ ಸಂಖ್ಯೆ | ಹೋಬಳಿ | ಗ್ರಾಮ | ಸರ್ವೆ ನಂಬರ್ | ವಿಸ್ತಾರ (ಎಕರೆ ಮತ್ತು ಗುಂಟೆ) | ಅನುದಾನ ಪಡೆದವರ ಹೆಸರು | ಚಲನ್ ಸಂಖ್ಯೆ (ಸ್ಕ್ಯಾನ್ ಮಾಡಿದ ಪ್ರಕರಣಗಳು) | ಜಮಾ ಮಾಡಿದ ಮೊತ್ತ ರೂ.ಗಳಲ್ಲಿ (ಸ್ಕ್ಯಾನ್ ಮಾಡಿದ ಪ್ರಕರಣಗಳು) | ಒಂದು ಎಕರೆಗೆ ಮೌಲ್ಯ–ಲಕ್ಷ ರೂ.ಗಳಲ್ಲಿ | ಭೂಮಿ ಬೆಲೆ (ಲಕ್ಷ ರೂ.ಗಳಲ್ಲಿ) |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 = 7 x 11 |
| 48 | 59/10–11 | 81/91–92 | ಕಸಬ | ನಡವಟ್ಟಿ | 88 | 0–30 | ಎನ್.ಎಮ್.ಮಂಜುನಾಥ | – | – | 40.00 | 30.00 |
| 49 | 60/10–11 | 75/91–92 | ಅನುಗೊಂಡನಹಳ್ಳಿ | ಸಮೇತನಹಳ್ಳಿ | 105 | 1–11 | ನಂಜುಂಡಪ್ಪ | – | – | 30.00 | 38.25 |
| 50 | 61/10–11 | 139/91–92 | ಸೂಲಿಬೆಲೆ | ತೆನೆಯೂರ್ | 17 | 3–00 | ಪಿ.ವಿಜಯಲಕ್ಷ್ಮಿ | – | – | 12.00 | 36.00 |
| 51 | 62/10–11 | 139/91–92 | ಸೂಲಿಬೆಲೆ | ತೆನೆಯೂರ್ | 17 | 2–00 | ಚಂದ್ರಪ್ರಭ | – | – | 12.00 | 24.00 |
| 52 | 63/10–11 | 33/91–92 | ಸೂಲಿಬೆಲೆ | ತೆನೆಯೂರ್ | 20 | 3–00 | ಬಿ.ಇ.ನಾರಾಯಣಪ್ಪ | – | – | 12.00 | 36.00 |
| 53 | 64/10–11 | 54/92–93 | ಸೂಲಿಬೆಲೆ | ತೆನೆಯೂರ್ | 20 | 3–00 | ಬಿ.ಇ.ನಾರಾಯಣಪ್ಪ | 18 | 3700.00 | 12.00 | 36.00 |
| 54 | 65/10–11 | 54/92–93 | ಸೂಲಿಬೆಲೆ | ತೆನೆಯೂರ್ | 20 | 2–00 | ಪ್ರಕಾಶ್ | 19 | 2668.00 | 12.00 | 24.00 |
| 55 | 66/10–11 | 35/91–92 | ಸೂಲಿಬೆಲೆ | ಬೇಗೂರ್ | 141 | 2–20 | ಪ್ರೇಮ | 24 | 4400.00 | 10.00 | 25.00 |
| 56 | 67/10–11 | 35/91–92 | ಸೂಲಿಬೆಲೆ | ಬೇಗೂರ್ | 141 | 3–30 | ಹೆಸರು ನಮೂದಿಸಿಲ್ಲ | – | – | 10.00 | 37.50 |
| 57 | 68/10–11 | 14/91–92 | ಕಸಬ | ನಡವತ್ತಿ | 88 | 1–00 | ಮುಟ್ಟಮ್ಮ | – | – | 40.00 | 40.00 |
| 58 | 69/10–11 | 4/91–92 | ಕಸಬ | ದಂಡುಪಾಳ್ಯ | 178 | 2–00 | ಮಂಜುಳ | – | – | 80.00 | 160.00 |
| 59 | 70/10–11 | 151/91–92 | ಜಡಿಗೇನಹಳ್ಳಿ | ಅಪ್ಪಸಂದ್ರ | 48 | 3–00 | ಮುನಿಯಕ್ಕಯ್ಯಮ್ಮ | – | – | 15.00 | 45.00 |
| 60 | 71/10–11 | 151/91–92 | ಜಡಿಗೇನಹಳ್ಳಿ | ಅಪ್ಪಸಂದ್ರ | 48 | 2–20 | ಗೋವಿಂದಪ್ಪ | – | – | 15.00 | 37.50 |
| 61 | 72/10–11 | 59/91–92 | ಅನುಗೊಂಡನಹಳ್ಳಿ | ಸಮೇತನಹಳ್ಳಿ | 259 | 3–00 | ಮುನಿರಾಮ | – | – | 30.00 | 90.00 |
| 62 | 73/10–11 | 59/91–92 | ಅನುಗೊಂಡನಹಳ್ಳಿ | ಸಮೇತನಹಳ್ಳಿ | 259 | 3–20 | ಮುನಿವೆಂಕಟಪ್ಪ | – | – | 30.00 | 105.00 |
| 63 | 74/10–11 | 44/91–92 | ಅನುಗೊಂಡನಹಳ್ಳಿ | ಮುತ್ತೂರ್ | 137 | 1–00 | ರಾಜಮ್ಮ | – | – | 15.00 | 15.00 |
| 64 | 75/10–11 | 1014/91–92 | ಕಸಬ | ಭಕ್ತರಹಳ್ಳಿ | 54 | 0–10 | ಬಿ.ಹೆಚ್.ದೇವರಾಜ | – | – | 15.00 | 03.75 |
| | | | | ಒಟ್ಟು | | 150.38 | | | | | 2299.98 |

ವಿವರವಾದ ಮಾಹಿತಿಯ ಅನುಪಸ್ಥಿತಿಯಲ್ಲಿ ಖುಷ್ಕಿ ಭೂಮಿಯ (ವಿವಿಧ ರೀತಿಯ ಭೂಮಿಗಳಲ್ಲಿ ಕನಿಷ್ಟ ಮೌಲ್ಯ) ಮಾರ್ಗದರ್ಶಿ ಬೆಲೆಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ

## ಅನುಬಂಧ–4
### (ಉಲ್ಲೇಖ: ಕಂಡಿಕೆ 5.6.19, ಪುಟ 54)
### ಮೂಲದಲ್ಲಿ ವರಮಾನ ತೆರಿಗೆಯನ್ನು ಕಳೆಯದಿರುವುದು

| ಹೆಸರು (ಶ್ರೀ/ಶ್ರೀಮತಿ) | ಸರ್ವೆ ನಂಬರ್ | ವಿಸ್ತಾರ (ಎಕರೆ–ಗುಂಟೆ) | ಪಾವತಿಸಿದ ಮೊತ್ತ (ರೂ.) | ಪಾವತಿಯ ದಿನಾಂಕ | ಅನ್ವಯವಾಗುವ ವರಮಾನ ತೆರಿಗೆ (ರೂ.) |
|---|---|---|---|---|---|
| ಡಿ.ನರಸಿಂಹಲು ನಾಯ್ಡು | 74/ ಪಿ316 | 2.00 | 66,00,000 | 28.4.08 | 7,47,780 |
| ಡಿ.ನರಸಿಂಹಲು ನಾಯ್ಡು | 40/359 | 2.00 | 1,98,00,000 | 24.6.08 | 22,43,340 |
| ಡಿ.ನರಸಿಂಹಲು ನಾಯ್ಡು | 74/308 | 4.00 | | 20.8.08 | |
| ನಾಗರಾಜು | 74/ಪಿ317 | 2.00 | 66,00,000 | 28.4.08 | 747780 |
| ಜೆಬಿ & ಹರ ಪ್ರಾಪರ್ಟೀಸ್ | 74 | 4.00 | 1,32,00,000 | 10.6.08 | 14,95,560 |
| ವೆಂಕಟರಮಣಪ್ಪ | 74/ಕ5 | 2.00 | 66,00,000 | 12.11.08 | 747780 |
| ನಂದೀಶ್‌ರೆಡ್ಡಿ | 74/318 | 2.00 | 66,00,000 | 13.11.08 | 747780 |
| ಮೇರಿ ಜಾನ್ | 74/302 | 4.00 | 1,68,00,000 | 13.1.09 | 19,03,440 |
| ಡಿ.ನರಸಿಂಹಲು ನಾಯ್ಡು | 110 | 4.07 | 1,37,77,500 | 22.4.08 | 15,60,991 |
| ಜೆಬಿ & ಹರ ಪ್ರಾಪರ್ಟೀಸ್ | 137, 138 | 8.00 | 2,64,00,000 | 22.4.08 | 29,91,120 |
| ಟಿ.ಹೆಚ್.ರಾಮೇಗೌಡ | 41 | 1.20 | 49,50,000 | 3.6.08 | 5,60,835 |
| ಜೆಬಿ & ಹರ ಪ್ರಾಪರ್ಟೀಸ್ | 41 | 4.20 | 1,48,50,000 | 28.7.08 & 12.8.08 | 16,82,505 |
| ಪಿ.ಕೆ.ರಾಜೇಂದ್ರ | 75/ಕ1 | 1.35 | 61,87,500 | 29.7.08 | 7,01,044 |
| ನಂದೀಶ್ ರೆಡ್ಡಿ | 151 | 8.00 | 2,64,00,000 | 29.7.08 | 29,91,120 |
| ಕೆ.ಸೌಭಾಗ್ಯ | 43/2 | 1.03 | 35,47,500 | 19.4.08 | 4,01,932 |
| ಕೆ.ಸೌಭಾಗ್ಯ | 43/1 | 3.29 | 1,22,92,500 | 25.7.08 | 13,92,740 |
| ಕೆ.ಸೌಭಾಗ್ಯ | 74/355 | 5.00 | 2,08,75,000 | 28.4.08 | 23,65,137 |
| ಒಟ್ಟು | | | 20,54,80,000 | | 2,32,80,884 |

2008–09ರ ಹಣಕಾಸಿನ ವರ್ಷದಲ್ಲಿ ಅನ್ವಯವಾಗುವ ವರಮಾನ ತೆರಿಗೆಯ ದರಗಳು

- ವರಮಾನ ತೆರಿಗೆ – ಶೇಕಡಾ 10
- ಸರ್ಚಾರ್ಜ್ – ವರಮಾನ ತೆರಿಗೆಯ ಶೇಕಡಾ 10
- ಹೆಚ್ಚುವರಿ ಸರ್ಚಾರ್ಜ್ – ವರಮಾನ ತೆರಿಗೆಯ ಶೇಕಡಾ 3 + ಸರ್ಚಾರ್ಜ್

**ಅನುಬಂಧ–5**

**(ಉಲ್ಲೇಖ: ಕಂಡಿಕೆ 6, ಪುಟ 55)**

**31.03.2011ರಲ್ಲಿದ್ದಂತೆ ಜಿಲ್ಲಾವಾರು ಭೂಮಿಯ ಸ್ವಾಧೀನ, ಅಭಿವೃದ್ಧಿ, ಹಂಚಿಕೆ, ಅಭಿವೃದ್ಧಿಪಡಿಸಿದ ಖಾಲಿ ಭೂಮಿಯ ವ್ಯಾಪ್ತಿ ಮತ್ತು ಚಾಲ್ತಿಯಲ್ಲಿರುವ ಬೆಲೆ**

| ಕ್ರಮ ಸಂಖ್ಯೆ | ಜಿಲ್ಲೆ | ಕೈಗಾರಿಕಾ ಪ್ರದೇಶಗಳ ಸಂಖ್ಯೆ | ವಿಸ್ತಾರ (ಎಕರೆ ಮತ್ತು ಗುಂಟೆ) | | ಹಂಚಿಕೆಯಾದ್ದು | | ಅಭಿವೃದ್ಧಿಪಡಿಸಿದ ಖಾಲಿ ಭೂಮಿ (ಎಕರೆ) |
|---|---|---|---|---|---|---|---|
| | | | ಸ್ವಾಧಿನಪಡಿಸಿ ಕೊಂಡದ್ದು | ಅಭಿವೃದ್ಧಿ ಪಡಿಸಿದ್ದು | ಘಟಕಗಳ ಸಂಖ್ಯೆ | ವಿಸ್ತಾರ (ಎಕರೆಗಳು) | |
| 1 | ಬಾಗಲಕೋಟೆ | 3 | 370.98 | 283.95 | 98 | 192.32 | 49.81 |
| 2 | ಬೆಂಗಳೂರು ನಗರ | 16 | 6700.96 | 5775.25 | 2988 | 5771.82 | 0.00 |
| 3 | ಬೆಂಗಳೂರು ಗ್ರಾಮಾಂತರ | 12 | 5888.29 | 4522.45 | 897 | 2078.36 | 1543.36 |
| 4 | ಬೆಳಗಾಮ್ | 5 | 711.28 | 546.11 | 1766 | 528.91 | 17.20 |
| 5 | ಬಳ್ಳಾರಿ | 6 | 494.15 | 394.74 | 396 | 394.74 | 0.00 |
| 6 | ಬೀದರ್ | 7 | 2172.23 | 1519.23 | 1059 | 1182.29 | 200.00 |
| 7 | ಬಿಜಾಪುರ | 3 | 556.98 | 469.26 | 187 | 429.26 | 40.00 |
| 8 | ಚಿಕ್ಕಬಳ್ಳಾಪುರ | 3 | 521.26 | 329.38 | 66 | 138.35 | 241.03 |
| 9 | ಚಿಕ್ಕಮಗಳೂರು | 2 | 144.57 | 89.47 | 26 | 115.40 | 0.00 |
| 10 | ಚಿತ್ರದುರ್ಗ | 1 | 87.23 | 73.40 | 80 | 77.00 | 0.00 |
| 11 | ದಕ್ಷಿಣ ಕನ್ನಡ | 7 | 2111.73 | 1414.89 | 650 | 1051.52 | 363.39 |
| 12 | ದಾವಣಗೆರೆ | 4 | 289.46 | 253.97 | 285 | 188.06 | 29.24 |
| 13 | ಧಾರವಾಡ | 8 | 3649.32 | 2822.97 | 862 | 2528.21 | 76.30 |
| 14 | ಗದಗ | 1 | 162.75 | 136.78 | 124 | 117.03 | 19.75 |
| 15 | ಗುಲ್ಬರ್ಗ | 2 | 942.69 | 743.38 | 577 | 734.87 | 0.00 |
| 16 | ಹಾಸನ | 9 | 2007.59 | 1582.08 | 374 | 1088.58 | 475.92 |
| 17 | ಕೊಡಗು | 1 | 250.00 | 155.71 | 111 | 155.71 | 0.00 |
| 18 | ಕೋಲಾರ | 6 | 1803.99 | 1571.38 | 325 | 617.55 | 0.00 |
| 19 | ಕೊಪ್ಪಳ | 1 | 38.22 | 31.65 | 41 | 31.65 | 0.00 |
| 20 | ಮಂಡ್ಯ | 4 | 462.72 | 412.58 | 229 | 323.38 | 55.00 |
| 21 | ಮೈಸೂರು | 9 | 4538.30 | 3479.68 | 1216 | 3350.87 | 178.81 |
| 22 | ರಾಯಚೂರು | 5 | 2171.32 | 1875.41 | 340 | 1864.64 | 0.00 |
| 23 | ರಾಮನಗರ | 5 | 2641.84 | 1988.44 | 541 | 1930.44 | 188.12 |
| 24 | ಶಿವಮೊಗ್ಗ | 5 | 573.96 | 504.29 | 428 | 477.29 | 27.00 |
| 25 | ತುಮಕೂರು | 7 | 1625.46 | 1240.50 | 595 | 1039.94 | 6.00 |
| 26 | ಉಡುಪಿ | 2 | 155.05 | 134.31 | 94 | 69.26 | 0.00 |
| 27 | ಉತ್ತರಕನ್ನಡ | 1 | 35.30 | 28.34 | 45 | 28.34 | 0.00 |
| 28 | ಯಾದಗೀರ್ | 1 | 19.05 | 19.05 | 35 | 19.05 | 0.00 |
| | ಒಟ್ಟು (ಎಕರೆಗಳಲ್ಲಿ) | **136** | **41126.68** | **32398.65** | **14435** | **26524.84** | **3510.93** |
| ಒಟ್ಟು (ಎಕರೆ ಮತ್ತು ಗುಂಟೆಗಳಲ್ಲಿ) | | | **41126–27** | **32398–26** | | **26524–34** | **3510–37** |

## ಅನುಬಂಧ–6
(ಉಲ್ಲೇಖ: ಕಂಡಿಕೆ 6.4, ಪುಟ 57)
### ಅಂತಿಮ ಅಧಿಸೂಚನೆ ಹೊರಡಿಸುವ ಮೊದಲೇ ಕೆಯುಎಮ್ ಅನುಮೋದಿಸಿದ ಯೋಜನೆಗಳು

| ಕೈಗಾರಿಕಾ ಪ್ರದೇಶದ ಹೆಸರು | ಕೆಐಎಡಿಬಿ ಅಧಿನಿಯಮದ 28(4)ರಡಿಯಲ್ಲಿ ಅಂತಿಮ ಅಧಿಸೂಚನೆ ನೀಡಿದ ತಿಂಗಳು/ವರ್ಷ | ಕೆಯುಎಮ್ ಅನುಮೋದಿಸಿದ ಒಟ್ಟು ಯೋಜನೆಗಳ ಸಂಖ್ಯೆ | ಕೆಐಎಡಿಬಿ ಅಧಿನಿಯಮದ 28(4)ರಡಿಯಲ್ಲಿ ಅಂತಿಮ ಅಧಿಸೂಚನೆಯ ಮೊದಲೇ ಅನುಮೋದಿಸಿದ ಒಟ್ಟು ಯೋಜನೆಗಳ ಸಂಖ್ಯೆ |
|---|---|---|---|
| ಅಪೆರಲ್ ಪಾರ್ಕ್ ದೊಡ್ಡಬಳ್ಳಾಪುರ | 4/10 | 79 | 58 |
| ಬಿಡದಿ ಐಎ | 11/2007 | 66 | 8 |
| ಡಾಬಸ್‌ಪೇಟ್ 4ನೇ ಹಂತ | 5/2010 | 79 | 65 |
| ಹಾರೋಹಳ್ಳಿ 2ನೇ ಹಂತ | 2/07 | 70 | 70 |
| ಇಲವಾಲ ಐಎ, ಮೈಸೂರು | 10/2007 | 28 | 27 |
| ಕೊರಗಹಳ್ಳಿ, ಐಎ, ಮೈಸೂರು | 12/06 | 54 | 35 |
| ಮಾಲೂರು ಐಎ | 3/07 | 51 | 25 |
| ನರಸಾಪುರ ಐಎ | 8/2007 | 68 | 37 |